ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಕ್ರಿಕೆಟ್ ವೀಕ್ಷಕ ವಿವರಣೆಯ ಆ ಬನಿ, ಈ ಕನ್ನಡ ಧ್ವನಿ

ಮಹದಾಯಿ ಪ್ರವಾಹ್ ರಚನೆ: ಪ್ರಮೋದ್ ಸಾವಂತ್ ಸ್ವಾಗತ 6
ಹಿರಿಯರ ಜತೆ ಕಿರಿಯರಿಗೂ ಹೊಣೆ
ಜನಗಣತಿ: ಆರು ಧರ್ಮಗಳಷ್ಟೇ ಆಧಾರ 7
ಪೂರ್ಣ ಸರ್ಕಾರ ಸಾಕಾರ 5

24 ಸಚಿವರ ಪ್ರಮಾಣ • ಪೂರ್ಣ ಸಂಪುಟ ಅಸ್ತಿತ್ವಕ್ಕೆ • ಸಿದ್ದರಾಮಯ್ಯ ಮೇಲುಗೈ • ಕೈತಪ್ಪಿದವರ ಸಿಟ್ಟು

‘ಗ್ಯಾರಂಟಿ’ ಜಾರಿ ಮತ್ತೆ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪಕ್ಷ ಅಧಿಕಾರಕ್ಕೆ ಬಂದರೆ ಘೋಷಿತ ಐದೂ ‘ಗ್ಯಾರಂಟಿ’ಗಳನ್ನು ಮೊದಲ ಸಚಿವ ಸಂಪುಟ ಸಭೆಯಲ್ಲೇ ಜಾರಿ ಮಾಡುತ್ತೇವೆ’ ಎಂದು ಕಾಂಗ್ರೆಸ್ ನಾಯಕರು ನೀಡಿದ್ದ ಭರವಸೆ, ಎರಡನೇ ಸಚಿವ ಸಂಪುಟ ಸಭೆ ಬಳಿಕವೂ ಅನುಷ್ಠಾನದ ಹಂತ ತಲುಪಿಲ್ಲ.

ಕಾಂಗ್ರೆಸ್ ಘೋಷಿಸಿದ ‘ಗ್ಯಾರಂಟಿ’ಗಳ ಪೈಕಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ ಹಾಗೂ 200 ಯೂನಿಟ್‌ವರೆಗೆ ಉಚಿತ ವಿದ್ಯುತ್ ವಿಷಯಗಳು ಈಗ ದೊಡ್ಡಮಟ್ಟದ ಚರ್ಚೆಗೆ ಕಾರಣವಾಗಿವೆ. ಬಸ್ ಪ್ರಯಾಣ ಉಚಿತವೆಂದು ಸರ್ಕಾರ ಹೇಳಿದ್ದು, ಟಿಕೆಟ್ ಖರೀದಿಸುವುದಿಲ್ಲ ಎಂದು ಕೆಲವು ಕಡೆಗಳಲ್ಲಿ ಮಹಿಳೆಯರು ತಕರಾರು ತೆಗೆದು, ಬಸ್ ನಿರ್ವಾಹಕರ ಜತೆಗೆ ಜಗಳವನ್ನೂ ಮಾಡುತ್ತಿದ್ದಾರೆ. ಉಚಿತ ವಿದ್ಯುತ್ ವಿಷಯದಲ್ಲೂ ಎಸ್ಕಾಂಗಳ ಸಿಬ್ಬಂದಿ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ವಿರೋಧ ಪಕ್ಷಗಳಾದ ಬಿಜೆಪಿ ಹಾಗೂ ಜೆಡಿಎಸ್ ನಾಯಕರು, ‘ಗ್ಯಾರಂಟಿ’ ಅನುಷ್ಠಾನಕ್ಕೆ ಗಡುವು ನೀಡಿದ್ದು, ಹೋರಾಟದ ಎಚ್ಚರಿಕೆಯನ್ನೂ ಕೊಟ್ಟಿದ್ದಾರೆ.

ರಾಜಭವನದ ಗಾಜಿನಮನೆಯಲ್ಲಿ ಶನಿವಾರ ನಡೆದ ಪ್ರಮಾಣವಚನ ಸಮಾರಂಭದಲ್ಲಿ ನೂತನ ಸಚಿವರಾದ ಸಂತೋಷ್ ಲಾಡ್ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಾಲಿಗೆ ಹಾಗೂ ಲಕ್ಷ್ಮೀ ಹೆಬ್ಬಾಳಕರ ಅವರು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಕಾಲಿಗೆ ನಮಸ್ಕರಿಸಿದರು –ಪ್ರಜಾವಾಣಿ ಚಿತ್ರ/ರಂಜು ಪಿ.

ಈ ಬೆಳವಣಿಗೆಗಳ ಮಧ್ಯೆಯೇ, ಸಚಿವ ಸಂಪುಟ ವಿಸ್ತರಣೆ ಶನಿವಾರ ನಡೆದಿದ್ದು, ಪೂರ್ಣ ಸರ್ಕಾರ ಅಧಿಕಾರಕ್ಕೆ ಬಂದಿದೆ. 24 ಸಚಿವರ ಪ್ರಮಾಣ ವಚನ ಸ್ವೀಕಾರ ಸಮಾರಂಭದ ಬಳಿಕ ಸಂಪುಟ ಸಭೆ ನಡೆಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ಅನೌಪಚಾರಿಕವಾಗಿ ಚರ್ಚೆ ನಡೆಸಿದರು. ಈ ಸಭೆಯಲ್ಲಿ ಗ್ಯಾರಂಟಿ ಜಾರಿ ಬಗ್ಗೆ ಯಾವುದೇ ಚರ್ಚೆ ನಡೆಯಲಿಲ್ಲ ಎಂದು ಗೊತ್ತಾಗಿದೆ.

7ನೇ ಪುಟ ನೋಡಿ

ಖಾತೆ ಬಿಕ್ಕಟ್ಟು ಅಂತ್ಯ: ಅಧಿಸೂಚನೆ ಬಾಕಿ

ಸಂಪುಟದ ಎಲ್ಲ 34 ಸ್ಥಾನಗಳನ್ನು ಭರ್ತಿ ಮಾಡಿದ್ದರೂ, ಕೆಲವು ಸಚಿವರು ಪ್ರಮುಖ ಖಾತೆಗಳಿಗೆ ಪಟ್ಟು ಹಿಡಿದಿದ್ದರಿಂದ ಖಾತೆ ಹಂಚಿಕೆ ಮಾಡುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಗ್ಗಂಟಾಗಿ ಪರಿಣಮಿಸಿತ್ತು. ಬಹುತೇಕರ ಮನವೊಲಿಸುವಲ್ಲಿ ಮುಖ್ಯಮಂತ್ರಿ ಯಶಸ್ವಿಯಾಗಿದ್ದಾರೆ ಎಂದು ಮೂಲಗಳು ತಿಳಿಸಿವೆ. ಶನಿವಾರ ಬೆಳಿಗ್ಗೆ ಸಂಪುಟ ವಿಸ್ತರಣೆಗೂ ಮೊದಲೇ ಸಚಿವರ ಸಂಭವನೀಯ ಖಾತೆಗಳ ಮಾಹಿತಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು. ಸಂಪುಟ ವಿಸ್ತರಣೆ ಬಳಿಕ ಸಚಿವರ ಹೆಸರಿನ ಮುಂದೆ ಖಾತೆಗಳ ವಿವರ ಇರುವ ಪಟ್ಟಿಯೂ ಸಾಮಾಜಿಕ ಮಾಧ್ಯಮಗಳಲ್ಲಿ ಕಾಣಿಸಿಕೊಂಡಿತ್ತು.

‘ರಾಮಲಿಂಗಾ ರೆಡ್ಡಿ ಪ್ರಮುಖ ಖಾತೆಗೆ ಪಟ್ಟುಹಿಡಿದಿದ್ದಾರೆ. ತಮಗೆ ನೀಡಲು ಉದ್ದೇಶಿಸಿರುವ ಖಾತೆ ಬೇಡವೆಂದು ಹೇಳಿದ್ದ ಜಿ. ಪರಮೇಶ್ವರ, ಸತೀಶ ಜಾರಕಿಹೊಳಿ ಅವರು ಸಿ.ಎಂ ಮನವೊಲಿಕೆಯಿಂದ ಪಟ್ಟು ಸಡಿಲಿಸಿದ್ದಾರೆ. ರಾಜಭವನದಿಂದ ಭಾನುವಾರ ಖಾತೆ ಹಂಚಿಕೆಯ ಅಧಿಸೂಚನೆ ಹೊರಬೀಳಲಿದೆ’ ಎಂದೂ ಮೂಲಗಳು ತಿಳಿಸಿವೆ.

7ನೇ ಪುಟ ನೋಡಿ

ಅನುಷ್ಠಾನಕ್ಕೆ ತಿಂಗಳ ಗಡುವು: ಬಿಜೆಪಿ

ಮಂಗಳೂರು: ಚುನಾವಣೆಗೆ ಮುನ್ನ ಕಾಂಗ್ರೆಸ್ ಪಕ್ಷವು ಮತದಾರರಿಗೆ ನೀಡಿದ್ದ ಐದು ಗ್ಯಾರಂಟಿಗಳನ್ನು ಈಡೇರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರಕ್ಕೆ ಬಿಜೆಪಿ ಒಂದು ತಿಂಗಳ ಗಡುವು ವಿಧಿಸಿದೆ.

ಶನಿವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್, ‘ರಾಜ್ಯ ಸರ್ಕಾರವು ಒಂದು ತಿಂಗಳ ಒಳಗೆ ಗ್ಯಾರಂಟಿಗಳನ್ನು ಈಡೇರಿಸದೇ ಇದ್ದರೆ, ರಾಜ್ಯದಾದ್ಯಂತ ಬಿಜೆಪಿ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳುತ್ತೇವೆ. ಕಾಂಗ್ರೆಸ್‌ನವರಿಗೆ ಯಾವ ರೀತಿ ತಿರುಗೇಟು ನೀಡಬೇಕೆಂಬ ಬಗ್ಗೆ ಕಾರ್ಯತಂತ್ರ ರೂಪಿಸುತ್ತಿದ್ದೇವೆ’ ಎಂದರು.

16 ಸಚಿವರ ವಿರುದ್ಧ ಕ್ರಿಮಿನಲ್ ಪ್ರಕರಣ

• ಪವನ್ ಕುಮಾರ್ ಎಚ್.

ಹುಬ್ಬಳ್ಳಿ: ರಾಜ್ಯ ಸರ್ಕಾರದ 34 ಸಚಿವರ ಪೈಕಿ 16 ಮಂದಿ ಕ್ರಿಮಿನಲ್ ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಹಲವು ಸಚಿವರ ವಿರುದ್ಧ ನ್ಯಾಯಾಲಯಗಳಿಗೆ ಆರೋಪಪಟ್ಟಿಗಳನ್ನೂ ಸಲ್ಲಿಸಲಾಗಿದೆ.

ಸಚಿವರು ವಿಧಾನಸಭಾ ಚುನಾವಣೆ ಸಂದರ್ಭದಲ್ಲಿ ನಾಮಪತ್ರದ ಜತೆ ಕೇಂದ್ರ ಚುನಾವಣಾ ಆಯೋಗಕ್ಕೆ ಸಲ್ಲಿಸಿರುವ ಪ್ರಮಾಣಪತ್ರಗಳಲ್ಲಿ ಕ್ರಿಮಿನಲ್ ಪ್ರಕರಣಗಳಿಗೆ ಸಂಬಂಧಿಸಿದ ಮಾಹಿತಿ ಇದೆ. ಸಚಿವರಲ್ಲಿ ಯಾರೊಬ್ಬರೂ ಈವರೆಗೆ ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗಿಲ್ಲ.

ಬಿ. ನಾಗೇಂದ್ರ ವಿರುದ್ಧ 42 ಕ್ರಿಮಿನಲ್ ಪ್ರಕರಣಗಳಿದ್ದು, ಅತ್ಯಧಿಕ ಮೊಕದ್ದಮೆಗಳನ್ನು ಎದುರಿಸುತ್ತಿರುವ ಸಚಿವ ಅವರು. 19 ಪ್ರಕರಣಗಳೊಂದಿಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಎರಡನೇ ಸ್ಥಾನದಲ್ಲಿದ್ದಾರೆ.

ನಾಗೇಂದ್ರ ವಿರುದ್ಧ ಲೋಕಾಯುಕ್ತ ಪೊಲೀಸರು 21 ಪ್ರಕರಣಗಳನ್ನು ದಾಖಲಿಸಿದ್ದು, ತನಿಖೆ ಪ್ರಗತಿಯಲ್ಲಿದೆ. ಸಿಬಿಐ ನಾಲ್ಕು ಮತ್ತು ಸಿಐಡಿ ಒಂದು ಪ್ರಕರಣಗಳ ತನಿಖೆ ನಡೆಸುತ್ತಿವೆ.

ಶಿವಕುಮಾರ್ ಸಾಕ್ಷ್ಯ ನಾಶ ಮಾಡಿರುವುದು, ಸುಳ್ಳು ದಾಖಲೆ ಒದಗಿಸಿರುವುದು, ಫೋರ್ಜರಿ, ವಂಚನೆ, ಹಣದ ಅಕ್ರಮ ವರ್ಗಾವಣೆ ಮತ್ತಿತರ ಆರೋಪಗಳ ಅಡಿಯಲ್ಲಿ ಆರು ಪ್ರಕರಣಗಳನ್ನು ಎದುರಿಸುತ್ತಿದ್ದಾರೆ. ಸಿಬಿಐ ಮತ್ತು ಜಾರಿ ನಿರ್ದೇಶನಾಲಯಗಳು ತನಿಖೆ ನಡೆಸುತ್ತಿವೆ.

ಯಾರ ವಿರುದ್ಧ?

ಸಿದ್ದರಾಮಯ್ಯ– **13**, ಪ್ರಿಯಾಂಕ್ ಖರ್ಗೆ– **9**, ಈಶ್ವರ ಖಂಡ್ರೆ– **7**, ಎಂ.ಬಿ. ಪಾಟೀಲ– **5**, ರಾಮಲಿಂಗಾ ರೆಡ್ಡಿ– **4**, ಜಿ. ಪರಮೇಶ್ವರ– **3**, ಎಚ್.ಕೆ. ಪಾಟೀಲ, ಡಿ. ಸುಧಾಕರ್, ಸತೀಶ್ ಜಾರಕಿಹೊಳಿ– ತಲಾ **2**, ಕೃಷ್ಣ ಬೈರೇಗೌಡ, ಎನ್. ಚೆಲುವರಾಯಸ್ವಾಮಿ, ಕೆ.ಎಚ್. ಮುನಿಯಪ್ಪ, ಎಸ್.ಎಸ್. ಮಲ್ಲಿಕಾರ್ಜುನ– ತಲಾ **1**

ಬಿ.ಜೆಡ್. ಜಮೀರ್ ಅಹಮದ್ ಖಾನ್– ಆರು ಗಂಭೀರ ಪ್ರಕರಣ (ಉದ್ದೇಶಪೂರ್ವಕವಲ್ಲದ ನರಹತ್ಯೆ, ನಿರ್ಲಕ್ಷ್ಯದಿಂದ ಸಾವಿಗೆ ಕಾರಣ, ಮಹಿಳೆಯ ಮೇಲೆ ಹಲ್ಲೆ, ಫೋರ್ಜರಿ, ವಂಚನೆ, ಕ್ರಿಮಿನಲ್ ಮಧ್ಯಪ್ರವೇಶ)

ಒಳ ಪುಟ

ನೂತನ ಸಂಸತ್ ಭವನ ಉದ್ಘಾಟನೆ ಇಂದು 7

ಚಿನಕುರಳಿ

ಪ್ರಕಾಶ್ ಶೆಟ್ಟಿ

ಮುಟ್ಟಿನ ರಜೆ ಬೇಕೇ? ಬೇಡವೇ?

• ಮಂಜುಶ್ರೀ ಎಂ. ಕಡಕೋಳ

ಒಳನೋಟ
ವಿಶ್ವ ಋತುಚಕ್ರ ನೈರ್ಮಲ್ಯ ದಿನ
ಪ್ರತಿಕ್ರಿಯಿಸಿ: 9606038256
feedback@prajavani.co.in

‘ಬಸ್ ಆಗಷ್ಟೇ ದೇವದುರ್ಗಕ್ಕೆ ತಲುಪಿತ್ತು. ಇನ್ನೇನು ಎಲ್ಲ ಪ್ರಯಾಣಿಕರನ್ನು ಕೆಳಗಿಳಿಸಬೇಕೆಂದು ಎದ್ದು ನಿಂತೆ. ಅಷ್ಟರಲ್ಲಿ ಪ್ರಯಾಣಿಕರೊಬ್ಬರು ‘ಮೇಡಂ ನಿಮ್ಮ ಡ್ರೆಸ್ ಹಿಂದೆ ನೋಡಿಕೊಳ್ಳಿ’ ಎಂದರು. ಸೆಕೆಗೆ ಒದ್ದೆಯಾಗಿರಬೇಕೆಂದುಕೊಂಡಿದ್ದೆ. ಹಿಂತಿರುಗಿ ನೋಡಿಕೊಂಡರೆ ಯೂನಿಫಾರಂ ಪೂರ್ತಿ ರಕ್ತಮಯವಾಗಿತ್ತು. ಆಘಾತವಾಗಿ ತಕ್ಷಣವೇ ಸೀಟ್ ಮೇಲೆ ಹಾಗೇ ಕುಳಿತುಬಿಟ್ಟೆ. ಪ್ರಯಾಣಿಕರೆಲ್ಲರೂ ಇಳಿದು ಹೋದ ಮೇಲೆ ಡ್ರೈವರ್ ಅಣ್ಣನಿಗೆ ಫೋನ್ ಮಾಡಿ, ಬಸ್ ಅನ್ನು ಪಕ್ಕಕ್ಕೆ ಹಾಕಿಸಿಕೊಂಡು, ಎರಡು ಬಾಟಲಿ ನೀರು ತರಿಸಿಕೊಂಡೆ. ಬಸ್‌ನ ಬಾಗಿಲಲ್ಲೇ ಮರೆಯಾಗಿ ಯೂನಿಫಾರಂ ಒಗೆದುಕೊಂಡು, ಅದು ಆರಿದ ಮೇಲೆ ಶೌಚಾಲಯಕ್ಕೆ ಓಡಿದೆ’...

–ಹೀಗೆ ಹೇಳುವಷ್ಟರಲ್ಲೇ ಬಸ್ ಕಂಡಕ್ಟರ್ ನಿರ್ಮಲಾ (ಹೆಸರು ಬದಲಿಸಿದೆ) ಅವರ ಗಂಟಲ ಸೆರೆ ಉಬ್ಬಿ ಬಂದಂತಾಗಿತ್ತು.

ಮುಟ್ಟಾಗಲು ಇನ್ನೂ ಒಂದು ವಾರವಿದೆ ಎಂದು ಸ್ಯಾನಿಟರ್ ಪ್ಯಾಡ್ ಒಯ್ಯದೇ ಕೆಲಸಕ್ಕೆ ತೆರಳಿದ್ದ ನಿರ್ಮಲಾ ಅವರು ದಿಢೀರ್ ಎದುರಾಗಿದ್ದ ಮುಟ್ಟಿನಿಂದ ತೀವ್ರವಾಗಿ ಮುಜುಗರಕ್ಕೊಳಗಾಗಿದ್ದರು.

ಮಹಿಳಾ ಕಂಡಕ್ಟರ್/ ಚಾಲಕಿ ಇರುವ ಬಸ್‌ಗಳಲ್ಲಿ ಅಥವಾ ಅವರು ಕೆಲಸ ಮಾಡುವ ಮಾರ್ಗಗಳ ಬಸ್ ನಿಲ್ದಾಣಗಳಲ್ಲಿ ಸ್ಯಾನಿಟರಿ ಪ್ಯಾಡ್ ವೆಂಡಿಂಗ್ ಮಷೀನ್ ಮತ್ತು ಸ್ವಚ್ಛ ಶೌಚಾಲಯ ಇದ್ದಿದ್ದರೆ ನಿರ್ಮಲಾ ಅಂಥವರು ಈ ಮುಜುಗರದ ಸಂದರ್ಭದಿಂದ ಪಾರಾಗಬಹುದಿತ್ತೇನೋ?

ಬದಲಾದ ಕಾಲಘಟ್ಟದಲ್ಲಿ ಮುಟ್ಟು ಈಗ ಗುಟ್ಟಿನ ವಿಷಯವಾಗಿ ಉಳಿದಿಲ್ಲ. ಈ ಹಿಂದೆ ಮನೆಯ ಗಂಡಸರಿಗೆ ತಿಳಿಯದಂತೆ ಹೆಣ್ಣುಮಕ್ಕಳಷ್ಟೇ ಸದ್ದಿಲ್ಲದೇ ನಿರ್ವಹಿಸುತ್ತಿದ್ದ ಮುಟ್ಟು, ಕೆಲ ಗಂಡಸರು ಮನೆಯ ಹೆಂಗಸರಿಗೆ ಸ್ಯಾನಿಟರಿ ಪ್ಯಾಡ್ ತಂದುಕೊಡುವಷ್ಟರ ಮಟ್ಟಿಗೆ ತನ್ನ ವ್ಯಾಪ್ತಿಯನ್ನು ಹಿಗ್ಗಿಸಿಕೊಂಡಿದೆ. ಆದರೆ, ಮುಟ್ಟಿನ ದಿನಗಳಲ್ಲಿ ಮಹಿಳೆಯರು ಅನುಭವಿಸುತ್ತಿರುವ ಸಂಕಷ್ಟಗಳಿಗಿನ್ನೂ ಮುಕ್ತಿ ದೊರೆತಿಲ್ಲ.

ವಿದ್ಯಾರ್ಥಿನಿಯಾಗಲಿ, ಗೃಹಿಣಿಯಾಗಲಿ ಅಥವಾ ಉದ್ಯೋಗಸ್ಥೆಯಾಗಿರಲಿ ಆ ದಿನಗಳಲ್ಲಿ ಅವಳು ಅನುಭವಿಸುವ ದೈಹಿಕ– ಮಾನಸಿಕ ಏರುಪೇರುಗಳಿಗೆ ಸೂಕ್ತವಾಗಿ ಸ್ಪಂದಿಸುವ ಪರಿಸರ ನಮ್ಮಲ್ಲಿನ್ನೂ ನಿರ್ಮಾಣವಾಗಿಲ್ಲ. ಈ ನಡುವೆ ಕೇರಳ ಸರ್ಕಾರ ತನ್ನ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆ ಘೋಷಿಸಿ ದೇಶದ ಹೆಣ್ಣುಮಕ್ಕಳ ಗಮನ ಸೆಳೆದಿದೆ. ಇಂಥ ರಜೆ ತಮಗೂ ಬೇಕೆಂಬ ಬೇಡಿಕೆ ಅನೇಕ ಕ್ಷೇತ್ರಗಳಲ್ಲಿನ ಮಹಿಳೆಯರ ಮನದಲ್ಲೂ ಚಿಗುರೊಡೆದಿತ್ತು. ಆದರೆ, ಇದೇ ಫೆ. 24ರಂದು ಸುಪ್ರೀಂ ಕೋರ್ಟ್ ಮುಟ್ಟಿನ ರಜೆಯ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ತಿರಸ್ಕರಿಸಿದಾಗ ಈ ಆಸೆ ಕಮರಿಹೋಗಿತ್ತು.

ಮುಟ್ಟಿನ ರಜೆಯ ಪ್ರಸ್ತಾಪ ಇಂದು ನಿನ್ನೆಯದಲ್ಲ. ಇತಿಹಾಸದ ಪುಟಗಳನ್ನು ತಿರುವಿದರೆ ಮೊದಲನೇ ಮಹಾಯುದ್ಧದ ಸಂದರ್ಭದಲ್ಲೇ ರಷ್ಯಾದಲ್ಲಿ ಕೂಲಿ ಕಾರ್ಮಿಕ ಮಹಿಳೆಯರಿಗೆ ಮುಟ್ಟಿನ ದಿನ ಕೆಲಸಕ್ಕೆ ವಿನಾಯ್ತಿ ನೀಡಲಾಗುತ್ತಿತ್ತು. ಅಂತೆಯೇ 2ನೇ ಮಹಾಯುದ್ಧದ ಸಂದರ್ಭದಲ್ಲಿ ಜಪಾನ್ ಕೂಡಾ ಇದನ್ನೇ ಅನುಸರಿಸಿತ್ತು.

ಇತಿಹಾಸವನ್ನು ಅವಲೋಕಿಸಿದರೆ ಮುಟ್ಟಿನ ರಜೆಯ ಕಲ್ಪನೆ ಭಾರತಕ್ಕೆ ಹೊಸದೇನಲ್ಲ. ಕೇರಳದಲ್ಲೇ ಶತಮಾನದ ಹಿಂದೆ ಶಾಲೆಯೊಂದರ ವಿದ್ಯಾರ್ಥಿನಿಯರಿಗೆ ಮುಟ್ಟಿನ ರಜೆ ಘೋಷಣೆಯಾಗಿತ್ತು ಎನ್ನುತ್ತವೆ ಇತಿಹಾಸದ ಪುಟಗಳು. ಇತಿಹಾಸಕಾರ ಪಿ. ಭಾಸ್ಕರನ್ ಉಣ್ಣಿ ರಚನೆಯ ‘ಕೇರಳ ಇನ್ ದ ನೈಂಟೀನ್ತ್ ಸೆಂಚುರಿ’ ಕೃತಿಯಲ್ಲಿ, ಈಗಿನ ಎರ್ನಾಕುಲಂ ಜಿಲ್ಲೆಯ ಸರ್ಕಾರಿ ಹೆಣ್ಣುಮಕ್ಕಳ ಶಾಲೆಯಲ್ಲಿ 1912ರಲ್ಲಿಯೇ ವಿದ್ಯಾರ್ಥಿನಿಯರಿಗೆ ವಾರ್ಷಿಕ ಪರೀಕ್ಷೆ ಸಂದರ್ಭದಲ್ಲೂ ಮುಟ್ಟಿನ ರಜೆ ನೀಡಲಾಗುತ್ತಿತ್ತು ಎಂದು ಉಲ್ಲೇಖಿಸಲಾಗಿದೆ. ನಂತರ ದಶಕಗಳಲ್ಲಿ ಬಿಹಾರ ರಾಜ್ಯವು ಅಭಿವೃದ್ಧಿ ಮಿಷನ್ ಭಾಗವಾಗಿ ಎರಡು ದಶಕಗಳ ಹಿಂದೆಯೇ ಅಂದರೆ 1992ರಲ್ಲಿ ಮುಟ್ಟಿನ ರಜೆಯ ನೀತಿಯನ್ನು ಅಳವಡಿಸಿಕೊಂಡಿತ್ತು.

4ನೇ ಪುಟ ನೋಡಿ

ನೀತಿ ಆಯೋಗದ ಸಭೆ 11 ಸಿ.ಎಂಗಳು ಗೈರು

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಶನಿವಾರ ಇಲ್ಲಿ ನಡೆದ ನೀತಿ ಆಯೋಗದ ಆಡಳಿತ ಮಂಡಳಿಯ 8ನೇ ಸರ್ವಸದಸ್ಯರ ಸಭೆಗೆ 11 ರಾಜ್ಯಗಳ ಮುಖ್ಯಮಂತ್ರಿಗಳು ಗೈರು ಹಾಜರಾಗಿದ್ದರು.

ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ಮತ್ತು ತಾವು ಸಭೆಗೆ ಬಹಿಷ್ಕಾರ ಹಾಕಿರುವುದಾಗಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಶುಕ್ರವಾರವೇ ಹೇಳಿದ್ದರು. ಕರ್ನಾಟಕ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಪುಟ ವಿಸ್ತರಣೆಯಯ ಕಾರಣದಿಂದಾಗಿ ಬೆಂಗಳೂರಿನಲ್ಲೇ ಉಳಿದಿದ್ದರು.

ಜಿಎಸ್‌ಟಿಯಿಂದಾಗಿ ರಾಜ್ಯಗಳಿಗೆ ಆಗುವ ಆದಾಯ ನಷ್ಟ ಸರಿತೂಗಿಸಲು ಕೇಂದ್ರ ಸರ್ಕಾರ ‘ಶಾಶ್ವತ ವ್ಯವಸ್ಥೆ’ ರೂಪಿಸಬೇಕು
ಭೂಪೇಶ್ ಬಘೆಲ್
ಛತ್ತೀಸಗಢ ಮುಖ್ಯಮಂತ್ರಿ

ಇದು (ಬಹಿಷ್ಕಾರ) ಜನ ವಿರೋಧಿಯಾದ ಮತ್ತು ಬೇಜವಾಬ್ದಾರಿಯುತ ನಡೆ. ಹೀಗೆ ಗೈರುಹಾಜರಾದರೆ ಸಭೆಯಲ್ಲಿ ಆ ರಾಜ್ಯಗಳ ಧ್ವನಿಯೇ ಇಲ್ಲವಾಗಲಿದೆ
ರವಿಶಂಕರ್ ಪ್ರಸಾದ್
ಬಿಜೆಪಿ ಮುಖಂಡ

ಮುಖ್ಯಮಂತ್ರಿಗಳಾದ ಪಶ್ಚಿಮ ಬಂಗಾಳದ ಮಮತಾ ಬ್ಯಾನರ್ಜಿ, ತಮಿಳುನಾಡಿನ ಎಂ.ಕೆ.ಸ್ಟಾಲಿನ್, ಬಿಹಾರದ ನಿತೀಶ್ ಕುಮಾರ್, ಕೇರಳದ ಪಿಣರಾಯಿ ವಿಜಯನ್, ರಾಜಸ್ಥಾನದ ಅಶೋಕ್ ಗೆಹಲೋತ್ ಅವರು ಸಭೆಯನ್ನು ಬಹಿಷ್ಕರಿಸಿದ್ದಾರೆ.

7ನೇ ಪುಟ ನೋಡಿ

*ಕ್ಯಾಲ್ಸಿಯಮ್ ಬೂಸ್ಟ್/ಪೋಷಣೆ ಎಂಬುದು, ಹಲ್ಲಿನ ಎನಾಮೆಲ್‌ನ ಪೋಷಣೆಯನ್ನು ಸೂಚಿಸುತ್ತಿದ್ದು, ಇದು ಆರ್ಜಿನೈನ್ ಫ್ಲೋರೈಡ್ ಟೆಕ್ನಾಲಜಿಯ ಮೂಲಕ ರೀಮಿನೆರಲೈಸೇಶನ್‌ನ ಕ್ರಿಯೆ ಆಗಿರುತ್ತದೆ.

ಸಂಕ್ಷಿಪ್ತ ಸುದ್ದಿ

ಬ್ರಿಜ್‌ಭೂಷಣ್‌ರನ್ನು ಜೈಲಿಗೆ ಹಾಕಿ: ರಾಮ್‌ದೇವ್

ಜೈಪುರ (ಪಿಟಿಐ): ನವದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆಸುತ್ತಿರುವ ಮಹಿಳಾ ಕುಸ್ತಿಪಟುಗಳನ್ನು ಬೆಂಬಲಿಸಿ ಇಲ್ಲಿ ಮಾತನಾಡಿದ ಯೋಗ ಗುರು ರಾಮ್‌ದೇವ್, 'ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್‌ಭೂಷಣ್ ಶರಣ್ ಸಿಂಗ್ ಅವರನ್ನು ಜೈಲಿಗೆ ಹಾಕಬೇಕು' ಎಂದಿದ್ದಾರೆ.

'ಪ್ರತಿಭಟನೆ ನಡೆಸುತ್ತಿರುವ ಸ್ಪರ್ಧಿಗಳ ವಿರುದ್ಧ ಬ್ರಿಜ್‌ಭೂಷಣ್ ಅವರು ಪ್ರತಿದಿನ ಅಸಂಬದ್ಧ ಹೇಳಿಕೆಗಳನ್ನು ನೀಡುತ್ತಿದ್ದು, ಇದು ಖಂಡನಾರ್ಹ' ಎಂದಿದ್ದಾರೆ.

ಮೂರು ದಿನಗಳ ಯೋಗ ಶಿಬಿರಕ್ಕಾಗಿ ಭಿಲ್ವಾರಕ್ಕೆ ಭೇಟಿ ನೀಡಿರುವ ರಾಮ್‌ದೇವ್ ಅವರು, ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಕೇಂದ್ರ ಸರ್ಕಾರದ ಕಾರ್ಯವೈಖರಿಗೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ. ತಾವು ರಾಜಕೀಯಕ್ಕೆ ಸೇರುವುದಿಲ್ಲ ಎಂದೂ ಅವರು ಹೇಳಿದ್ದಾರೆ.

ಆಂಬುಲೆನ್ಸ್‌ನಲ್ಲಿ ಹೆಣ್ಣು ಮಗುವಿನ ಜನನ

ಎಚ್.ಡಿ.ಕೋಟೆ: ತಾಲ್ಲೂಕಿನ ಕಾಡಂಚಿನ ಗಂಡತ್ತೂರು ಬಳಿಯ ಬಕ್ಕಳೆಹೊಸೂರು ಗ್ರಾಮದಿಂದ ಶನಿವಾರ ಬೆಳಗಿನ ಜಾವ ಗರ್ಭಿಣಿ ಮಂಜುಳಾ (30) ಅವರನ್ನು ತಾಲ್ಲೂಕು ಆಸ್ಪತ್ರೆಗೆ ಕರೆದೊಯ್ಯುತ್ತಿದ್ದಾಗಲೇ, ಆಂಬುಲೆನ್ಸ್‌ನಲ್ಲಿ ಅವರು ಹೆಣ್ಣು ಮಗುವಿಗೆ ಜನ್ಮ ನೀಡಿದರು. ತಾಯಿ-ಮಗು ಕ್ಷೇಮವಾಗಿದ್ದಾರೆ.

ಪಟ್ಟಣದಿಂದ 35 ಕಿ.ಮೀ ದೂರದಲ್ಲಿರುವ ಗ್ರಾಮಕ್ಕೆ ತೆರಳಿ ಆಸ್ಪತ್ರೆಗೆ ಕರೆತರುತ್ತಿದ್ದಾಗ ಬೆಳಗಿನ ಜಾವ 4ರ ವೇಳೆಗೆ ಶಿರಮಳ್ಳಿ ಗ್ರಾಮದ ಬಳಿ ಹೆರಿಗೆ ನೋವು ಹೆಚ್ಚಾಗಿತ್ತು. ಕೂಡಲೇ ಶುಶ್ರೂಷಕ ಡಿ.ಕೆ. ಸುರೇಶ್ ಮತ್ತು ವಾಹನ ಚಾಲಕ ಪ್ರಸನ್ನಕುಮಾರ್ ಹೆರಿಗೆ ಮಾಡಿದರು. ನಂತರ ತಾಯಿ ಮತ್ತು ಮಗುವನ್ನು ಪಟ್ಟಣದ ಆಸ್ಪತ್ರೆಗೆ ದಾಖಲಿಸಿದರು. ಮಗುವಿನ ತೂಕ ಸುಮಾರು 3.250 ಕೆ.ಜಿ ಇದೆ.

ಜೋಕಾಲಿ ಆಡುವ ವೇಳೆ ಸೀರೆ ಬಿಗಿದು ಬಾಲಕಿ ಸಾವು

ಕಾರ್ಕಳ (ಉಡುಪಿ ಜಿಲ್ಲೆ): ಜೋಕಾಲಿ ಆಟವಾಡುವಾಗ ಕುತ್ತಿಗೆಗೆ ಸೀರೆ ಬಿಗಿದುಕೊಂಡು ಬಾಲಕಿ ಮೃತಪಟ್ಟಿರುವ ಘಟನೆ ಕಾರ್ಕಳ ತಾಲ್ಲೂಕು ನಿಟ್ಟೆ ಗ್ರಾಮದ ಕೆಮ್ಮಣ್ಣು ಅಂತೊಟ್ಟು ಬಳಿ ಶುಕ್ರವಾರ ನಡೆದಿದೆ.

ಲಕ್ಷ್ಮಣ್ ಪೂಜಾರಿ ಅವರ ಪುತ್ರಿ ಮಾನ್ವಿ (9) ಮೃತ ಬಾಲಕಿ. ಸಂಬಂಧಿ ಉದಯ ಪೂಜಾರಿ ಅವರ ಮನೆಯ ಬಳಿ ನೆರೆಮನೆಯ ಮಕ್ಕಳ ಜೊತೆ ಜೋಕಾಲಿ ಆಡುವಾಗ ದುರ್ಘಟನೆ ಸಂಭವಿಸಿದೆ. ತಕ್ಷಣ ಬಾಲಕಿಯನ್ನು ನಿಟ್ಟೆ ಸಮುದಾಯ ಆರೋಗ್ಯ ಕೇಂದ್ರಕ್ಕೆ ಚಿಕಿತ್ಸೆಗೆ ಕರೆದೊಯ್ಯಲಾಯಿತಾದರೂ ಬಾಲಕಿ ಬದುಕುಳಿಯಲಿಲ್ಲ. ಕಾರ್ಕಳ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಪ್ರಮಾಣ ಪತ್ರ ವಿತರಿಸಲು ಮುಂದಾದ ಬಿಡಿಎ, ನ್ಯಾಯಾಲಯಕ್ಕೆ ನಗದು ಪರಿಹಾರ ಜಮೆ?

ಪರಿಹಾರದ ಜಗ್ಗಾಟ: ಕೃಷಿಕರಿಗೆ ಇಕ್ಕಟ್ಟು

● ಆದಿತ್ಯ ಕೆ.ಎ.

ಬಡಾವಣೆ ನಿರ್ಮಾಣಕ್ಕೆ ಬೆಳೆ ನಾಶ ಪಡಿಸಿದ್ದ ಜೆಸಿಬಿ ಯಂತ್ರ (ಸಂಗ್ರಹ ಚಿತ್ರ)

ಬೆಂಗಳೂರು: ಡಾ.ಕೆ. ಶಿವರಾಮಕಾರಂತ ಬಡಾವಣೆಗಾಗಿ ಭೂಮಿ ಕಳೆದುಕೊಂಡಿರುವ ರೈತರು ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ನಡುವೆ ಪರಿಹಾರದ ಮೊತ್ತಕ್ಕೆ ಹಗ್ಗ ಜಗ್ಗಾಟ ಮುಂದುವರಿದಿದ್ದು, ಬಿಡಿಎ ಈಗ ತೆಗೆದುಕೊಂಡಿರುವ ನಿರ್ಧಾರಕ್ಕೆ ರೈತರು ವಿರೋಧ ವ್ಯಕ್ತಪಡಿಸಿದ್ದಾರೆ.

2013ರ ಭೂಸ್ವಾಧೀನ ಕಾಯ್ದೆಯಂತೆಯೇ ಭೂಮಿಗೆ ಪರಿಹಾರ ನೀಡುವಂತೆ ಸಾವಿರಾರು ಕೃಷಿಕರು ಪಟ್ಟು ಹಿಡಿದಿದ್ದಾರೆ.

ವಿಧಾನಸಭೆ ಚುನಾವಣೆಯಿಂದ ವಿಳಂಬಗೊಂಡಿದ್ದ ಬಡಾವಣೆ ಅಭಿವೃದ್ಧಿಗೆ ಚುರುಕು ಮುಟ್ಟಿಸಲು ಬಿಡಿಎ ಮುಂದಾಗಿದೆ. ಆದರೆ, ಮೇ 25ರ ಬಿಡಿಎ ಹೊರಡಿಸಿರುವ ಪ್ರಕಟಣೆಗೆ ಒಪ್ಪಿಗೆ ಇಲ್ಲ ಎಂದು ರೈತರು ಹೇಳಿದ್ದಾರೆ.

'ಬಿಡಿಎ ಬಳಿ ಬಡಾವಣೆ ನಿರ್ಮಾಣಕ್ಕೆ ಅನುದಾನದ ಕೊರತೆ ಎದುರಾಗಿದೆ. ಭೂಮಾಲೀಕರ ಬಳಿ ಪ್ರಮಾಣ ಪತ್ರವನ್ನು ಬರೆಸಿಕೊಂಡು ಭೂಮಿಯನ್ನು ಬ್ಯಾಂಕ್‌ಗೆ ಅಡಮಾನವಿಟ್ಟು ಸಾಲ ಪಡೆಯುವ ಹುನ್ನಾರ ಇದಾಗಿದೆ' ಎಂದು ಸಂತ್ರಸ್ತರ ಪರ ಹೋರಾಟಗಾರರು ಹೇಳಿದ್ದಾರೆ.

'ಬಡಾವಣೆ ಅಭಿವೃದ್ಧಿಗೆ ವಿರೋಧ ಇಲ್ಲ. ಈಗಿನ ಮಾರುಕಟ್ಟೆ ದರದಂತೆಯೇ ಪರಿಹಾರ ನೀಡಬೇಕು. ಹಳೆ ಕಾಯ್ದೆ ಮುಗಿದ ಅಧ್ಯಾಯ' ಎಂಬುದು 18 ಹಳ್ಳಿಯ ರೈತರ ವಾದ.

ಬಿಡಿಎ ಏನು ಹೇಳಿದೆ?: ಶಿವರಾಮ ಕಾರಂತ ಬಡಾವಣೆಯನ್ನು ಸುಪ್ರೀಂ ಕೋರ್ಟ್ ಮೇಲ್ವಿಚಾರಣೆಯಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ. ಭೂ ಮಾಲೀಕರಿಗೆ ನಗದು ಪರಿಹಾರ ಅಥವಾ 40:60 ಅನುಪಾತದಲ್ಲಿ ಅಭಿವೃದ್ಧಿಪಡಿಸಿದ ನಿವೇಶನಗಳ ರೂಪದಲ್ಲಿ ಎಕರೆಗೆ 9,583 ಚದರ ಅಡಿಗಳಂತೆ ಲೆಕ್ಕಚಾರ ಮಾಡಿ, ಪರಿಹಾರ ನೀಡಲು ಆದೇಶವಾಗಿದೆ. ಭೂಸ್ವಾಧೀನ ಕಾಯ್ದೆ 1894ರ ಅಡಿ ಭೂಮಾಲೀಕರು ತಮ್ಮ ನಿರ್ಧಾರವನ್ನು ಭೂಸ್ವಾಧೀನಾಧಿಕಾರಿಗೆ ಸಲ್ಲಿಸುವಂತೆ ಬಿಡಿಎ ಈಗ ಕೋರಿದೆ. 8 ಗ್ರಾಮಗಳ ಭೂಮಾಲೀಕರಿಗೆ ಪ್ರಮಾಣ ಪತ್ರ ವಿತರಿಸಲಾಗಿದೆ. ಭೂಮಾಲೀಕರಿಗೆ ಆದ್ಯತೆ ಮೇರೆಗೆ ಅಭಿವೃದ್ಧಿಪಡಿಸಿದ ನಿವೇಶನಗಳನ್ನು ನೋಂದಣಿ ಮಾಡಿಕೊಳ್ಳಲಾಗುವುದು. ಜೂನ್ 30ರ ಒಳಗೆ ಮನವಿ ಸಲ್ಲಿಸದಿದ್ದರೆ ನಿಗದಿಪಡಿಸಿರುವ ನಗದು ಭೂಪರಿಹಾರವನ್ನು ಸಿಟಿ ನ್ಯಾಯಾಲಯಕ್ಕೆ ಜಮೆ ಮಾಡಲಾಗುವುದು ಎಂದು ಬಿಡಿಎ ಭೂಸ್ವಾಧೀನ ವಿಭಾಗದ ಉಪ ಆಯುಕ್ತರು ಸೂಚನೆ ನೀಡಿದ್ದಾರೆ. ಇದು ಸಂತ್ರಸ್ತರನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

'ಒತ್ತಡ ತಂದು ಪ್ರಮಾಣ ಪತ್ರ ವಿತರಿಸಲು ಅವಕಾಶವೇ ಇಲ್ಲ. ಕಾಳತಮ್ಮನಹಳ್ಳಿ, ಗಾಣಿಗರಹಳ್ಳಿ, ಗುಣಿ ಅಗ್ರಹಾರ, ಮೇಡಿ ಅಗ್ರಹಾರ, ವೀರಸಾಗರ ಸೇರಿದಂತೆ 8 ಹಳ್ಳಿಗಳ ಭೂಮಾಲೀಕರಿಗೆ ಪ್ರಮಾಣ ಪತ್ರ ವಿತರಿಸಲಾಗಿದೆ ಎಂದು ಬಿಡಿಎ ಹೇಳಿಕೊಂಡಿದೆ. ಬೆರಳೆಣಿಕೆ ಮಂದಿ ಪ್ರಮಾಣ ಪತ್ರ ಪಡೆದಿದ್ದಾರೆ. ಉಳಿದವರು ಪ್ರಮಾಣ ಪತ್ರವನ್ನೇ ಪಡೆದಿಲ್ಲ' ಎಂದು ಹೋರಾಟಗಾರ ರಮೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

'ಟ್ರಿಬ್ಯುನಲ್‌ಯಿಂದಲೇ ಬಿಡಿಎ ಕಾಮಗಾರಿ ಆರಂಭಿಸಿದೆ. 9 ಸೆಕ್ಟರ್‌ಗಳಾಗಿ ವಿಂಗಡಿಸಿ ಕಾಮಗಾರಿ ಆರಂಭಿಸಿದೆ. ಅಭಿವೃದ್ಧಿಗೆ ಅಂದಾಜು ₹3 ಸಾವಿರ ಕೋಟಿ ಅಗತ್ಯವಿದೆ. ಬಿಡಿಎ ಬಳಿ ಆ ಪ್ರಮಾಣದ ಹಣ ಇಲ್ಲ. ಹಿಂದಿನ ಸರ್ಕಾರ ನಿವೇಶನ ಹರಾಜು ಹಾಕಿ ಬಡಾವಣೆ ನಿರ್ಮಿಸುವಂತೆ ಸೂಚಿಸಿತ್ತು. ಬ್ಯಾಂಕ್ ದಾಖಲೆಗಳ ಸಹ ಹಾಕಲು ನಿರಾಕರಿಸಿತ್ತು. ಹೀಗಾಗಿ, 2013ರ ಭೂಸ್ವಾಧೀನ ಕಾಯ್ದೆಯಂತೆ ಪರಿಹಾರ ನೀಡಲು ಹಿಂದೇಟು ಹಾಕಿ, ಪ್ರಮಾಣ ಪತ್ರಕ್ಕೆ ಹೆಸರು ನೋಂದಾಯಿಸಲು ಸೂಚಿಸುತ್ತಿದೆ. ಹಳೆ ಕಾಯ್ದೆ ಪರಿಹಾರಕ್ಕೆ ಸಂತ್ರಸ್ತರಿಗೆ ಒಪ್ಪಿಗೆ ಇಲ್ಲದಿದ್ದರೂ ಬಿಡಿಎ, ನ್ಯಾಯಾಲಯಕ್ಕೆ ನಗದು ಪರಿಹಾರ ಜಮೆ ಮಾಡಿ ಮುಂದುವರಿಯುವ ಬೆದರಿಕೆ ಹಾಕುತ್ತಿದೆ. ನೂತನ ಸರ್ಕಾರಕ್ಕೆ ಮನವಿ ಸಲ್ಲಿಸುತ್ತೇವೆ' ಎಂದು ರಮೇಶ್ ಹೇಳಿದರು.

ಪ್ರಜಾವಾಣಿ ವಿಶೇಷ

ಹೊಸ ಕಾಯ್ದೆ ಲಾಭ ಏನು?

- ಸ್ವಾಧೀನ ಪಡಿಸಿಕೊಂಡ ಭೂಮಿಗೆ ಮಾರುಕಟ್ಟೆಯ ಬೆಲೆಯ ನಾಲ್ಕು ಪಟ್ಟು ಪರಿಹಾರ ನೀಡುವುದು
- ಭೂಮಿಯ ಸ್ವಾಧೀನಕ್ಕೆ ಶೇ 80ರಷ್ಟು ಸ್ಥಳೀಯರ ಒಪ್ಪಿಗೆ ಅಗತ್ಯ

ಸದ್ಯದ ರೈತರು ಒಮ್ಮತದ ತೀರ್ಮಾನ ತೆಗೆದುಕೊಳ್ಳಬೇಕಿದೆ. ಈ ಭಾಗದಲ್ಲಿ ಭೂಮಿಗೆ ಚಿನ್ನದ ಬೆಲೆಯಿದೆ. 2013ರ ಭೂಸ್ವಾಧೀನ ಕಾಯ್ದೆಯಂತೆಯೇ ಪರಿಹಾರ ನೀಡಬೇಕು

ಎ.ರಮೇಶ್, ರಾಮಗೊಂಡನಹಳ್ಳಿ

ಏನಿದು ಯೋಜನೆ?

ದಾಸರಹಳ್ಳಿ ಹಾಗೂ ಯಲಹಂಕ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಬರುವ ರಾಮಗೊಂಡನಹಳ್ಳಿ, ಸೋಮಶೆಟ್ಟಿಹಳ್ಳಿ, ಕೆಂಪಾಪುರ, ಅಲಹಳ್ಳಿ ಸೇರಿದಂತೆ 18 ಹಳ್ಳಿಗಳ ಒಟ್ಟು 3,546 ಎಕರೆ ಭೂಮಿಯನ್ನು ಈ ಬಡಾವಣೆಗೆ ಸ್ವಾಧೀನ ಮಾಡಿಕೊಳ್ಳಲಾಗಿತ್ತು. 2008ರಲ್ಲಿ ಅಧಿಸೂಚನೆ ಹೊರಡಿಸಿದ್ದರೂ 2013ರ ತನಕವೂ ಅಭಿವೃದ್ಧಿ ಕಾರ್ಯವನ್ನೇ ನಡೆಸಿರಲಿಲ್ಲ. ಹೀಗಾಗಿ, ರೈತರು ಹೈಕೋರ್ಟ್ ಮೆಟ್ಟಿಲೇರಿದ್ದರು. ನ್ಯಾಯಾಲಯವು ಯೋಜನೆಯನ್ನೇ ರದ್ದು ಪಡಿಸಿತ್ತು. ಬಳಿಕ ಬಿಡಿಎ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಅಲ್ಲಿ ಅರ್ಜಿ ಸ್ವೀಕಾರಗೊಂಡಿತ್ತು, ನ್ಯಾಯಾಲಯದ ಉಸ್ತುವಾರಿಯಲ್ಲೇ ಬಡಾವಣೆ ಅಭಿವೃದ್ಧಿಯಾಗುತ್ತಿದೆ. ಆದರೆ, ಭೂಮಿ ಕಳೆದುಕೊಂಡವರಿಗೆ ನ್ಯಾಯಯುತ ಪರಿಹಾರ ಸಿಕ್ಕಿಲ್ಲ ಎಂದು ರಾಮಗೊಂಡನಹಳ್ಳಿಯ ಸಂತ್ರಸ್ತರು ಹೇಳಿದರು.

ಬಿಡಿಎ ಹಳೆ ಕಾಯ್ದೆ ಮಾತ್ರ ಅನ್ವಯವಾಗಲಿದೆ. ನ್ಯಾಯಾಲಯದಲ್ಲೂ ಸಾಕಷ್ಟು ತೀರ್ಪುಗಳೂ ಈ ಕಾಯ್ದೆ ಪರವೇ ಬಂದಿವೆ. ನಿವೇಶನ ಅಥವಾ ನಗದು ಪೈಕಿ ಬಹುತೇಕ ರೈತರು ಅಭಿವೃದ್ಧಿ ಪಡಿಸಿದ ನಿವೇಶನ ಪಡೆಯಲು ಮುಂದೆ ಬರುತ್ತಿದ್ದಾರೆ. ರೈತರು ಬೇಗ ದಾಖಲೆ ಸಲ್ಲಿಸಿದರೆ ಪ್ರಕ್ರಿಯೆ ಪೂರ್ಣಗೊಳಿಸುತ್ತೇವೆ. ಲೇಔಟ್ ನಿರ್ಮಾಣವಾಗಿದ್ದರೆ ನಿವೇಶನವನ್ನೂ ವಿತರಣೆ ಮಾಡುತ್ತಿದ್ದೆವು.

ಡಾ. ಎ. ಸೌಜನ್ಯ, ಉಪ ಆಯುಕ್ತರು, ಭೂಸ್ವಾಧೀನ ವಿಭಾಗ, ಬಿಡಿಎ

ಸುದ್ದಿ 2 ನಿಮಿಷ

ಕ್ಯಾನ್ಸರ್: ರೋಗಿಗಳಿಗಾಗಿ ಕೂದಲು ದಾನ ಮಾಡಿದ ಬಾಲಕಿ

ಬೆಂಗಳೂರು: ಕ್ಯಾನ್ಸರ್ ರೋಗಿಗಳಿಗಾಗಿ 10 ವರ್ಷದ ಬಾಲಕಿ ಸೇರಿ 15ಕ್ಕೂ ಅಧಿಕ ಮಂದಿ ನಗರದಲ್ಲಿ ಕೂದಲನ್ನು ದಾನ ಮಾಡುವ ಮೂಲಕ ರೋಗದ ಬಗ್ಗೆ ಜಾಗೃತಿ ಮೂಡಿಸಿದರು.

ಇಂಡಿಯನ್ ಕ್ಯಾನ್ಸರ್ ಸೊಸೈಟಿ ಬೆಂಗಳೂರು ಮತ್ತು ಬೆಂಗಳೂರು ಹೇರ್ ಡೊನೇಷನ್ ಸಹಯೋಗದಲ್ಲಿ ಮಿಲಾಪ್ ವೇದಿಕೆ ಶನಿವಾರ ಹಮ್ಮಿಕೊಂಡ ರಾಷ್ಟ್ರೀಯ ಕ್ಯಾನ್ಸರ್ ಗೆದ್ದವರ ದಿನ ಕಾರ್ಯಕ್ರಮದಲ್ಲಿ ಗುಣಮುಖರನ್ನು ಗೌರವಿಸಲಾಯಿತು. ಕೂದಲು ದಾನದ ಬಗ್ಗೆ ಹಲವರು ಪ್ರತಿಜ್ಞೆ ಕೈಗೊಂಡರು. ಎಚ್‌ಎಸ್ ಸಲೂನ್‌ನಲ್ಲಿ ಹತ್ತು ವರ್ಷದ ಲಿಪಿ ಸಿಂಡೆರೆಲ್ಲಾ ಸೇರಿ ಕೆಲವರು ಕೂದಲು ದಾನ ನೀಡಿದರು. ರೋಗವನ್ನು ಜಯಿಸಿದವರು ನಮ್ಮ ಅನುಭವವನ್ನು ಹಂಚಿಕೊಂಡರು.

ಮಿಲಾಪ್ ವೇದಿಕೆ ಸಹ ಸಂಸ್ಥಾಪಕ ಅನೋಜ್ ವಿಶ್ವನಾಥನ್, 'ದೇಶದಲ್ಲಿ ಕಳೆದ ವರ್ಷ 14.61 ಲಕ್ಷ ಕ್ಯಾನ್ಸರ್ ಪ್ರಕರಣಗಳನ್ನು ಗುರುತಿಸಲಾಗಿತ್ತು. ಸರಾಸರಿ 9 ಜನರಲ್ಲಿ ಒಬ್ಬರಿಗೆ ಕ್ಯಾನ್ಸರ್ ಕಾಣಿಸಿಕೊಳ್ಳುವ ಸಾಧ್ಯತೆ ಇರುತ್ತದೆ. ಮಹಿಳೆಯರು ಹೆಚ್ಚಾಗಿ ಸ್ತನ ಕ್ಯಾನ್ಸರ್, ಪುರುಷರು ಶ್ವಾಸಕೋಶ ಕ್ಯಾನ್ಸರ್ ಹಾಗೂ ಮಕ್ಕಳು ಲಿಂಫಾಯ್ಡ್ ಲ್ಯೂಕೇಮಿಯಾಕ್ಕೆ ಒಳಗಾಗುತ್ತಿದ್ದಾರೆ. 2020ಕ್ಕೆ ಹೋಲಿಸಿದರೆ, 2025ರ ವೇಳೆ ಕ್ಯಾನ್ಸರ್ ಪ್ರಕರಣಗಳು ಶೇ 12.8ರಷ್ಟು ಹೆಚ್ಚಾಗಬಹುದೆಂದು ಅಂದಾಜಿಸಲಾಗಿದೆ' ಎಂದರು.

ಇಂಡಿಯನ್ ಕ್ಯಾನ್ಸರ್ ಸೊಸೈಟಿಯ ಕಾರ್ಯಕ್ರಮ ಸಂಯೋಜಕಿ ಡಾ.ಜವೇರಾ ಫಾತಿಮಾ, 'ದೇಶವು ಕ್ಯಾನ್ಸರ್ ಆರೈಕೆಯಲ್ಲಿ ಗಮನಾರ್ಹ ಪ್ರಗತಿ ಸಾಧಿಸುತ್ತಿದೆ. ಕ್ಯಾನ್ಸರ್ ಕಾಯಿಲೆ ಎದುರಿಸಲು ಮಾನಸಿಕ ಶಕ್ತಿಯೂ ಅಗತ್ಯ. ಅತ್ಯಾಧುನಿಕ ತಂತ್ರಜ್ಞಾನದ ನೆರವಿನಿಂದ ಕಾಯಿಲೆಯನ್ನು ವಾಸಿ ಮಾಡಲು ಸಾಧ್ಯ' ಎಂದು ಹೇಳಿದರು.

'ಕಾಂಗ್ರೆಸ್ ಕೂಪನ್ ಹಂಚಿ ಗೆದ್ದಿದೆ'

ಬೆಂಗಳೂರು: 'ಸುಳ್ಳು ಗ್ಯಾರಂಟಿ ಹಾಗೂ ಉಡುಗೊರೆ ಕೂಪನ್‌ಗಳನ್ನು ಹಂಚಿ ಕಾಂಗ್ರೆಸ್ ಪಕ್ಷವು ಚುನಾವಣೆಯಲ್ಲಿ ಗೆಲುವು ಸಾಧಿಸಿದೆ' ಎಂದು ಬಿಜೆಪಿ ರಾಜ್ಯ ಘಟಕ ಆರೋಪಿಸಿದೆ.

ರಾಮನಗರ ಕ್ಷೇತ್ರದ ಕಾಂಗ್ರೆಸ್ ಶಾಸಕ ಇಕ್ಬಾಲ್ ಹುಸೇನ್ ಮಾತನಾಡಿರುವ ವಿಡಿಯೊ ತುಣುಕೊಂದನ್ನು ತನ್ನ ಅಧಿಕೃತ ಟ್ವಿಟರ್ ಖಾತೆಯಲ್ಲಿ ಹಂಚಿಕೊಂಡಿರುವ ಬಿಜೆಪಿ, 'ಚುನಾವಣೆಗೂ ಮೊದಲು ಮತದಾರರಿಗೆ ₹5,000 ಮೌಲ್ಯದ ಉಡುಗೊರೆ ಕೂಪನ್‌ಗಳನ್ನು ಹಂಚಿರುವುದಾಗಿ ರಾಮನಗರದ ಕಾಂಗ್ರೆಸ್ ಶಾಸಕರು ಒಪ್ಪಿಕೊಂಡಿದ್ದಾರೆ' ಎಂದು ಹೇಳಿದೆ.

ಈ ರೀತಿಯ ಕೂಪನ್‌ಗಳನ್ನು ರಾಜ್ಯದ ಬಹುತೇಕ ವಿಧಾನಸಭಾ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳು ಹಂಚಿಕೆ ಮಾಡಿದ್ದಾರೆ. ಚುನಾವಣೆಯಲ್ಲಿ ಪಾಲಿಸಬೇಕಾದ ನೀತಿ ಸಂಹಿತೆಯನ್ನು ಗಾಳಿಗೆ ತೂರಿದ್ದಾರೆ. ಸುಳ್ಳಿನ ಗ್ಯಾರಂಟಿಗಳು ಹಾಗೂ ಕೂಪನ್‌ಗಳ ಆಮಿಷ ಒಡ್ಡಿ ಜನರನ್ನು ವಂಚಿಸಿ ಅಧಿಕಾರ ಹಿಡಿದಿರುವ ಕಾಂಗ್ರೆಸಿಗೆ ಕನ್ನಡಿಗರು ಪಾಠ ಕಲಿಸಲಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದೆ.

ನಗರದಲ್ಲಿ ಇಂದು

39ನೇ ವಾರ್ಷಿಕೋತ್ಸವ ಸಂಭ್ರಮ: ಅಧ್ಯಕ್ಷತೆ: ಎನ್. ಸಂತೋಷ್ ಹೆಗ್ಡೆ, ಪ್ರಶಸ್ತಿ ಪುರಸ್ಕೃತರು: ಎಂ.ಎಸ್. ಗೋವಿಂದಸ್ವಾಮಿ, ಗೀತಾ ಹೆಗಡೆ, ಉಮಾ ಪ್ರಕಾಶ್, ಎಚ್.ವಿ. ಶಂಕರ್, ಆಯೋಜನೆ: ಸಂಗೀತ ಕೃಪಾ ಕುಟೀರ, ಸ್ಥಳ: ಸ್ವಾಮಿ ವಿವೇಕಾನಂದ ವಿದ್ಯಾಶಾಲಾ, ಬನಶಂಕರಿ 1ನೇ ಹಂತ, ಬೆಳಿಗ್ಗೆ 9.30

ಸಿರಿಧಾನ್ಯ-ಸುಖಧಾನ್ಯ ಜಾಗೃತಿ ಮತ್ತು ಉಪನ್ಯಾಸ: ಖಾದರ್ ವಲಿ, ರವಿ ಸುಬ್ರಮಣ್ಯ, ಸಂಗಾತಿ ವೆಂಕಟೇಶ್, ಆಯೋಜನೆ: ಆರೋಗ್ಯ ಆರ್ಗ್ಯಾನಿಕ್, ಸ್ಥಳ: ವಿದ್ಯಾಪೀಠ ಮಠ ಪಾರ್ಕಿಂಗ್, ಕತ್ರಿಗುಪ್ಪೆ ಮುಖ್ಯರಸ್ತೆ, ಬೆಳಿಗ್ಗೆ 9.45

ಜಿ. ಅಶ್ವತ್ಥನಾರಾಯಣ ಅವರ 'ರತ್ನಾಕರವರ್ಣಿಯ ಮೂರು ಶತಕಗಳು', 'ನಾ ಕಂಡ ಕನ್ನಡದ ಹಿರಿಯ ಸಾಹಿತಿಗಳು', ಕೆ. ಸತ್ಯನಾರಾಯಣ ಅವರ 'ಬೀದಿ ಜಗಳ ಮತ್ತು ಇತರ ಪ್ರಬಂಧಗಳು', ವೈ.ಎನ್. ಗುಂಡೂರಾವ್ ಅವರ 'ತಥಾ ಕಥಾ' ಪುಸ್ತಕಗಳ ಬಿಡುಗಡೆ: ಪುಸ್ತಕಗಳ ಪರಿಚಯ: ಪದ್ಮಿನಿ ನಾಗರಾಜು, ವೈ.ವಿ. ಗುಂಡೂರಾವ್, ಎನ್. ರಾಮನಾಥ್, ಕೆ. ರಾಜಕುಮಾರ್, ಅಧ್ಯಕ್ಷತೆ: ಬಾಬು ಕೃಷ್ಣಮೂರ್ತಿ, ಆಯೋಜನೆ: ತೇಜು ಪಬ್ಲಿಕೇಷನ್ಸ್, ನ್ಯೂವೇವ್ ಬುಕ್ಸ್ ಮತ್ತು ಶ್ರೀನಿವಾಸ ಪುಸ್ತಕ ಪ್ರಕಾಶನ, ಸ್ಥಳ: ಯುವಪಥ, ಜಯನಗರ, ಬೆಳಿಗ್ಗೆ 10

ಮೇ ತಿಂಗಳ ಉಪನ್ಯಾಸ: 'ಶ್ರೀನಿವಾಸ ವೈದ್ಯ ಸಾಹಿತ್ಯ-ಒಂದು ನೋಟ' ಉಪನ್ಯಾಸ: ಎಂ.ಎಸ್. ಆಶಾದೇವಿ, ಆಯೋಜನೆ: ಸಂವಾದ ಟ್ರಸ್ಟ್, ಸ್ಥಳ: ಜಿವಿ ಜನ್ಮಶತಾಬ್ದಿ ಸಭಾಂಗಣ, ಜಯರಾಮ ಸೇವಾ ಮಂಡಳಿ, ಜಯನಗರ, ಬೆಳಿಗ್ಗೆ 10

ಗಾಯನ, ಹಾಸ್ಯ, ರಸಪ್ರಶ್ನೆ ಮತ್ತು ಕವಿಗೋಷ್ಠಿ ಕಾರ್ಯಕ್ರಮ: ಅಧ್ಯಕ್ಷತೆ: ಸದಾನಂದ, ಅತಿಥಿಗಳು: ಗಣೇಶ್ ಮೂರ್ತಿ, ಉಪಸ್ಥಿತಿ: ಟಿ.ವಿ. ಸ್ವರ್ಣಗೌರಮ್ಮ, ಆಯೋಜನೆ: ಸಹಮತ, ಸ್ಥಳ: ಹೇಮ ಸದನ, ಸಿಕ್ಯುಎಲ್ ಬಡಾವಣೆ, ಸಹಕಾರನಗರ, ಬೆಳಿಗ್ಗೆ 10

ನಿರುಪಮಾ

'ಭಾವವರ್ಣ' ಶಾಸ್ತ್ರೀಯ ನೃತ್ಯ ಪ್ರದರ್ಶನ: ಅತಿಥಿಗಳು: ಲಲಿತಾ ಶ್ರೀನಿವಾಸನ್, ಎ. ರಾಧಾಕೃಷ್ಣ ರಾಜು, ಕೃಷ್ಣಮೂರ್ತಿ ಜಿ., ಕುಚಿಪುಡಿ: ಸ್ವಪ್ನ ಸುಂದರಿ, ವೀಣಾ ಮೂರ್ತಿ ವಿಜಯ್, ಅಲೇಖ್ಯಾ ಪುಂಜಾಲ, ಕಥಕ್: ನಿರುಪಮಾ ರಾಜೇಂದ್ರ, ಒಡಿಸ್ಸಿ: ಮಧುಲಿತಾ ಮೊಹಾಪಾತ್ರ, ಆಯೋಜನೆ: ರಾಜರಾಜೇಶ್ವರಿ ಕಲಾನಿಕೇತನ, ಕುಚಿಪುಡಿ ಡಾನ್ಸ್ ಸೆಂಟರ್, ತೆಲುಗು ವಿಜ್ಞಾನ ಸಮಿತಿ, ಸ್ಥಳ: ಶ್ರೀಕೃಷ್ಣದೇವರಾಯ ಕಲಾಮಂದಿರ, ತೆಲುಗು ವಿಜ್ಞಾನ ಸಮಿತಿ, ವೈಯಾಲಿ ಕವಾಲ್, ಮಲ್ಲೇಶ್ವರ, ಸಂಜೆ 4ರಿಂದ

'ಸಮ್ಮೋಹನ' ಬೊಂಬೆಯಾಟ ಚಿತ್ರದ ಪ್ರದರ್ಶನ: ಸ್ಥಳ: ಭಾನು-ನಾಣಿ ಅಂಗಳ, ಸುಚಿತ್ರಾ ಫಿಲ್ಮ್ ಸೊಸೈಟಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10

ಪ್ರಸನ್ನ ವೆಂಕಟರಮಣಸ್ವಾಮಿ ರಥೋತ್ಸವ: ಸ್ಥಳ: ಪ್ರಸನ್ನ ವೆಂಕಟರಮಣಸ್ವಾಮಿ, ಕೋಟೆ, ಬೆಳಿಗ್ಗೆ 11ರಿಂದ

ನೃತ್ಯಕಥಾ: ಪ್ರಸ್ತುತಿ: ಅಲ್ಲಾರ್‌ಮೆಲ್ ವಲ್ಲಿ, ಬಿಜಯಿನಿ ಸತ್ಪತಿ, ಪೃಥ್ವಿ ನಾಯಕ್, ಆಯೋಜನೆ: ಉಡುಪ ಫೌಂಡೇಷನ್, ಸ್ಥಳ: ಜೆ.ಎಸ್.ಎಸ್. ಸಭಾಂಗಣ, ಜಯನಗರ, ಸಂಜೆ 6

ಅಲ್ಲಾರ್‌ಮೆಲ್ ವಲ್ಲಿ

'ಮಹಿಷಮರ್ದಿನಿ' ಯಕ್ಷಗಾನ ಬಯಲಾಟ ಪ್ರದರ್ಶನ: ಭಾಗವತರು: ಉಂಡೆಮನೆ ಶ್ರೀಕೃಷ್ಣ ಭಟ್, ಆಯೋಜನೆ: ಅಂಬಿಕಾ ಯಕ್ಷೋತ್ಸವ, ಸ್ಥಳ: ಮೂಕಾಂಬಿಕಾ ಸನ್ನಿಧಿ, ತಾತಗುಣಿ, ಅಗರ, ಸಂಜೆ 4ರಿಂದ

ಸಂಸ್ಥಾಪನಾ ದಿನಾಚರಣೆ, ಪ್ರಶಸ್ತಿ ಪ್ರದಾನ: ಉದ್ಘಾಟನೆ: ಬಿ.ಆರ್. ಜಯರಾಮರಾಜೇ ಅರಸ್, ಪ್ರಸ್ತಾವನೆ: ಎನ್. ವಿ. ಅಂಬಾಮಣಿಮೂರ್ತಿ, ಅತಿಥಿಗಳು: ಸಿ. ನಾಗಣ್ಣ, ಅಧ್ಯಕ್ಷತೆ: ಪಿ.ಎನ್. ಶ್ರೀನಿವಾಸಚಾರಿ, ಆಯೋಜನೆ: ಕರ್ನಾಟಕ ವಿಶ್ವಕರ್ಮ ಸಾಹಿತ್ಯ-ಕಲಾ ಅಕಾಡೆಮಿ, ಸ್ಥಳ: ಅಕ್ಕಮಹಾದೇವಿ ಸಭಾಂಗಣ, ಕಸಾಪ, ಚಾಮರಾಜಪೇಟೆ, ಸಂಜೆ 5

ಅ 'ಸಾಮಾನ್ಯ' ಗೀತೆ: ಉಪಸ್ಥಿತಿ: ಎ.ಎಂ. ಚಂದ್ರಶೇಖರ, ಬಿ.ಎಸ್. ವಿಜಯಕುಮಾರ್, ಅಕ್ಷಯ್ ಎಂ ಭಾರದ್ವಾಜ್, ನವ್ಯ ಪಿ., ಜಿ.ಎನ್. ನಾರಾಯಣ್, ಜಿ.ಎನ್. ವಿಭಾಶ್ರೀ, ಭ.ರಾ. ವಿಜಯಕುಮಾರ್, ಆಯೋಜನೆ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿ, ಸ್ಥಳ: ಅಕಾಡೆಮಿ ಆವರಣ, ದೊಡ್ಡಬೊಮ್ಮಸಂದ್ರ, ಸಂಜೆ 5.30

ಅನನ್ಯ ನೃತ್ಯೋಲ್ಲಾಸ: ಭರತನಾಟ್ಯ: ಅಪೂರ್ವಾ ಪ್ರದೀಪ್, ಸ್ವಾತಿ ಕೆ., ಕಥಕ್: ಕ್ಷಮಿತಾ ಆರ್. ಶಾಸ್ತ್ರಿ, ಮೋಹಿನಿ ಅಟ್ಟಂ: ವಿದ್ಯಾ ಪ್ರದೀಪ್, ಆಯೋಜನೆ: ಅನನ್ಯ, ಸ್ಥಳ: ಸೇವಾ ಸದನ, ಮಲ್ಲೇಶ್ವರ, ಸಂಜೆ 5.30

ಆತಂಕ ಮೂಡಿಸಿದ ತಲೆಬುರುಡೆ!

ಪ್ರಜಾವಾಣಿ ವಾರ್ತೆ

ಮೈಸೂರು: ನಗರದ ಶಂಕರ ಮಠ 4ನೇ ಕ್ರಾಸ್‌ನಲ್ಲಿರುವ ಶ್ರೀಕಾಂತ ಶಾಲೆ ಎದುರಿನ ಚರಂಡಿಯಲ್ಲಿ ಹೂಳೆತ್ತುತ್ತಿದ್ದ ವೇಳೆ ತಲೆಬುರುಡೆಯೊಂದು ಕಾಣಿಸಿತೆಂದು ಕಾರ್ಮಿಕರು ತಿಳಿಸಿದ ಹಿನ್ನೆಲೆಯಲ್ಲಿ ಶನಿವಾರ ಪತ್ತೆ ಕಾರ್ಯಾಚರಣೆ ನಡೆಸಲಾಯಿತು.

ಚರಂಡಿಗಳ ಹೂಳೆತ್ತುವ ಕಾಮಗಾರಿ ಕೈಗೊಳ್ಳಲಾಗಿದೆ. ಚಿಕ್ಕದಾಗಿರುವ ಮಳೆ ನೀರು ಚರಂಡಿಯಲ್ಲಿ ಹೂಳೆತ್ತುವಾಗ ಬುರುಡೆ ಕಾಣಿಸಿತು ಎನ್ನಲಾಗಿದೆ.

'ಮೊದಲು ಹೆಲ್ಮೆಟ್ ಸಿಕ್ಕಿತು. ಅದನ್ನು ಮೇಲೆತ್ತಿದಾಗ ಮನುಷ್ಯನ ತಲೆಬುರುಡೆಯೂ ಬಂದಿತು. ಹೆಲ್ಮೆಟ್‌ನಿಂದ ತಲೆಬುರುಡೆ ಬಿದ್ದಿತು. ತಿಳಿಯದೇ ಅದರ ಬಾಯಿಯೊಳಗೆ ಕೈ ಹಾಕಿದ್ದೆ. ಹಲ್ಲುಗಳನ್ನು ಹಿಡಿದಿದ್ದೆ. ಇದರಿಂದ ಗಾಬರಿಗೊಂಡೆ' ಎಂದು ಕಾರ್ಮಿಕ ಪಳನಿಸ್ವಾಮಿ ಎನ್ನುವವರು ತಿಳಿಸಿದ್ದಾರೆ.

ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಪ್ರಶ್ನೆ

'ಚುನಾವಣೆ ನಡೆಸಿ ಎನ್ನುವ ಔಚಿತ್ಯ ಏನು?'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಚುನಾವಣೆ ನಡೆಸುವ ಅಧಿಕಾರ ನಮಗೆ ಇಲ್ಲ. ಆದರೆ, 1999ರ ಫೆ.18ರ ತೀರ್ಪಿನ ಪ್ರಕಾರ ಮುಂದಿನ ಚುನಾವಣೆ ನಡೆಯುವರೆಗೂ ನಮ್ಮ ಫೆಡರೇಶನ್ ಮಾನ್ಯತೆ ಮುಂದುವರಿಯಲಿದೆ. 2019ರ ಡಿಸೆಂಬರ್ 31ರಂದು ನಾವು ಕೊಟ್ಟಿರುವ ಬೇಡಿಕೆಗಳ ಪ್ರಣಾಳಿಕೆಯಲ್ಲೇ ಚುನಾವಣೆ ನಡೆಸುವಂತೆ ಮನವಿ ಮಾಡಿದ್ದೆವು' ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಅಂಡ್ ವರ್ಕರ್ಸ್ ಫೆಡರೇಷನ್ ಹೇಳಿದೆ.

'ಕೆಲವು ಕೂಟದವರು ಸಂಸ್ಥೆ ಹಾಗೂ ಎಲ್ಲ ನೌಕರರ ತಲೆಯ ಮೇಲೆ ಕಲ್ಲಿನ ಚಪ್ಪಡಿ ಹಾಸಿ ಈಗ ಎಲ್ಲವನ್ನೂ ಬಿಟ್ಟು ಚುನಾವಣೆ ನಡೆಸಿ ಎನ್ನುವ ಔಚಿತ್ಯ ಏನು? ವೇತನ ಹೆಚ್ಚಳವನ್ನು ಯಾರೊಬ್ಬರು ತಿರಸ್ಕರಿಸಿಲ್ಲ. ನೂರಕ್ಕೆ ನೂರು ಭಾಗ ಈ ವೇತನ ಹೆಚ್ಚಳವನ್ನು ಒಪ್ಪಿದ್ದಾರೆ' ಎಂದು ಪ್ರಧಾನ ಕಾರ್ಯದರ್ಶಿ ಡಿ.ಎ. ವಿಜಯಭಾಸ್ಕರ್ ಹೇಳಿದ್ದಾರೆ.

'ವೇತನ ಹೆಚ್ಚಳ ಸಂಬಂಧ ಕೆಲವರು ಸಂಘಟನೆಗಳು ಸುಳ್ಳು ಸುದ್ದಿ ಹಬ್ಬಿಸಿ ಗೊಂದಲ ಸೃಷ್ಟಿಸಲು ಹವಣಿಸಿದರು. ಆದರೆ, ಇಂದು ವೇತನ ಹೆಚ್ಚಳದ ಬಗ್ಗೆ ತಿಳಿವಳಿಕೆ ಬಂದಿದೆ. ನಮ್ಮ ಸೌಮ್ಯ ಹಾಗೂ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಹೋರಾಟ ನಡೆಸಿದ್ದರ ಪರಿಣಾಮ, ಎಲ್ಲರಿಗೂ 2020ರ ಜನವರಿ 1ರಿಂದ ಶೇ 15 ಮೂಲವೇತನ ಹೆಚ್ಚಳವಾಗಿದೆ. ಬಹಳ ಮಂದಿ ನೌಕರರಿಗೆ ಹಳೇ ಮೂಲ ವೇತನದಿಂದ ಹೊಸ ಮೂಲ ವೇತನಕ್ಕೆ ತರುವಾಗ ಫಿಟ್‌ಮೆಂಟ್ ಬೆನಿಫಿಟ್ ಸಿಕ್ಕಿದೆ. ಇದು ಕೂಡ ಮೂಲ ವೇತನವನ್ನು ಹೆಚ್ಚಿಸಿದೆ.

ಹೆಚ್ಚಿರುವ ಮೂಲ ವೇತನಗಳಿಗೆ ತುಟ್ಟಿಭತ್ಯೆ ಮತ್ತು ಮನೆ ಬಾಡಿಗೆ ಭತ್ಯೆ ಜಾಸ್ತಿಯಾಗಿದೆ. ಹೆಚ್ಚಿದ ಮೂಲ ವೇತನ ಮತ್ತು ತುಟ್ಟಿಭತ್ಯೆಗೆ ಶೇ 12 ಭಾಗ ಭವಿಷ್ಯ ನಿಧಿಯ ವಂತಿಗೆ ಹೆಚ್ಚಳವಾಗುತ್ತದೆ. ಮೂಲ ವೇತನ ಹೆಚ್ಚಾಗುವ ಕಾರಣ ಉಪಧನ (ಗ್ರ್ಯಾಚ್ಯುಟಿ) ಹೆಚ್ಚಳವಾಗುತ್ತದೆ' ಎಂದು ವಿಜಯಭಾಸ್ಕರ್ ತಿಳಿಸಿದ್ದಾರೆ.

PUBLIC NOTICE

This is to bring to the notice of the public that I am intending to purchase the detailed immovable scheduled property from Mr. Nandish.S, aged about 42 years, son of late R. Shankar Reddy residing at No 487/1/1, "SUNSHINE TEJAS ENCLAVE", 38th Cross, 8th Block Jayanagar BANGALORE 560070. It is also represented that the property is not subjected for any loan liability or any sale/agreement and free from any incumbrance of whatsoever nature. Therefore, if anybody has got any claim or charge over the said property they can put forward their claim with documentary evidence within 7 days from this date. Be it known to all that, if there is no claim within the said time, we will proceed ahead with purchasing of the said property and no such claim shall be entertained thereafter.

Schedule Property

All that piece and parcel of the BDA property bearing site No 2223, situated at 8th Phase, 2nd Block, JP Nagar, Bangalore measuring East to West 18.28 meters and North to South 12.19 meters totally measuring 222.83 sq meters with all rights, appearances whatsoever whether underneath or above the surface and bounded on East by : Road, West By : Site No 2226, North By : Site No 2222, South By : Site No 2224.

Karthik
S/O Sri Ganapathi Tantry, Chandranagar, Padur Post, Near Milk Diary, Udupi Taluk and District, Karnataka- 574106, Ph 8904304098

ಸಾರ್ವಜನಿಕ ಪ್ರಕಟಣೆ

ನಮ್ಮ ಕಕ್ಷಿದಾರ, (**'ಕಕ್ಷಿದಾರ'**) ಈ ಕೆಳಕಂಡ **"ಷೆಡ್ಯೂಲ್"** ನಲ್ಲಿ ವಿವರಿಸಿರುವ ಮತ್ತು ಇದನ್ನು ಇನ್ನುಮುಂದೆ **"ಷೆಡ್ಯೂಲ್ ಸ್ವತ್ತುಗಳು"** ಎಂದು ಕರೆಯಲ್ಪಡುವ, ಸದರಿ ಸ್ವತ್ತುಗಳ ಮಾಲೀಕರಾದ ಶ್ರೀಮತಿ. ಇಂದು ಎಸ್. ಆರ್ಯ @ ಇಂದು ಶರ್ಮ, ವಾಸ ನಂ.1127, ಏಮೆಸ್ ಕೋರ್ಟ್, ನಾಪರ್‌ವಿಲ್ಲೆ ಐಎಲ್ 60540, ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕ (ಈಕೆಯ ಪರವಾಗಿ ಕಾರ್ಯನಿರ್ವಹಿಸುತ್ತಿರುವ, ಈಕೆಯ ತಂದೆ ಹಾಗೂ ಪವರ್ ಆಫ್ ಅಟಾರ್ನಿ, ಶ್ರೀ. ಸಜನ್ ಕುಮಾರ್ ಶರ್ಮ @ ಎಸ್.ಕೆ. ಶರ್ಮ) (**'ಮಾಲೀಕರು'**) ಇವರೊಡನೆ ಕನ್ನಿಂಗ್‌ಹ್ಯಾಂ ರಸ್ತೆ, ಬೆಂಗಳೂರು, ಇಲ್ಲಿರುವ ಬಿಬಿಎಂಪಿ ಮುನಿಸಿಪಾಲ್ ನಂ. 37/7 ಮತ್ತು ಬಿಬಿಎಂಪಿ ಮುನಿಸಿಪಾಲ್ ನಂ. 37/8,ರ ಸ್ಥಿರಾಸ್ತಿ ಸ್ವತ್ತಿಗೆ ಸಂಬಂಧಿಸಿದಂತೆ ಮಾರಾಟ ವ್ಯವಹಾರ ನಡೆಸಲು ಅಪೇಕ್ಷಿಸಿರುತ್ತಾರೆ. ತಾವು ಷೆಡ್ಯೂಲ್ ಸ್ವತ್ತುಗಳಿಗೆ ನಾವುಗಳೇ ಏಕಮೇವ ಮಾಲೀಕರೆಂದು ಹಾಗೂ ಷೆಡ್ಯೂಲ್ ಸ್ವತ್ತುಗಳನ್ನು ಮಾರುವ ನಿರ್ಬಂಧರಹಿತ ಹಕ್ಕುಗಳನ್ನು ಹೊಂದಿರುತ್ತೇವೆ ಎಂಬುದಾಗಿ ಸದರಿ ಮಾಲೀಕರು ನಮ್ಮ ಕಕ್ಷಿದಾರರಿಗೆ ತಿಳಿಸಿರುತ್ತಾರೆ.

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ ಮೇಲ್ಕಂಡ ಮಾಲೀಕರನ್ನು ಹೊರತುಪಡಿಸಿ ಮತ್ತಾವುದೇ ವ್ಯಕ್ತಿ/ವ್ಯಕ್ತಿಗಳು ಸದರಿ ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಋಣಬಾಧ್ಯತೆ, ಹೊಣೆಗಾರಿಕೆ, ಕ್ಲೇಮ್‌ಗಳು ಅಥವಾ ಷೆಡ್ಯೂಲ್ ಸ್ವತ್ತುಗಳ ಬಗ್ಗೆ ಆಸಕ್ತಿಯನ್ನು ಹೊಂದಿದ್ದಲ್ಲಿ, ಅಥವಾ ಯಾವುದೇ ಸ್ವರೂಪದ ಷೆಡ್ಯೂಲ್ ಸ್ವತ್ತುಗಳ ಮೇಲೆ ಯಾವುದೇ ಕ್ಲೇಮುಗಳನ್ನು ಅಥವಾ ವ್ಯವಹಾರಕ್ಕೆ ಸಂಬಂಧಿಸಿದಂತೆ ಆಕ್ಷೇಪಣೆಗಳು ಹೊಂದಿದ್ದರೆ, ಅಂತಹ ಕ್ಲೇಮುಗಳನ್ನು ಅಥವಾ ಆಕ್ಷೇಪಣೆಗಳನ್ನು ಸೂಕ್ತ ಸಾಕ್ಷ್ಯಾಧಾರ ಹಾಗೂ ಕಾಗದಪತ್ರಗಳೊಡನೆ, ಲಿಖಿತರೂಪದಲ್ಲಿ ಈ ತಿಳುವಳಿಕೆ ಪ್ರಕಟವಾದ **10 (ಹತ್ತು)** ದಿನಗಳ ಕಾಲಾವಧಿಯ ಒಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಈ ಮೂಲಕ ಕರೆ ನೀಡಲಾಗಿದೆ. ತಿಳಿಸಿದ ಅವಧಿಯೊಳಗೆ ಯಾವುದೇ ಕ್ಲೇಮುಗಳು ಅಥವಾ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ, ಮೇಲೆ ತಿಳಿಸಿರುವ ಮಾಲೀಕರನ್ನು ಹೊರತುಪಡಿಸಿ ಮತ್ತಾರೂ ಕೂಡ ಷೆಡ್ಯೂಲ್ ಸ್ವತ್ತುಗಳ ಮೇಲೆ ಹಕ್ಕು, ಋಣಬಾಧ್ಯತೆ, ಹಿತಾಸಕ್ತಿ ಅಥವಾ ಕ್ಲೇಮುಗಳನ್ನು ಹೊಂದಿರುವುದಿಲ್ಲ ಎಂದು ತಿಳಿಯಲಾಗುವುದು ಮತ್ತು ನಮ್ಮ ಕಕ್ಷಿದಾರರು ಷೆಡ್ಯೂಲ್ ಸ್ವತ್ತುಗಳ ಮೇಲೆ ವ್ಯವಹಾರ ನಡೆಸಲು ಸ್ವತಂತ್ರರಾಗಿರುತ್ತಾರೆ ಎಂದು ತಿಳಿಯಲಾಗುವುದು.

ಷೆಡ್ಯೂಲ್
(ಷೆಡ್ಯೂಲ್ ಸ್ವತ್ತುಗಳ ವಿವರ)

ಐಟಂ ನಂ. 1:
ಬೆಂಗಳೂರು, ವಸಂತನಗರ, ಎಸ್‌ಆರ್‌ಟಿ ರಸ್ತೆ, ಕನ್ನಿಂಗ್‌ಹ್ಯಾಂ ರಸ್ತೆ, (ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.78) ರ ಸ್ಥಿರಾಸ್ತಿ ಸ್ವತ್ತಿನ ಬಿಬಿಎಂಪಿ ಮುನಿಸಿಪಾಲ್ ನಂ.37/7, (ಪಿಐಡಿ ನಂ.78-61-37/7) ಹೊಂದಿರುವ ವಿಸ್ತೀರ್ಣ ಉತ್ತರ ಭಾಗದಲ್ಲಿರುವ ಪೂರ್ವದಿಂದ ಪಶ್ಚಿಮಕ್ಕೆ 58 ಅಡಿ ಮತ್ತು ದಕ್ಷಿಣ ಭಾಗದಲ್ಲಿರುವ ಪೂರ್ವದಿಂದ ಪಶ್ಚಿಮಕ್ಕೆ 54 ಅಡಿ 6 ಇಂಚುಗಳು; ಮತ್ತು ಪೂರ್ವ ಭಾಗದಲ್ಲಿರುವ ಉತ್ತರದಿಂದ ದಕ್ಷಿಣಕ್ಕೆ 58 ಅಡಿ 6 ಇಂಚುಗಳು ಮತ್ತು ಪಶ್ಚಿಮ ಭಾಗದಲ್ಲಿರುವ ಉತ್ತರದಿಂದ ದಕ್ಷಿಣಕ್ಕೆ 59 ಅಡಿ 9 ಇಂಚುಗಳು, ಜೊತೆಗೆ ಇಲ್ಲಿ ಕಟ್ಟಡ ನಿರ್ಮಾಣ ಹೊಂದಿರುವ ಸದರಿ ಸ್ವತ್ತಿನ ಚೆಕ್ಕುಬಂದಿ ಕೆಳಕಂಡಂತಿರುವುದು:

ಪೂರ್ವಕ್ಕೆ : ನಂ. 37 ಕನ್ನಿಂಗ್‌ಹ್ಯಾಂ ರಸ್ತೆಗೆ ಹೋಗುವ ದಾರಿ;
ಪಶ್ಚಿಮಕ್ಕೆ : ಮುನಿಸಿಪಾಲ್ ನಂ. 37/8 ರ ಪ್ಲಾಟ್;
ಉತ್ತರಕ್ಕೆ : ಮುನಿಸಿಪಾಲ್ ನಂ. 37/9 ರ ಪ್ಲಾಟ್, ಕನ್ನಿಂಗ್‌ಹ್ಯಾಂ ರಸ್ತೆ; ಮತ್ತು
ದಕ್ಷಿಣಕ್ಕೆ : ಮುನಿಸಿಪಾಲ್ ನಂ. 37, ಕನ್ನಿಂಗ್‌ಹ್ಯಾಂ ರಸ್ತೆ.

ಐಟಂ ನಂ. 2:
ಬೆಂಗಳೂರು, ವಸಂತನಗರ, ಎಸ್‌ಆರ್‌ಟಿ ರಸ್ತೆ, ಕನ್ನಿಂಗ್‌ಹ್ಯಾಂ ರಸ್ತೆ, (ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.78) ರ ಸ್ಥಿರಾಸ್ತಿ ಸ್ವತ್ತಿನ ಬಿಬಿಎಂಪಿ ಮುನಿಸಿಪಾಲ್ ನಂ.37/8, (ಪಿಐಡಿ ನಂ.78-61-37/8) ಹೊಂದಿರುವ ವಿಸ್ತೀರ್ಣ ಉತ್ತರ ಭಾಗದಲ್ಲಿರುವ ಪೂರ್ವದಿಂದ ಪಶ್ಚಿಮಕ್ಕೆ 54 ಅಡಿ 6 ಇಂಚುಗಳು ಮತ್ತು ದಕ್ಷಿಣ ಭಾಗದಲ್ಲಿರುವ ಪೂರ್ವದಿಂದ ಪಶ್ಚಿಮಕ್ಕೆ 54 ಅಡಿ 6 ಇಂಚುಗಳು; ಮತ್ತು ಪೂರ್ವ ಭಾಗದಲ್ಲಿರುವ ಉತ್ತರದಿಂದ ದಕ್ಷಿಣಕ್ಕೆ 59 ಅಡಿ 9 ಇಂಚುಗಳು ಮತ್ತು ಪಶ್ಚಿಮ ಭಾಗದಲ್ಲಿರುವ ಉತ್ತರದಿಂದ ದಕ್ಷಿಣಕ್ಕೆ 61 ಅಡಿ 6 ಇಂಚುಗಳು, ಜೊತೆಗೆ ಇಲ್ಲಿ ಕಟ್ಟಡ ನಿರ್ಮಾಣ ಹೊಂದಿರುವ ಸದರಿ ಸ್ವತ್ತಿನ ಚೆಕ್ಕುಬಂದಿ ಕೆಳಕಂಡಂತಿರುವುದು:

ಪೂರ್ವಕ್ಕೆ : ಮುನಿಸಿಪಾಲ್ ನಂ. 37/7 ರ ಪ್ಲಾಟ್;
ಪಶ್ಚಿಮಕ್ಕೆ : ಇಪ್ಪತ್ತೈದು ಅಡಿ ರಸ್ತೆ;
ಉತ್ತರಕ್ಕೆ : ಮುನಿಸಿಪಾಲ್ ನಂ. 37/9 ರ ಪ್ಲಾಟ್, ಕನ್ನಿಂಗ್‌ಹ್ಯಾಂ ರಸ್ತೆ; ಮತ್ತು
ದಕ್ಷಿಣಕ್ಕೆ : ಮುನಿಸಿಪಾಲ್ ನಂ. 37, ಕನ್ನಿಂಗ್‌ಹ್ಯಾಂ ರಸ್ತೆ.

ಷೆಡ್ಯೂಲ್ ಸ್ವತ್ತುಗಳ ಏಕೀಕೃತ ವಿವರ (ಅಂದರೆ ಐಟಂ ನಂ. 1 ಮತ್ತು ಐಟಂ ನಂ. 2 ಒಟ್ಟುಗೂಡಿಸಿ)
ಈ ಕೆಳಕಂಡ ರೀತಿಯಲ್ಲಿ ಷೆಡ್ಯೂಲ್ ಸ್ವತ್ತುಗಳನ್ನು ವಿವರಿಸಲಾಗಿದೆ.
ಬೆಂಗಳೂರು, ವಸಂತನಗರ, ಎಸ್‌ಆರ್‌ಟಿ ರಸ್ತೆ, ಕನ್ನಿಂಗ್‌ಹ್ಯಾಂ ರಸ್ತೆ, (ಪ್ರಸ್ತುತ ಬಿಬಿಎಂಪಿ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.78) ರ ಸ್ಥಿರಾಸ್ತಿ ಸ್ವತ್ತಿನ ಬಿಬಿಎಂಪಿ ಮುನಿಸಿಪಾಲ್ ನಂ.37/7, (ಪಿಐಡಿ ನಂ.78-61-37/7) ಮತ್ತು ಮುನಿಸಿಪಾಲ್ ನಂ.37/8, (ಪಿಐಡಿ ನಂ.78-61-37/8)ರ ಒಟ್ಟಾರೆ ವಿಸ್ತೀರ್ಣ 6,574.36 ಚದರ ಅಡಿಗಳು (ಉತ್ತರ ಭಾಗದಲ್ಲಿರುವ ಪೂರ್ವದಿಂದ ಪಶ್ಚಿಮಕ್ಕೆ 112 ಅಡಿ 6 ಇಂಚುಗಳು ಮತ್ತು ದಕ್ಷಿಣ ಭಾಗದಲ್ಲಿರುವ ಪೂರ್ವದಿಂದ ಪಶ್ಚಿಮಕ್ಕೆ 109 ಅಡಿಗಳು; ಮತ್ತು ಪೂರ್ವ ಭಾಗದಲ್ಲಿರುವ ಉತ್ತರದಿಂದ ದಕ್ಷಿಣಕ್ಕೆ 58 ಅಡಿ 6 ಇಂಚುಗಳು ಮತ್ತು ಪಶ್ಚಿಮ ಭಾಗದಲ್ಲಿರುವ ಉತ್ತರದಿಂದ ದಕ್ಷಿಣಕ್ಕೆ 61 ಅಡಿ 6 ಇಂಚುಗಳು) ಹಾಗೂ 5,994 ಚದರ ಅಡಿಗಳ ವಿಸ್ತೀರ್ಣದ ಕಟ್ಟಡವಿದ್ದು, ನೆಲ ಮಹಡಿ, ಮೊದಲನೇ ಮಹಡಿ, ಎರಡನೇ ಮಹಡಿ ಮತ್ತು ಗ್ಯಾರೇಜ್ ಹೊಂದಿದೆ. ಈ ಸ್ವತ್ತುಗಳ ಚೆಕ್ಕುಬಂದಿ ಕೆಳಕಂಡಂತಿರುವುದು:

ಪೂರ್ವಕ್ಕೆ : ಹೋಟೆಲ್ ಕಾವೇರಿ ಕಾಂಟಿನೆಂಟಲ್‌ಗೆ ಹೋಗುವ ದಾರಿ;
ಪಶ್ಚಿಮಕ್ಕೆ : ಅಡ್ಡ ರಸ್ತೆ;
ಉತ್ತರಕ್ಕೆ : ಖಾಸಗಿ ಸ್ವತ್ತು; ಮತ್ತು
ದಕ್ಷಿಣಕ್ಕೆ : ಖಾಸಗಿ ಸ್ವತ್ತು.

ಸಹಿ/-
ಶ್ರೀನಿವಾಸ್ ಬಿ.ಆರ್ ಮತ್ತು ಬ್ರಿಜಿತ ಪ್ರಕಾಶ್, ಪಾಲುದಾರರು
ಡಿಎಸ್‌ಕೆ ಲೀಗಲ್,
ಪ್ರೆಸ್ಟೀಜ್ ಲೋಕ, ನಂ.201, 2ನೇ ಮಹಡಿ, ನಂ.7/1 & 7/7, ಬ್ರುಂಟನ್ ರಸ್ತೆ, ಕ್ರೈಗ್ ಪಾರ್ಕ್ ಲೇಔಟ್, ಬೆಂಗಳೂರು – 560025, ದೂ. ಸಂ. 080-69548770

ದಿನಾಂಕ: 28.05.2023
ಸ್ಥಳ : ಬೆಂಗಳೂರು

ಶಾಸಕ ಬಾಲಕೃಷ್ಣಗೆ ಸಿಗದ ಮಂತ್ರಿಗಿರಿ

ಪ್ರಜಾವಾಣಿ ವಾರ್ತೆ

ರಾಮನಗರ: ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮ ಸಚಿವ ಸಂಪುಟ ವಿಸ್ತರಣೆ ಮಾಡಿದ್ದು, ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಅವರಿಗೆ ಅವಕಾಶ ದೊರೆತಿಲ್ಲ.

ಐದನೇ ಬಾರಿಗೆ ಶಾಸಕರಾಗಿ ಆಯ್ಕೆ ಆಗಿರುವ ಬಾಲಕೃಷ್ಣಗೆ ಹಿರಿತನ ಮತ್ತು ಒಕ್ಕಲಿಗ ಕೋಟಾ ಅಡಿ ಸಚಿವ ಸ್ಥಾನ ಸಿಗಬಹುದು ಎನ್ನುವ ನಿರೀಕ್ಷೆ ಹೊಂದಿದ್ದರು. ಆದರೆ, ಅವರ ನಿರೀಕ್ಷೆ ಹುಸಿಯಾಗಿದೆ. ಸದ್ಯ ಡಿ.ಕೆ. ಶಿವಕುಮಾರ್ ಅವರೇ ಜಿಲ್ಲೆಯ ಉಸ್ತುವಾರಿಯನ್ನೂ ವಹಿಸಿಕೊಳ್ಳುವ ಸಾಧ್ಯತೆ ಇದೆ.

ಬಾಲಕೃಷ್ಣ

ಜಿಲ್ಲೆಯವರೇ ಆದ ಡಿ.ಕೆ. ಶಿವಕುಮಾರ್ ರಾಜ್ಯದ ಉಪ ಮುಖ್ಯಮಂತ್ರಿಯಾಗಿ ಆಡಳಿತ ನಡೆಸುತ್ತಿದ್ದಾರೆ. ಹೀಗಿದ್ದೂ ಜಿಲ್ಲೆಯಿಂದ ಇನ್ನೊಬ್ಬರಿಗೆ ಅವಕಾಶ ಸಿಗಬಹುದು ಎನ್ನುವ ಆಶಯದೊಂದಿಗೆ ಎಚ್.ಸಿ. ಬಾಲಕೃಷ್ಣ ದೆಹಲಿಗೆ ತೆರಳಿದ್ದರು. ಡಿಕೆಶಿ ಬೆನ್ನಿಗೆ ನಿಂತಿದ್ದರು.

'ರೈತ ವಿರೋಧಿ ಕಾಯ್ದೆ ವಾಪಸ್‌ಗೆ ಒತ್ತಡ ಹೇರಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ರೈತ ವಿರೋಧಿ ಕಾಯ್ದೆಗಳನ್ನು ವಾಪಸ್ ಪಡೆದುಕೊಳ್ಳುವಂತೆ ಸರ್ಕಾರದ ಮೇಲೆ ಒತ್ತಡ ಹೇರಬೇಕು' ಎಂದು ಮಂಡ್ಯ ಜಿಲ್ಲೆಯ ಮೇಲುಕೋಟೆ ವಿಧಾನಸಭಾ ಕ್ಷೇತ್ರದ ಶಾಸಕ ದರ್ಶನ್ ಪುಟ್ಟಣ್ಣಯ್ಯ ಹೇಳಿದರು.

ಇಲ್ಲಿನ ಕಲಾಮಂದಿರ ಆವರಣದ ಕಿರು ರಂಗಮಂದಿರದಲ್ಲಿ ಶನಿವಾರ ರಾಜ್ಯ ರೈತ ಸಂಘದಿಂದ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅಭಿನಂದನೆ ಸ್ವೀಕರಿಸಿ ಅವರು ಮಾತನಾಡಿದರು.

'ರೈತರ ಖರ್ಚು ಕಡಿಮೆಗೊಳಿಸಿ ಹೆಚ್ಚು ಆದಾಯ ಬರುವಂತೆ ಮಾಡುವ ಕಾರ್ಯಕ್ರಮಗಳ ಅನುಷ್ಠಾನದ ಗುರಿ ಹೊಂದಿದ್ದೇನೆ. ಕನಿಷ್ಠ ಬೆಂಬಲ ಬೆಲೆ ನಿಗದಿಗೆ ಹೋರಾಟ ನಡೆಸಬೇಕು. ರೈತರ ಬೆಳೆಗೆ ಬೆಲೆ ನಿಗದಿಪಡಿಸುವ ಸಂಬಂಧ ಕೆಲಸ ಮಾಡಬೇಕು. ಕ್ಷೇತ್ರದಲ್ಲಿ ಮೂಲ ಸೌಲಭ್ಯಕ್ಕೆ ಹೆಚ್ಚಿನ ಆದ್ಯತೆ ನೀಡುವ ಜೊತೆಗೆ ತಾಲ್ಲೂಕು ಕಚೇರಿಗಳಲ್ಲಿ ಆಗುವ ವಿಳಂಬ ನೀತಿಯ ಬಗ್ಗೆಯೂ ಗಮನ ನೀಡಬೇಕು' ಎಂದು ಅವರು ಹೇಳಿದರು.

ವಾದ್ಯಗಳ ಮೆರುಗು: ಸಂಭ್ರಮದ ವೆಂಕಟರಮಣಸ್ವಾಮಿ ಜಾತ್ರೆ

ವಿಜೃಂಭಣೆಯ ಬ್ರಹ್ಮರಥೋತ್ಸವ

ಪ್ರಜಾವಾಣಿ ವಾರ್ತೆ

ಶ್ರೀಕೋಟೆ ವೆಂಕಟರಮಣಸ್ವಾಮಿಯ ಬ್ರಹ್ಮರಥೋತ್ಸವ ವಿಜೃಂಭಣೆಯಿಂದ ನಡೆಯಿತು

ಕೆ.ಆರ್. ಪುರ: ಇತಿಹಾಸ ಪ್ರಸಿದ್ಧ ಕೆ.ಆರ್. ಪುರದ ಶ್ರೀಕೋಟೆ ವೆಂಕಟರಮಣಸ್ವಾಮಿಯ ಬ್ರಹ್ಮರಥೋತ್ಸವ ಶನಿವಾರ ವಿಜೃಂಭಣೆಯಿಂದ ನಡೆಯಿತು. ಕೆ.ಆರ್.ಪುರದ ಪ್ರಮುಖ ರಸ್ತೆ ಹಾಗೂ ಬೀದಿಗಳಲ್ಲಿ ಅದ್ದೂರಿಯಾಗಿ ಮೆರವಣಿಗೆ ನಡೆಸಲಾಯಿತು.

ಉತ್ಸವದಲ್ಲಿ ದೇವರಿಗೆ ವಿಶೇಷ ಪೂಜೆ, ಅಭಿಷೇಕ, ಹೋಮ ಹವನ ಹಾಗೂ ಮಹಾಮಂಗಳಾರತಿ ಸೇರಿದಂತೆ ವಿವಿಧ ಧಾರ್ಮಿಕ ಕಾರ್ಯಗಳು ಶಾಸ್ತ್ರೋಕ್ತವಾಗಿ ನೆರವೇರಿಸಲಾಯಿತು. ವಿಶೇಷ ಹೂವಿನ ಅಲಂಕಾರ ಆಕರ್ಷಣೀಯವಾಗಿತ್ತು.

ಬ್ರಹ್ಮ ರಥೋತ್ಸವದಲ್ಲಿ ವೀರಗಾಸೆ ತಮಟೆ, ಡೊಳ್ಳು ಕುಣಿತ, ಕೀಲುಕುದುರೆ, ಗೊಂಬೆ ಕುಣಿತ, ಪೂಜಾ ಕುಣಿತ, ಮಂಗಳವಾದ್ಯ ತಂಡದ ನೃತ್ಯ ಪ್ರದರ್ಶನ ರಥೋತ್ಸವಕ್ಕೆ ಮೆರಗು ನೀಡಿದವು.

ವಿವಿಧ ರೀತಿಯ ಇಷ್ಟಾರ್ಥ ಪ್ರಾಪ್ತಿಗಾಗಿ ದೇವರಿಗೆ ಉಪ್ಪು, ಮೆಣಸು, ಅರ್ಪಿಸಿದ ಭಕ್ತರು ರಥಕ್ಕೆ ಬಾಳೆಹಣ್ಣು ಎಸೆಯುವ ಮೂಲಕ ತಮ್ಮ ಹರಕೆ ಈಡೇರಿಸಿಕೊಂಡರು.

ಕೆ.ಆರ್.ಪುರ, ಹೊಸಕೋಟೆ, ಮಹದೇವಪುರ, ಎಚ್‌ಎಎಲ್, ಹೆಣ್ಣೂರು, ದೇವಸಂದ್ರ, ಅಯ್ಯಪ್ಪ ನಗರ, ಹೊರಮಾವು, ಬೈರತಿ, ಹೂಡಿ, ಬೈಯಪ್ಪನಹಳ್ಳಿ, ರಾಮಮೂರ್ತಿನಗರ, ಬಸವನಪುರ ನಗರದ ವಿವಿಧೆಡೆಯಿಂದ ಸಹಸ್ರಾರು ಸಂಖ್ಯೆಯಲ್ಲಿ ಆಗಮಿಸಿದ ಭಕ್ತರು ರಥೋತ್ಸವದಲ್ಲಿ ದೇವರ ದರ್ಶನ ಪಡೆದು ದೇವರ ಕೃಪೆಗೆ ಪಾತ್ರರಾದರು.

ಭಕ್ತರಿಗೆ ಪಾನಕ ಮಜ್ಜಿಗೆ, ಕೋಸಂಬರಿಯನ್ನು ಕೆ.ಆರ್.ಪುರ ಗ್ರಾಮಸ್ಥರು ವಿತರಿಸಿದರು. ಶಾಸಕ ಬೈರತಿ ಬಸವರಾಜ ಅವರು ಭಕ್ತಾದಿಗಳಿಗೆ ಅನ್ನ ದಾಸೋಹ ಏರ್ಪಡಿಸಿದ್ದರು.

ಶಾಸಕ ಬೈರತಿ ಬಸವರಾಜ, ಟ್ರಸ್ಟ್ ಅಧ್ಯಕ್ಷ ಎಲ್.ಮುನಿಸ್ವಾಮಿ, ಉಪಾಧ್ಯಕ್ಷ ಹಾಗೂ ಅರ್ಚಕ ಮುರಳಿಸ್ವಾಮಿ, ಖಜಾಂಚಿ ರಮೇಶ್, ಮಾಜಿ ಪಾಲಿಕೆ ಸದಸ್ಯರಾದ ಜಯಪ್ರಕಾಶ್, ಅಂತೋಣಿ ಸ್ವಾಮಿ ಇತರರು ಇದ್ದರು.

‘ಸರ್ಕಾರ ಪುಸ್ತಕೋದ್ಯಮ ಬೆಂಬಲಿಸಲಿ’

ಕಾರ್ಯಕ್ರಮದಲ್ಲಿ ಕೆ. ನಲ್ಲತಂಬಿ ಅವರನ್ನು ಸನ್ಮಾನಿಸಲಾಯಿತು. ಪೊನ್ ವಾಸುದೇವನ್, ಬಹುರೂಪಿಯ ಸಂಸ್ಥಾಪಕ ಜಿ.ಎನ್. ಮೋಹನ್, ಶ್ರೀಜಾ ವಿ.ಎನ್., ಕಲಾವಿದ ಗುಜ್ಜಾರ್ ಇದ್ದಾರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪುಸ್ತಕೋದ್ಯಮಕ್ಕೆ ತಮಿಳುನಾಡು ಸರ್ಕಾರ ನೀಡುತ್ತಿರುವ ಪ್ರೋತ್ಸಾಹ ಮಾದರಿಯಾಗಿದ್ದು, ಕರ್ನಾಟಕದಲ್ಲಿಯೂ ಪುಸ್ತಕೋದ್ಯಮವನ್ನು ಉಳಿಸಿ ಬೆಳೆಸಲು ಈ ಮಾದರಿಯನ್ನು ಅಳವಡಿಸಿಕೊಳ್ಳಬೇಕು’ ಎಂದು ತಮಿಳು ಸಾಹಿತಿ, ಪ್ರಕಾಶಕ ಪೊನ್ ವಾಸುದೇವನ್ ಅಭಿಮತ ವ್ಯಕ್ತಪಡಿಸಿದರು.

ಬಹುರೂಪಿ ಪ್ರಕಾಶನ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಪುಸ್ತಕೋದ್ಯಮ ಇಂದು ಸಂಕಷ್ಟ ಎದುರಿಸುತ್ತಿದೆ. ನಾಳಿನ ಪೀಳಿಗೆಗೆ ಓದುವ ಸಂಸ್ಕೃತಿಯನ್ನು ಉಳಿಸಬೇಕಾದರೆ ಸರ್ಕಾರ ಪ್ರಕಾಶನ ರಂಗಕ್ಕೆ ಬೆನ್ನೆಲುಬಾಗಿ ನಿಲ್ಲಬೇಕಾದ ಅವಶ್ಯಕತೆ ಇದೆ’ ಎಂದು ಹೇಳಿದರು.

‘ಡಿಎಂಕೆ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ಜಿಲ್ಲಾ ಮಟ್ಟದಲ್ಲಿ ನಡೆಸುತ್ತಿರುವ ಪುಸ್ತಕ ಮೇಳಗಳು ಹಾಗೂ ಕೈಗೆತ್ತಿಕೊಂಡಿರುವ ಹಲವು ರೀತಿಯ ಸಗಟು ಖರೀದಿ ಯೋಜನೆಗಳು ಪುಸ್ತಕೋದ್ಯಮ ಉಸಿರಾಡುವಂತೆ ಮಾಡಿದೆ’ ಎಂದರು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ವಿಜೇತ ಕೆ. ನಲ್ಲತಂಬಿ, ‘ಜ್ಞಾನ ವೃದ್ಧಿಗೆ ಪುಸ್ತಕ ಓದುವ ಹವ್ಯಾಸ ಪಸರಿಸಬೇಕು’ ಎಂದು ತಿಳಿಸಿದರು.

ದಕ್ಷಿಣ ಒಳನಾಡಿನಲ್ಲಿ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರಾವಳಿ ಹಾಗೂ ದಕ್ಷಿಣ ಒಳನಾಡಿನ ಎಲ್ಲಾ ಜಿಲ್ಲೆಗಳ ಕೆಲವೆಡೆ ಭಾನುವಾರವೂ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಉತ್ತರ ಒಳನಾಡಿನ ಒಂದೆರಡು ಕಡೆ ಮಳೆಯಾಗಲಿದ್ದು, ಉಳಿದೆಡೆ ಒಣಹವೆ ಇರಲಿದೆ. ಗರಿಷ್ಠ ಉಷ್ಣಾಂಶವು ರಾಜ್ಯದ ಕೆಲವು ಕಡೆಗಳಲ್ಲಿ ಸಾಮಾನ್ಯಕ್ಕಿಂತ 2–3 ಡಿಗ್ರಿ ಸೆಲ್ಸಿಯಸ್ ಹೆಚ್ಚಾಗಲಿದೆ. ಇದೇ 29ರಂದು ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು ಹಾಗೂ ಹಾಸನಕ್ಕೆ ‘ಯೆಲ್ಲೋ ಅಲರ್ಟ್’ ಘೋಷಿಸಲಾಗಿದೆ. ದಕ್ಷಿಣ ಒಳನಾಡಿನ ಜಿಲ್ಲೆಗಳಲ್ಲಿ ಬುಧವಾರದ ಬಳಿಕ ಮಳೆಯ ಪ್ರಮಾಣ ಹೆಚ್ಚಳವಾಗುವ ಸಾಧ್ಯತೆಯಿದೆ ಎಂದು ಹೇಳಿದೆ.

ನೆಹರೂ ಮಹಾನ್ ಪ್ರಜಾಪ್ರಭುತ್ವವಾದಿ: ಬಣ್ಣನೆ

ಬೆಂಗಳೂರು: ಭಾರತದಲ್ಲಿ ಪ್ರಜಾಪ್ರಭುತ್ವ ಸುಭದ್ರವಾಗಿರಲು ದೇಶದ ಮೊದಲ ಪ್ರಧಾನಿ ಜವಾಹರ ಲಾಲ್ ನೆಹರೂ ಕಾರಣ. ಅವರೊಬ್ಬ ಮಹಾನ್ ಪ್ರಜಾಪ್ರಭುತ್ವವಾದಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಅವರ ಪುಣ್ಯತಿಥಿ ಅಂಗವಾಗಿ ವಿಧಾನಸೌಧದ ಆವರಣದಲ್ಲಿರುವ ನೆಹರೂ ಅವರ ಭಾವಚಿತ್ರಕ್ಕೆ ಶನಿವಾರ ಪುಷ್ಪನಮನ ಸಲ್ಲಿಸಿದ ಬಳಿಕ ಅವರು ಮಾತನಾಡಿದರು.

ದೇಶದ ಪ್ರಧಾನಿಯಾಗಿ 17 ವರ್ಷಗಳ ಕಾಲ ಕಾರ್ಯ ನಿರ್ವಹಿಸಿದ ನೆಹರೂ, ಭಾರತವನ್ನು ಆಧುನಿಕಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ದೇಶದಲ್ಲಿ ಪ್ರಜಾಪ್ರಭುತ್ವ, ಸಾರ್ವಭೌಮತೆ ಉಳಿದಿದ್ದರೆ ಅದಕ್ಕೆ ಅವರ ಕೊಡುಗೆ ದೊಡ್ಡದು ಎಂದರು.

‘ನೆಹರೂ ಅವರು ಹಾಕಿದ್ದ ಅಡಿಪಾಯದ ಆಧಾರದಲ್ಲಿ ದೇಶವು ಬಲವಾಗಿ ಬೆಳೆದಿದೆ. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ್ದರು. ಅವರ ತ್ಯಾಗ ಬಲಿದಾನಗಳನ್ನು ದೇಶವು ಸ್ಮರಿಸಬೇಕಿದೆ’ ಎಂದು ಹೇಳಿದರು.

ಆರೋಗ್ಯ ಇಲಾಖೆ: ಅಪ್ಡೇಟ್ ಆಗದ ಡೆಂಗಿ ವರದಿ

ಬೆಂಗಳೂರು: ರಾಜ್ಯದ ವಿವಿಧೆಡೆ ಮಳೆಯಾಗುತ್ತಿದ್ದರೂ ಆರೋಗ್ಯ ಇಲಾಖೆಯು ಡೆಂಗಿ, ಚಿಕೂನ್‌ಗುನ್ಯಾ, ಮಲೇರಿಯಾ ಮತ್ತು ಎಚ್‌1ಎನ್‌1 ಪ್ರಕರಣಗಳ ದೈನಂದಿನ ವಿವರವನ್ನು ಮೂರು ತಿಂಗಳಿಂದ ತನ್ನ ಪೋರ್ಟಲ್‌ನಲ್ಲಿ ಅಪ್ಡೇಟ್ ಮಾಡಿಲ್ಲ.

2023ರ ಫೆ. 29ರ ವರೆಗೆ ಇಲಾಖೆಯ ಪೋರ್ಟಲ್‌ನಲ್ಲಿ ದೈನಂದಿನ ವಿವರವನ್ನು ಅಪ್ಡೇಟ್ ಮಾಡಲಾಗಿದೆ. ಬಳಿಕ ವಿಧಾನಸಭೆ ಚುನಾವಣೆ ಕರ್ತವ್ಯದ ಕಾರಣ ನೀಡಿ, ಪ್ರಕರಣಗಳ ದೈನಂದಿನ ಮಾಹಿತಿಯನ್ನು ಅಪ್ಡೇಟ್ ಮಾಡಿರಲಿಲ್ಲ. ರೋಗದ ಬಗ್ಗೆ ಜಾಗೃತಿ ಮೂಡಿಸಬೇಕಾದ ಇಲಾಖೆ, ಕೆಲ ದಿನಗಳಿಂದ ರಾಜ್ಯದ ವಿವಿಧೆಡೆ ಮಳೆಯಾಗುತ್ತಿದ್ದರೂ ದೈನಂದಿನ ವರದಿಯನ್ನು ಪೋರ್ಟಲ್‌ನಲ್ಲಿ ಅಪ್ಡೇಟ್ ಮಾಡಿಲ್ಲ. ವರ್ಷಾರಂಭದಲ್ಲಿಯೇ ಹಲವರಲ್ಲಿ ಡೆಂಗಿ ಜ್ವರ ಕಾಣಿಸಿಕೊಂಡಿತ್ತು. ಮೇ 11ರ ವೇಳೆಗೆ ರಾಜ್ಯದಲ್ಲಿ 1,716 ಮಂದಿ ಈ ಜ್ವರದಿಂದ ಬಳಲಿದ್ದರು. ಸಾಮಾನ್ಯವಾಗಿ ಮುಂಗಾರು ಮಳೆ ಕಾಣಿಸಿಕೊಂಡ ಬಳಿಕ ಈ ಜ್ವರಕ್ಕೆ ಒಳಗಾಗುವವರ ಸಂಖ್ಯೆ ಹೆಚ್ಚಳವಾಗಲಿದೆ.

ಟಿಕೆಟ್ ರಹಿತ 3,415 ಪ್ರಯಾಣಿಕರಿಗೆ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮದ (ಕೆಎಸ್‌ಆರ್‌ಟಿಸಿ) ತನಿಖಾ ತಂಡಗಳು ನಿಗಮ ವ್ಯಾಪ್ತಿಯಲ್ಲಿ ಟಿಕೆಟ್ ರಹಿತ 3,415 ಪ್ರಯಾಣಿಕರಿಗೆ ದಂಡ ವಿಧಿಸಿದ್ದಾರೆ.

ನಿಗಮ ವ್ಯಾಪ್ತಿಯಲ್ಲಿ ಸಂಚರಿಸುವ 44,540 ಬಸ್‌ಗಳನ್ನು ತಪಾಸಣೆ ನಡೆಸಿ 3,070 ಪ್ರಕರಣಗಳನ್ನು ಪತ್ತೆ ಹಚ್ಚಿದ್ದಾರೆ.

ಟಿಕೆಟ್ ರಹಿತ ಪ್ರಯಾಣಿಕರಿಂದ ₹ 5,54,832 ದಂಡ ವಸೂಲಿ ಮಾಡಿದ್ದಾರೆ. ನಿಗಮದ ಆದಾಯದಲ್ಲಿ ಸೋರಿಕೆಯಾಗುತ್ತಿದ್ದ ₹ 2,38,803 ಅನ್ನು ತನಿಖಾಧಿಕಾರಿಗಳು ಪತ್ತೆ ಹಚ್ಚಿದ್ದಾರೆ ಎಂದು ನಿಗಮದ ಮುಖ್ಯ ಸಂಚಾರ ವ್ಯವಸ್ಥಾಪಕರು ತಿಳಿಸಿದ್ದಾರೆ.

‘ಜನರ ಆಶೋತ್ತರ ಈಡೇರಿಸಿದ ಖುಷಿ ಇದೆ’



ನರೇಂದ್ರ ಮೋದಿ

ನವದೆಹಲಿ (ಪಿಟಿಐ): ‘ಜನ ಕೇಂದ್ರದಲ್ಲಿ ಸ್ಥಿರ ಸರ್ಕಾರವನ್ನು ಆಯ್ಕೆ ಮಾಡಿದ್ದರಿಂದಲೇ ಮತದಾರರಿಗೆ ಚುನಾವಣಾ ಪೂರ್ವದಲ್ಲಿ ನೀಡಿದ್ದ ಆಶೋತ್ತರಗಳನ್ನು ಈಡೇರಿಸಲು ಸಾಧ್ಯವಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಸಾಮಾಜಿಕ ಜಾಲತಾಣದಲ್ಲಿ ಕೆಲವರು ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಒಂಬತ್ತು ವರ್ಷಗಳ ಆಡಳಿತವನ್ನು ಮುಕ್ತವಾಗಿ ಪ್ರಶಂಸಿಸುತ್ತಿದ್ದಾರೆ.

ಇದಕ್ಕೆ ಸಂತಸ ವ್ಯಕ್ತಪಡಿಸಿರುವ ಅವರು, ‘ಜನರ ಅಭಿನಂದನೆಗೆ ನಾನು ಆಭಾರಿಯಾಗಿದ್ದೇನೆ. ಈ ಪ್ರೀತಿಯೇ ನಮ್ಮ ಸಾಧನೆಗಳಿಗೆ ಪ್ರೇರಕ ಶಕ್ತಿ. ಜೊತೆಗೆ, ಮತ್ತಷ್ಟು ಸಾಧಿಸಲು ನಮಗೆ ಶಕ್ತಿ ತುಂಬಲಿದೆ’ ಎಂದು ಟ್ವೀಟ್ ಮಾಡಿದ್ದಾರೆ.

‘2014ರಿಂದ ನಮ್ಮ ಸರ್ಕಾರದ ಸಾಧನೆಗಳ ಬಗ್ಗೆ ಜನರು ಹೊಗಳುತ್ತಿರುವ ಟ್ವೀಟ್‌ಗಳನ್ನು ಗಮನಿಸುತ್ತಿದ್ದೇನೆ. ಈ ಮೆಚ್ಚುಗೆಯು ಮತ್ತಷ್ಟು ಅಭಿವೃದ್ಧಿ ಕಾರ್ಯಗಳಿಗೆ ನಮಗೆ ಬಲ ತುಂಬಲಿದೆ’ ಎಂದಿದ್ದಾರೆ.

‘ಈ ಅವಧಿಯಲ್ಲಿ ನಾವು ಸಾಕಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದೇವೆ. ಉಳಿದ ಅವಧಿಯಲ್ಲೂ ಅಭಿವೃದ್ಧಿಗೆ ಒತ್ತು ನೀಡಲಿದ್ದೇವೆ. ಈ ಅಮೃತ ಕಾಲದಲ್ಲಿ ಶ್ರೀಮಂತ ಹಾಗೂ ಸದೃಢ ಭಾರತ ನಿರ್ಮಾಣವೇ ನಮ್ಮ ಗುರಿಯಾಗಿದೆ’ ಎಂದು ಬರೆದಿದ್ದಾರೆ.

‘ಭಾರತದ ಅಭಿವೃದ್ಧಿಯ ವೇಗಕ್ಕೆ ಎನ್‌ಡಿಎ ಸರ್ಕಾರದ ಕೊಡುಗೆ ದೊಡ್ಡದು. ದೇಶದ 140 ಕೋಟಿ ಜನರ ಆಶೋತ್ತರಗಳನ್ನು ಈಡೇರಿಸಲು ನನಗೆ ಅವಕಾಶ ಸಿಕ್ಕಿದೆ’ ಎಂದಿದ್ದಾರೆ.

ಮುಟ್ಟಿನ ರಜೆ ಬೇಕೇ? ಬೇಡವೇ?

ಶಿಲ್ಪಾ ಕಬ್ಬಿಣಕಂತಿ

ಒಂದನೇ ಪುಟದಿಂದ...

ಅಂದಿನ ಮುಖ್ಯಮಂತ್ರಿ ಲಾಲೂ ಪ್ರಸಾದ್ ನೇತೃತ್ವದ ಸರ್ಕಾರವು ಋತುಚಕ್ರದ ಸಮಯದಲ್ಲಿ ಮಹಿಳೆಯರಿಗೆ ಎರಡು ದಿನ ರಜೆ ಪಡೆದುಕೊಳ್ಳುವ ಸೌಲಭ್ಯವನ್ನು ಕಲ್ಪಿಸಿತ್ತು.

ಇದಕ್ಕೆ ಇಂಬುಗೊಡುವಂತೆ 2017ರಲ್ಲಿ ಲೋಕಸಭೆಯಲ್ಲಿ ಅರುಣಾಚಲ ಪ್ರದೇಶದ ಸಂಸದ ನಿನೊಂಗ್ ಎರಿಂಗ್ ಅವರು ಸಂಸತ್ತಿನಲ್ಲಿ 'ದಿ ಮೆನ್ಸ್ಟ್ರುಯೇಷನ್ ಬೆನಿಫಿಟ್ಸ್ ಬಿಲ್ 2017' ಎಂಬ ಖಾಸಗಿ ಮಸೂದೆ ಮಂಡಿಸಿದ್ದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ನೋಂದಾಯಿತ ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿರುವ ಮಹಿಳೆಯರು ಪ್ರತಿ ತಿಂಗಳು ಎರಡು ದಿನಗಳ ಋತುಚಕ್ರದ ರಜೆಗೆ ನೀಡಬೇಕೆಂಬ ಅಂಶ ಮಸೂದೆಯಲ್ಲಿತ್ತು. ಅದಕ್ಕೆ ಸೂಕ್ತ ಪ್ರತಿಕ್ರಿಯೆ ದೊರೆಯಲಿಲ್ಲವಾದರೂ, ದೇಶದ ಕೆಲ ಖಾಸಗಿ ಕಂಪನಿಗಳ ತಮ್ಮ ಮಹಿಳಾ ಉದ್ಯೋಗಿಗಳಿಗೆ ಮುಟ್ಟಿನ ರಜೆ ನೀಡುವಷ್ಟು ಪರಿಣಾಮ ಬೀರಿತ್ತು.

2017ರ ಜೂನ್‌ನಲ್ಲಿ 'ಕಲ್ಚರ್ ಮಷೀನ್' ಎನ್ನುವ ಖಾಸಗಿ ಮಾಧ್ಯಮ ಸಂಸ್ಥೆ, ಅದರ ಮಹಿಳಾ ಸಿಬ್ಬಂದಿಗೆ 'ಮುಟ್ಟಿನ ಮೊದಲ ದಿನ' ಎಂಬ ಸಂಬಳಸಹಿತ ರಜೆಯನ್ನು ಘೋಷಿಸಿತ್ತು. ಅಂತೆಯೇ, ಚೆನ್ನೈನ 'ಮ್ಯಾಗ್ಸ್ಟರ್' ಎನ್ನುವ ಕಂಪೆನಿ ಮತ್ತು ಕೇರಳದ 'ಮಾತೃಭೂಮಿ ಟಿವಿ ಚಾನೆಲ್' ಕೂಡ ಮಹಿಳಾ ಸಿಬ್ಬಂದಿಗೆ ಮುಟ್ಟಿನ ರಜೆಗಳನ್ನು ಪ್ರಕಟಿಸಿದ್ದವು. ನಂತರ ದಿನಗಳಲ್ಲಿ ಜೊಮ್ಯಾಟೊ, ಸ್ವಿಗ್ಗಿ, ಬೈಜೂಸ್ ಸಂಸ್ಥೆಗಳು ಹೆಣ್ಣುಮಕ್ಕಳಿಗೆ ವರ್ಷಕ್ಕೆ 10 ದಿನಗಳ ಕಾಲ ಮುಟ್ಟಿನ ರಜೆ ಪಡೆದುಕೊಳ್ಳುವ ನೀತಿ ರೂಪಿಸಿವೆ. ಈ ಬಗ್ಗೆ ಆನ್‌ಲೈನ್ ಅಭಿಯಾನವೂ ನಡೆದಿತ್ತು.

'ಪ್ರತಿ ತಿಂಗಳೂ ಇಂಥ ರಜೆ ಕೊಟ್ಟರೆ ಕಚೇರಿಯ ಕೆಲಸಗಳು ಬಾಕಿ ಉಳಿಯುವುದಿಲ್ಲವೇ? ಮಹಿಳೆಯರನ್ನು ಉದ್ಯೋಗಕ್ಕೆ ನೇಮಿಸಿಕೊಂಡರೆ ಇಂಥ ರಜೆಗಳನ್ನು ಕೊಡಲೇಬೇಕಾಗುತ್ತದೆ. ಈಗಾಗಲೇ ಹೆರಿಗೆ ರಜೆಯ ಕಾರಣ ಮುಂದಿಟ್ಟುಕೊಂಡು ಹಲವು ಕಂಪನಿಗಳು ಮಹಿಳೆಯರನ್ನು ಉದ್ಯೋಗಕ್ಕೆ ನೇಮಿಸಿಕೊಳ್ಳಲು ಹಿಂದೇಟು ಹಾಕುತ್ತಿವೆ. ಅದರ ನಡುವೆ ಮುಟ್ಟಿನ ರಜೆ ಕೊಡಲೇಬೇಕೆಂಬ ಕಾನೂನು ಬಂದಲ್ಲಿ, ಇದು ಔದ್ಯೋಗಿಕ ವಲಯದಲ್ಲಿ ಮಹಿಳಾ ಉದ್ಯೋಗಿಗಳ ಸಂಖ್ಯೆ ಕ್ಷೀಣಿಸಲು ಕಾರಣವಾಗಬಹುದಲ್ಲವೇ' ಎನ್ನುವುದು ಬೆಂಗಳೂರಿನ ಖಾಸಗಿ ಕಂಪನಿಯೊಂದರ ಎಚ್‌.ಆರ್. ವಿಭಾಗದ ವ್ಯವಸ್ಥಾಪಕಿ ಸುಕನ್ಯಾ ಅವರ ಪ್ರಶ್ನೆ.

'ನಮ್ಮ ಕಂಪನಿಯಲ್ಲಿ ಮುಟ್ಟಿನ ರಜೆ ಎಂದು ಪ್ರತ್ಯೇಕ ರಜೆಗಳಿಲ್ಲ. ಆದರೆ, ಮಹಿಳಾ ಉದ್ಯೋಗಿಗಳಿಗೆ ಆ ಸಮಯದಲ್ಲಿ ತುರ್ತು ರಜೆ ಬೇಕಿದ್ದರೆ ಅವರು ತೆಗೆದುಕೊಳ್ಳಬಹುದು. ಅದಕ್ಕೆ ಯಾವುದೇ ನಿಬಂಧನೆಗಳಿಲ್ಲ. ನಮ್ಮ ಉದ್ಯೋಗಿಗಳು ಬಳಸದೇ ಇರುವ ರಜೆಗಳನ್ನು ಮತ್ತೊಬ್ಬ ಉದ್ಯೋಗಿಗೆ ನೀಡುವ ಪದ್ಧತಿ ನಮ್ಮಲ್ಲಿದೆ. ತೀವ್ರತರ ಆರೋಗ್ಯ ಸಮಸ್ಯೆ ಇದ್ದ ಯಾರೇ ಆಗಲಿ ಅಂಥ ರಜೆಗಳನ್ನು ಬಳಸಬಹುದು' ಎನ್ನುತ್ತಾರೆ ಖಾಸಗಿ ಐ.ಟಿ ಕಂಪನಿಯೊಂದರ ಎಚ್. ಆರ್. ವಿಭಾಗದ ಉಪ ವ್ಯವಸ್ಥಾಪಕ (ಸಿಬ್ಬಂದಿ ನೇಮಕ) ಸಮರ್ಥ್.

'ಈ ಹಿಂದೆ ಮಹಿಳೆಯರಿಗೆ ಹೆರಿಗೆ ರಜೆ ಸೌಲಭ್ಯ ಕಲ್ಪಿಸಿದಾಗಲೂ ವ್ಯಾಪಕ ವಿರೋಧ ವ್ಯಕ್ತವಾಗಿತ್ತು. ಆದರೆ, ತಾಯಿ–ಮಗುವಿನ ಆರೋಗ್ಯವನ್ನು ಗಮನದಲ್ಲಿರಿಸಿಕೊಂಡು ಸರ್ಕಾರವೇ ಆರು ತಿಂಗಳ ಕಾಲ ವೇತನ ಸಹಿತ ರಜೆ ಸೌಕರ್ಯ ಕಲ್ಪಿಸಿದೆ. ಮುಟ್ಟು ಮತ್ತು ಹೆರಿಗೆಯಂತಹ ಜೈವಿಕ ಕ್ರಿಯೆಗಳು ಹೆಣ್ಣಿನ ಜೀವನದಲ್ಲಿ ಸಹಜವಾಗಿರುವುದರಿಂದ ಅದರಿಂದ ಆಕೆಯನ್ನು ಹೊರಗಿಟ್ಟು ನೋಡಲಾಗದು. ಅವುಗಳ ನೆಪದಲ್ಲಿ ಆಕೆಯನ್ನು ಉದ್ಯೋಗ ವಂಚಿತಳನ್ನಾಗಿಸುವುದು ಇಲ್ಲವೇ ಸಾಮರ್ಥ್ಯವನ್ನು ಹೀಗಳೆಯುವುದು ಸರಿಯಲ್ಲ' ಎಂಬುದು ಸಾಫ್ಟ್‌ವೇರ್ ಕಂಪನಿಯೊಂದರಲ್ಲಿ ಎಂಜಿನಿಯರ್ ಆಗಿರುವ ಶಿಲ್ಪಾ ಅವರ ಪ್ರತಿಪಾದನೆ.

ಪ್ರತಿ ಮಹಿಳೆಗೂ ಭಿನ್ನ: ಮುಟ್ಟಿನ ರಜೆ ಪ್ರತಿ ಮಹಿಳೆಗೂ ಅಗತ್ಯವೇ ಎನ್ನುವ ಪ್ರಶ್ನೆ ಇಟ್ಟುಕೊಂಡು, ಅದರ ಹಿಂದಿನ ವೈಜ್ಞಾನಿಕ ಕಾರಣಗಳನ್ನು ಅರಿತಾಗ ಪ್ರತಿ ಹೆಣ್ಣಿನಲ್ಲಾಗುವ ಮನೋ -ದೈಹಿಕ ಬದಲಾವಣೆಗಳು ಭಿನ್ನ ಎಂಬುದಾಗಿ ಮನಗಾಣಬಹುದು. ಹೇಗೆ ಬೆರಳಚ್ಚು ಒಬ್ಬ ವ್ಯಕ್ತಿಯಿಂದ ಮತ್ತೊಬ್ಬ ವ್ಯಕ್ತಿಗೆ ಭಿನ್ನವಾಗಿರುತ್ತದೆಯೋ, ಮುಟ್ಟಿನ ಪ್ರಕ್ರಿಯೆ ಕೂಡಾ ಒಂದು ಹೆಣ್ಣಿನಿಂದ ಮತ್ತೊಬ್ಬ ಹೆಣ್ಣಿಗೆ ಭಿನ್ನವಾಗಿರುತ್ತದೆ ಎನ್ನುತ್ತಾರೆ ತಜ್ಞವೈದ್ಯರು.

'ಮುಟ್ಟಿನ ಸಂದರ್ಭದಲ್ಲಿ ಕೆಲವರಲ್ಲಿ ನೋವು ಕಾಣಿಸಿಕೊಂಡರೆ, ಕೆಲವರಿಗೆ ಸಹಜ ರೀತಿಯಲ್ಲಿರಬಹುದು. ಕೆಲವರಿಗೆ ಮುಟ್ಟಾಗುವ ಎರಡು ದಿನಗಳ ಮುನ್ನ ಎದೆಭಾರ, ಹೊಟ್ಟೆ ಊದಿಕೊಂಡಂತಾಗುವುದು, ಹೊಟ್ಟೆನೋವು ಕಾಣಿಸಿಕೊಳ್ಳಬಹುದು.ಇನ್ನು ಕೆಲವರಿಗೆ ಮುಟ್ಟು ಆರಂಭವಾದಾಗ ಹೊಟ್ಟೆನೋವು, ವಾಂತಿ ಕಾಣಿಸಿಕೊಳ್ಳುತ್ತದೆ. ಅಂಡಾಣು ಬಿಡುಗಡೆಯಾಗುವಾಗ ಗರ್ಭಕೋಶದ ಸುತ್ತಮುತ್ತ ಒತ್ತಡವಾದಾಗ ನೋವು ಕಾಣಿಸಿಕೊಳ್ಳುತ್ತದೆ. ಕೆಲವು ಹೆಣ್ಣುಮಕ್ಕಳಿಗೆ ಇದನ್ನು ತಡೆದುಕೊಳ್ಳುವ ಸಾಮರ್ಥ್ಯವಿರುತ್ತದೆ. ಕೆಲವರಿಗೆ ಇರುವುದಿಲ್ಲ. ಅಂಥವರಿಗೆ ಚಿಕಿತ್ಸೆಯ ಅಗತ್ಯವಿರುತ್ತದೆ' ಎನ್ನುತ್ತಾರೆ ಬೆಂಗಳೂರಿನ ಮದರ್‌ಹುಡ್ ಆಸ್ಪತ್ರೆಯ ಸ್ತ್ರೀರೋಗ ತಜ್ಞೆ ಡಾ.ರಶ್ಮಿ ಪಾಟೀಲ್.

'ಶೇ 60ರಿಂದ 70ರ ತನಕ ಮಹಿಳೆಯರು ನೋವು ತಡೆದುಕೊಳ್ಳುವ ಸಾಮರ್ಥ್ಯ ಹೊಂದಿರುತ್ತಾರೆ. ಶೇ 30ರಿಂದ 40ರಷ್ಟು ಜನರಿಗೆ ನೋವು ತಡೆದುಕೊಳ್ಳಲಾಗದು. ಮೆನೋಪಾಸ್ ಅಂದರೆ ಮುಟ್ಟುನಿಲ್ಲುವ ಸಮಯದಲ್ಲೂ ಕೆಲ ಮಹಿಳೆಯರಿಗೆ ಹಾರ್ಮೋನ್‌ಗಳ ಏರುಪೇರಿನಿಂದಾಗಿ ಮಾನಸಿಕವಾಗಿ– ದೈಹಿಕವಾಗಿ ಬದಲಾವಣೆ ಆಗುತ್ತದೆ. ಅತಿಕೋಪ, ಭಾವನೆಗಳ ಏರುಪೇರು, ತೀವ್ರ ರಕ್ತಸ್ರಾವ ಕಾಣಿಸಿಕೊಳ್ಳಬಹುದು. ಇಂಥ ಸಮಯದಲ್ಲಿ ಕಚೇರಿಯಲ್ಲಾಗಲೀ, ಮನೆಯಲ್ಲಾಗಲೀ ಮಹಿಳೆಯರು ಸಣ್ಣಪುಟ್ಟಕ್ಕೂ ಸಿಡಿಮಿಡಿಗೊಳ್ಳುತ್ತಾರೆ. ಅಗತ್ಯವಿದ್ದವರಿಗೆ ಮುಟ್ಟಿನ ರಜೆಯನ್ನು ಐಚ್ಛಿಕವಾಗಿರಿಸಿದರೆ ಒಳ್ಳೆಯದು' ಎನ್ನುವುದು ಅವರ ಅಭಿಮತ.

ಏನಂತಾರೆ ಮನೋವೈದ್ಯರು?: ನಿಮ್ಹಾನ್ಸ್‌ನಲ್ಲಿ ಮನೋರೋಗ ತಜ್ಞೆಯಾಗಿರುವ ಡಾ. ಗೀತಾ ದೇಸಾಯಿ ಅವರ ಪ್ರಕಾರ, 'ಪ್ರಿ ಮೆನ್‌ಸ್ಟ್ರುಯೆಲ್ ಡಿಸ್ಫೋರಿಕ್ ಡಿಸಾರ್ಡರ್' (ಪಿಎಂಡಿಡಿ) ಮುಟ್ಟಿನ ತೀವ್ರತರದ ತೊಂದರೆ. ಇದು ಕೆಲವರಲ್ಲಿ ಮಾತ್ರ ಕಂಡುಬರುತ್ತದೆ. ಅಂಥವರಿಗೆ ಸಾಮಾನ್ಯವಾಗಿ ಅತಿಯಾಗಿ ದುಃಖವಾಗುವುದು, ಸಿಟ್ಟು ಬರುವುದು, ಮೂಡ್‌ನಲ್ಲಿ ಏರುಪೇರಾಗುವುದು ಅಥವಾ ಏಕಾಗ್ರತೆಯ ಕೊರತೆ ಕಾಣಿಸಿಕೊಳ್ಳುತ್ತವೆ. ಈ ಲಕ್ಷಣಗಳು ಮುಟ್ಟಾಗುವ ಒಂದು ವಾರ ಮುಂಚೆ ಕಾಣಿಸಿಕೊಳ್ಳುತ್ತವೆ. ಮುಟ್ಟಾದ ಬಳಿಕ ಕ್ರಮೇಣ ಇವು ಕಡಿಮೆಯಾಗುತ್ತವೆ. ಇದು ತೀವ್ರತರವಾಗಿದ್ದಾಗ ಚಿಕಿತ್ಸೆ ಅಗತ್ಯ. ಅದು ಸೈಕೊ ಥೆರಪಿ ಆಗಿರಬಹುದು ಇಲ್ಲವೇ ಮಾತ್ರೆಗಳಿಂದ ಗುಣಪಡಿಸಬಹುದು. ಕೆಲವು ತೊಂದರೆಗಳನ್ನು ಜೀವನಶೈಲಿಯ ಬದಲಾವಣೆಯಿಂದ ಕಡಿಮೆ ಮಾಡಿಕೊಳ್ಳಬಹುದು'.

'ಮುಟ್ಟಿನ ಸಮಯದಲ್ಲಾಗುವ ಹಾರ್ಮೋನ್‌ಗಳ ಬದಲಾವಣೆಗೆ ಕೆಲ ಮಹಿಳೆಯರ ಮಿದುಳು ಸೂಕ್ಷ್ಮವಾಗಿ ಸ್ಪಂದಿಸುತ್ತದೆ. ಆಗ ಎದುರಾಗುವ ತೊಂದರೆಗಳನ್ನು ಅವರಿಗೆ ನಿಭಾಯಿಸಲಾಗದು. ಉದ್ಯೋಗಸ್ಥ ಮಹಿಳೆಯರಾದರೆ ವೃತ್ತಿಯಲ್ಲಿ ಗಮನ ಕೇಂದ್ರೀಕರಿಸಲು ಕಷ್ಟವಾಗುತ್ತದೆ. ನೋವು ತೀವ್ರವಾಗಿದ್ದಾಗ ಕೆಲವರಿಗೆ ತಕ್ಷಣವೇ ಅಳು ಬರಬಹುದು. ಇದರ ಪರಿಣಾಮ ಸಂಬಂಧಗಳ ಮೇಲೆ ಆಗುವ ಸಾಧ್ಯತೆ ಇದೆ. ಶಾಲಾ- ಕಾಲೇಜು, ಉದ್ಯೋಗದ ಸ್ಥಳದಲ್ಲಿ ಮಹಿಳೆಯರಿಗೆ ಮೂಲಸೌಕರ್ಯ ಕಲ್ಪಿಸುವಂಥ ಒಂದು ವಿಶ್ರಾಂತಿ ಕೊಠಡಿ ಕಡ್ಡಾಯವಾಗಿದ್ದರೆ ಒಳಿತು. ಕೆಲವರಿಗೆ ಇಡೀ ದಿನದ ರಜೆ ಅಗತ್ಯವಿರುವುದಿಲ್ಲ. ಒಂದೆರಡು ತಾಸು ವಿಶ್ರಾಂತಿ ಪಡೆದು, ಸುಧಾರಿಸಿಕೊಂಡು ಮತ್ತೆ ಉದ್ಯೋಗದಲ್ಲಿ ತೊಡಗಿಕೊಳ್ಳಬಹುದು. ಕೆಲವರಿಗೆ ತುಂಬಾ ತೊಂದರೆ ಇದ್ದರೆ ಮಾತ್ರ ಅಂಥವರು ರಜೆ ಪಡೆಯಲು ಅಡ್ಡಿಯಿಲ್ಲ' ಅನ್ನುವುದು ಅವರ ಅಭಿಪ್ರಾಯ.

ಪ್ರಸ್ತಾಪವೂ ಇಲ್ಲ, ಕಾಯ್ದೆಯೂ ಇಲ್ಲ: 'ಕರ್ನಾಟಕದಲ್ಲಿ ಇಂಥ ರಜೆ ಸೇರ್ಪಡೆ ಬಗ್ಗೆಯ ಚರ್ಚೆಗಳಾಗಲೀ, ರಜೆ ಬೇಕೆಂಬ ಮನವಿಗಳಾಗಲೀ ಕಾರ್ಮಿಕ ಇಲಾಖೆಗೆ ಸಲ್ಲಿಕೆಯೇ ಆಗಿಲ್ಲ. ಗಾರ್ಮೆಂಟ್ಸ್, ಸಾರಿಗೆ ಸಂಸ್ಥೆ ಹಾಗೂ ಅಸಂಘಟಿತ ವಲಯದಲ್ಲಿ ಮಹಿಳಾ ಕಾರ್ಮಿಕರ ಸಂಖ್ಯೆ ಹೆಚ್ಚಿದೆ. ಅಲ್ಲಿಯೂ ಈ ಬಗ್ಗೆ ಪ್ರಸ್ತಾಪವಾಗಿಲ್ಲ' ಎನ್ನುತ್ತಾರೆ ಕಾರ್ಮಿಕ ಮುಖಂಡರು.

'ಕೆಲವರಿಗೆ ಆ ದಿನಗಳಲ್ಲಿ ಹಾರ್ಮೋನ್‌ಗಳ ಏರುಪೇರಿನಿಂದಾಗಿ ಸುಸ್ತು, ತೀವ್ರ ರಕ್ತಸ್ರಾವ ಆಗಬಹುದು, ಇದರಿಂದ ಶಕ್ತಿಹೀನತೆಯೂ ಕಾಣಿಸಿಕೊಳ್ಳಬಹುದು. ಅಂಥವರಿಗೆ ರಜೆ ಪಡೆಯಲು ಅವಕಾಶವಿದ್ದರೆ ಒಳಿತು. ಸಾರ್ವತ್ರಿಕವಲ್ಲದಿದ್ದರೂ ಅಗತ್ಯ ಇದ್ದವರು ರಜೆ ಪಡೆದುಕೊಳ್ಳಲು ಅವಕಾಶ ಇರಬೇಕು' ಎನ್ನುವುದು ಗಾರ್ಮೆಂಟ್ಸ್ ಆ್ಯಂಡ್ ಟೆಕ್ಸ್‌ಟೈಲ್ಸ್ ಸಂಘಟನೆಯ ಅಧ್ಯಕ್ಷೆ ಆರ್. ಪ್ರತಿಭಾ ಅವರ ಅಭಿಪ್ರಾಯ.

ನಳಿನಿ ಡಿ.

'ಕೆಎಸ್‌ಆರ್‌ಟಿಸಿಯಲ್ಲಿ ಸುಮಾರು ನಾಲ್ಕೈದು ಸಾವಿರ ಮಹಿಳಾ ಕಂಡಕ್ಟರ್‌ಗಳಿರಬಹುದು. ನಮ್ಮಲ್ಲಿ ಸಿಬ್ಬಂದಿ ಕೊರತೆಯಿರುವುದರಿಂದ ಬೇಕಾದಾಗ ರಜೆ ಸಿಗದು. ಗುಳಿಗೆ ತಗೊಂಡು ಡ್ಯೂಟಿ ಮಾಡಿ ಅಂತಾರೆ. ಶಿವಮೊಗ್ಗ ಮತ್ತು ಚಿತ್ರದುರ್ಗದ ಬಸ್ ನಿಲ್ದಾಣಗಳಲ್ಲಿ ಪ್ಯಾಡ್ ಮಷೀನ್ ಇಟ್ಟಿದ್ದರು. ಅದೀಗ ಕೆಟ್ಟು ಕುಳಿತಿದೆ. ಬೆಂಗಳೂರು ಬಸ್ ನಿಲ್ದಾಣದ ಶೌಚಾಲಯ ಬಿಟ್ಟರೆ, ರಾಜ್ಯದ ಇತರ ಬಸ್ ನಿಲ್ದಾಣಗಳ ಶೌಚಾಲಯದಲ್ಲಿ ಸ್ವಚ್ಛತೆ ಎಂಬುದೇ ಇಲ್ಲ. ಮುಟ್ಟಿನ ಸಮಯದಲ್ಲಿ ರಜೆ ಸಿಕ್ಕರೆ ಅನುಕೂಲವಾಗುತ್ತದೆ' ಎನ್ನುತ್ತಾರೆ ಹೊಸಪೇಟೆ ಡಿಪೊದ ಮಹಿಳಾ ಕಂಡಕ್ಟರ್ ನಳಿನಿ ಡಿ.

ಕಾನೂನಿನ ಕೊರತೆ: ಮುಟ್ಟಿನ ರಜೆ ಕಾರ್ಯರೂಪಕ್ಕೆ ಬರಲು ಕಾನೂನಿನ ಕೊರತೆಯೇ ಕಾರಣ ಎನ್ನುತ್ತಾರೆ ಕಾನೂನು ತಜ್ಞರು. 2023ರ ಫೆ. 24ರಂದು ಮುಟ್ಟಿನ ರಜೆಯ ಕುರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸುಪ್ರೀಂ ಕೋರ್ಟ್ ತಿರಸ್ಕರಿಸಿತ್ತು. ಆದರೆ, ಆಯಾ ರಾಜ್ಯಗಳು ಇದನ್ನು ತೀರ್ಮಾನಿಸಬಹುದು ಎಂಬ ಸಲಹೆಯನ್ನೂ ನೀಡಿತ್ತು. ಸದ್ಯಕ್ಕೆ ಯಾವುದೇ ರಾಜ್ಯ ಈ ಬಗ್ಗೆ ಕಾನೂನು ರೂಪಿಸಲು ಮುಂದಾಗಿಲ್ಲ.

ಈ ನಡುವೆ, ಇದೇ ಮಾರ್ಚ್‌ನಲ್ಲಿ ಬಿಜೆಪಿಯ ಹಿರಿಯ ಸಂಸದ ಸುಶೀಲ್ ಕುಮಾರ್ ಮೋದಿ ನೇತೃತ್ವದ ಸಂಸದೀಯ ಸಮಿತಿಯು ಮುಟ್ಟಿನ ರಜೆ ಕುರಿತು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ್ದ ವರದಿಯಲ್ಲಿ, 'ಯಾವುದೇ ವೈದ್ಯಕೀಯ ಪ್ರಮಾಣ ಪತ್ರ ಇಲ್ಲದೆಯೇ ಮಹಿಳೆಯರಿಗೆ ನಿರ್ದಿಷ್ಟ ಸಂಖ್ಯೆಯ ಮುಟ್ಟಿನ ರಜೆ ಅಥವಾ ಅನಾರೋಗ್ಯ ರಜೆ ಅಥವಾ ಅರ್ಧ ವೇತನದ ರಜೆ ನೀಡುವುದನ್ನು ಪರಿಗಣಿಸಬೇಕು' ಎಂದು ಶಿಫಾರಸು ಮಾಡಿತ್ತು. ನಂತರದ ದಿನಗಳಲ್ಲಿ ಈ ಬಗ್ಗೆ ಚರ್ಚೆಗಳು ನಡೆಯಲಿಲ್ಲ.

ಮಾನವ ಸಂಪನ್ಮೂಲವನ್ನು ಸೃಷ್ಟಿಸುವ ಸಾಮರ್ಥ್ಯವಿರುವ ಹೆಣ್ಣಿಗೆ ನೀಡುವ ಹೆರಿಗೆ ರಜೆಯನ್ನಾಗಲೀ, ಮುಟ್ಟಿನ ರಜೆಯನ್ನಾಗಲೀ ಸಮಾಜದ ಅಭಿವೃದ್ಧಿಯ ಭಾಗವನ್ನಾಗಿ ಪರಿಗಣಿಸಬೇಕಾಗುತ್ತದೆ. ಸಂತಾನೋತ್ಪತ್ತಿ ಪ್ರಕ್ರಿಯೆಯು ಸುಸೂತ್ರವಾಗಿ ನಡೆಯಬೇಕಾದಲ್ಲಿ ಮುಟ್ಟಿನ ಚಕ್ರವೂ ಸುಸ್ಥಿತಿಯಲ್ಲಿರುವುದು ಅಗತ್ಯ. ಹಾಗಾಗಿ, ಅಂಥ ದಿನಗಳಲ್ಲಿ ಹೆಣ್ಣುಮಕ್ಕಳಿಗೆ ನೆಮ್ಮದಿ ನೀಡುವ ಪರಿಸರ ಕಲ್ಪಿಸಿಕೊಡುವುದು ಅತ್ಯಗತ್ಯ. ಹಾಗಾಗಿ, ಮುಟ್ಟಿನ ರಜೆಯನ್ನು ಹಕ್ಕು ಎಂದು ಪ್ರತಿಪಾದಿಸುವುದಕ್ಕಿಂತ ಐಚ್ಛಿಕವಾಗಿರುವುದೇ ಒಳಿತು ಎನ್ನುವುದೂ ಕೆಲವರ ಪ್ರತಿಪಾದನೆ.

ಚರ್ಚೆ–ವಾದಗಳೇನೇ ಇರಲಿ. ಮುಟ್ಟು, ತಾಯ್ತನ ಅನ್ನುವುದು ಹೆಣ್ಣಿನ ಜೈವಿಕ ಹಕ್ಕು. ಪ್ರಕೃತಿದತ್ತವಾಗಿ ಲಭ್ಯವಾಗಿರುವ ಈ ಹಕ್ಕಿಗೆ ಧಕ್ಕೆ ಬಾರದಂತೆ ಕಾನೂನು ರೂಪುಗೊಳ್ಳಬೇಕಿದೆ. ಮುಖ್ಯವಾಗಿ ಅಗತ್ಯವಿದ್ದವರು ಮುಟ್ಟಿನ ರಜೆಯನ್ನು ಯಾವುದೇ ಮುಜುಗರವಿಲ್ಲದೇ ತೆಗೆದುಕೊಳ್ಳುವಂಥ ವಾತಾವರಣ ನಿರ್ಮಾಣವಾಗಬೇಕಿದೆ.

(ಪೂರಕ ಮಾಹಿತಿ: ಬಿ.ಎಸ್. ಷಣ್ಮುಖಪ್ಪ, ವಿಜಯಕುಮಾರ್ ಎಸ್.ಕೆ.)

ಇತರ ದೇಶಗಳಲ್ಲಿ ಎಲ್ಲೆಲ್ಲಿದೆ ರಜೆ?

ಜಾಗತಿಕ ಮಟ್ಟದಲ್ಲಿ ಗಮನಿಸುವುದಾದರೆ ಕೆಲವು ರಾಷ್ಟ್ರಗಳು ಮುಟ್ಟಿನ ರಜೆಯ ಕುರಿತಾಗಿ ಕಾನೂನುಗಳನ್ನು ರೂಪಿಸಿವೆ. ಅಂಥ ಕಾನೂನನ್ನು ಜಾರಿಗೆ ತಂದದ್ದು ಜಪಾನ್. 1947ರಲ್ಲಿ ಜಪಾನ್, ಹೆಣ್ಣುಮಕ್ಕಳಿಗೆ ಮುಟ್ಟಿನ ರಜೆ ಘೋಷಿಸಿತು. ಬಳಿಕ 1950ರಲ್ಲಿ ಇಂಡೊನೇಷ್ಯಾ, ದಕ್ಷಿಣ ಕೊರಿಯಾ, ತೈವಾನ್‌ನಲ್ಲೂ ಇದು ಜಾರಿಗೆ ಬಂದಿತು.

2007ರಲ್ಲಿ ಅಂತರರಾಷ್ಟ್ರೀಯ ಕ್ರೀಡಾ ಉತ್ಪನ್ನಗಳ ಸಂಸ್ಥೆ 'ನೈಕಿ' ತನ್ನ ಎಲ್ಲಾ ಮಹಿಳಾ ಸಿಬ್ಬಂದಿಗೆ ಮುಟ್ಟಿನ ರಜೆ ನೀಡುವುದಾಗಿ ಘೋಷಿಸಿತು. ಅಂತೆಯೇ, ಕಲ್ಚರ್‌ಮಷೀನ್, ಗೊಜೂಪ್, ಫ್ಲೈಮೈಬಿಜ್ ಕಂಪನಿಗಳು ಮುಟ್ಟಿನ ಸಂದರ್ಭದಲ್ಲಿ ಮನೆಯಿಂದಲೇ ಕೆಲಸಮಾಡುವ ಅಥವಾ ರಜೆ ನೀಡುವ ನೀತಿಯನ್ನು 2017ರಿಂದಲೇ ಜಾರಿ ಮಾಡಿವೆ. ಕೆಲವು ರಾಷ್ಟ್ರಗಳಲ್ಲಿ ರಜೆ ಇಲ್ಲದಿದ್ದರೂ, ಮುಟ್ಟಿನ ಸಂದರ್ಭದಲ್ಲಿ ಕೆಲಸದ ಮಧ್ಯೆ ಇತರರಿಗಿಂತ ಅರ್ಧಗಂಟೆ ಹೆಚ್ಚು ವಿಶ್ರಾಂತಿ ಪಡೆಯಲು ಅವಕಾಶ ನೀಡಿವೆ.

ಆಫ್ರಿಕಾದ ಜಾಂಬಿಯಾದಲ್ಲಿ ಪ್ರತಿತಿಂಗಳು ಒಂದು ದಿನ ಮಹಿಳೆಯರಿಗೆ ರಜೆ ನೀಡಲಾಗುತ್ತಿದೆ. ಒಂದು ವೇಳೆ ಈ ರಜೆ ಕೊಡಲು ಉದ್ಯೋಗದಾತರು ನಿರಾಕರಿಸಿದರೆ ಅವರ ವಿರುದ್ಧ ಉದ್ಯೋಗಿಗಳು ಕಾನೂನುಕ್ರಮ ಜರುಗಿಸುವಂತೆ ಆಗ್ರಹಿಸಬಹುದಾಗಿದೆ.

ಸ್ಪೇನ್‌ನಲ್ಲೂ ಮುಟ್ಟಿನ ರಜೆ ಕುರಿತು ಕಾನೂನು ರಚಿಸಲು ಸಂಸತ್ತಿನಲ್ಲಿ ಮಸೂದೆ ಮಂಡನೆಯಾಗಿದೆ. ಆದರೆ, ಇನ್ನೂ ಅನುಮೋದನೆ ದೊರೆತಿಲ್ಲ.

ರಜೆಗಿಲ್ಲ ಸಹಮತ: ಸ್ಮೃತಿ ಇರಾನಿ

ಮುಟ್ಟಿನ ರಜೆ ಜಾರಿಯ ಕುರಿತು ಸಹಮತ ವ್ಯಕ್ತಪಡಿಸದ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ, 'ವಾರಾಂತ್ಯದ ರಜೆಗಳು, ಆಯ್ಕೆಯ ರಜೆಗಳು, ಹಬ್ಬದ ರಜೆಗಳನ್ನು ಕಳೆದರೆ ತಿಂಗಳಿಗೆ 17 ದಿನಗಳು ಮಾತ್ರ ಕೆಲಸ ಮಾಡುತ್ತೇವೆ. ಮಹಿಳೆಯರಿಗೆ 26 ವಾರಗಳು ಹೆರಿಗೆ ರಜೆ, ಶಿಶುಪಾಲನಾ ರಜೆಗಳಿವೆ. ಇದರ ಜತೆಗೆ ಮುಟ್ಟಿನ ರಜೆ ಘೋಷಣೆ ಮಾಡಿದರೆ ಸಂಸ್ಥೆಯು ಮಹಿಳೆಯರನ್ನು ಹೇಗೆ ಕೆಲಸಕ್ಕೆ ತೆಗೆದುಕೊಳ್ಳುತ್ತದೆ. ಇಂತಹ ನೀತಿಗಳು ಮಹಿಳೆಯರ ಉದ್ಯೋಗವನ್ನು ಕಿತ್ತುಕೊಳ್ಳಬಹುದು. ಸಮಾನ ಕೆಲಸ, ಸಮಾನ ಅವಕಾಶಗಳಿಗೆ ಇಂತಹ ರಜೆಗಳು ಅಡ್ಡಿಯಾಗುತ್ತವೆ' ಎಂದು ಬೆಂಗಳೂರಿನ ಪಿಇಎಸ್ ವಿಶ್ವವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಹೇಳಿದ್ದರು.

ಅಗತ್ಯವಿದ್ದವರಿಗೆ ರಜೆ ಕೊಡಿ

ಸಿನಿಮಾ ಕ್ಷೇತ್ರದಲ್ಲಿರುವ ನನ್ನ ಕೆಲಸ ಕಚೇರಿ ಕೆಲಸಗಳಂಥಲ್ಲ. ನಿರ್ದೇಶನ ಅಂದರೆ ಓಡಾಟ ಇದ್ದಿದ್ದೇ. ಈ ಹಿಂದೆ ನನ್ನ ಗರ್ಭಕೋಶದಲ್ಲಿ 'ಸಿಸ್ಟ್' ಇತ್ತು ಹಾಗಾಗಿ ಮುಟ್ಟಾದಾಗ ತೀವ್ರ ರಕ್ತಸ್ರಾವ ಆಗುತ್ತಿತ್ತು. ಆದರೂ ಶೂಟಿಂಗ್ ಸಮಯದಲ್ಲಿ ರಜೆ ಹಾಕಲು ಆಗುತ್ತಿರಲಿಲ್ಲ. ಪ್ಯಾಡ್ ಮೇಲೆ ಪ್ಯಾಡ್ ಹಾಕಿಕೊಂಡು ಶೂಟಿಂಗ್ ಮಾಡಿದ್ದೇನೆ. ಡಬ್ಬಿಂಗ್ ಅಥವಾ ಇತರ ಕೆಲಸದವರಿಗೆ ರಜೆ ಪಡೆಯಲು ಸಾಧ್ಯವಾಗಬಹುದು. ಆದರೆ, ನಿರ್ದೇಶಕಿಯಾಗಿ ನನಗೆ ಆ ರೀತಿ ರಜೆ ಪಡೆಯಲು ಆಗಿಲ್ಲ. ಶೂಟಿಂಗ್ ಸ್ಥಳಗಳಲ್ಲಿ ಪ್ಯಾಡ್ ಬದಲಾಯಿಸಲು ಪರ್ಯಾಯ ಮಾರ್ಗ ಕಂಡು ಕೊಂಡಿದ್ದೇನೆ. ನನಗೆ ಅದು ಸಾಧ್ಯವಿದೆಯೆಂದು ಬೇರೆಯವರಿಗೂ ಸಾಧ್ಯವಾಗಬೇಕೆಂದೇನಿಲ್ಲ. ಅಗತ್ಯವಿದ್ದವರಿಗೆ ರಜೆ ಕೊಡುವುದು ಸೂಕ್ತ.

ಡಿ. ಸುಮನ್ ಕಿತ್ತೂರು, ಸಿನಿಮಾ ನಿರ್ದೇಶಕಿ, ಮೈಸೂರು

ಶಾಲಾ ಮಕ್ಕಳಿಗೆ ರಜೆ ಬೇಕು

ಮುಟ್ಟಿನ ಕುರಿತು ಸಂಶೋಧನೆ ಕೈಗೊಂಡಾಗ ಮುಟ್ಟಿನ ರಜೆ ಕುರಿತು ಹಲವರನ್ನು ಪ್ರಶ್ನಿಸಿದ್ದೇನೆ. ಗ್ರಾಮೀಣ ಹಾಗೂ ಬುಡಕಟ್ಟು ಜನವಸತಿ ಇರುವ ಪ್ರದೇಶಗಳಲ್ಲಿ ಮೂಲಸೌಕರ್ಯದ ಕೊರತೆ ಇದೆ. ಇಂಥ ಸ್ಥಳಗಳಲ್ಲಿದ್ದು-ಕೊಂಡೇ ವಿದ್ಯಾಭ್ಯಾಸ ಮಾಡುವ, ಉದ್ಯೋಗ ಮಾಡುವ ಮಹಿಳೆಯರಿಗೆ ಖಂಡಿತಾ ರಜೆಯ ಅವಶ್ಯಕತೆ ಇದೆ ಅನ್ನುವುದು ಬಹುತೇಕರ ಅಭಿಪ್ರಾಯವಾಗಿದೆ.

ಗಂಡಸರು ಆಡಿಕೊಳ್ತಾರೆ ಎನ್ನುವ ಕಾರಣಕ್ಕೆ ಕೆಲವರು ರಜೆ ಬೇಡವೆಂದು ಹಿಂಜರಿದುಕೊಂಡೇ ಹೇಳಿದರು. ಆದರೆ, ಗ್ರಾಮೀಣ ಭಾಗಗಳಲ್ಲಿನ ಶಾಲಾ ಮಕ್ಕಳು ಕನಿಷ್ಠ ಎರಡ್ಮೂರು ಕಿ.ಮೀ ನಡೆದುಕೊಂಡೇ ಶಾಲೆಗೆ ಬರಬೇಕು. ಶಾಲೆಗಳಲ್ಲಿ ಶೌಚಾಲಯಗಳೇ ಇಲ್ಲ. ಇದ್ದರೂ ಅಲ್ಲಿ ಸ್ವಚ್ಛತೆ ಎಂಬುದು ಮರೀಚಿಕೆ. ಕನಿಷ್ಠ ಒಂದು ಪ್ಯಾಡ್ ಬದಲಾಯಿಸುವ-ಷ್ಟು ಸುಸ್ಥಿತಿಯಲ್ಲಿರುವ ಶೌಚಾಲಯಗಳೂ ಅಲ್ಲಿಲ್ಲ. ತೀವ್ರ ಹೊಟ್ಟೆನೋವು, ರಕ್ತಸ್ರಾವವಾದಾಗ ಮಕ್ಕಳಿಗೆ ಕಷ್ಟ ವಾಗುತ್ತದೆ. ಅಂಥ ಸಂದರ್ಭಗಳಲ್ಲಿ ರಜೆ ಕೊಟ್ಟರೆ ಒಳ್ಳೆಯದು. ದೇಹಕ್ಕೆ, ಮನಸಿಗೆ ವಿಶ್ರಾಂತಿಗೆ ಬೇಕು ಅಂತ ಅನಿಸಿದರೆ ರಜೆ ತೆಗೆದುಕೊಳ್ಳುವುದು ತಪ್ಪಲ್ಲ. ಅಂತೆಯೇ ನಮಗೆ ಸಾಮರ್ಥ್ಯವಿದೆ ಅಂತ ಸಾಬೀತುಪಡಿಸಲು ಆ ದಿನಗಳಲ್ಲಿ ಕೆಲಸ ಮಾಡಿ ತೋರಿಸಬೇಕೆಂದಿಲ್ಲ.

ಜ್ಯೋತಿ ಹಿಟ್ನಾಳ್, ಸಂಶೋಧಕಿ, ಕನ್ನಡ ವಿಶ್ವವಿದ್ಯಾಲಯ ಹಂಪಿ.

ಋತುಚಕ್ರದ ರಜೆ ಕುರಿತು ಸರ್ಕಾರಗಳು ಸಮರ್ಪಕವಾದ ಕಾನೂನು ರೂಪಿಸಿ, ಮಹಿಳಾ ಸ್ನೇಹಿ ವಾತಾವರಣಕ್ಕೆ ಸಾಕ್ಷಿ ಆಗಬೇಕಿದೆ.

ಲಕ್ಷ್ಮಿ ಅಯ್ಯಂಗಾರ್
ಹಿರಿಯ ವಕೀಲರು, ಹೈಕೋರ್ಟ್

ಮುಟ್ಟು ನಿಲ್ಲುವ ಆಸುಪಾಸಿನ ದಿನಗಳು ಹೆಂಗಸರಿಗೆ ಬಹಳ ಯಾತನಾಮಯವಾಗಿರುತ್ತವೆ. ಆಗ ದೈಹಿಕ– ಮಾನಸಿಕವಾಗಿ ತೊಂದರೆ ಅನುಭವಿಸುತ್ತಾರೆ. ಇನ್ನು ಕೆಲವರಿಗೆ ಮುಟ್ಟಿನ ಮುನ್ನಾದಿನಗಳು ಕಷ್ಟಕರವಾಗಿರುತ್ತದೆ. ಇಂಥ ಸಂದರ್ಭಗಳಲ್ಲಿ ರಜೆ ಇದ್ದರೆ ಅನುಕೂಲ.

ಪಲ್ಲವಿ ಇಡೂರು, ಲೇಖಕಿ, ಆಹಾರ ತಜ್ಞೆ

ವಿಶೇಷ ರಜೆಯ ಬದಲು ಪ್ರತಿ ಶಾಲಾ- ಕಾಲೇಜಿನಲ್ಲೂ ವಿದ್ಯಾರ್ಥಿನಿಯರ ಆರೈಕೆ ಕೊಠಡಿ ತೆರೆಯಬೇಕು. ಅಲ್ಲಿ ಸ್ಯಾನಿಟರಿ ಪ್ಯಾಡ್, ಶೌಚಾಲಯ, ಶುದ್ಧ ಕುಡಿಯುವ ನೀರು, ಬರ್ನಿಂಗ್ ಯಂತ್ರ, ಅನುಭವಿ ಕೌನ್ಸೆಲರ್, ವಿಶ್ರಾಂತಿಗೆ ವ್ಯವಸ್ಥೆ ಇರಬೇಕು

ಡಾ.ಸಂಧ್ಯಾಕಾವೇರಿ
ಪ್ರಾಂಶುಪಾಲರು, ಕಟೀಲ್ ಅಶೋಕ್ ಪೈ ಕಾಲೇಜು

ರಜೆ ಕೊಡಲೇಬೇಕು ಎಂಬುದನ್ನು ಕಡ್ಡಾಯ ಮಾಡುವುದಕ್ಕಿಂತ ಮಹಿಳೆಯರಿಗೆ ಕಚೇರಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ವಿಶ್ರಾಂತಿ ಕೊಠಡಿ ಮತ್ತು ಶೌಚಾಲಯ ವ್ಯವಸ್ಥೆ ಕಲ್ಪಿಸುವುದು ಅಗತ್ಯ. ಈ ಕುರಿತು ಜಾಗೃತಿ ಮೂಡಿಸುವುದು ಅತ್ಯಗತ್ಯ

ಶ್ವೇತಾ ಶ್ರೀವಾತ್ಸವ್, ನಟಿ

ಮುಟ್ಟಿನ ರಜೆ ಬಗ್ಗೆ ರಾಜ್ಯದಲ್ಲಿ ಯಾವುದೇ ಕಾಯ್ದೆ ಇಲ್ಲ. ಮುಂದಿನ ದಿನಗಳಲ್ಲಿ ಈ ರೀತಿಯ ಕಾಯ್ದೆ ರೂಪಿಸುವ ಬಗ್ಗೆಯೂ ಈವರೆಗೆ ಯಾರಿಂದಲೂ ಪ್ರಸ್ತಾಪವಾಗಿಲ್ಲ.

ಅಕ್ರಂ ಪಾಷ, ಕಾರ್ಮಿಕ ಇಲಾಖೆ ಆಯುಕ್ತ

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 28-5-1998

● **ವೀರಪ್ಪನ್‌ಗೆ ಮತ್ತೆ ಮೂವರು ಒತ್ತೆ**

ಈರೋಡ್, ಮೇ 27 (ಯುಎನ್‌ಐ)– ಶರಣಾಗುವುದಾಗಿ ಹೇಳುತ್ತಿದ್ದ ಕಾಡುಗಳ್ಳ ವೀರಪ್ಪನ್ ಮತ್ತೆ ಮೂವರನ್ನು ಒತ್ತೆಯಾಳಾಗಿ ಇಟ್ಟುಕೊಳ್ಳುವ ಮೂಲಕ ಎರಡೂ ರಾಜ್ಯಗಳಿಗೆ ಆಘಾತ ನೀಡಿದ್ದಾನೆ.

ತಮಿಳು ಪತ್ರಿಕೆ 'ನೆಟ್ರಿಕಣ್' ಸಂಪಾದಕ ಎ.ಎಸ್. ಮಣಿ ನೇತೃತ್ವದಲ್ಲಿ ತನ್ನ ಭೇಟಿಗೆ ಬಂದಿದ್ದ ನಾಲ್ವರನ್ನು ವೀರಪ್ಪನ್ ದಿಂಬು ಕಾಡಿನಲ್ಲಿ ಒತ್ತೆಯಾಳಾಗಿರಿಸಿಕೊಂಡು ತಾನು ಶಕ್ತಿ-ಹೀನನಲ್ಲ ಎಂದು ಸಾರಿದ್ದಾನೆ. ಮೂವರನ್ನು ಒತ್ತೆಯಾಳಾಗಿ ಇಟ್ಟುಕೊಂಡಿರುವ ವೀರಪ್ಪನ್, ನೆಟ್ರಿಕಣ್ ಸಂಪಾದಕ ಮಣಿ ಅವರನ್ನು ಇಂದು ಬಿಡುಗಡೆ ಮಾಡಿದ್ದಾನೆ.

50 ವರ್ಷಗಳ ಹಿಂದೆ

ಸೋಮವಾರ, 28-5-1973

● **ಮಲೆನಾಡು ಅಭಿವೃದ್ಧಿ ಅಧ್ಯಯನಕ್ಕೆ ಮಂಡಳಿ: ಕೇಂದ್ರ ಸರ್ಕಾರದ ನಿರ್ಧಾರ**

ಬೆಂಗಳೂರು, ಮೇ 27– ಮಲೆನಾಡು ಪ್ರದೇಶವೂ ಸೇರಿ ಪಶ್ಚಿಮ ಘಟ್ಟ ಪ್ರದೇಶಗಳ ಅಭಿವೃದ್ಧಿ ಕುರಿತು ಅಧ್ಯಯನಕ್ಕಾಗಿ ಮಂಡಳಿಯೊಂದನ್ನು ರಚಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ.

ಎರಡು ದಿನಗಳ ಮೈಸೂರು ರಾಜ್ಯ ಮಲೆನಾಡು ಅಭಿವೃದ್ಧಿ ಕುರಿತ ಸಮ್ಮೇಳನಕ್ಕೆ ಕೇಂದ್ರ ಭಾರಿ ಕೈಗಾರಿಕಾ ಖಾತೆ ಸಚಿವ ಟಿ.ಎ. ಪೈ ಅವರು ಕಳುಹಿಸಿದ ತಂತಿಯಲ್ಲಿ ಈ ಅಂಶ ತಿಳಿಸಿದ್ದಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

ಭಾನುವಾರ ಮೇ 28, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಅಷ್ಟಮಿ ಗಂ. 09-57 ನಕ್ಷತ್ರ: ಪೂರ್ವಫಲ್ಗುನಿ ಗಂ. 26-20 ಯೋಗ: ಹರ್ಷಣ ಗಂ. 20-39, ಕರಣ: ಬವ ಗಂ. 09-57, ವೃಷಭ ಮಾಸದ 13 ನೇ ದಿನ, ಮಳೆನಕ್ಷತ್ರ: ರೋಹಿಣಿ 1.
ರಾಹುಕಾಲ : ಸಾಯಂಕಾಲ 04-30 – 06-00,
ಸೂರ್ಯೋದಯ : 06-06 ಸೂರ್ಯಾಸ್ತ : 06-49, ಮುಸ್ಲಿಂ ದಿನಾಂಕ : 08 ಜುಲ್ಖಾಯದ್,
ದಿನ ವಿಶೇಷ : ಕ್ಷೀರ ಭವಾನಿ ಮೇಳ (ಕಾಶ್ಮೀರ), ವೈಟ್ ಭಾನುವಾರ - ಪೆಂಟೆಕೋಸ್ಟ್ (ಕ್ರಿಶ್ಚಿಯನ್), ಅದೃಷ್ಟ ಸಂಖ್ಯೆ : 6, 3

ಮೇಷ: ಮನೆಯ ಅಡಿಗೆಯನ್ನು ಹೊರತು ಪಡಿಸಿ ಬೇರೆ ಆಹಾರವನ್ನು ತಿನ್ನುವ ಮನಸ್ಸಾಗುತ್ತದೆ. ಯಾತ್ರೆಯನ್ನು ಮಾಡುತ್ತಿರುವವರಿಗೆ ಜೊತೆಗಾರರಿಂದ ಸ್ಥಳಪುರಾಣ ತಿಳಿಯುತ್ತದೆ. ವ್ಯಸನಗಳಿಂದ ಬೇಗನೆ ಮುಕ್ತಿ ಪಡೆಯುವಿರಿ.

ವೃಷಭ: ಮಗಳಿಗೆ ಹೆಸರಿಡುವ ಕುರಿತು ಚರ್ಚೆ ಆಗುತ್ತದೆ. ಶುಭ ಸಮಾರಂಭದ ದಿನಕ್ಕಾಗಿ ಎಲ್ಲಾ ರೀತಿಯ ತಯಾರಿಯನ್ನು ಮಾಡಿಕೊಳ್ಳುವಿರಿ. ಬರುವ ಸಂಬಂಧಿಗಳು ನಿಮ್ಮ ಆದರಾತಿಥ್ಯದಿಂದ ಸಂತುಷ್ಟರಾಗುವರು.

ಮಿಥುನ: ನಿಮ್ಮ ಸಾಮರ್ಥ್ಯದ ಅರಿವಿಲ್ಲದೆ ನಿಮ್ಮ ಬಗ್ಗೆ ಲಘುವಾಗಿ ಮಾತನಾಡಿದವರಿಗೆ ಸರಿಯಾದ ಪಾಠ ಕಲಿಸುವಿರಿ. ನಿಮ್ಮ ತಪ್ಪಿಲ್ಲದಿದ್ದರೂ ಹಿರಿಯರ ವಯಸ್ಸಿಗೆ ಬೆಲೆ ಕೊಟ್ಟು ಕ್ಷಮೆ ಕೇಳಿ. ಮೀನು ಮಾರಾಟಗಾರರಿಗೆ ಲಾಭ.

ಕರ್ಕಾಟಕ: ವ್ಯವಹಾರದಲ್ಲಿ ಸಹೋದ್ಯೋಗಿಗಳ ಜೊತೆಯಲ್ಲಿ ಉತ್ತಮವಾದ ಸಂಬಂಧವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಅನಿರೀಕ್ಷಿತವಾಗಿ ನಿಮ್ಮ ಮನಸ್ಸಿನಲ್ಲಿದ್ದಂತಹ ಅಸಮಾಧಾನಗಳೆಲ್ಲ ಮಾತಿನಲ್ಲಿ ಹೊರಬರುವವು.

ಸಿಂಹ: ನಿಮ್ಮ ಪ್ರತೀಕ್ಷೆಯ ಮನೋಭಿಲಾಷೆಯು ಪೂರ್ಣಗೊಳ್ಳುವ ದಿನ ಇದಾಗಲಿದೆ. ದೀರ್ಘವಾದ ಪ್ರಯಾಣವನ್ನು ಮುಗಿಸಿ ಮನೆಗೆ ಮರಳಲಿದ್ದೀರಿ. ಅನುಭವಗಳ ಕಥೆಗಳನ್ನು ಎಲ್ಲರೊಂದಿಗೆ ಹಂಚಿಕೊಳ್ಳಲಿದ್ದೀರಿ.

ಕನ್ಯಾ: ಮದುವೆಯಲ್ಲಿ ನಿಮ್ಮ ಮಕ್ಕಳು ಮಾಡಿದ ಖರ್ಚು ವೆಚ್ಚಗಳು ನಿಮಗೆ ದುಂದುವೆಚ್ಚದಂತೆ ಕಾಣುತ್ತದೆ. ಮುಕ್ತ ಭಾವನೆಯಿಂದ ನೀವಾಡಿದ ಮಾತುಗಳು ಉಳಿದವರಿಗೆ ಅಧಿಕ ಪ್ರಸಂಗದಂತೆ ತೋರುತ್ತದೆ.

ತುಲಾ: ಕೆಲವು ಸಮಸ್ಯೆಗಳನ್ನು ನಿಮ್ಮ ವಯಸ್ಕರಲ್ಲಿಯೇ ಹೇಳುವುದಕ್ಕಿಂತ ಹಿರಿಯರಲ್ಲಿ ಹೇಳುವುದರಿಂದ ಸಮಾಧಾನ ಆಗುವುದು. ಯಾವುದೇ ವಿಷಯ-ವನ್ನಾಗಲಿ ಅಧಿಕಾರಿಗಳಿಂದ ಒಂದಕ್ಕಿಂತ ಹೆಚ್ಚು ಬಾರಿ ಹೇಳಿಸಿಕೊಳ್ಳಬೇಡಿ.

ವೃಶ್ಚಿಕ: ಚಕ್ರವ್ಯೂಹದಲ್ಲಿ ಸಿಲುಕಿದ ನಿಮಗೆ ಅದನ್ನು ಭೇದಿಸುವ ಉಪಾಯ ಮಿತ್ರರಿಂದ ಸಿಗುತ್ತದೆ. ಮಧ್ಯವರ್ತಿಗಳ ಅತಿ ಆಸೆಯಿಂದ ರೈತರಾದ ನಿಮಗೆ ಲಾಭವಿಲ್ಲವಾಗುವ ಕಾರಣ ರೈತ ಮಾರುಕಟ್ಟೆಯಲ್ಲಿ ವ್ಯವಹಾರ ನಡೆಸಿ.

ಧನು: ಆತ್ಮೀಯರಿಂದಲೇ ಭೂಮಿಯ ವಿಷಯದಲ್ಲಿ ಮೋಸ ಹೋಗುವ ಸಾಧ್ಯತೆ. ಬಹಳ ಕಷ್ಟದಿಂದ ಸಂಪಾದನೆ ಮಾಡಿರುವ ಹಣದ ಸರಿಯಾದ ವಿನಿಯೋಗಕ್ಕಾಗಿ ಬಹಳವಾಗಿ ಯೋಚಿಸುವಿರಿ. ವಾತಕ್ಕೆ ಔಷಧಿ ತೆಗೆದುಕೊಳ್ಳಿ.

ಮಕರ: ಕಾಲೇಜಿನಲ್ಲಿ ವಿದ್ಯಾರ್ಥಿಗಳ ಸಂಶಯವನ್ನು ಬಗೆಹರಿಸುವುದಾದರೆ, ಮನೆಯಲ್ಲಿ ಮಗುವಿನ ಸಂಶಯನ್ನು ಬಗೆ ಹರಿಸುವುದರಲ್ಲಿ ನಿಮ್ಮ ದಿನ ಕಳೆಯುವಿರಿ. ಮಿತ್ರವರ್ಗದಿಂದ ದುಃಖದ ಸಮಾಚಾರ ಕೇಳಬೇಕಾಗಬಹುದು.

ಕುಂಭ: ಮನೆ ಕೆಲಸಗಳ ಜವಬ್ದಾರಿಯನ್ನು ನಿಮ್ಮದಾಗಿ ಮಾಡಿಕೊಳ್ಳುತ್ತಿರುವ ಕಾರಣ ಬಿಡುವಿಲ್ಲದ ದುಡಿಮೆಯ ದಿನಗಳು ನಿಮ್ಮದಾಗಲಿದೆ. ತಿಳಿಯದ ವಿಷಯಗಳ ಬಗ್ಗೆ ಅನಾವಶ್ಯಕವಾಗಿ ಸಹೋದರರ ಜೊತೆ ವಾದಿಸಬೇಡಿ.

ಮೀನ: ಬದಲಾವಣೆಯ ಅಲೆಯನ್ನು ನಿರೀಕ್ಷಿಸುತ್ತಿರುವ ನೀವು ಸಣ್ಣ ಸಣ್ಣ ವಿಷಯಗಳಲ್ಲಿ ಉತ್ತಮ ರೀತಿ ನೀತಿಗಳನ್ನು ಅಳವಡಿಸಿಕೊಳ್ಳುವಿರಿ. ಗಂಡ ಹೆಂಡತಿಯರ ವಾದ ವಿವಾದದಲ್ಲಿ ಮಧ್ಯ ಪ್ರವೇಶಸುವುದು ಒಳ್ಳೆಯ ನಡೆಯಲ್ಲ.

ಪದಬಂಧ 5332

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಉತ್ಪಾದಕನಿಗೆ ಬೇಕಾದ ನೀರು (3)
3.ಇದು ವಾಸ್ತವವಲ್ಲ!ನಸುಕಿನಲ್ಲಿ ಬಿದ್ದ ಸ್ವಪ್ನ (3)
4.ಮಡಿವಂತಿಗೆಕೆ ಬೇಕಾದ ಮಣ್ಣಿನ ಪಾತ್ರೆ (3)
6.ಆತ ವಿಚಾರಿಸಿದ್ದು ರಾಮನ ಮಗನ ಕ್ಷೇಮ! (3)
7.ಕವಾಡಿಗನದ್ದೂ ಇದೇ ಸಂಪ್ರದಾಯವಂತೆ (3)
9.ಪಾಪ! ಇನ್ನೂ ಕರುವಲ್ಲವೇ ಅದಕ್ಕೇ ಈ ದಯೆ (3)
11.ನಗರದವರೆಲ್ಲರೂ ಜರೂರಾಗಿ ಒಪ್ಪಿಸಿದ ಕಾಣಿಕೆ (3)
13.ಹೇಳಿದ ದಿನದೊಳಗೇ ಬಂದನಲ್ಲ ಈ ಮಂತ್ರಿ! (3)
15.ಪ್ರವಾಸದಲ್ಲಿ ಸಿಕ್ಕವರು ತತ್ವಜ್ಞಾನಿಯಂತೆ! (3)
17.ಲವಂಗ ತರದೇ ಸತಾಯಿಸಿದ ಈ ದುರಾಚಾರಿ! (3)
18.ವರ್ತಮಾನವನ್ನು ತಿಳಿಸುವ ವ್ಯಾಪಾರಿ (3)
19.ವಸತಿ ಹತ್ತಿರವಿರುವ ಉಪಪತ್ನಿ (3)

ಮೇಲಿಂದ ಕೆಳಕ್ಕೆ
1.ಆ ಕೂಸು ಕುಳಿತಿದ್ದು ಈ ಮರಳ ಮೇಲೆಯೇ (3)
2.ಕಮಂಡಲ ಹಿಡಿದವ ನೀಡಿದ ತಾವರೆ (3)
3.ಕರವನ್ನು ಕಡಿಯಲು ಬಂದಿದೆಯಲ್ಲಾ ಈ ಭಲ್ಲೂಕ! (3)
5.ಹೆಸರು ಹೇಳದೇ ಸಿಡಿಸಿ ಬಿಟ್ಟ ಈ ರಾಡಿಯನ್ನು! (3)
7.ವಾಗ್ಯುದ್ಧವೆಲ್ಲಾ ಮುಗಿದ ಮೇಲೆ ನೀಡಿದ ವಚನ (3)
8.ಕೆನ್ನೆ ಮೇಲೆ ಕಾಣುತ್ತಿದೆಯಲ್ಲ ಈ ನೆತ್ತರು ! (3)
9.ಆ ಮಂದಿ ಸೀದಾ ನಡೆದಿದ್ದು ಮುಸಲ್ಮಾನರ ಪ್ರಾರ್ಥನಾ ಸ್ಥಳಕ್ಕೆ (3)
10.ದನಕ್ಕಾಗಿಯೇ ನಡೆಯಿತಲ್ಲಾ ಈ ಯುದ್ಧ! (3)
12.ಜಲ ತರುವುದೇ ಇಷ್ಟು ತೊಡಕು! (3)
14.ಈತ ವಾದ್ಯ ನುಡಿಸುವವ (3)
15.ಆತ ಪ್ರತಿಯೊಳಗೆ ತೋರಿಸಿದ ಏಳಿಗೆ (3)
16.ದವಸವನ್ನೆಲ್ಲಾ ತಂದ ದಿನ (3)



5331ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚದುರಂಗ 3.ಮದುಮಗ
5.ತವಕ 6.ದಿನಕರ
8.ರಿಯಾಯತಿ 10.ಕಬಳಿಸು
12.ಅವಸರ 14.ದಡಿಯ
15.ರಸಾಯನ 16.ತರಕಾರಿ

ಮೇಲಿಂದ ಕೆಳಕ್ಕೆ:
1.ಚತುಷ್ಪಾದಿ 2.ಗತ್ಯಂತರ
3.ಮಧುಕರಿ 4.ಗಣಪತಿ
7.ನವಾಬ 9.ಯಮಸ
10.ಕಳೇಬರ 11.ಸುದರ್ಶನ
12.ಅಯಸ್ಕಾಂತ 13.ರಹದಾರಿ

ಸುಡೊಕು 5718

	3			6				2
6		2	4		9		1	
						6		9
3		7	2			4		
		8		4			3	7
4					3	2		8
		9	8					4
8					4		2	
		3		2		7		6

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5717 ಸುಡೊಕು

4	5	7	2	6	8	1	9	3
9	2	6	1	3	5	4	7	8
1	8	3	7	4	9	2	5	6
6	3	1	4	5	2	7	8	9
5	7	2	8	9	6	3	4	1
8	9	4	3	7	1	5	6	2
3	6	9	5	1	4	8	2	7
2	1	5	6	8	7	9	3	4
7	4	8	9	2	3	6	1	5

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಪ್ರತಿಷ್ಠಿತ ರಾಜಕಾರಣಿ ಕುಟುಂಬದ ಸಂಬಂಧಿಯ ಆಸ್ತಿ ಕಬಳಿಕೆಗೆ ಸಂಚು

ಹತ್ಯೆಗೆ ಸುಪಾರಿ ಆರೋಪ ಜಾಮೀನು ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಹುಕೋಟಿ ಮೌಲ್ಯದ ಆಸ್ತಿ ಕಬಳಿಸಲು ಸಂಚು ರೂಪಿಸಿ, ಸುಪಾರಿ ಕೊಟ್ಟು ಮಲಮಗನ (ತನ್ನ ಅನಧಿಕೃತ ಪತಿಯ ಮೊದಲ ಹೆಂಡತಿ ಮಗ) ಹತ್ಯೆಗೆ ಕಾರಣವಾಗಿದ್ದಾರೆ' ಎಂಬ ಆರೋಪದಡಿ ಎರಡು ವರ್ಷಗಳಿಂದ ಜೈಲಿನಲ್ಲಿರುವ ಮಲತಾಯಿಯೊಬ್ಬರಿಗೆ ಜಾಮೀನು ಮಂಜೂರು ಮಾಡಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಚೆನ್ನೈನ ಒಎಂಆರ್ ರಸ್ತೆಯ ಹೀರಾ ನಂದಿನಿ ಟವರ್ಸ್‌ನ ಅಪಾರ್ಟ್‌ಮೆಂಟ್‌ನಲ್ಲಿ ತಾತ್ಕಾಲಿಕ ನಿವಾಸಿಯಾಗಿರುವ ಮತ್ತು ಶಿಮ್ಲಾದಲ್ಲಿ ಉದ್ಯಮ ವಹಿವಾಟು ಹೊಂದಿರುವ 36 ವರ್ಷದ ಇಂದು ಚೌಹಾಣ್ ಅಲಿಯಾಸ್ ಇಂದು ಎಂಬ ಮಹಿಳೆ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಮೊಹಮದ್ ನವಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಾದ ಮಂಡಿಸಿದ್ದ ಹಿರಿಯ ವಕೀಲರು, 'ಈ ಪ್ರಕರಣದಲ್ಲಿ ಅರ್ಜಿದಾರಳನ್ನು ತಪ್ಪಾಗಿ ಸಿಲುಕಿಸಲಾಗಿದೆ. ಆಕೆ ಮುಗ್ಧೆ. ಕೇವಲ ಆರೋಪಿಗಳ ಹೇಳಿಕೆಯನ್ನು ಆಧರಿಸಿ ಅವರನ್ನು ಬಂಧಿಸಲಾಗಿದೆ. ಅವರ ವಿರುದ್ಧ ದೋಷಾರೋಪ ಹೊರಿಸಲು ಯಾವುದೇ ಸಾಕ್ಷ್ಯಗಳಿಲ್ಲ. ಕೊಲೆಗೆ ಸುಪಾರಿ ನೀಡಿದ್ದಾರೆ ಎಂಬುದೆಲ್ಲಾ ಆಧಾರರಹಿತ' ಎಂದು ವಾದ ಮಂಡಿಸಿದ್ದರು.

ಆದರೆ, ಪ್ರಾಸಿಕ್ಯೂಷನ್ ಪರ ಪ್ರಬಲ ವಾದ ಮಂಡಿಸಿದ್ದ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ವಿ.ಜಿ. ಭಾನುಪ್ರಕಾಶ್, 'ಅರ್ಜಿದಾರಳ ವಿರುದ್ಧದ ಆರೋಪಗಳು ಮೇಲ್ನೋಟಕ್ಕೇ ಕ್ರೂರವಾಗಿ ಕಂಡು ಬರುತ್ತಿವೆ. ಆಕೆ ಬೆಂಗಳೂರಿನ ಕಾಯಂ ನಿವಾಸಿಯಲ್ಲ. ಅಂತೆಯೇ ಆಕೆಗೆ ಕಾಯಂ ನಿವಾಸಸ್ಥಾನವಿಲ್ಲ. ಜೈಲಿನಿಂದ ಹೊರಬಂದರೆ ಸಾಕ್ಷ್ಯನಾಶ ಮಾಡುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಇದರಿಂದ ತನಿಖೆಗೆ ಅಪಾಯಗಳಿವೆ' ಎಂದು ಪ್ರತಿಪಾದಿಸಿದ್ದರು.

'ಅರ್ಜಿದಾರಳ ವಿರುದ್ಧದ ಆರೋಪಗಳಿಗೆ ಜೀವಾವಧಿ ಅಥವಾ ಮರಣ ದಂಡನೆ ವಿಧಿಸಬಹುದಾಗಿದೆ. ಆರೋಪಿಯು, ಮಹಿಳೆ ಎಂಬ ಏಕೈಕ ಕಾರಣಕ್ಕಾಗಿ ಜಾಮೀನು ನೀಡಲು ಸಾಧ್ಯವಿಲ್ಲ. ಆಕೆ ಸುಪಾರಿಗೆ ಹಣ ನೀಡಿದ್ದಕ್ಕೆ ಸಾಕ್ಷ್ಯಗಳಿವೆ. ಕೊಲೆಗೆ ಸಂಚು ರೂಪಿಸಿ ಅದನ್ನು ಜಾರಿಗೊಳಿಸಲು ಪ್ರಯತ್ನಪಟ್ಟಿದ್ದಾರೆ. ಹಾಗಾಗಿ ಜಾಮೀನು ನೀಡಬಾರದು' ಎಂದು ಮನವಿ ಮಾಡಿದ್ದರು. ಅಂತಿಮವಾಗಿ ಪ್ರಾಸಿಕ್ಯೂಷನ್ ವಾದವನ್ನು ಮನ್ನಿಸಿರುವ ನ್ಯಾಯಪೀಠ ಜಾಮೀನು ನಿರಾಕರಿಸಿ ಆದೇಶಿಸಿದೆ.

ದೋಷಾರೋಪ ಪಟ್ಟಿಯಲ್ಲೇನಿದೆ?

'ಸಿದ್ಧಾರ್ಥ ಸಿಂಗ್ 28 ವರ್ಷದ ಯುವ ಉದ್ಯಮಿ. ದಾಸರಹಳ್ಳಿಯ ಭುವನೇಶ್ವರಿ ಬಡಾವಣೆಯಲ್ಲಿನ 'ಸ್ಟೇ ಅಡೋಬ್ ಕೋಲಮನ್ ಅಪಾರ್ಟ್‌ಮೆಂಟ್'ನಲ್ಲಿ ವಾಸವಿದ್ದರು. ಇವರು ರಜಪೂತ ಸಮುದಾಯಕ್ಕೆ ಸೇರಿದ ಸಿ.ಆರ್. ದೇವೇಂದರ್ ಸಿಂಗ್ (ರಾಜ್ಯದ ಪ್ರತಿಷ್ಠಿತ ರಾಜಕಾರಣಿಯೊಬ್ಬರ ನಿಕಟ ಸಂಬಂಧಿ) ಎಂಬುವರ ಮೊದಲ ಹೆಂಡತಿಯ ಪುತ್ರ.

ಆರೋಪಿ ಇಂದು ಚೌಹಾಣ್ ತಾನು ದೇವೇಂದರ್ ಸಿಂಗ್ ಅವರಿಗೆ ಎರಡನೇ ಹೆಂಡತಿ ಎಂದೇ ಹೇಳಿಕೊಂಡಿದ್ದಾರೆ. ದೇವೇಂದರ್ ಸಿಂಗ್ ಅವರ ವೃದ್ಧ ಸಹೋದರಿಗೆ ಮಕ್ಕಳಿಲ್ಲದ ಕಾರಣ ಅವರಿಗೆ ಸೇರಿದ ಬೆಂಗಳೂರಿನಲ್ಲಿರುವ ಬಹುಕೋಟಿ ಮೌಲ್ಯದ ಆಸ್ತಿಯನ್ನು ದೇವೇಂದರ್ ಸಿಂಗ್ ಅವರೇ ನೋಡಿಕೊಳ್ಳುತ್ತಿದ್ದರು. ಇವರ ಕೌಟುಂಬಿಕ ವ್ಯವಹಾರಗಳಲ್ಲಿ ಸಿದ್ಧಾರ್ಥ ಕೂಡಾ ಭಾಗಿಯಾಗತ್ತಿದ್ದರು.

ಇದರಿಂದ ಕುಪಿತಗೊಂಡಿದ್ದ ಇಂದು ಚೌಹಾಣ್, ದೇವೇಂದರ್ ಸಿಂಗ್ ನೋಡಿಕೊಳ್ಳುತ್ತಿರುವ ಸಹೋದರಿಯ ಆಸ್ತಿಯು ಭವಿಷ್ಯದಲ್ಲಿ ಸಿದ್ಧಾರ್ಥನಿಗೇ ದಕ್ಕುತ್ತದೆ ಎಂಬ ಕಾರಣಕ್ಕಾಗಿ ಸಿದ್ಧಾರ್ಥನನ್ನು ಮುಗಿಸಲು ಸಂಚು ರೂಪಿಸಿದ್ದರು. ಇದಕ್ಕಾಗಿ ಅವರು ಹಂತಕರಿಗೆ ₹ 4 ಲಕ್ಷ ಸುಪಾರಿ ಕೊಟ್ಟಿದ್ದರು. ಸುಪಾರಿ ಪಡೆದ ಮೂವರು ಹಂತಕರು ಸಿದ್ಧಾರ್ಥ ಅವರನ್ನು 2021ರ ಜನವರಿ 25ರಂದು ಅಪಾರ್ಟ್‌ಮೆಂಟ್‌ನಿಂದ ಅಪಹರಿಸಿದ್ದರು. ಕಾರಿನಲ್ಲಿ ಕೋಲಾರದ ಕಡೆ ಕರೆದೊಯ್ದು ಕಾರಿನ ಸೀಟ್ ಬೆಲ್ಟ್‌ನಿಂದ ಕುತ್ತಿಗೆಗೆ ಬಿಗಿದು ಸಾಯಿಸಿ ನಂತರ ನೆಲ್ಲೂರು ಬಳಿಯ ಕಾಡಿನಲ್ಲಿ ಹೆಣವನ್ನು ಸುಟ್ಟು ಹಾಕಿದ್ದರು.

ಹತ್ಯೆ ನಂತರ ಮೊದಲ ಆರೋಪಿ 2021ರ ಜನವರಿ 29ರಂದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಎರಡು ಮತ್ತು ಮೂರನೇ ಆರೋಪಿಯನ್ನು ಬಂಧಿಸಲಾಗಿದೆ. ಇವರಿಬ್ಬರ ಹೇಳಿಕೆಯ ಆಧಾರದಲ್ಲಿ ಇಂದು ಚೌಹಾಣ್ ಅವರ ಸಂಚು ಬಯಲಾಗಿದ್ದು ಅವರನ್ನೂ ಬಂಧಿಸಲಾಗಿದೆ. ಸಿದ್ಧಾರ್ಥ ಬದುಕಿದ್ದಾನೆ ಎಂದು ಬಿಂಬಿಸುವಂತೆ ಆತನ ಮೊಬೈಲ್‌ನಿಂದ ಇಂದು ಚೌಹಾಣ್ ಹತ್ತಿರದವರಿಗೆ ಫೋನ್ ಮಾಡಿರುವುದು, ಅಪರಿಚಿತರು ಅಪಾರ್ಟ್‌ಮೆಂಟ್ ಪ್ರವೇಶಿಸಿರುವ ಸಿಸಿಟಿವಿ ದೃಶ್ಯಾವಳಿಗಳು, ಅಂತೆಯೇ ಸಿದ್ಧಾರ್ಥನ ಲಗೇಜ್ ಅನ್ನು ಅಪಾರ್ಟ್‌ಮೆಂಟ್‌ನಿಂದ ಹೊತ್ತೊಯ್ದಿರುವ ಸಾಕ್ಷ್ಯಾಧಾರಗಳು ತನಿಖೆ ವೇಳೆ ಲಭ್ಯವಾಗಿವೆ.

ಅಪಹರಣಕ್ಕೆ ಒಳಗಾಗಿರುವ ನನ್ನ ಮಗನನ್ನು ಪತ್ತೆ ಹಚ್ಚಿ ಆರೋಪಿಗಳ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ದೇವೇಂದರ್ ಸಿಂಗ್ ಅಮೃತಹಳ್ಳಿ ಪೊಲೀಸ್ ಠಾಣೆಗೆ ದೂರು ನೀಡಿದ ಅನ್ವಯ ತನಿಖೆ ನಡೆಸಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗಿದೆ. ಭಾರತೀಯ ದಂಡ ಸಂಹಿತೆ–1860ರ ಕಲಂ 302, 201 ಮತ್ತು 120 ಬಿ ಅನುಸಾರ ಸಿಟಿ ಸಿವಿಲ್ ಕೋರ್ಟ್‌ನ 62ನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ' ಎಂದು ಪ್ರಾಸಿಕ್ಯೂಷನ್ ದೋಷಾರೋಪ ಪಟ್ಟಿಯಲ್ಲಿ ವಿವರಿಸಿದೆ.

ಪೋಕ್ಸೊ: ಶಿಕ್ಷಕನಿಗೆ ಜಾಮೀನು ನಿರಾಕರಣೆ

ಬೆಂಗಳೂರು: ಅಪ್ರಾಪ್ತ ವಯಸ್ಸಿನ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಎದುರಿಸುತ್ತಿರುವ ಶಿಕ್ಷಕರೊಬ್ಬರಿಗೆ ಜಾಮೀನು ನೀಡಲು ಹೈಕೋರ್ಟ್ ನಿರಾಕರಿಸಿದೆ.

ಈ ಸಂಬಂಧ ಶಿಕ್ಷಕ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಉಮೇಶ್ ಎಂ. ಅಡಿಗ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಅರ್ಜಿದಾರ ಶಿಕ್ಷಕ ನಾಲ್ಕು ಮತ್ತು ಐದನೇ ತರಗತಿಯ ವಿದ್ಯಾರ್ಥಿನಿಯರಿಗೆ ಕಿರುಕುಳ ನೀಡಿದ್ದಾರೆ' ಎಂಬ ಆರೋಪಕ್ಕೆ ಆಘಾತ ವ್ಯಕ್ತಪಡಿಸಿದೆ.

'ಶಿಕ್ಷಕರನ್ನು ದೇವರಿಗೆ ಸಮಾನ ಎಂದೇ ಪರಿಗಣಿಸುವ ಈ ದೇಶದಲ್ಲಿ ಆರೋಪಿಯು ತನ್ನ ಸ್ಥಾನಮಾನದ ಘನತೆ ಕುಂದಿಸುವ ಮೂಲಕ ಅಪ್ರಾಪ್ತ ವಯಸ್ಸಿನ ಮಕ್ಕಳಿಗೆ ಕಿರುಕುಳ ನೀಡಿರುವುದು ಕ್ರೂರ ನಡತೆಯೇ ಸರಿ. ಇಂತಹ ಘಟನೆಗಳಿಂದ ಪೋಷಕರು ತಮ್ಮ ಹೆಣ್ಣು ಮಕ್ಕಳನ್ನು ಶಾಲೆಗೆ ಒಲ್ಲದ ಮನಸ್ಸಿನಿಂದ ಕಳುಹಿಸಬೇಕಾದ ಪರಿಸ್ಥಿತಿ ಬಂದೊದಗಿದೆ' ಎಂದು ಕಳವಳ ವ್ಯಕ್ತಪಡಿಸಿದೆ.

ಪ್ರಕರಣವೇನು?: ಅರ್ಜಿದಾರ ಶಿಕ್ಷಕನ ನಡತೆಯ ಕುರಿತು ಮಾರ್ಚ್‌ನಲ್ಲಿ ಕೆಲವು ಗ್ರಾಮಸ್ಥರು ಜಿಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಯ (ಬಿಇಒ) ಗಮನ ಸೆಳೆದಿದ್ದರು. ಈ ಸಂಬಂಧ ಬಿಇಒ ಮತ್ತು ಮಕ್ಕಳ ಅಭಿವೃದ್ಧಿ ಯೋಜನಾಧಿಕಾರಿ ಶಾಲೆಗೆ ಭೇಟಿ ಪರಿಶೀಲಿಸಿದ್ದರು. ಈ ವೇಳೆ ಕೆಲವು ವಿದ್ಯಾರ್ಥಿಗಳು ಆರೋಪಿ ಶಿಕ್ಷಕನ ನಡತೆಯನ್ನು ಸವಿವರವಾಗಿ ಬಿಡಿಸಿಟ್ಟಿದ್ದರು.

ಮಕ್ಕಳ ಹೇಳಿಕೆಯನ್ನು ಆಧರಿಸಿ ಬಿಇಒ ಪೊಲೀಸರಿಗೆ ದೂರು ನೀಡಿದ್ದರು. ದೂರಿನ ಅನ್ವಯ ಪೊಲೀಸರು ಪೋಕ್ಸೊ (ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ ಕಾಯ್ದೆ–2012) ಕಲಂ 8 (ಲೈಂಗಿಕ ದೌರ್ಜನ್ಯ) ಮತ್ತು 12ರ (ಲೈಂಗಿಕ ಕಿರುಕುಳ) ಅಡಿಯಲ್ಲಿ ಶಿಕ್ಷಕನ ವಿರುದ್ಧ ಪ್ರಕರಣ ದಾಖಲಿಸಿದ್ದರು. ತ್ವರಿತಗತಿ ವಿಶೇಷ ನ್ಯಾಯಾಲಯ ಜಾಮೀನು ನಿರಾಕರಿಸಿತ್ತು.

ಕಸದ ರಾಶಿ: ಜನ ಹೈರಾಣ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ರಸ್ತೆಯ ಎರಡು ಬದಿಯಲ್ಲಿ ತ್ಯಾಜ್ಯ, ಚರಂಡಿಯಲ್ಲಿ ತುಂಬಿರುವ ಪ್ಲಾಸ್ಟಿಕ್, ಕಸ– ಕಡ್ಡಿ, ಪ್ಲಾಸ್ಟಿಕ್ ನೀರಿನ ಲೋಟ, ಮನೆಯ ತ್ಯಾಜ್ಯ...

– ಇದು ಕೊಡಿಗೇಹಳ್ಳಿ ಗ್ರಾಮದಿಂದ ಮಾಗಡಿ ಮುಖ್ಯರಸ್ತೆಗೆ ಸಂಪರ್ಕಿಸುವ ಮುಖ್ಯರಸ್ತೆಯಲ್ಲಿ ಕಾಣುವ ಸಮಸ್ಯೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ(ಬಿಡಿಎ) ನಿರ್ಮಿಸುತ್ತಿರುವ ನಾಡಪ್ರಭು ಕೆಂಪೇಗೌಡ ಬಡಾವಣೆಗೆ ಮಾಗಡಿ ಮುಖ್ಯರಸ್ತೆಯ ಮೂಲಕ ಕೊಡಿಗೇಹಳ್ಳಿ ಮೂಲಕ ಹೋಗುವ ಪ್ರಮುಖ ಮುಖ್ಯರಸ್ತೆಯಾಗಿದ್ದು, ಈ ರಸ್ತೆಯಲ್ಲಿ ಕಸದ ರಾಶಿ ನಿತ್ಯಕಂಡು ಬರುತ್ತದೆ.

ಗ್ರಾಮ ಪಂಚಾಯಿತಿಗೆ ಹಲವು ಬಾರಿ ಒತ್ತಡ ಹೇರಿದಾಗ ಮಾತ್ರ ಸ್ವಚ್ಛತಾ ಕಾರ್ಯ ಕೈಗೊಳ್ಳುತ್ತಾರೆ ಎಂದು ಕೊಡಿಗೇಹಳ್ಳಿ ಮತ್ತು ಕೊಡಿಗೇಹಳ್ಳಿ ಕಾಲೊನಿ ಗ್ರಾಮಸ್ಥರು ದೂರಿದರು.

ರಸ್ತೆಯಲ್ಲಿ ಪ್ಲಾಸ್ಟಿಕ್ ಕವರ್‌ನಲ್ಲಿ ಕಟ್ಟಿ ಕಸವನ್ನು ಬಿಸಾಡಿ ಹೋಗುವುದರಿಂದ ಬಿಡಾಡಿ ಹಸುಗಳು ತಿನ್ನುತ್ತವೆ. ಪ್ಲಾಸ್ಟಿಕ್ ಕರುಳಿಗೆ ಸೇರಿದರೆ ಮೂಕ ಪ್ರಾಣಿಗಳ ಸಾವಿಗೆ ಯಾರನ್ನು ನೇರಹೊಣೆಗಾರರನ್ನಾಗಿ ಮಾಡಬೇಕಾಗುತ್ತದೆ. ಬೀದಿ ನಾಯಿಗಳ ಹಾವಳಿ ಜಾಸ್ತಿಯಾಗಿದೆ. ಮಕ್ಕಳು, ವೃದ್ಧರ ಮೇಲೆ ಕೆಲವೊಮ್ಮೆ ದಾಳಿಮಾಡಿವೆ ಎಂದು ಗಂಗರುದ್ರಪ್ಪ ಬಡಾವಣೆಯ ಸಾರ್ವಜನಿಕರು ಹೇಳುತ್ತಾರೆ.

ಕೊಡಿಗೇಹಳ್ಳಿಯಿಂದ ಮಾಗಡಿ ಮುಖ್ಯರಸ್ತೆಗೆ ಸಂಪರ್ಕಿಸುವ ರಸ್ತೆ ಬದಿಯಲ್ಲಿ ಸುರಿದಿರುವ ಕಸದ ರಾಶಿ

'ಮಳೆ ಬಂದಾಗ ಕೊಳೆತು ನಾರುವ ಕಸದ ದುರ್ವಾಸನೆಯಿಂದ ಜೀವನ ನಡೆಸುವುದೇ ದುಸ್ತರವಾಗಿದೆ' ಎಂದು ಸ್ಥಳೀಯರಾದ ಬೀರಪ್ಪ ತಿಳಿಸಿದ್ದಾರೆ.

'ನಾಲ್ಕು ದಿನಕ್ಕೊಮ್ಮೆ ರಸ್ತೆ ಬದಿ ಕಸ ತೆಗೆಸಲಾಗುತ್ತಿದೆ. ಪಂಚಾಯಿತಿ ವ್ಯಾಪ್ತಿ ದೊಡ್ಡದಾಗಿದೆ. ಕೇವಲ 6 ಪೌರ ಕಾರ್ಮಿಕರು ಸಾಕಾಗುತ್ತಿಲ್ಲ. ಹೆಚ್ಚುವರಿ ಪೌರಕಾರ್ಮಿಕರ ನೇಮಕಾತಿಗೆ ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿಗೆ ಮನವಿ ಮಾಡಲಾಗಿದೆ. ಅನುಮತಿ ಸಿಕ್ಕಿಲ್ಲ' ಎಂದು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಭಗೀರಥಿ ಹೇಳಿದರು.

ವಿಧಿ ವಿಧಾನವಿಲ್ಲದೆ ಜಿ.ಎಚ್. ನಾಯಕರ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿ ಶುಕ್ರವಾರ ನಿಧನರಾದ ಕನ್ನಡದ ಖ್ಯಾತ ವಿಮರ್ಶಕ ಜಿ.ಎಚ್. ನಾಯಕ (88) ಅವರ ಅಂತ್ಯಕ್ರಿಯೆಯು ಚಾಮುಂಡಿಬೆಟ್ಟ ತಪ್ಪಲಿನ ಹರಿಶ್ಚಂದ್ರ ಘಾಟ್‌ನಲ್ಲಿರುವ ವಿದ್ಯುತ್ ಚಿತಾಗಾರದಲ್ಲಿ ಯಾವುದೇ ವಿಧಿ–ವಿಧಾನಗಳಿಲ್ಲದೆ ಶನಿವಾರ ಮಧ್ಯಾಹ್ನ 2.30ರ ಸುಮಾರಿಗೆ ನೆರವೇರಿತು.

ಪತ್ನಿ, ಸಾಮಾಜಿಕ ಹೋರಾಟಗಾರ್ತಿ ಮೀರಾ ನಾಯಕ, ಪುತ್ರಿ ಕೀರ್ತಿ ಸೇರಿದಂತೆ ಕುಟುಂಬದವರು, ಆಪ್ತರು, ಒಡನಾಡಿಗಳು, ಶಿಷ್ಯರು, ಗಣ್ಯರು ಪಾಲ್ಗೊಂಡು ಕಂಬನಿ ಮಿಡಿದರು.

ರಂಗಕರ್ಮಿ ಎಚ್.ಜನಾರ್ದನ್ (ಜನ್ನಿ) ನೇತೃತ್ವದಲ್ಲಿ 'ಗಿಳಿಯು ಪಂಜಯ ದೊಳಿಲ್ಲ' ಮತ್ತು 'ಓ ನನ್ನ ಚೇತನ ಆಗು ನೀ ಅನಿಕೇತನ' ಗೀತೆಗಳನ್ನು ಹಾಡಿ ವಿದಾಯ ಸಮರ್ಪಿಸಿದರು.

ಶನಿವಾರ ಮಧ್ಯಾಹ್ನ 12.30 ರವರೆಗೆ ನಿವಾಸದಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು.

ಕಾಡಾನೆ ದಾಳಿ: ಮಹಿಳೆ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನ ಬನ್ನೇರುಘಟ್ಟ ಸಮೀಪದ ಹಕ್ಕಿಪಿಕ್ಕಿ ಕಾಲೊನಿ ಬಳಿ ಶನಿವಾರ ಸಂಜೆ ದನ ಮೇಯಿಸಲು ತೆರಳಿದ್ದ ಮಹಿಳೆಯೊಬ್ಬರು ಕಾಡಾನೆ ದಾಳಿಯಿಂದ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಹಕ್ಕಿಪಿಕ್ಕಿ ಕಾಲೊನಿ ನಿವಾಸಿ ನಾಗಮ್ಮ(46) ಮೃತ ಮಹಿಳೆ. ಹೊಲದಲ್ಲಿ ಹಸು ಮೇಯಿಸುತ್ತಿದ್ದ ನಾಗಮ್ಮ ಮೇಲೆ ಏಕಾಏಕಿ ದಾಳಿ ನಡೆಸಿದ ಕಾಡಾನೆ ಕಾಲಿನಿಂದ ತುಳಿದಿದ್ದು, ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ. ಕುಟುಂಬದವರ ಆಕ್ರಂದನ ಮುಗಿಲು ಮುಟ್ಟಿತ್ತು. ಅರಣ್ಯ ಇಲಾಖೆ ವಾಚರ್ ಕುಮಾರ್ ಈ ಘಟನೆ ನೋಡಿ ಮಾಹಿತಿ ನೀಡಿದ್ದಾರೆ. ಆನೆಗಳು ಗ್ರಾಮಗಳತ್ತ ಬರುವುದನ್ನು ಅರಣ್ಯ ಇಲಾಖೆ ತಡೆಯಬೇಕು. ಕಾಡಂಚಿನ ಗ್ರಾಮಗಳಲ್ಲಿ ಹೆಚ್ಚಿನ ಸಿಬ್ಬಂದಿಯನ್ನು ನಿಯೋಜಿಸಬೇಕು ಎಂದು ಕುಟುಂಬದವರು ಒತ್ತಾಯಿಸಿದ್ದಾರೆ.

ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್ ಅಭಿಮತ

'ಜ್ಞಾನ ಸಂವಹನಕ್ಕೆ ಇಂಗ್ಲಿಷ್ ತೆರೆದ ಕಿಟಕಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇಂಗ್ಲಿಷ್ ಭಾಷೆ ಬಳಕೆ ಬಗ್ಗೆ ಹಲವು ವರ್ಷಗಳಿಂದ ವಾಗ್ವಾದಗಳು ನಡೆಯುತ್ತಿವೆ. ಜಗತ್ತಿನ ಜ್ಞಾನ ಸಂವಹನಕ್ಕೆ, ದೇಶ ಭಾಷೆಗಳ ಸೂಕ್ಷ್ಮ ಸಂವೇದನಾಶೀಲತೆಯನ್ನು ಜಾಗತಿಕ ಮಟ್ಟದಲ್ಲಿ ಪ್ರಸ್ತುತಪಡಿಸಲು ಇಂಗ್ಲಿಷ್ ತೆರೆದ ಕಿಟಕಿ' ಎಂದು ನಿವೃತ್ತ ಐಎಎಸ್ ಅಧಿಕಾರಿ ಚಿರಂಜೀವಿ ಸಿಂಘ್ ಹೇಳಿದರು.

ಭಾರತೀಯ ವಿದ್ಯಾಭವನ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಲೇಖಕಿ ವನಮಾಲಾ ವಿಶ್ವನಾಥ್, ಶಿಕ್ಷಕಿ ಎಚ್.ಎಂ. ವನಿತಾ ಹಾಗೂ ವಿದ್ಯಾರ್ಥಿನಿ ಪ್ರಿನ್ಸಿ ಬಿಲ್ಲಾ ಅವರಿಗೆ 'ಭವನ್–ಜಾಕಿಯಾ ಶಂಕರ್ ಪಾಠಕ್ ಪ್ರಶಸ್ತಿ' ಪ್ರಶಸ್ತಿ ಪ್ರದಾನ ಮಾಡಿದರು. ಈ ಪ್ರಶಸ್ತಿಯನ್ನು ಸಾಹಿತ್ಯ, ಶಿಕ್ಷಣ ಹಾಗೂ ವಿದ್ಯಾರ್ಥಿ ವಿಭಾಗದಲ್ಲಿ ನೀಡಲಾಗಿದ್ದು, ಪ್ರಶಸ್ತಿಯು ಕ್ರಮವಾಗಿ ₹ 10 ಸಾವಿರ, ₹ 5 ಸಾವಿರ ಹಾಗೂ ₹ 3 ಸಾವಿರ ನಗದು ಒಳಗೊಂಡಿದೆ.

ಕಾರ್ಯಕ್ರಮದಲ್ಲಿ ಪ್ರಶಸ್ತಿ ಪುರಸ್ಕೃತರಾದ ಎಚ್.ಎಂ. ವನಿತಾ, ವನಮಾಲಾ ವಿಶ್ವನಾಥ್ ಹಾಗೂ ಪ್ರಿನ್ಸಿ ಬಿಲ್ಲಾ ಅವರ ಜತೆಗೆ (ನಿಂತಿರುವವರು ಎಡದಿಂದ) ಪ್ರಶಸ್ತಿಯ ದತ್ತಿ ದಾನಿ ಎಚ್.ಎನ್. ನರಸಿಂಹಮೂರ್ತಿ, ಭಾರತೀಯ ವಿದ್ಯಾ ಭವನದ ನಿರ್ದೇಶಕ ಎಚ್.ಎನ್. ಸುರೇಶ್, ಚಿರಂಜೀವಿ ಸಿಂಘ್ ಹಾಗೂ ಭಾರತೀಯ ವಿದ್ಯಾ ಭವನದ ಜಂಟಿ ನಿರ್ದೇಶಕಿ ನಾಗಲಕ್ಷ್ಮಿ ಕೆ. ರಾವ್ ಇದ್ದಾರೆ

'ಇಂಗ್ಲಿಷ್ ಹಿಂದೆ ಒಂದು ದೇಶದ ಒಂದೇ ಭಾಷೆಯಾಗಿತ್ತು. ಈಗ ಹಲವು ದೇಶಗಳ ಭಾಷೆಗಳು ತಮ್ಮ ಅಸ್ಮಿತೆಯ ಮೂಲಕ ಇಂಗ್ಲಿಷ್ ಭಾಷೆಯನ್ನು ಸಂಪರ್ಕವಾಗಿಸಿವೆ. ಭಾರತದಲ್ಲಿ ರಾಜಾರಾವ್, ಮುಲ್ಕ ರಾಜ್ ಆನಂದ್, ಶಶಿ ದೇಶಪಾಂಡೆ, ಆರ್.ಕೆ. ನಾರಾಯಣ್, ಸಲ್ಮಾನ್ ರಶ್ದಿ ಮುಂತಾದವರು ಇಂಗ್ಲಿಷ್ ಭಾಷೆಯ ಮೂಲಕ ಜಾಗತಿಕವಾಗಿ ಗುರುತಿಸಿಕೊಂಡಿದ್ದಾರೆ. ಹೊಸಗನ್ನಡದ ಆದ್ಯ ಲೇಖಕರಾದ ಬಿ.ಎಂ.ಶ್ರೀ. ಅವರು ಪಾಶ್ಚಿಮಾತ್ಯ ಸಾಹಿತ್ಯವನ್ನು ಕನ್ನಡದ್ದೇ ಸಂವೇದನೆಗಳ ಮೂಲಕ ಕಟ್ಟಿಕೊಟ್ಟಿದ್ದಾರೆ. ರವೀಂದ್ರನಾಥ ಟ್ಯಾಗೋರ್ ಅವರು ಪೌರಾತ್ಯ ಮತ್ತು ಪಾಶ್ಚಾತ್ಯ ಸಂಸ್ಕೃತಿಗಳನ್ನು ಹದವಾಗಿ ಬೆರೆಸಿದ ಉದಾಹರಣೆಯಾಗಿದ್ದಾರೆ' ಎಂದರು.

ಪ್ರಶಸ್ತಿ ಪುರಸ್ಕೃತೆ ವನಮಾಲಾ ವಿಶ್ವನಾಥ್, '1980-90ರ ದಶಕದಲ್ಲಿ ಇಂಗ್ಲಿಷ್ ಭಾಷೆಯ ಬಗ್ಗೆ ಕುತೂಹಲ ಹಾಗೂ ಆಸಕ್ತಿ ಇದ್ದವು. ಈಗ ಕನ್ನಡದ ಬಗ್ಗೆ ಅಂತದ್ದೇ ಭಾವನೆ ಉಂಟಾಗಿದೆ. ನಮ್ಮ ಒಂದು ಕಾಲು ಕನ್ನಡ ಎನ್ನುವುದಾದರೆ, ಮತ್ತೊಂದು ಕಾಲು ಇಂಗ್ಲಿಷ್ ಆಗಬೇಕು. ಈ ಎರಡೂ ಕಾಲುಗಳ ಮೇಲೆ ನಿಂತರೆ ಯಶಸ್ಸು ಸಾಧ್ಯ' ಎಂದು ಹೇಳಿದರು.

ಸಂಸ್ಕೃತ ವಿಶ್ವವಿದ್ಯಾಲಯದ ಕುಲಸಚಿವರಾಗಿ ನೇಮಕಗೊಂಡಿರುವ ಸುರೇಶ ನಾಯ್ಡು ಅವರನ್ನು ಗೌರವಿಸಲಾಯಿತು.

ಪಕ್ಷದ ಬಾವುಟ ಹಿಡಿದು ನೃತ್ಯ • ಪೊಲೀಸರೊಂದಿಗೆ ಮಾತಿನ ಚಕಮಕಿ

ಬೆಂಬಲಿಗರ ಸಂಭ್ರಮ, ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೂತನ ಸಚಿವರ ಪ್ರಮಾಣ ವಚನ ಕಾರ್ಯಕ್ರಮ ನಡೆದ ಸಂದರ್ಭದಲ್ಲಿ ರಾಜಭವನದ ಹೊರಗೆ ಸೇರಿದ್ದ ಬೆಂಬಲಿಗರು, ಸಚಿವರು ಹಾಗೂ ಕಾಂಗ್ರೆಸ್ ಪಕ್ಷದ ಪರ ಘೋಷಣೆ ಕೂಗಿ ಸಂಭ್ರಮಿಸಿದರು.

ಪ್ರಮಾಣ ವಚನ ಸ್ವೀಕರಿಸುವ ಸಚಿವರ ಪಟ್ಟಿ ಬಿಡುಗಡೆಯಾಗುತ್ತಿದ್ದಂತೆ ಶುಕ್ರವಾರ ರಾತ್ರಿಯೇ ತಮ್ಮೂರಿನಿಂದ ಹೊರಟಿದ್ದ ಬೆಂಬಲಿಗರು, ಶನಿವಾರ ಬೆಳಿಗ್ಗೆ ರಾಜಭವನದ ಎದುರು ಹಾಜರಾದರು. ಜನರು ಹೆಚ್ಚು ಸೇರುವ ಸಾಧ್ಯತೆ ಇದ್ದಿದ್ದರಿಂದ, ರಾಜಭವನದ ಎದುರಿನ ರಸ್ತೆಗಳಲ್ಲಿ ಬ್ಯಾರಿಕೇಡ್‌ಗಳನ್ನು ಅಳವಡಿ, ಪೊಲೀಸರನ್ನೂ ಹೆಚ್ಚಿನ ಸಂಖ್ಯೆಯಲ್ಲಿ ನಿಯೋಜಿಸಲಾಗಿತ್ತು.

ರಾಜಭವನ ಎದುರು ಹಾಗೂ ಸುತ್ತಮುತ್ತಲ ರಸ್ತೆಗಳಲ್ಲಿಯೂ ಸಾರ್ವಜನಿಕರ ವಾಹನಗಳ ಸಂಚಾರ ನಿರ್ಬಂಧಿಸಲಾಗಿತ್ತು. ಬ್ಯಾರಿಕೇಡ್ ಸ್ಥಳಗಳಲ್ಲಿ ಸೇರಿದ್ದ ಬೆಂಬಲಿಗರು, ಸಚಿವರ ಫೋಟೊ ಹಾಗೂ ಕಾಂಗ್ರೆಸ್ ಪಕ್ಷದ ಬಾವುಟ ಹಿಡಿದು ನೃತ್ಯ ಮಾಡಿದರು.

ಕೆಲವರು ಹೂವಿನ ಮಾಲೆಗಳನ್ನು ಜೊತೆಯಲ್ಲಿ ತಂದಿದ್ದರು. ಸಚಿವರು ಪ್ರಮಾಣ ವಚನ ಸ್ವೀಕರಿಸಿ ರಾಜಭವನದಿಂದ ಹೊರಗೆ ಬರುತ್ತಿದ್ದಂತೆ ಅವರಿಗೆ ಹೂವಿನ ಮಾಲೆ ಹಾಕಿ ಅಭಿನಂದಿಸಿದರು. ಇದೇ ವೇಳೆ ಸಚಿವರ ಜೊತೆಗೂ ಕೆಲವರು ಫೋಟೊ ತೆಗೆಸಿಕೊಂಡರು.

ಕೆಲ ಸಚಿವರ ಜೊತೆ ಬೆಂಬಲಿಗರೂ ರಾಜಭವನ ಒಳಗೆ ಹೊರಟಿದ್ದರು. ಅವರನ್ನು ಪೊಲೀಸರು ತಡೆದು ನಿಲ್ಲಿಸಿದರು. ಇದೇ ವೇಳೆ ನೂಕುನುಗ್ಗಲು ಉಂಟಾಯಿತು.

ಸಚಿವ ಸ್ಥಾನ ನೀಡಲು ಒತ್ತಾಯ: 'ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಂ.ಕೃಷ್ಣಪ್ಪ ಅವರಿಗೆ ಸಚಿವ ಸ್ಥಾನ ನೀಡಬೇಕು' ಎಂದು ಆಗ್ರಹಿಸಿ ಬೆಂಬಲಿಗರು ರಾಜಭವನ ಎದುರು ಪ್ರತಿಭಟನೆ ನಡೆಸಿದರು.

ಎಂ. ಕೃಷ್ಣಪ್ಪ ಹಾಗೂ ಅವರ ಪುತ್ರರಾದ ಗೋವಿಂದರಾಜನಗರ ಕ್ಷೇತ್ರದ ಶಾಸಕ ಪ್ರಿಯಕೃಷ್ಣ ಅವರ ಭಾವಚಿತ್ರ ಹಿಡಿದು ಬೆಂಬಲಿಗರು ಘೋಷಣೆ ಕೂಗಿದರು. ಪೊಲೀಸರು, ಬೆಂಬಲಿಗರನ್ನು ಸ್ಥಳದಿಂದ ಚದುರಿಸಿದರು.

ರಾಜಭವನ ಎದುರು ಪ್ರತಿಭಟನೆ ನಡೆಸಿದ ಶಾಸಕ ಎಂ. ಕೃಷ್ಣಪ್ಪ ಬೆಂಬಲಿಗರ ಜೊತೆ ಕೇಂದ್ರ ವಿಭಾಗದ ಡಿಸಿಪಿ ಶ್ರೀನಿವಾಸ್ ಗೌಡ ಮಾತುಕತೆ ನಡೆಸಿ, ಸ್ಥಳದಿಂದ ಬೇರೆಡೆ ಕಳುಹಿಸಿದರು – ಪ್ರಜಾವಾಣಿ ಚಿತ್ರ

ಸಚಿವರ ಕುಟುಂಬದವರಿಗೆ ಪ್ರವೇಶ ನಿರಾಕರಣೆ

ಸಚಿವರ ಪ್ರಮಾಣ ವಚನ ಕಾರ್ಯಕ್ರಮ ವೀಕ್ಷಣೆಗೆಂದು ರಾಜಭವನದೊಳಗೆ ಹೊರಟಿದ್ದ ಕುಟುಂಬದವರಿಗೆ ಪೊಲೀಸರು ಪ್ರವೇಶ ನಿರಾಕರಿಸಿದರು. ಇದರಿಂದಾಗಿ ಸ್ಥಳದಲ್ಲಿ ಕೆಲ ನಿಮಿಷ ಮಾತಿನ ಚಕಮಕಿ ನಡೆಯಿತು.

ಸಚಿವರಾದ ಶಿವರಾಜ ತಂಗಡಗಿ ಹಾಗೂ ಈಶ್ವರ ಖಂಡ್ರೆ ಕುಟುಂಬದವರು ಪಾಸ್ ಸಮೇತ ರಾಜಭವನ ಬಳಿ ಬಂದಿದ್ದರು. ಅವರನ್ನು ಅಡ್ಡಗಟ್ಟಿದ್ದ ಪೊಲೀಸ್ ಅಧಿಕಾರಿಯೊಬ್ಬರು, ಒಳಗೆ ಪ್ರವೇಶವಿಲ್ಲ ಎಂದರು. ಶಿವರಾಜ ತಂಗಡಗಿ ಅವರು, ತನ್ನ ತಂಗಿ ಮತ್ತು ಮಗ ಬಿಡಿ ಎಂದು ಗೋಗರೆದರೂ ಬಿಡಲಿಲ್ಲ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಸಚಿವರ ಕುಟುಂಬ, ಶಾಸಕರು ಹಾಗೂ ಆಪ್ತರಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು 'ರೆಡ್ ಪಾಸ್' ನೀಡಲಾಗಿತ್ತು. ಪಾಸ್ ಜತೆಗೆ ಎಲ್ಲರೂ ರಾಜಭವನಕ್ಕೆ ಬಂದಿದ್ದರು. ಒಳಬಿಡುವಂತೆ ತೋರಿಸಿದ ಪಾಸ್ ಕಸಿದುಕೊಂಡಿದ್ದ ಪೊಲೀಸ್ ಅಧಿಕಾರಿ, ಅದನ್ನು ಹರಿದು ಹಾಕಿದ ಘಟನೆಯೂ ನಡೆಯಿತು. ಇದನ್ನು ಪ್ರಶ್ನಿಸಿದ ಸಚಿವರ ಆಪ್ತರು, ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡರು. ಸ್ಥಳಕ್ಕೆ ಬಂದ ಹಿರಿಯ ಅಧಿಕಾರಿಗಳು, ಆಪ್ತರನ್ನು ಸಮಾಧಾನಪಡಿಸಿ ಪರಿಸ್ಥಿತಿ ತಿಳಿಗೊಳಿಸಿದರು.

ಪೊಲೀಸರ ಧೋರಣೆ ಖಂಡಿಸಿದ ಸಚಿವರ ಬೆಂಬಲಿಗರು ಮಾತಿನ ಚಕಮಕಿ ನಡೆಸಿದರು.

'ಅಸಮಾಧಾನ ಯಾವಾಗಲೂ ಇರುತ್ತದೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಚಿವ ಸಂಪುಟದಲ್ಲಿ ಹಳಬರು– ಹೊಸಬರು ಇಬ್ಬರೂ ಇದ್ದಾರೆ. ಮೊದಲ ಬಾರಿ ಗೆದ್ದ ಯಾರಿಗೂ ಸಚಿವ ಸ್ಥಾನ ನೀಡಿಲ್ಲ. ಹೀಗಾಗಿ ಕೊಡಗು, ಹಾಸನ, ಚಿಕ್ಕಮಗಳೂರು ಸೇರಿದಂತೆ ಕೆಲವು ಜಿಲ್ಲೆಗಳಿಗೆ ಸಂಪುಟದಲ್ಲಿ ಪ್ರಾತಿನಿಧ್ಯ ಸಿಕ್ಕಿಲ್ಲ. ಸಂಪುಟ ವಿಸ್ತರಣೆ ಸಂದರ್ಭದಲ್ಲಿ ಅಸಮಾಧಾನ, ಸಮಾಧಾನ ಯಾವಾಗಲೂ ಇರುತ್ತವೆ. ಅಸಮಾಧಾನದಲ್ಲೇ ಸಮಾಧಾನವೂ ಇರುತ್ತದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಸಂಪುಟದ ಎಲ್ಲ 34 ಸ್ಥಾನಗಳನ್ನೂ ಭರ್ತಿ ಮಾಡಲಾಗಿದೆ. ಆಡಳಿತಕ್ಕೆ ಹೊಸ ಸ್ವರೂಪ ನೀಡಲು ನಿರ್ಧರಿಸಿದ್ದೇವೆ. ಭಾನುವಾರದೊಳಗೆ ಖಾತೆ ಹಂಚಿಕೆ ಮಾಡಲಾಗುವುದು. ಪುಟ್ಟರಂಗಶೆಟ್ಟಿ ಜತೆ ಶುಕ್ರವಾರ ರಾತ್ರಿಯೇ ಮಾತನಾಡಿದ್ದೇನೆ. ಅವರು ವಿಧಾನಸಭೆಯ ಉಪಾಧ್ಯಕ್ಷ ಸ್ಥಾನ ಒಪ್ಪಿಕೊಂಡಿದ್ದಾರೆ. ಯಾವ ಅಸಮಾಧಾನವೂ ಇಲ್ಲ' ಎಂದು ಹೇಳಿದರು.

'ಡಿಕೆಶಿ ಸಿಎಂ ಆಗಲು ಒಂದು ಹೆಜ್ಜೆ ಬಾಕಿ': 'ಡಿ.ಕೆ.ಶಿವಕುಮಾರ್ ಕಾಂಗ್ರೆಸ್‌ನಲ್ಲಿ ಮುಖ್ಯಮಂತ್ರಿ ಆಗುತ್ತಾರೆ ಎಂದು ಒಕ್ಕಲಿಗ ಸಮುದಾಯ ಕಾಂಗ್ರೆಸ್ ಕಡೆ ಬಂತು. ಜೆಡಿಎಸ್‌ನ ಮತಗಳೆಲ್ಲ ಕಾಂಗ್ರೆಸ್‌ಗೆ ಬಂದಿವೆ. ಶಿವಕುಮಾರ್ ಅವರನ್ನು ಈಗ ಡಿಸಿಎಂ ಮಾಡಿದ್ದಾರೆ. ಮುಖ್ಯಮಂತ್ರಿಯಾಗಲು ಕೇವಲ ಒಂದು ಹೆಜ್ಜೆ ಮಾತ್ರ ಇದೆ' ಎಂದು ವಿಧಾನಪರಿಷತ್ತಿನ ಕಾಂಗ್ರೆಸ್ ಸದಸ್ಯ ಬಿ.ಕೆ. ಹರಿಪ್ರಸಾದ್ ಹೇಳಿದರು.

'ಒಕ್ಕಲಿಗ ಸಮುದಾಯದ ನಾಯಕತ್ವ ನಮಗೆ ಇರಲಿಲ್ಲ. ಶಿವಕುಮಾರ್ ಅವರನ್ನ ಕೆಪಿಸಿಸಿ ಅಧ್ಯಕ್ಷ ಮಾಡಿದಾಗ, ಅವರು ಮುಖ್ಯಮಂತ್ರಿ ಆಗುತ್ತಾರೆ ಎಂದಾಗ ಈ ಮತಗಳು ಬಂದವು. ಅದರ ಜತೆಗೆ ಮಲ್ಲಿಕಾರ್ಜುನ ಖರ್ಗೆ, ಪರಮೇಶ್ವರ, ಕೆ.ಎಚ್. ಮುನಿಯಪ್ಪನವರ ಕಾರಣಕ್ಕೆ ಆ ಸಮುದಾಯದವರ ಮತಗಳೂ ಬಂದಿವೆ' ಎಂದು ಹೇಳಿದರು.

ಕರಾವಳಿ ಭಾಗದ ಹಲವೆಡೆ ಮಳೆ

ಪ್ರಜಾವಾಣಿ ವಾರ್ತೆ

ಕಾರವಾರ: ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಭಾಗದ ತಾಲ್ಲೂಕುಗಳಲ್ಲಿ ಶನಿವಾರ ನಸುಕಿನ ಜಾವ ಮಳೆ ಸುರಿಯಿತು.

ಜಿಲ್ಲೆಯ ಕಾರವಾರ, ಕುಮಟಾ, ಭಟ್ಕಳದ ನಗರ ಮತ್ತು ಗ್ರಾಮಾಂತರ ಭಾಗದಲ್ಲಿ ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಸಾಧಾರಣ ಪ್ರಮಾಣದ ಮಳೆ ಸುರಿದಿತ್ತು. ಸೆಕೆಯಿಂದ ಕಂಗೆಟ್ಟಿದ್ದ ಜನತೆ ಮಳೆಯ ಸಿಂಚನದಿಂದ ನಿರಾಳರಾದರು.

'ಬ್ಯಾನರ್ ವಿವಾದ: ಹಲ್ಲೆ ಪ್ರಕರಣದಲ್ಲಿ ನಮ್ಮ ಪಾತ್ರ ಇಲ್ಲ'

ಮಂಗಳೂರು: 'ಪುತ್ತೂರಿನಲ್ಲಿ ಬ್ಯಾನರ್ ಹಾಕಿ ನನ್ನನ್ನು ಹಾಗೂ ಸಂಸದ ಸದಾನಂದಗೌಡ ಅವರನ್ನು ಅವಮಾನಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳ ಮೇಲೆ ಪೊಲೀಸರು ದೌರ್ಜನ್ಯ ನಡೆಸಿರುವುದನ್ನು ನಾನು ಈಗಾಗಲೇ ಖಂಡಿಸಿದ್ದೇನೆ. ಈ ಹಲ್ಲೆ ಪ್ರಕರಣದಲ್ಲಿ ನಮ್ಮ ಪಕ್ಷದ ಯಾವುದೇ ಪಾತ್ರ ಇಲ್ಲ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದರು.

ಪುತ್ತೂರು ಕ್ಷೇತ್ರದಲ್ಲಿ ಬಿಜೆಪಿ ವಿರುದ್ಧ ಬಂಡಾಯ ಎದ್ದು ಪಕ್ಷೇತರರಾಗಿ ಸ್ಪರ್ಧಿಸಿದ್ದ ಅರುಣ್ ಕುಮಾರ್ ಪುತ್ತಿಲ ಅವರು ಲೋಕಸಭೆ ಚುನಾವಣೆಗೆ ಸ್ಪರ್ಧಿಸುವುದಾಗಿ ಪ್ರಕಟಿಸಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಯಾರು ಬೇಕಾದರೂ ಚುನಾವಣೆಯಲ್ಲಿ ಸ್ಪರ್ಧಿಸಬಹುದು. ಪುತ್ತಿಲ ಅವರ ಬಗ್ಗೆ ಗೌರವ ಇದೆ. ಎಲ್ಲ ಭಿನ್ನಾಭಿಪ್ರಾಯಗಳನ್ನು ನಾವು ಸರಿಪಡಿಸಿಕೊಳ್ಳುತ್ತೇವೆ' ಎಂದರು.

ಕೈ– ಕಾಲು ಕಟ್ಟಿ ವೃದ್ಧೆ ಕೊಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ಠಾಣೆ ವ್ಯಾಪ್ತಿಯ ಮನೆಯೊಂದರಲ್ಲಿ ಒಂಟಿಯಾಗಿ ವಾಸವಿದ್ದ ಕಮಲಾ (82) ಎಂಬುವವರನ್ನು ದುಷ್ಕರ್ಮಿಗಳು ಶನಿವಾರ ಸಂಜೆ ಕೊಲೆ ಮಾಡಿದ್ದಾರೆ.

'ಸ್ಥಳೀಯ 2ನೇ ಹಂತದ ನಿವಾಸಿ ಕಮಲಾ, ಒಬ್ಬರೇ ಸ್ವಂತ ಮನೆಯಲ್ಲಿ ವಾಸವಿದ್ದರು. ಅವರ ಪತಿ ಕೆಲ ತಿಂಗಳ ಹಿಂದೆಯಷ್ಟೇ ತೀರಿಕೊಂಡಿದ್ದರು. ಮಕ್ಕಳು ಬೇರೆಡೆ ವಾಸವಿದ್ದಾರೆ' ಎಂದು ಪೊಲೀಸರು ಹೇಳಿದರು.

'ಮನೆಗೆ ನುಗ್ಗಿದ್ದ ದುಷ್ಕರ್ಮಿಗಳು, ಕಮಲಾ ಮೇಲೆ ಹಲ್ಲೆ ಮಾಡಿದ್ದಾರೆ. ನಂತರ, ಕೈ–ಕಾಲು ಕಟ್ಟಿಹಾಕಿ ಉಸಿರುಗಟ್ಟಿಸಿ ಕೊಲೆ ಮಾಡಿ ಪರಾರಿಯಾಗಿದ್ದಾರೆ.'

'ಮಾಹಿತಿ ಬರುತ್ತಿದ್ದಂತೆ ಸ್ಥಳಕ್ಕೆ ಹೋಗಿ ಮೃತದೇಹವನ್ನು ಆಸ್ಪತ್ರೆಗೆ ಸಾಗಿಸಲಾಗಿದೆ. ಪರಿಚಯಸ್ಥರೇ ಕೃತ್ಯ ಎಸಗಿರುವ ಅನುಮಾನವಿದ್ದು, ತನಿಖೆ ಮುಂದುವರಿಸಲಾಗಿದೆ. ಕೊಲೆ ಬಳಿಕ ದುಷ್ಕರ್ಮಿಗಳು, ಮನೆಯಲ್ಲಿದ್ದ ಚಿನ್ನಾಭರಣ ಹಾಗೂ ಇತರೆ ವಸ್ತುಗಳನ್ನು ತೆಗೆದುಕೊಂಡು ಹೋಗಿರುವ ಸಂಶಯವಿದೆ. ವೃದ್ಧೆಯ ಸಂಬಂಧಿಕರಿಂದ ಹೆಚ್ಚಿನ ಮಾಹಿತಿ ಪಡೆಯಬೇಕಿದೆ' ಎಂದು ಪೊಲೀಸರು ತಿಳಿಸಿದರು.

ಪಾರ್ಟಿ ವೇಳೆ ಕೊಲೆ: ರೌಡಿ ಬಂಧನ

ಅಪರಾಧ ಸುದ್ದಿ

ಬೆಂಗಳೂರು: ಕೆ.ಪಿ. ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಸಾಗರ್ ಅಲಿಯಾಸ್ ಚಿನ್ನು ಕೊಲೆ ಪ್ರಕರಣ ಸಂಬಂಧ, ರೌಡಿ ಸೇರಿ ಮೂವರನ್ನು ಪೊಲೀಸರು ಬಂಧಿಸಿದ್ದಾರೆ.

ರೌಡಿ ಕೆ. ನವೀನ್, ಸಹಚರರಾದ ಹೇಮಂತ್‌ಕುಮಾರ್ ಅಲಿಯಾಸ್ ರೋಸಿ ಹಾಗೂ ಡಿ. ಕುಮಾರ್ ಅಲಿಯಾಸ್ ಡಿಯೊ ಬಂಧಿತರು.

'ಮೇ 22ರಂದು ಚೆಲುವಪ್ಪ ಗಾರ್ಡನ್ ಬಳಿ ಸಾಗರ್ ಹಾಗೂ ಸ್ನೇಹಿತರು ಮದ್ಯದ ಪಾರ್ಟಿ ಮಾಡುತ್ತಿದ್ದರು. ಇದೇ ವೇಳೆಯೇ ಸ್ಥಳಕ್ಕೆ ಬಂದಿದ್ದ ರೌಡಿ ಕೆ. ನವೀನ್ ಹಾಗೂ ಇತರರು, ಜಗಳ ತೆಗೆದಿದ್ದರು. ಮಾತಿಗೆ ಮಾತು ಬೆಳೆದು ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು' ಎಂದು ಪೊಲೀಸರು ಹೇಳಿದರು.

'ಸಿಟ್ಟಾಗಿದ್ದ ರೌಡಿ ಹಾಗೂ ಇತರರು, ಸಾಗರ್ ಅವರ ಮುಖ ಹಾಗೂ ತಲೆಗೆ ಲಾಂಗ್‌ನಿಂದ ಹೊಡೆದು ಕೊಂದು ಪರಾರಿಯಾಗಿದ್ದರು. ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದರು. 'ಆರೋಪಿ ನವೀನ್ ಹೆಸರು ವಿಜಯನಗರ ಠಾಣೆಯ ರೌಡಿ ಪಟ್ಟಿಯಲ್ಲಿದೆ. ಸಾಗರ್ ಸಹ ಅಪರಾಧ ಹಿನ್ನೆಲೆಯುಳ್ಳವ. ಹಳೇ ವೈಷಮ್ಯ ಹಾಗೂ ವೈಯಕ್ತಿಕ ವರ್ಚಸ್ಸಿಗಾಗಿ ಈ ಕೊಲೆ ನಡೆದಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ಪೊಲೀಸರು ತಿಳಿಸಿದರು.

ಶಾಲೆ ಬಳಿ ತಂಬಾಕು ಉತ್ಪನ್ನ ಪೊಲೀಸರ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಶಾಲೆ-ಕಾಲೇಜು ಬಳಿ ಅಕ್ರಮವಾಗಿ ತಂಬಾಕು ಉತ್ಪನ್ನ ಮಾರಾಟ ಮಾಡುತ್ತಿದ್ದ ಮಳಿಗೆಗಳ ಮೇಲೆ ದಾಳಿ ಮಾಡಿ ಪರಿಶೀಲನೆ ನಡೆಸಿರುವ ಪೊಲೀಸರು, ತಪ್ಪಿತಸ್ಥರಿಗೆ ದಂಡ ವಿಧಿಸಿದ್ದಾರೆ.

'ಶಾಲಾ-ಕಾಲೇಜುಗಳು ಸದ್ಯದಲ್ಲೇ ಆರಂಭವಾಗಲಿವೆ. ಹೀಗಾಗಿ, ಶಾಲೆ-ಕಾಲೇಜು ಸುತ್ತಲಿನ 100 ಮೀಟರ್ ಅಂತರದಲ್ಲಿರುವ ಅಂಗಡಿಗಳಲ್ಲಿ ಪರಿಶೀಲನೆ ನಡೆಸಲು ಕಾರ್ಯಾಚರಣೆ ಆರಂಭಿಸಲಾಗಿದೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಈಶಾನ್ಯ ವಿಭಾಗದದಲ್ಲಿ 80 ಮಳಿಗೆಗಳಲ್ಲಿ ಪರಿಶೀಲನೆ ನಡೆಸಲಾಗಿದೆ. 72 ಮಳಿಗೆ ಮಾಲೀಕರಿಗೆ ದಂಡ ವಿಧಿಸಲಾಗಿದೆ. 8 ಮಾಲೀಕರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ'. 'ಪೂರ್ವ ವಿಭಾಗದ ಮಳಿಗೆಗಳಲ್ಲಿ ಪರಿಶೀಲನೆ ನಡೆಸಿ, 170 ಮಾಲೀಕರಿಗೆ 32,400 ದಂಡ ವಿಧಿಸಲಾಗಿದೆ. 11 ಎಫ್‌ಐಆರ್ ದಾಖಲಿಸಿಕೊಂಡು, ಮಾಲೀಕರಿಗೆ ನೋಟಿಸ್ ನೀಡಲಾಗಿದೆ' ಎಂದು ತಿಳಿಸಿದರು.

ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದ ಯುವಕ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವಿಂದರಾಜನಗರ ಠಾಣೆ ವ್ಯಾಪ್ತಿಯ ಪೇಯಿಂಗ್ ಗೆಸ್ಟ್ (ಪಿಜಿ) ಕಟ್ಟಡವೊಂದರ ಕೊಠಡಿಯಲ್ಲಿ ಅಭಿಷೇಕ್ (19) ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

'ಬೀದರ್ ಜಿಲ್ಲೆಯ ಅಭಿಷೇಕ್, ಬಿ.ಎಸ್ಸಿ ವ್ಯಾಸಂಗ ಮಾಡುತ್ತಿದ್ದರು. ಅದರ ಜೊತೆಯಲ್ಲೇ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ತಯಾರಿ ನಡೆಸಲೆಂದು ತಿಂಗಳ ಹಿಂದೆಯಷ್ಟೇ ಬೆಂಗಳೂರಿಗೆ ಬಂದಿದ್ದರು' ಎಂದು ಪೊಲೀಸರು ಹೇಳಿದರು.'ಸಂಬಂಧಿಕರ ಮನೆಯಲ್ಲಿ ಕೆಲ ದಿನ ಅಭಿಷೇಕ್ ಉಳಿದುಕೊಂಡಿದ್ದರು. ಅಧ್ಯಯನಕ್ಕೆ ಅನುಕೂಲವಾಗಲೆಂದು ಮಾರೇನಹಳ್ಳಿಯ ಪಿಜಿಗೆ ಸ್ಥಳಾಂತರವಾಗಿದ್ದರು. 'ಶನಿವಾರ ಬೆಳಿಗ್ಗೆ ಅಭಿಷೇಕ್, ನೇಣು ಹಾಕಿಕೊಂಡು ಆತ್ಮಹತ್ಯೆಗೆ ಶರಣಾಗಿದ್ದಾರೆ. ಕೆಲ ಹೊತ್ತಿನ ನಂತರ ಸ್ನೇಹಿತರು ಕೊಠಡಿಗೆ ಬಂದಾಗ ವಿಷಯ ಗೊತ್ತಾಗಿದೆ. ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಎರಡು ದಿನಗಳಿಂದ ಅಭಿಷೇಕ್ ಮೊಬೈಲ್ ಬಳಸಿಲ್ಲ. ಆತ್ಮಹತ್ಯೆಗೆ ಕಾರಣವೇನು ಎಂಬುದು ಗೊತ್ತಾಗಿಲ್ಲ, ಪೋಷಕರಿಗೆ ಮಾಹಿತಿ ನೀಡಲಾಗಿದೆ' ಎಂದರು.

₹1.26 ಕೋಟಿ ಸುಲಿಗೆ: ಬೆನ್ನುಬಿದ್ದ ಸಿಐಡಿ

'ಸಿನಿಮಾ ರೇಟಿಂಗ್' ವಂಚನೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಟೆಲಿಗ್ರಾಂ ಆ್ಯಪ್ ಮೂಲಕ ಸಂದೇಶ ಕಳುಹಿಸಿ ಮೋಸ
- ಪ್ರತಿ ಟಿಕೆಟ್‌ಗೆ ₹ 9,900 ಹೂಡಿಕೆ ಮಾಡಲು ಬೇಡಿಕೆ

ಬೆಂಗಳೂರು: 'ಹೊಸದಾಗಿ ಬಿಡುಗಡೆ ಆಗುವ ಸಿನಿಮಾಗಳಿಗೆ ರೇಟಿಂಗ್ ನೀಡಿದರೆ ಹೆಚ್ಚು ಲಾಭ ನೀಡುತ್ತೇವೆ' ಎಂಬ ಆಮಿಷವೊಡ್ಡಿ ನಗರದ ನಿವಾಸಿಯೊಬ್ಬರಿಂದ ₹ 1.26 ಕೋಟಿ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಸಿಐಡಿ ಸೈಬರ್ ವಿಭಾಗದಲ್ಲಿ ಪ್ರಕರಣ ದಾಖಲಾಗಿದೆ.

'ಗಾಯತ್ರಿ ಪಾರ್ಕ್ ಎಕ್ಸ್‌ಟೆನ್ಶನ್ ನಿವಾಸಿಯಾಗಿರುವ 48 ವರ್ಷದ ವ್ಯಕ್ತಿಯೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿಗಳಾದ ಸುರ್ಜಿತ್, ಸ್ನೇಹಾ ರಾಯ್, ದೀಪಾ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಸಿನಿಮಾ ರೇಟಿಂಗ್ ವಂಚನೆ ಜಾಲದ ಬಗ್ಗೆ ತನಿಖೆ ಮುಂದುವರಿಸಲಾಗಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ದೂರುದಾರರಿಗೆ ಟೆಲಿಗ್ರಾಂ ಆ್ಯಪ್ ಮೂಲಕ ಸಂದೇಶ ಕಳುಹಿಸಿದ್ದ ಆರೋಪಿ ದೀಪಾ, 'ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಲಾಭ ಪಡೆಯಬಹುದು' ಎಂದಿದ್ದರು. ಅದನ್ನು ನಂಬಿದ್ದ ದೂರುದಾರ, ದೀಪಾ ಅವರನ್ನು ಸಂಪರ್ಕಿಸಿದ್ದರು. ಸಿನಿಮಾ ರೇಟಿಂಗ್ ಬಗ್ಗೆ ಪ್ರಸ್ತಾಪಿಸಿದ್ದ ದೀಪಾ, ಕಡಿಮೆ ಸಮಯದಲ್ಲಿ ಹೆಚ್ಚು ಸಂಪಾದನೆ ಮಾಡಬಹುದೆಂದು ಆಮಿಷವೊಡ್ಡಿದ್ದರು' ಎಂದು ತಿಳಿಸಿವೆ.

'ಇಮ್ಯಾಜಿನ್ ಎಂಟರ್‌ಟೈನ್‌ಮೆಂಟ್ ಹೆಸರಿನ ಜಾಲತಾಣದಲ್ಲಿ ಟಿಕೆಟ್ ಖರೀದಿ ಮಾಡಬೇಕು. ಟಿಕೆಟ್‌ನಲ್ಲಿರುವ ಕೋಡ್ ಬಳಸಿ, ಸಿನಿಮಾಗಳಿಗೆ ರೇಟಿಂಗ್ ನೀಡಬೇಕು. ಪ್ರತಿ ಟಿಕೆಟ್‌ಗೆ ₹ 9,900 ಹೂಡಿಕೆ ಮಾಡಬೇಕು. ರೇಟಿಂಗ್ ನೀಡಿದ ಕೆಲ ದಿನಗಳ ಬಳಿಕ ದುಪ್ಪಟ್ಟು ಹಣ ಸಿಗುತ್ತದೆ' ಎಂದು ದೀಪಾ ಪುನಃ ಹೇಳಿದ್ದರು'

'ಆರೋಪಿ ಮಾತು ನಂಬಿದ್ದ ದೂರುದಾರ, ಜಾಲತಾಣದಲ್ಲಿ ಖಾತೆ ತೆರೆದು ಆರಂಭದಲ್ಲಿ ಕೆಲ ಟಿಕೆಟ್ ಖರೀದಿಸಿದ್ದರು. ಇದಕ್ಕಾಗಿ ಹಣ ಜಮೆ ಮಾಡಿದ್ದರು. ಇದಕ್ಕೆ ಲಾಭವೆಂದು ಹೇಳಿ ಆರೋಪಿಗಳು, ₹ 8.81 ಲಕ್ಷವನ್ನು ಖಾತೆಗೆ ಹಾಕಿದ್ದರು. ಕೆಲ ನಿಮಿಷಗಳಲ್ಲಿ ಹಣವನ್ನು ವಾಪಸು ಪಡೆದಿದ್ದರು. ಇದನ್ನು ಪ್ರಶ್ನಿಸಿದ್ದಕ್ಕೆ ಕೆಲ ಶುಲ್ಕ ಪಾವತಿ ಮಾಡಬೇಕೆಂದು ಹೇಳಿದ್ದರು. ಅದನ್ನೂ ನಂಬಿ ದೂರುದಾರ, ಹಂತ ಹಂತವಾಗಿ ₹ 1.26 ಕೋಟಿ ಪಾವತಿಸಿದ್ದರು. ಇದಾದ ನಂತರ, ಆರೋಪಿಗಳು ನಾಪತ್ತೆಯಾಗಿದ್ದಾರೆ' ಎಂದು ಮೂಲಗಳು ಹೇಳಿವೆ.

'ಸಿನಿಮಾ ರೇಟಿಂಗ್ ಹೆಸರಿನಲ್ಲಿ ಜನರನ್ನು ವಂಚಿಸುವ ಜಾಲ ಸಕ್ರಿಯವಾಗಿದೆ. ಹೊರ ರಾಜ್ಯಗಳಲ್ಲಿರುವ ಆರೋಪಿಗಳು, ನಕಲಿ ಖಾತೆಗಳನ್ನು ಬಳಸಿಕೊಂಡು ಕೃತ್ಯ ಎಸಗುತ್ತಿರುವ ಮಾಹಿತಿ ಇದೆ' ಎಂದು ಸಿಐಡಿ ಮೂಲಗಳು ತಿಳಿಸಿವೆ.

ಸಿದ್ದರಾಮಯ್ಯ ಸರ್ಕಾರಕ್ಕೆ

ಹೊಸ ಸೇರ್ಪಡೆ

24 ಸಚಿವರ ಪೂರ್ವಾಪರ

ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ಮೊದಲ ಸಂಪುಟ ವಿಸ್ತರಣೆ ಶನಿವಾರ (27ರಂದು) ರಾಜಭವನದಲ್ಲಿ ನಡೆಯಿತು. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ನೂತನ ಸಚಿವರಿಗೆ ಪ್ರಮಾಣವಚನ ಬೋಧಿಸಿದರು. ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ವೇದಿಕೆಯಲ್ಲಿದ್ದರು




ಹೆಸರು	ಎಚ್.ಕೆ.ಪಾಟೀಲ	ಕೃಷ್ಣ ಬೈರೇಗೌಡ	ಎನ್.ಚಲುವರಾಯಸ್ವಾಮಿ	ಕೆ.ವೆಂಕಟೇಶ್	ಡಾ.ಎಚ್.ಸಿ.ಮಹದೇವಪ್ಪ	ಈಶ್ವರ ಖಂಡ್ರೆ	ಕೆ.ಎನ್.ರಾಜಣ್ಣ	ದಿನೇಶ್ ಗುಂಡೂರಾವ್
ವಿದ್ಯಾರ್ಹತೆ	ಬಿಎಸ್‌ಸಿ, ಎಲ್‌ಎಲ್‌ಬಿ (ಸ್ಪೆಷಲ್)	ಎಂ.ಎ	ಡಿಪ್ಲೊಮಾ	ಬಿ.ಎಸ್ಸಿ.	ಎಂಬಿಬಿಎಸ್	ಬಿ.ಇ (ಮೆಕ್ಯಾನಿಕಲ್ ಎಂಜಿನಿಯರಿಂಗ್)	ಕಾನೂನು ಪದವಿ	ಬಿ.ಇ
ವಯಸ್ಸು, ಜಾತಿ	70 ವರ್ಷ, ನಾಮಧಾರಿ ರೆಡ್ಡಿ	50 ವರ್ಷ, ಒಕ್ಕಲಿಗ	63 ವರ್ಷ, ಒಕ್ಕಲಿಗ	74 ವರ್ಷ, ಒಕ್ಕಲಿಗ	70 ವರ್ಷ, ಪರಿಶಿಷ್ಟ ಜಾತಿ (ಬಲಗೈ)	61 ವರ್ಷ, ಲಿಂಗಾಯತ	72 ವರ್ಷ, ವಾಲ್ಮೀಕಿ	53 ವರ್ಷ, ಬ್ರಾಹ್ಮಣ
ಕ್ಷೇತ್ರ	ಗದಗ	ಬ್ಯಾಟರಾಯನಪುರ	ನಾಗಮಂಗಲ (ಮಂಡ್ಯ ಜಿಲ್ಲೆ)	ಪಿರಿಯಾಪಟ್ಟಣ	ತಿ.ನರಸೀಪುರ	ಭಾಲ್ಕಿ	ಮಧುಗಿರಿ (ತುಮಕೂರು ಜಿಲ್ಲೆ)	ಗಾಂಧಿನಗರ
ಎಷ್ಟನೇ ಬಾರಿ ಶಾಸಕ	3ನೇ ಬಾರಿ	6ನೇ ಬಾರಿ	4ನೇ ಬಾರಿ	6ನೇ ಬಾರಿ	6ನೇ ಬಾರಿ	4ನೇ ಬಾರಿ	3ನೇ ಬಾರಿ	6ನೇ ಬಾರಿ
ಹಿಂದೆ ನಿರ್ವಹಿಸಿದ್ದ ಖಾತೆ	ಜವಳಿ, ಜಲಸಂಪನ್ಮೂಲ, ಕೃಷಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್	ಕೃಷಿ, ಗ್ರಾಮೀಣಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳು	ಆರೋಗ್ಯ, ಸಾರಿಗೆ	ಮೊದಲ ಬಾರಿಗೆ ಸಚಿವ	ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್, ಆರೋಗ್ಯ, ಪಿಡಬ್ಲ್ಯುಡಿ	ಪೌರಾಡಳಿತ	ಮೊದಲ ಬಾರಿಗೆ ಸಚಿವ	ಆಹಾರ ಮತ್ತು ನಾಗರಿಕ ಪೂರೈಕೆ









ಹೆಸರು	ಶರಣಬಸಪ್ಪ ದರ್ಶನಾಪುರ	ಶಿವಾನಂದ ಪಾಟೀಲ	ಆರ್.ಬಿ. ತಿಮ್ಮಾಪುರ	ಎಸ್.ಎಸ್. ಮಲ್ಲಿಕಾರ್ಜುನ್	ಶಿವರಾಜ ತಂಗಡಗಿ	ಡಾ.ಶರಣಪ್ರಕಾಶ ಪಾಟೀಲ	ಮಂಕಾಳ ವೈದ್ಯ	ಲಕ್ಷ್ಮೀ ಹೆಬ್ಬಾಳಕರ
ವಿದ್ಯಾರ್ಹತೆ	ಬಿ.ಇ (ಸಿವಿಲ್ ಎಂಜಿನಿಯರಿಂಗ್)	ಔಷಧ ವಿಜ್ಞಾನ ವಿಷಯದಲ್ಲಿ ಡಿಪ್ಲೊಮಾ	ಎಲ್ ಎಲ್ ಬಿ	ಬಿ.ಕಾಂ.	ಬಿಎಸ್‌ಸಿ	ಎಂಬಿಬಿಎಸ್, ಎಂ.ಡಿ	8ನೇ ತರಗತಿ	ಎಂ.ಎ (ರಾಜ್ಯಶಾಸ್ತ್ರ)
ವಯಸ್ಸು, ಜಾತಿ	63 ವರ್ಷ, ರೆಡ್ಡಿ ಲಿಂಗಾಯತ	61 ವರ್ಷ, ಪಂಚಮಸಾಲಿ ಲಿಂಗಾಯತ	61 ವರ್ಷ, ಪರಿಶಿಷ್ಟ ಜಾತಿ (ಎಡಗೈ)	56 ವರ್ಷ, ಸಾದರ ಲಿಂಗಾಯತ	52 ವರ್ಷ, ಭೋವಿ	55 ವರ್ಷ, ಲಿಂಗಾಯತ	51 ವರ್ಷ, ಮೊಗೇರ (ಮೀನುಗಾರ)	48 ವರ್ಷ, ಪಂಚಮಸಾಲಿ ಲಿಂಗಾಯತ
ಕ್ಷೇತ್ರ	ಶಹಾಪುರ (ಯಾದಗಿರಿ ಜಿಲ್ಲೆ)	ಬಸವನ ಬಾಗೇವಾಡಿ	ಮುಧೋಳ (ಎಸ್‌ಸಿ ಮೀಸಲು ಕ್ಷೇತ್ರ)	ದಾವಣಗೆರೆ ಉತ್ತರ	ಕನಕಗಿರಿ ಮೀಸಲು ಕ್ಷೇತ್ರ	ಸೇಡಂ	ಭಟ್ಕಳ	ಬೆಳಗಾವಿ ಗ್ರಾಮೀಣ
ಎಷ್ಟನೇ ಬಾರಿ ಶಾಸಕ	5ನೇ ಬಾರಿ	6ನೇ ಬಾರಿ	3ನೇ ಬಾರಿ	4ನೇ ಬಾರಿ	3ನೇ ಬಾರಿ	4ನೇ ಬಾರಿ	2ನೇ ಬಾರಿ	2ನೇ ಬಾರಿ
ಹಿಂದೆ ನಿರ್ವಹಿಸಿದ್ದ ಖಾತೆ	ಇಂಧನ ಮತ್ತು ಕೃಷಿ ಮಾರುಕಟ್ಟೆ	ಆರೋಗ್ಯ ಮತ್ತು ಕುಟುಂಬ ಕಲ್ಯಾಣ	ಆಹಾರ ಮತ್ತು ನಾಗರಿಕ ಸರಬರಾಜು, ಸಕ್ಕರೆ, ಬಂದರು, ಒಳನಾಡು ಜಲ ಸಾರಿಗೆ	ಯುವಜನ ಸೇವೆ–ಕ್ರೀಡೆ, ತೋಟಗಾರಿಕೆ– ಕೃಷಿ ಮಾರುಕಟ್ಟೆ	ಸಣ್ಣ ನೀರಾವರಿ	ವೈದ್ಯಕೀಯ ಶಿಕ್ಷಣ	ಮೊದಲ ಬಾರಿಗೆ ಸಚಿವ	ಮೊದಲ ಬಾರಿಗೆ ಸಚಿವೆ



ಹೆಸರು	ರಹೀಂ ಖಾನ್	ಡಿ. ಸುಧಾಕರ್	ಸಂತೋಷ ಎಸ್. ಲಾಡ್	ಎನ್.ಎಸ್. ಬೋಸರಾಜು	ಬೈರತಿ ಸುರೇಶ್	ಎಸ್. ಮಧು ಬಂಗಾರಪ್ಪ	ಡಾ.ಎಂ.ಸಿ.ಸುಧಾಕರ್	ಬಿ. ನಾಗೇಂದ್ರ
ವಿದ್ಯಾರ್ಹತೆ	ಎಸ್ಎಸ್ಎಲ್‌ಸಿ	ಬಿ.ಕಾಂ	ಬಿ.ಕಾಂ.	ಬಿ.ಎಸ್‌ಸಿ	ಪಿಯುಸಿ	ಬಿ.ಎ	ಎಂ.ಬಿ.ಬಿ.ಎಸ್	ಬಿ.ಕಾಂ ಪದವಿ
ವಯಸ್ಸು, ಜಾತಿ	56 ವರ್ಷ, ಮುಸ್ಲಿಂ	63 ವರ್ಷ, ಜೈನ	53 ವರ್ಷ, ಮರಾಠ	76 ವರ್ಷ, ರಾಜು ಕ್ಷತ್ರಿಯ	51 ವರ್ಷ, ಕುರುಬ	56 ವರ್ಷ, ಈಡಿಗ	54 ವರ್ಷ, ಒಕ್ಕಲಿಗ	52 ವರ್ಷ, ಎಸ್.ಟಿ (ವಾಲ್ಮೀಕಿ)
ಕ್ಷೇತ್ರ	ಬೀದರ್	ಹಿರಿಯೂರು	ಕಲಘಟಗಿ	ಎರಡೂ ಸದನದ ಸದಸ್ಯರಲ್ಲ	ಹೆಬ್ಬಾಳ	ಸೊರಬ	ಚಿಂತಾಮಣಿ (ಚಿಕ್ಕಬಳ್ಳಾಪುರ ಜಿಲ್ಲೆ)	ಬಳ್ಳಾರಿ ಗ್ರಾಮೀಣ
ಎಷ್ಟನೇ ಬಾರಿ ಶಾಸಕ	4ನೇ ಬಾರಿ	4ನೇ ಬಾರಿ	4ನೇ ಬಾರಿ	3 ಬಾರಿ ಶಾಸಕರಾಗಿದ್ದರು	2ನೇ ಬಾರಿ	2ನೇ ಬಾರಿ	3ನೇ ಬಾರಿ	4ನೇ ಬಾರಿ
ಹಿಂದೆ ನಿರ್ವಹಿಸಿದ್ದ ಖಾತೆ	ಯುವಜನ ಮತ್ತು ಕ್ರೀಡೆ	ಸಮಾಜ ಕಲ್ಯಾಣ ಹಾಗೂ ಮುಜರಾಯಿ ಖಾತೆ	ಕಾರ್ಮಿಕ ಮತ್ತು ಕೌಶಲ ಅಭಿವೃದ್ಧಿ ಸಚಿವ	ಮೊದಲ ಬಾರಿಗೆ ಸಚಿವ	ಮೊದಲ ಬಾರಿಗೆ ಸಚಿವ	ಮೊದಲ ಬಾರಿಗೆ ಸಚಿವ	ಮೊದಲ ಬಾರಿಗೆ ಸಚಿವ	ಮೊದಲ ಬಾರಿಗೆ ಸಚಿವ

ಸಿ.ಎಂ ಮೇಲುಗೈ, ಕೈತಪ್ಪಿದವರ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸಚಿವ ಸಂಪುಟಕ್ಕೆ ತಮ್ಮ ಆಪ್ತರನ್ನು ಸೇರಿಸಿಕೊಳ್ಳುವಲ್ಲಿ ಸಿದ್ದರಾಮಯ್ಯ ಮೇಲುಗೈ ಸಾಧಿಸಿದ್ದಾರೆ. ಸಂಪುಟ ರಚನೆ, ವಿಸ್ತರಣೆಯಲ್ಲಿ ಮುಖ್ಯಮಂತ್ರಿಗಿರುವ ಪರಮಾಧಿಕಾರ ಬಳಸಿ, ಜೊತೆಗೆ ನಿಂತ ಬೆಂಬಲಿಗರಿಗೆ ಸ್ಥಾನ ಕೊಡಿಸುವಲ್ಲಿ ಅವರು ಯಶಸ್ವಿಯಾಗಿದ್ದಾರೆ.

ಆಕಾಂಕ್ಷಿಗಳನ್ನು ಸಮಾಧಾನಪಡಿಸಲು ಹಿಂದಿನ ದಿನಮಾನಗಳಲ್ಲಿ ಎರಡು–ಮೂರು ಸಚಿವ ಸ್ಥಾನಗಳನ್ನು ಖಾಲಿ ಇಟ್ಟುಕೊಳ್ಳಲಾಗುತ್ತಿತ್ತು. ಹೀಗಾಗಿ, ಆಕಾಂಕ್ಷಿಗಳು ಮತ್ತೆ ಅವಕಾಶ ಸಿಗಬಹುದೆಂಬ ನಿರೀಕ್ಷೆಯಲ್ಲಿರುತ್ತಿದ್ದರು. ಈ ಬಾರಿ ಸಂಪುಟ ಸಂಖ್ಯಾಬಲದ ಎಲ್ಲ ಸ್ಥಾನಗಳನ್ನೂ ಭರ್ತಿ ಮಾಡಲಾಗಿದೆ. ಹೀಗಾಗಿ, ಅವಕಾಶ ಕೈತಪ್ಪಿದವರು ತಮ್ಮ ಅಸಮಾಧಾನವನ್ನು ಹೊರಗೆಡಹಿದ್ದಾರೆ. ಆಕಾಂಕ್ಷಿಗಳ ಬೆಂಬಲಿಗರು ರಾಜ್ಯದ ಕೆಲವೆಡೆ ಪ್ರತಿಭಟನೆಗಳನ್ನೂ ನಡೆಸಿದ್ದಾರೆ.

‘ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕರಾಗಿದ್ದವರನ್ನು ಸಚಿವರನ್ನಾಗಿ ಮಾಡುವ ಸಂಪ್ರದಾಯ ಹಿಂದಿನಿಂದಲೂ ಇತ್ತು. ಮುಖ್ಯಮಂತ್ರಿ ಆ ಸಂಪ್ರದಾಯ ಮುರಿದಿದ್ದಾರೆ. ಸಚಿವ ಸ್ಥಾನ ಮುಖ್ಯಮಂತ್ರಿಯ ಪರಮಾಧಿಕಾರ. ನಾನೆಂದೂ ಸಚಿವ ಸ್ಥಾನ ಬೇಕು ಎಂದು ಕೇಳಿಲ್ಲ. ಪರಿಷತ್‌ನಲ್ಲಿ ಸಭಾನಾಯಕರನ್ನಾಗಿ ಯಾರನ್ನು ಮಾಡಬೇಕೆಂದು ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿಯವರನ್ನೇ ಕೇಳಿ’ ಎಂದು ಬಿ.ಕೆ. ಹರಿಪ್ರಸಾದ್ ಹೇಳಿದರು.

ಪಟ್ಟಿಯಲ್ಲಿ ಹೆಸರಿತ್ತು: ‘ದೆಹಲಿಯಲ್ಲಿ ವಿಮಾನ ಹತ್ತುವವರೆಗೂ ಸಂಭವನೀಯರ ಪಟ್ಟಿಯಲ್ಲಿ ನನ್ನ ಹೆಸರಿತ್ತು. ಆ ನಂತರ ಏನಾಯಿತೆಂದು ಗೊತ್ತಿಲ್ಲ’ ಎಂದು ಟಿ.ಬಿ. ಜಯಚಂದ್ರ ಆಕ್ರೋಶ ವ್ಯಕ್ತಪಡಿಸಿದರು.

ನನಗೆ ಬೇಸರ ತಂದಿದೆ: ‘ವಿಧಾನ ಪರಿಷತ್‌ನ ಮೂವರು ಸದಸ್ಯರಿಗೆ ಸಚಿವ ಸ್ಥಾನ ನೀಡುವ ಕುರಿತು ಚರ್ಚೆ ನಡೆದಿತ್ತು. ಆದರೆ, ಪರಿಷತ್‌ನಿಂದ ಯಾರನ್ನೂ ಪರಿಗಣಿಸಿಲ್ಲ. ಇದು ನನಗೆ ಬೇಸರ ತಂದಿದೆ’ ಎಂದು ಪರಿಷತ್ ಸದಸ್ಯ ಸಲೀಂ ಅಹಮ್ಮದ್ ಅಸಮಾಧಾನ ಹೊರಹಾಕಿದರು.

ವಿಜಯನಗರ ವಿಧಾನಸಭಾ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಅವರ ಪುತ್ರ, ಗೋವಿಂದರಾಜ ನಗರ ಕ್ಷೇತ್ರದ ಶಾಸಕ ಪ್ರಿಯಕೃಷ್ಣ ಅವರ ಭಾವಚಿತ್ರ ಹಿಡಿದು ಬೆಂಬಲಿಗರು ರಾಜಭವನದ ಎದುರು ಘೋಷಣೆ ಕೂಗಿದರು.

ಮೈಸೂರಿನ ಗಾಂಧಿ ಪ್ರತಿಮೆ ಎದುರು ಧರಣಿ ನಡೆಸಿದ ತನ್ವೀರ್ ಸೇಠ್ ಬೆಂಬಲಿಗರು, ‘ಸತತ ಆರು ಬಾರಿ ಗೆದ್ದಿದ್ದರೂ ಸಚಿವ ಸ್ಥಾನ ನೀಡದಿರುವುದು ಸರಿಯಲ್ಲ’ ಎಂದರು. ಚಾಮರಾಜನಗರದಲ್ಲಿ ಪ್ರತಿಭಟನೆ ನಡೆಸಿದ ಉಪ್ಪಾರ ಸಮಾಜದ ಮುಖಂಡರು, ‘ರಾಜ್ಯದಲ್ಲಿ 40 ಲಕ್ಷದಷ್ಟು ಜನರಿರುವ ಸಮಾಜದ ಏಕೈಕ ಪ್ರತಿನಿಧಿ ಪುಟ್ಟರಂಗಶೆಟ್ಟರ ಹೆಸರನ್ನು ಕೈಬಿಟ್ಟು ಅನ್ಯಾಯ ಮಾಡಲಾಗಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೊಡಗು ಜಿಲ್ಲೆಗೆ ಪ್ರಾತಿನಿಧ್ಯ ಸಿಗದಿರುವುದಕ್ಕೆ ಅಸಮಾಧಾನ ಹೊರಹಾಕಿದ ವಿರಾಜಪೇಟೆ ಶಾಸಕ ಎ.ಎಸ್. ಪೊನ್ನಣ್ಣ, ‘ಕೊಡಗಿಗೆ ಅನ್ಯಾಯವಾಗಿದೆ. ಮುಂದಿನ ದಿನಗಳಲ್ಲಿ ನ್ಯಾಯ ಸಿಗುವ ನಿರೀಕ್ಷೆಯಿದೆ’ ಎಂದರು.

ಮೊದಲ ಬಾರಿ ಸಚಿವರಾದವರು

- ಕೆ.ಎಚ್.ಮುನಿಯಪ್ಪ (ದೇವನಹಳ್ಳಿ)*
- ಮಧು ಬಂಗಾರಪ್ಪ (ಸೊರಬ)
- ಕೆ.ಎನ್. ರಾಜಣ್ಣ (ಮಧುಗಿರಿ)
- ಮಂಕಾಳ ವೈದ್ಯ (ಭಟ್ಕಳ)
- ಲಕ್ಷ್ಮೀ ಹೆಬ್ಬಾಳಕರ (ಬೆಳಗಾವಿ ಗ್ರಾಮೀಣ)
- ಎನ್.ಎಸ್. ಬೋಸರಾಜು (ರಾಯಚೂರು ಜಿಲ್ಲೆಯ ಕಾಂಗ್ರೆಸ್ ಮುಖಂಡ)
- ಬೈರತಿ ಸುರೇಶ್ (ಹೆಬ್ಬಾಳ)
- ಎಂ.ಸಿ.ಸುಧಾಕರ್ (ಚಿಂತಾಮಣಿ)
- ಬಿ.ನಾಗೇಂದ್ರ (ಬಳ್ಳಾರಿ ಗ್ರಾಮೀಣ)

*ಹಿಂದೆ ಕೇಂದ್ರ ಸರ್ಕಾರದಲ್ಲಿ ಸಚಿವರಾಗಿದ್ದರು

ಜಾತಿವಾರು ಪ್ರಾತಿನಿಧ್ಯ

ಲಿಂಗಾಯತ	7	ಈಡಿಗ	1
ಒಕ್ಕಲಿಗ	5	ಮರಾಠ	1
ಪರಿಶಿಷ್ಟ ಪಂಗಡ–(ವಾಲ್ಮೀಕಿ)	3	ಬೆಸ್ತ	1
ಪರಿಶಿಷ್ಟ ಜಾತಿ (ಬಲಗೈ)	3	ಕ್ಷತ್ರಿಯ	1
ಪರಿಶಿಷ್ಟ ಜಾತಿ (ಎಡಗೈ)	2	ಎಸ್‌ಸಿ (ಭೋವಿ)	1
ಮುಸ್ಲಿಂ	2	ಕ್ರೈಸ್ತ	1
ಕುರುಬ	2	ನಾಮಧಾರಿ ರೆಡ್ಡಿ	1
ಬ್ರಾಹ್ಮಣ	1	ವೇಮನರೆಡ್ಡಿ	1
ಜೈನ	1		

ಪ್ರಾತಿನಿಧ್ಯ ಸಿಗದ ಜಿಲ್ಲೆಗಳು

- ಹಾಸನ
- ಕೊಡಗು
- ಕೋಲಾರ
- ದಕ್ಷಿಣ ಕನ್ನಡ
- ಉಡುಪಿ
- ಚಾಮರಾಜನಗರ
- ಹಾವೇರಿ
- ವಿಜಯನಗರ
- ಚಿಕ್ಕಮಗಳೂರು

ಸಂಭ್ರಮ ಕಾಂಗ್ರೆಸ್ ಶಾಸಕರು ಪ್ರಮಾಣವಚನ ಸ್ವೀಕರಿಸುವ ವೇಳೆ ರಾಜಭವನದ ಹೊರಗಡೆ ಕಾಂಗ್ರೆಸ್ ಬೆಂಬಲಿಗರು ಸಂಭ್ರಮಿಸಿದರು –ಪ್ರಜಾವಾಣಿ ಚಿತ್ರ

ಸಂಪುಟದ 34 ಸ್ಥಾನ ಭರ್ತಿ • ಹಿರಿಯರ ಜತೆ ಕಿರಿಯರಿಗೂ ಹೊಣೆ

ಪೂರ್ಣ ಸರ್ಕಾರ ಸಾಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 135 ಸದಸ್ಯ ಬಲದೊಂದಿಗೆ ರಾಜ್ಯದ ಆಡಳಿತ ಚುಕ್ಕಾಣಿ ಹಿಡಿದಿರುವ ಸಿದ್ದರಾಮಯ್ಯ ನೇತೃತ್ವದ ಸಚಿವ ಸಂಪುಟ ವಿಸ್ತರಣೆ ಶನಿವಾರ ನಡೆದಿದೆ. ಸಚಿವ ಸಂಪುಟದ ಸಂಖ್ಯಾಬಲದ ಎಲ್ಲ ಸ್ಥಾನಗಳನ್ನೂ ಭರ್ತಿ ಮಾಡಲಾಗಿದ್ದು, ಇತ್ತೀಚಿನ ವರ್ಷಗಳಲ್ಲಿ ಪೂರ್ಣ ಸರ್ಕಾರ ಸಾಕಾರಗೊಂಡಂತಾಗಿದೆ.

ಮುಖ್ಯಮಂತ್ರಿಯಾಗಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ಮತ್ತು ಎಂಟು ಶಾಸಕರು ಮೇ 20ರಂದು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದರು. 24 ಸಚಿವರ ಸೇರ್ಪಡೆಯಿಂದ ಸಚಿವ ಸಂಪುಟ (ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸೇರಿ ಒಟ್ಟು 34) ಭರ್ತಿಯಾಗಿದೆ. ಹಿರಿಯರ ಜತೆಗೆ 50ರ ವಯೋಮಾನದ ಆಸುಪಾಸಿನವರೇ ಹೆಚ್ಚಿನ ಸಂಖ್ಯೆಯಲ್ಲಿರುವುದು ಈ ಸಂಪುಟದ ಮತ್ತೊಂದು ವಿಶೇಷ.

ಯಾರು, ಯಾರ ಹೆಸರಿನಲ್ಲಿ ಪ್ರಮಾಣವಚನ?

ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್	ಶ್ರದ್ಧಾಪೂರ್ವಕ
ಡಾ.ಎಚ್.ಸಿ. ಮಹದೇವಪ್ಪ	ಸತ್ಯನಿಷ್ಠೆ
ಕೆ.ಎನ್. ರಾಜಣ್ಣ	ಬುದ್ಧ, ಬಸವ, ಅಂಬೇಡ್ಕರ್, ಮಹರ್ಷಿ ವಾಲ್ಮೀಕಿ
ಶಿವಾನಂದ ಪಾಟೀಲ	ಅಣ್ಣ ಬಸವಣ್ಣ
ಎಸ್.ಎಸ್. ಮಲ್ಲಿಕಾರ್ಜುನ	ಕಲ್ಲೇಶ್ವರ ದೇವರು
ಲಕ್ಷ್ಮೀ ಹೆಬ್ಬಾಳಕರ	ಜಗಜ್ಯೋತಿ ಬಸವೇಶ್ವರ, ಛತ್ರಪತಿ ಶಿವಾಜಿ, ಬೆಳಗಾವಿ ಗ್ರಾಮೀಣ ಕ್ಷೇತ್ರದ ಮತದಾರರು, ತಾಯಿ ಗಿರಿಜಾ ಬಾಯಿ
ರಹೀಂ ಖಾನ್	ಅಲ್ಲಾಹ್
ಬಿ.ನಾಗೇಂದ್ರ	ಮಹರ್ಷಿ ವಾಲ್ಮೀಕಿ
ಇತರರು	ದೇವರು

ರಾಜಭವನದ ಗಾಜಿನ ಮನೆಯಲ್ಲಿ ಬೆಳಿಗ್ಗೆ 11.45ಕ್ಕೆ ನಡೆದ ಸರಳ ಸಮಾರಂಭದಲ್ಲಿ ನೂತನ ಸಚಿವರಿಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಅಧಿಕಾರ ಮತ್ತು ಗೌಪ್ಯತೆಯ ಪ್ರತಿಜ್ಞಾ ವಿಧಿ ಬೋಧಿಸಿದರು.

ಮೊದಲಿಗೆ ಎಚ್.ಕೆ. ಪಾಟೀಲ, ಕೃಷ್ಣ ಬೈರೇಗೌಡ, ಎನ್. ಚಲುವರಾಯಸ್ವಾಮಿ, ಕೆ. ವೆಂಕಟೇಶ್ ಮತ್ತು ಡಾ.ಎಚ್.ಸಿ. ಮಹದೇವಪ್ಪ ಅವರನ್ನು ಒಂದು ಗುಂಪಿನಲ್ಲಿ ಪ್ರಮಾಣವಚನ ಸ್ವೀಕರಿಸಲು ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮಾ ಆಹ್ವಾನಿಸಿದರು. ಆಗ ಮಧ್ಯಪ್ರವೇಶಿಸಿದ ಸಿದ್ದರಾಮಯ್ಯ, ಗುಂಪಿನಲ್ಲಿ ಪ್ರಮಾಣವಚನ ಸ್ವೀಕರಿಸುವುದು ಬೇಡವೆಂದು ತಡೆದರು. ಹೀಗಾಗಿ, ಎದುರಿಗೆ ಹಾಕಿದ್ದ 5 ಧ್ವನಿವರ್ಧಕಗಳಲ್ಲಿ ನಾಲ್ಕನ್ನು ತೆರವುಗೊಳಿಸಿ, ಒಬ್ಬೊಬ್ಬರನ್ನಾಗಿ ಪ್ರಮಾಣವಚನಕ್ಕೆ ಆಹ್ವಾನಿಸಲಾಯಿತು.

ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿಗಳಾಗಿದ್ದ ಯಲಬುರ್ಗಾ ಕ್ಷೇತ್ರದ ಬಸವರಾಜ ರಾಯರಡ್ಡಿ, ಹಾವೇರಿಯ ರುದ್ರಪ್ಪ ಲಮಾಣಿ, ಶಿರಾ ಶಾಸಕ ಟಿ.ಬಿ. ಜಯಚಂದ್ರ, ಹಳಿಯಾಳ ಕ್ಷೇತ್ರದ ಆರ್.ವಿ. ದೇಶಪಾಂಡೆ, ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಅವರಿಗೆ ಸಂಪುಟ ಸೇರುವ ಅವಕಾಶ ಸಿಕ್ಕಿಲ್ಲ. ಆದರೆ, ವಿಧಾನ ಪರಿಷತ್ ಸದಸ್ಯರೂ ಅಲ್ಲದ ಎಸ್.ಎಸ್. ಬೋಸರಾಜು ಅವರನ್ನು ಸಂಪುಟಕ್ಕೆ ಸೇರಿಸಿಕೊಳ್ಳಲಾಗಿದೆ.

ನೂತನ ಸಚಿವರಿಗೆ ರಾಜ್ಯಪಾಲ ಥಾವರ್‌ಚಂದ್ ಗೆಹಲೋತ್, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ವಿಧಾನಸಭಾಧ್ಯಕ್ಷ ಯು.ಟಿ. ಖಾದರ್ ಅವರು ಹೂಗುಚ್ಛ ನೀಡಿ ಅಭಿನಂದಿಸಿದರು. ಸಚಿವರಾಗಿ ಸಂಪುಟ ಸೇರಿದ ಶಾಸಕರ ಕುಟುಂಬ ಸದಸ್ಯರೂ ಈ ವೇಳೆ ಇದ್ದರು. ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ ಶಾಸಕರ ಅಭಿಮಾನಿಗಳು, ಬೆಂಬಲಿಗರು ಜೈಕಾರ ಹಾಕಿ, ಸಂಭ್ರಮಿಸಿದರು.

ಲಕ್ಷ್ಮೀ ಹೆಬ್ಬಾಳಕರಗೆ ಡಬಲ್ ಸಂಭ್ರಮ

ಬೆಳಗಾವಿ: ಮೊದಲ ಬಾರಿಗೆ ಸಚಿವೆಯಾಗುವುದರ ಜೊತೆಗೆ, ಅಜ್ಜಿಯೂ ಆದ ಸಂಭ್ರಮದಲ್ಲಿದ್ದಾರೆ ಲಕ್ಷ್ಮೀ ಹೆಬ್ಬಾಳಕರ.

ಲಕ್ಷ್ಮಿ ಅವರ ಪುತ್ರ ಮೃಣಾಲ್ ಹಾಗೂ ಸೊಸೆ ಡಾ.ಹಿತಾ ಅವರಿಗೆ ಶುಕ್ರವಾರ ತಡರಾತ್ರಿ ಹೆಣ್ಣುಮಗು ಜನಿಸಿದೆ. ಬೆಂಗಳೂರಿನಲ್ಲಿ ಶನಿವಾರ ಸಚಿವರಾಗಿ ಪ್ರಮಾಣವಚನ ಸ್ವೀಕರಿಸುವ ಕೆಲವೇ ಗಂಟೆಗಳ ಮುಂಚೆ ಅವರು ಅಜ್ಜಿಯಾಗಿಯೂ ಬಡ್ತಿ ಹೊಂದಿದ್ದಾರೆ.

ಶಾಂತಿ ಕದಡುವ ಸಂಘಟನೆಗಳ ವಿರುದ್ಧ ಕ್ರಮ: ಸಿದ್ದರಾಮಯ್ಯ

ಬೆಂಗಳೂರು: ರಾಜ್ಯದಲ್ಲಿ ಶಾಂತಿ, ಸಾಮರಸ್ಯ ಕದಡುವ ಸಂಘಟನೆಗಳ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶನಿವಾರ ಹೇಳಿದರು.

ಮಾಜಿ ಪ್ರಧಾನಿ ಜವಾಹರಲಾಲ್ ನೆಹರೂ ಪುಣ್ಯತಿಥಿ ಕಾರ್ಯಕ್ರಮದ ಬಳಿಕ ಮಾತನಾಡಿದ ಅವರು, ಸಂಘ ಪರಿವಾರವನ್ನು ನಿಷೇಧಿಸುವುದಾಗಿ ಸರ್ಕಾರ ಹೇಳಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

क्षेत्रीय आयुर्वेद अनुसंधान संस्थान, विजयवाड़ा
केन्द्रीय आयुर्वेदीय विज्ञान अनुसंधान परिषद, आयुष मंत्रालय, भारत सरकार
नई राजीव नगर, पायकापुरम, विजयवाड़ा- 520015 (आ.प्र.)

REGIONAL AYURVEDA RESEARCH INSTITUTE, VIJAYAWADA
CENTRAL COUNCIL FOR RESEARCH IN AYURVEDIC SCIENCES, MINISTRY OF AYUSH, GOVT. OF INDIA
New Rajiv Nagar, Payakapuram, Vijayawada-520015 (A.P.)
Email:narivbd-vijayawada@gov.in or narivbd.vijaywada@gmail.com

F.No. 4-147/2023-24/RARI/VJA/Tech/311 Date: 27-05-2023

Advertisement No.01/2023-24 **WALK-IN-INTERVIEW**

The following interviews will be held for the engagement of the posts of Senior Research Fellow (Ayurveda) on contract basis for the project work titled “Tolerability, Treatment Adherence, and Safety of Drakshavaleha in the Management of Iron Deficiency Anemia: An Open Label Single Arm Clinical Study” under the SMART Programme. Details are given below:

Name of the post	Place of Posting & No. of Post	Eligibility Criteria, Age and Remuneration (fixed)	Date & Time of Interview	Venue of Interview**
Senior Research Fellow (Ay.)	Institute of Ayurveda and Integrative Medicine (I-AIM) Healthcare Centre, 74/2, Jarakabande Kaval, Behind CRPF Camp, Attur Post, Ramagondanahalli, Bengaluru-560064. Karnataka **Number of Post - 1***	**Essential:** B.A.M.S Degree from any Recognized University and Knowledge of Computer applications such as MS Office etc. **Desirable:** 1. M.D (Ay)/M.S (Ay.) 2. Preference will be given to those who possess higher qualification or who have previous research experience i.e., having worked for any research project funded by the Ministry of AYUSH, ICMR, CSIR, DST or equivalent organization. 3. Skills of drafting & editing of scientific documents/ articles/ technical reports etc. 4. Publication in peer reviewed journals. 5. Working knowledge of computer application. **Age Limit:** Not exceeding 35 years (Age relaxation as per Govt, of India rule) as on **01-01-2023** **Remuneration: 35,000/- +HRA**	05.06.2023, 09.00 AM	Meeting Hall, I-AIM Healthcare Centre, 74/2, Jarakabande Kaval, Behind CRPF Camp, Attur Post, Ramagondanahalli, Bengaluru 560064, Karnataka
	KAHER’s Shri B.M. Kankanawadi Ayurveda Mahavidyalaya, Shahapur, Belgavi-590003, Karnataka. **Number of Post - 1***		06.06.2023, 09.00 AM	KLE Ayurveda Hospital Meeting Hall, Shahapur, Belagavi
	Sri Sri College of Ayurvedic Science and Research, 21st km, Kanakapura Road, Udayapura Post, Banglore - 560082 Karnataka. **Number of Post - 1***		06.06.2023, 09.00 AM	Sri Sri College of Ayurvedic Science and Research, 21st km, Kanakapura Road, Udayapura Post, Banglore - 560082 Karnataka
	Sri Dharmasthala Manjunatheshwara College of Ayurveda & Hospital, Tanniruhalla, B M Road, Hassan -573201, Karnataka. **Number of Post - 1***		14.06.2023, 09.00 AM	Sri Dharmasthala Manjunatheshwara College of Ayurveda & Hospital, Tanniruhalla, B M Road, Hassan -573201, Karnataka.

*Number of posts may vary.

**The candidates reaching the concerned institute may either contact the office or follow the notice board in case of confusion regarding the venue.

For further information and the biodata form please see the CCRAS website www.ccras.nic.in

Sd/- Research Officer Incharge

ಪ್ರಜಾವಾಣಿ

ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

OBITUARY

PAPAIAH B.N. (72 Years)

Retd. Chief Engineer, KUWS& DB
S/o Late B. V. Narayana Reddy, Bellandur

Address: # 734, 11th B Cross, 26th Main, HSR Layout Sector 1, Bangalore - 560102

Burial Time: 2 pm

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟಾಂಡರ್ಡ್ ಚಿನ್ನ 10ಗ್ರಾಂ	₹61,800
ಒಡವೆ ಚಿನ್ನ 1ಗ್ರಾಂ	₹5,686
ಬೆಳ್ಳಿ ಕೆ.ಜಿಗೆ	₹72,800

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹530
12 ಮೊಟ್ಟೆಗೆ	₹72
ಮೈಸೂರು	
100 ಮೊಟ್ಟೆಗೆ	₹535

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹155
ಆರ್‌ಎಸ್‌ಎಸ್-5	₹150
ಗುಡ್ ಲಾಟ್	₹131

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1605 (1605)
ಸೋಯಾ (ರಿಫೈನ್ಡ್)	₹905(910)
ಸೂರ್ಯಕಾಂತಿ (ರಿಫೈನ್ಡ್)	₹925 (930)
ಪಾಮೋಲಿನ್	₹870 (870)

ಬ್ಯಾಂಕಿಂಗ್ ವಲಯದ ಷೇರುಗಳತ್ತ ವಿದೇಶಿ ಹೂಡಿಕೆದಾರರ ಗಮನ

ಎಫ್‌ಪಿಐ: 9 ತಿಂಗಳ ಗರಿಷ್ಠ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತದ ಆರ್ಥಿಕ ಸ್ಥಿತಿಯು ಅನುಕೂಲಕರವಾಗಿ ಇರುವುದರಿಂದ ಷೇರುಪೇಟೆಗಳಲ್ಲಿ ಮೇ ತಿಂಗಳಿನಲ್ಲಿ ವಿದೇಶಿ ಬಂಡವಾಳ ಹೂಡಿಕೆಯ (ಎಫ್‌ಪಿಐ) ಒಂಬತ್ತು ತಿಂಗಳ ಗರಿಷ್ಠ ಮಟ್ಟವನ್ನು ತಲುಪಿದೆ ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದರು.

ನ್ಯಾಷನಲ್ ಸೆಕ್ಯುರಿಟೀಸ್ ಡಿಪಾಸಿಟರಿ ಲಿಮಿಟೆಡ್‌ನಲ್ಲಿ (ಎನ್‌ಎಸ್‌ಡಿಎಲ್) ಇರುವ ಮಾಹಿತಿಯ ಪ್ರಕಾರ, ಮೇ ತಿಂಗಳಿನಲ್ಲಿ ಈವರೆಗೆ ₹ 37,316 ಕೋಟಿ ಮೌಲ್ಯದ ಷೇರುಗಳನ್ನು ವಿದೇಶಿ ಹೂಡಿಕೆದಾರರು ಖರೀದಿಸಿದ್ದಾರೆ ಎಂದು ಅವರು 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.

ಮುಖ್ಯಾಂಶಗಳು

- ವಿದೇಶಿ ಹೂಡಿಕೆಗೆ ಪೂರಕ ವಾತಾವರಣ
- ಆರ್ಥಿಕ ಬೆಳವಣಿಗೆಗೆ ಉತ್ತಮ ಆಗಿರುವ ನಿರೀಕ್ಷೆ

ವಿದೇಶಿ ಹೂಡಿಕೆದಾರರು ಭಾರತದ ಷೇರುಪೇಟೆಗಳಲ್ಲಿ ನಿರಂತರವಾಗಿ ಖರೀದಿ ನಡೆಸುತ್ತಿರುವುದರಿಂದ ಮೇನಲ್ಲಿ ನಿಫ್ಟಿ ಶೇ 2.4ರಷ್ಟು ಗಳಿಕೆ ಕಂಡಿದೆ. ಇದೇ ರೀತಿಯಲ್ಲಿ ಮುಂದು ವರಿದಲ್ಲಿ ನಿಫ್ಟಿಯು ಹೊಸ ಎತ್ತರಕ್ಕೆ ಏರಿಕೆ ಕಾಣುವ ಸಾಧ್ಯತೆ ಇದೆ ಎಂದೂ ವಿಜಯಕುಮಾರ್ ಅಭಿಪ್ರಾಯಪಟ್ಟರು.

ಆಟೊಮೊಬೈಲ್, ಬಂಡವಾಳ ಸರಕುಗಳು, ಆರೋಗ್ಯ ಸೇವೆ, ತೈಲ ಮತ್ತು ಅನಿಲ, ದೂರಸಂಪರ್ಕ ವಲಯಗಳಲ್ಲಿ ಹೂಡಿಕೆ ಮಾಡುತ್ತಿದ್ದಾರೆ. ಹಣಕಾಸು ವಲಯ; ಅದರಲ್ಲಿಯೂ ಮುಖ್ಯವಾಗಿ ಬ್ಯಾಂಕಿಂಗ್ ಷೇರುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಖರೀದಿಸುತ್ತಿದ್ದಾರೆ ಎಂದು ಅವರು ಮಾಹಿತಿ ನೀಡಿದರು.

ಅಭಿವೃದ್ಧಿ ಹೊಂದಿದ ದೇಶಗಳ ಮಾರುಕಟ್ಟೆಗಳು ಗಳಿಕೆ ಕಾಣಲು ಹೆಣಗಾಡುತ್ತಿವೆ. ಇಂತಹ ಸಂದರ್ಭದಲ್ಲಿ ಉತ್ತಮ ಪ್ರದರ್ಶನ ಕಾಣುತ್ತಿರುವ ಜಪಾನ್, ತೈವಾನ್, ದಕ್ಷಿಣ ಕೊರಿಯಾ ಮತ್ತು ಬ್ರೆಜಿಲ್ ಮಾರುಕಟ್ಟೆಗಳ ಸಾಲಿನಲ್ಲಿ ಭಾರತವೂ ಸೇರಿಕೊಂಡಿದೆ.

ಜಿಎಸ್‌ಟಿ ಸಂಗ್ರಹ, ತಯಾರಿಕಾ ವಲಯದ ಬೆಳವಣಿಗೆ, ಸಾಲ ನೀಡಿಕೆ... ಹೀಗೆ ಹಲವು ಅಂಶಗಳು ಆರ್ಥಿಕ ಬೆಳವಣಿಗೆಯು ಉತ್ತಮವಾಗಿರುವ ಸೂಚನೆ ನೀಡುತ್ತಿವೆ. ಏಪ್ರಿಲ್ ತಿಂಗಳ ಚಿಲ್ಲರೆ ಹಣದುಬ್ಬರ ಶೇ 4.7 ಇಳಿಕೆ ಕಂಡಿರುವುದು ಷೇರುಪೇಟೆಯ ಪಾಲಿಗೆ ಉತ್ತೇಜನಕಾರಿ ಬೆಳವಣಿಗೆ ಆಗಿದೆ ಎಂದು ಹೇಳಿದರು.

ಬಹು ಮಾಧ್ಯಮ ಪ್ರಜಾವಾಣಿ@75
www.prajavani.net
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ಪ್ರಸಾರ
ಇಂದು

ಸೆಲೆಬ್ರಿಟಿ PREMIERE
ಸುಧಾ ಬೆಳವಾಡಿ
ನಟಿ
ಬೆಳಿಗ್ಗೆ 10 ಕ್ಕೆ
ಸುಧಾ ಬೆಳವಾಡಿಯ 'ಮನ್ವಂತರ'

ಪ್ರಜಾವಾಣಿ ಕನ್ನಡ ಧ್ವನಿ
ಪಾಡ್‌ಕಾಸ್ಟ್: ಕಥಾಸಾಗರ: ಬೆಳಿಗ್ಗೆ 9
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8

ಮೇ 30ರವರೆಗೆ ಗೋ ಫಸ್ಟ್ ಸೇವೆ ಇಲ್ಲ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋ ಫಸ್ಟ್ ವಿಮಾನಯಾನ ಕಂಪನಿಯು ತನ್ನ ಎಲ್ಲ ವಿಮಾನಗಳ ಸೇವೆಯನ್ನು ಮೇ 30ರವರೆಗೆ ರದ್ದು ಮಾಡಿದೆ. ಟಿಕೆಟ್ ಕಾಯ್ದಿರಿಸಿದವರಿಗೆ ಪೂರ್ಣ ಮೊತ್ತವನ್ನು ಹಿಂದಿರುಗಿಸಲಾಗುವುದು ಎಂದೂ ಕಂಪನಿ ಹೇಳಿದೆ.

'ಕಾರ್ಯಾಚರಣೆಗೆ ಸಂಬಂಧಿಸಿದ ಕಾರಣಗಳಿಂದಾಗಿ, ಮೇ 30ರವರೆಗೆ ವಿಮಾನ ಸೇವೆಗಳನ್ನು ರದ್ದು ಮಾಡಲಾಗಿದೆ. ಇದರಿಂದಾಗಿ ಆಗುವ ಅನನುಕೂಲಕ್ಕಾಗಿ ಕ್ಷಮೆ ಕೇಳುತ್ತವೆ' ಎಂದು ಕಂಪನಿ ಟ್ವೀಟ್ ಮಾಡಿದೆ.

ಮೇ 28ರವರೆಗೆ ಸೇವೆ ಇರುವುದಿಲ್ಲ ಎಂದು ಕಂಪನಿಯು ಈ ಹಿಂದೆ ಹೇಳಿತ್ತು. ಇದೀಗ ಮತ್ತೆರಡು ದಿನಗಳ ವರೆಗೆ ಸೇವೆಯನ್ನು ರದ್ದು ಮಾಡಿದೆ. 'ಕಾರ್ಯಾಚರಣೆಯನ್ನು ಮತ್ತೆ ಆರಂಭಿಸಲು ಆಗುವಂತೆ ತಕ್ಷಣದ ಪುನಶ್ಚೇತನ ಯೋಜನೆಗಾಗಿ ಅರ್ಜಿ ಸಲ್ಲಿಸಲಾಗಿದೆ. ಬುಕಿಂಗ್ ಅನ್ನು ಶೀಘ್ರದಲ್ಲೇ ಆರಂಭಿಸಲಿದ್ದು, ನಿಮ್ಮ ಸಹನೆಗೆ ಧನ್ಯವಾದ' ಎಂದು ಗೋ ಫಸ್ಟ್ ಹೇಳಿದೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:
Vishal : 9845114560
Jerry : 9731810277 | Tanveer : 9886213331
Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಿಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

31ರಿಂದ ನೇಪಾಳ ಪ್ರಧಾನಿ ಪ್ರಚಂಡ ಭಾರತ ಪ್ರವಾಸ

ಕಠ್ಮಂಡು/ದೆಹಲಿ (ಪಿಟಿಐ): ನೇಪಾಳ ಪ್ರಧಾನಿ ಪುಷ್ಪ ಕಮಲ್ ದಹಲ್ ಅವರು (ಪ್ರಚಂಡ) ಇದೇ 31ರಿಂದ (ಬುಧವಾರ) ನಾಲ್ಕು ದಿನಗಳ ವರೆಗೆ ಭಾರತಕ್ಕೆ ಭೇಟಿ ನೀಡಲಿದ್ದಾರೆ ಎಂದು ನೇಪಾಳದ ವಿದೇಶಾಂಗ ಸಚಿವಾಲಯ ಶನಿವಾರ ತಿಳಿಸಿದೆ.

ಭಾರತದೊಂದಿಗಿನ ಸೌಹಾರ್ದ ಸಂಬಂಧ ಬಲಪಡಿಸುವ ನಿಟ್ಟಿನಲ್ಲಿ ಪ್ರಧಾನಿ ಮೋದಿ ಹಾಗೂ ಇತರ ನಾಯಕರೊಂದಿಗೆ ಮಾತುಕತೆ ನಡೆಸಲಿದ್ದಾರೆ.

'ಪ್ರಚಂಡ ಅವರು 2022ರಲ್ಲಿ ಪ್ರಧಾನಿಯಾಗಿ ಅಧಿಕಾರ ಸ್ವೀಕರಿಸಿದ ಬಳಿಕ, ಭಾರತಕ್ಕೆ ನೀಡುತ್ತಿರುವ ಮೊದಲ ದ್ವಿಪಕ್ಷೀಯ ಭೇಟಿ ಇದಾಗಿದೆ. ಮೋದಿ ಆಹ್ವಾನದ ಮೇರೆಗೆ ಪ್ರಚಂಡ ಅವರು ತಮ್ಮ ಪುತ್ರಿ ಗಂಗಾ ದಹಲ್ ಅವರೊಂದಿಗೆ ಭಾರತಕ್ಕೆ ಭೇಟಿ ನೀಡುತ್ತಿದ್ದಾರೆ' ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಕಮಲ್ ದಹಲ್

ಜೂನ್ 1ರಂದು ಪ್ರಧಾನಿ ಮೋದಿ ಅವರೊಂದಿಗೆ ನಿಯೋಗ ಮಟ್ಟದ ಮಾತುಕತೆ ನಡೆಸಲಿದ್ದಾರೆ. ಬಳಿಕ, ಇಬ್ಬರೂ ಪ್ರಧಾನಿಗಳು ಜಂಟಿ ಪತ್ರಿಕಾಗೋಷ್ಠಿ ನಡೆಸಲಿದ್ದಾರೆ. ನೇಪಾಳ- ಭಾರತ ವ್ಯಾಪಾರ ಶೃಂಗಸಭೆಯಲ್ಲಿ ಭಾಗವಹಿಸಲಿದ್ದಾರೆ .

ಪ್ರಚಂಡ ಅವರು ಭೇಟಿಯ ವೇಳೆ, ಭಾರತದಲ್ಲಿರುವ ನೇಪಾಳ ರಾಯಭಾರಿ ಶಂಕರ ಪ್ರಸಾದ್ ಶರ್ಮಾ ಅವರು ಆಯೋಜಿಸಿರುವ ಸ್ವಾಗತ ಸಮಾರಂಭದಲ್ಲಿ ಭಾರತದ ನೇಪಾಳಿ ಸಮುದಾಯದೊಡನೆ ಚರ್ಚೆ ನಡೆಸಲಿದ್ದಾರೆ. ದೇಶಕ್ಕೆ ಮರಳುವ ಮುನ್ನ ಉಜ್ಜೈನಿ ಹಾಗೂ ಇಂದೋರ್‌ಗೆ ಭೇಟಿ ನೀಡಲಿದ್ದಾರೆ' ಎಂದು ಪ್ರಕಟಣೆ ವಿವರಿಸಿದೆ.

ಭಾರತಕ್ಕೆ ನ್ಯಾಟೊ ಮಿತ್ರರಾಷ್ಟ್ರ ಸ್ಥಾನ: ಚೀನಾ ಸಮಿತಿ ಶಿಫಾರಸು

ವಾಷಿಂಗ್ಟನ್(ಪಿಟಿಐ): ನ್ಯಾಟೊ ಮಿತ್ರ-ರಾಷ್ಟ್ರ(ನ್ಯಾಟೊ ಪ್ಲಸ್)ಗಳ ಪಟ್ಟಿಗೆ ಭಾರತವನ್ನೂ ಸೇರ್ಪಡೆಗೊಳಿಸುವ ಮೂಲಕ ಆ ದೇಶಗಳ ರಕ್ಷಣಾ ಸಾಮರ್ಥ್ಯವನ್ನು ಬಲಗೊಳಿಸಬೇಕು ಎಂದು ಅಮೆರಿಕದಲ್ಲಿರುವ ಚೀನಾದ ಉನ್ನತಮಟ್ಟದ ಸಮಿತಿಯು ಶಿಫಾರಸು ಮಾಡಿದೆ.

ಪ್ರಸ್ತುತ ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಜಪಾನ್, ಇಸ್ರೇಲ್ ಮತ್ತು ದಕ್ಷಿಣ ಕೊರಿಯಾ ನ್ಯಾಟೊ ಮಿತ್ರ-ರಾಷ್ಟ್ರಗಳಾಗಿವೆ. ಇವು ಪ್ರಮುಖ ರಾಷ್ಟ್ರ-ಗಳೊಂದಿಗೆ ರಕ್ಷಣೆಗೆ ಸಂಬಂಧಿಸಿದಂತೆ ಪರಸ್ಪರ ಒಪ್ಪಂದ ಮಾಡಿಕೊಂಡಿವೆ.

ಅಮೆರಿಕಕ್ಕೆ ಪ್ರಧಾನಿ ನರೇಂದ್ರ ಮೋದಿ ಜೂನ್‌ನಲ್ಲಿ ಭೇಟಿ ನೀಡುತ್ತಿರುವ ಬೆನ್ನಲ್ಲೇ ಭಾರತಕ್ಕೆ ನ್ಯಾಟೊ ಮಿತ್ರರಾಷ್ಟ್ರದ ಸ್ಥಾನ ನೀಡಬೇಕೆಂಬ ಸಮಿತಿಯ ಶಿಫಾರಸು ಮಹತ್ವ ಪಡೆದಿದೆ. ಆ ಮೂಲಕ ಜಾಗತಿಕ ರಕ್ಷಣಾ ಸಹಕಾರಕ್ಕೆ ಬಲ ನೀಡುವುದು ಇದರ ಹಿಂದಿರುವ ಮೂಲ ಆಶಯ. ಇದರಿಂದ ಈ ರಾಷ್ಟ್ರಗಳ ನಡುವಣ ರಕ್ಷಣಾ ಪಾಲುದಾರಿಕೆಯ ಹಾದಿಯೂ ಸುಗಮವಾಗಲಿದೆ.

ಅಮೆರಿಕ ಮತ್ತು ಚೀನಾ ಕಮ್ಯೂನಿಸ್ಟ್ ಪಕ್ಷದ(ಸಿಸಿಪಿ) ಕಾರ್ಯತಂತ್ರ ರೂಪಿಸಿರುವ ಸಂಬಂಧ ರಚನೆಯಾಗಿರುವ ಉನ್ನತಮಟ್ಟದ ಸಮಿತಿಯ ಮುಖ್ಯಸ್ಥ ಮೈಕ್ ಗಲ್ಲಾಘರ್ ಹಾಗೂ ಸದಸ್ಯ ರಾಜಾ ಕೃಷ್ಣಮೂರ್ತಿ ನೇತೃತ್ವದ ಸಮಿತಿ ಈ ಶಿಫಾರಸು ಮಾಡಿದೆ. ಇದು ಚೀನಾ ಸಮಿತಿಯೆಂದೇ ಪ್ರಸಿದ್ಧಿ ಪಡೆದಿದೆ.

ನ್ಯಾಟೊ ಪ್ಲಸ್‌ಗೆ ಭಾರತ ಸೇರಿದರೆ ಮಿತ್ರರಾಷ್ಟ್ರಗಳ ನಡುವಣ ಯಾವುದೇ ಅಡೆತಡೆ ಇಲ್ಲದೆ ಬೌದ್ಧಿಕ ಜ್ಞಾನ ಮತ್ತು ಕೌಶಲಗಳ ವಿನಿಮಯ ಸುಲಭವಾಗಲಿದೆ. ಜೊತೆಗೆ, ರಕ್ಷಣಾ ಕ್ಷೇತ್ರದಲ್ಲಿನ ನವೀನ ತಂತ್ರಜ್ಞಾನ ಅರಿಯಲು ಭಾರತಕ್ಕೂ ಸಹಕಾರಿಯಾಗಲಿದೆ.

ಶ್ರೀಕೃಷ್ಣ ಜನ್ಮಭೂಮಿ ವಿವಾದ: ಹೈಕೋರ್ಟ್‌ಗೆ ಎಲ್ಲ ಅರ್ಜಿಗಳ ವರ್ಗಾವಣೆಗೆ ಆದೇಶ

ಪ್ರಜಾವಾಣಿ ವಾರ್ತೆ

ಲಖನೌ: ಶ್ರೀಕೃಷ್ಣ ಜನ್ಮಭೂಮಿ-ಶಾಹಿ ಈದ್ಗಾ ಮಸೀದಿ ವಿವಾದಕ್ಕೆ ಸಂಬಂಧಿಸಿ ಮಥುರಾ ನ್ಯಾಯಾಲಯದ ಮುಂದಿರುವ ಎಲ್ಲ ಅರ್ಜಿಗಳನ್ನು ಹೈಕೋರ್ಟ್‌ಗೆ ವರ್ಗಾವಣೆ ಮಾಡುವಂತೆ ಅಲಹಾಬಾದ್ ಹೈಕೋರ್ಟ್ ಶುಕ್ರವಾರ ಮಹತ್ವದ ಆದೇಶ ನೀಡಿದೆ.

ನ್ಯಾಯಮೂರ್ತಿ ಅರವಿಂದ್ ಕುಮಾರ್ ಮಿಶ್ರಾ ಅವರು ಈ ಆದೇಶ ನೀಡಿದ್ದಾರೆ. ವಿವಾದಕ್ಕೆ ಸಂಬಂಧಿಸಿದ ಎಲ್ಲ ಅರ್ಜಿಗಳ ವಿಚಾರಣೆಯನ್ನು ಹೈಕೋರ್ಟ್ ನಡೆಸಬೇಕು ಎಂದು ಭಗವಾನ್ ಶ್ರೀಕೃಷ್ಣ ವಿರಾಜ್‌ಮಾನ್ ಮತ್ತು ಇತರ ಏಳು ಮಂದಿ ಅಲಹಾಬಾದ್ ಹೈಕೋರ್ಟ್ ಅನ್ನು ಕೋರಿದ್ದರು. ಈ ಕುರಿತು ನ್ಯಾಯಾಲಯವು ತನ್ನ ಆದೇಶವನ್ನು ಕಾಯ್ದಿರಿಸಿತ್ತು.

'ಇದು ಹಿಂದೂಗಳು ಹಾಗೂ ಮುಸ್ಲಿಮರ ನಂಬಿಕೆ ವಿಷಯವಾಗಿದೆ. ಆದ್ದರಿಂದ ಕೆಳಹಂತದ ನ್ಯಾಯಾಲಯದಲ್ಲಿಯೇ ಈ ಅರ್ಜಿಗಳ ವಿಚಾರಣೆ ಮುಂದುವರೆದರೆ ಪ್ರಕರಣದ ಇತ್ಯರ್ಥ ತಡವಾಗಬಹುದು' ಎಂದು ನ್ಯಾಯಾಲಯ ತನ್ನ ಆದೇಶದಲ್ಲಿ ಹೇಳಿದೆ.

ವಿವಾದಕ್ಕೆ ಸಂಬಂಧಿಸಿದ ಎಲ್ಲ ಅರ್ಜಿಗಳನ್ನು ಹೈಕೋರ್ಟ್‌ಗೆ ವರ್ಗಾಯಿಸುವಂತೆ ಮಥುರಾದ ಜಿಲ್ಲಾ ನ್ಯಾಯಾಧೀಶರಿಗೆ ಹೈಕೋರ್ಟ್ ನಿರ್ದೇಶನ ನೀಡಿದೆ. ಮಥುರಾ ನ್ಯಾಯಾಲಯದಲ್ಲಿ ಒಟ್ಟು ಏಳು ಅರ್ಜಿಗಳು ವಿಚಾರಣಾ ಹಂತದಲ್ಲಿವೆ.

ದೀಪಾವಳಿಗೆ ರಜೆ: ಅಮೆರಿಕದಲ್ಲಿ ಮಸೂದೆ ಮಂಡನೆ

ವಾಷಿಂಗ್ಟನ್ (ಪಿಟಿಐ): ಅಮೆರಿಕದಲ್ಲಿ ದೀಪಾವಳಿಯನ್ನು 'ಸರ್ಕಾರಿ ರಜಾ ದಿವಸ' ಎಂದು ಘೋಷಿಸುವ ಪ್ರಸ್ತಾವನೆ ಹೊಂದಿರುವ ಮಸೂದೆಯನ್ನು ಸಂಸದರೊಬ್ಬರು ಅಮೆರಿಕ ಕಾಂಗ್ರೆಸ್‌ನಲ್ಲಿ ಶುಕ್ರವಾರ ಮಂಡಿಸಿದರು. ಈ ಪ್ರಸ್ತಾವನೆಯನ್ನು ಅಮೆರಿಕದಾದ್ಯಂತ ವಿವಿಧ ಸಮುದಾಯಗಳು ಸ್ವಾಗತಿಸಿವೆ ಎನ್ನಲಾಗಿದೆ.

'ದಿ ದೀವಾಲಿ ಡೇ' ಕಾಯ್ದೆ ಮಸೂದೆಯನ್ನು ಅಮೆರಿಕ ಕಾಂಗ್ರೆಸ್ ಅಂಗೀಕರಿಸಿದರೆ ಮತ್ತು ಅದಕ್ಕೆ ಅಧ್ಯಕ್ಷ ಜೋ ಬೈಡನ್ ಅವರು ಅಂಕಿತ ಹಾಕಿದರೆ ದೀಪಾವಳಿಯು ಅಮೆರಿಕ ಸರ್ಕಾರ ಗುರುತಿಸಿರುವ 12ನೇ ರಜೆ ಎಂದು ಕರೆಸಿಕೊಳ್ಳುತ್ತದೆ ಎನ್ನಲಾಗಿದೆ.

ಸಂಸದೆ ಗ್ರೇಸ್ ಮೆಂಗ್ ಅವರು ಈ ಮಸೂದೆಯನ್ನು ಮಂಡಿಸಿದ್ದಾರೆ.

ಮುಂಬೈ ಧಾರಣೆ

ಶೇಂಗಾ

27-5-2023

ಜಾವಾ 70/80(ಹೊಸ)	12050-12100
ಜಾವಾ 80/90(ಹೊಸ)	11050-11100
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1615 (1615)
ಒಂದು ವಾರದ ಡೆಲಿವರಿ	1610 (1610)
ಸೋಯಾ ಕಚ್ಚಾ	845 (850)
ಪಾಮ್ ವಾರದ ಡೆಲಿವರಿ	868 (868)
ಸೂರ್ಯಕಾಂತಿ ಎಣ್ಣೆ ಕಚ್ಚಾ	845 (845)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
59900 (60000)
ಬೆಳ್ಳಿ ಕೆ.ಜಿ
70900 (70550)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಹದಾಯಿ ಪ್ರವಾಹ್ ರಚನೆ: ಪ್ರಮೋದ್ ಸಾವಂತ್ ಸ್ವಾಗತ

ಪ್ರಜಾವಾಣಿ ವಾರ್ತೆ

ಪಣಜಿ: ಮಹದಾಯಿ ಜಲ ವಿವಾದ ನ್ಯಾಯಮಂಡಳಿಯ ಅಂತಿಮ ತೀರ್ಪಿನ ಅನುಷ್ಠಾನ ಸಂಬಂಧ ಮಹದಾಯಿ ಪ್ರವಾಹ್ (ಕಲ್ಯಾಣ ಮತ್ತು ಸಾಮರಸ್ಯಕ್ಕಾಗಿ ಪ್ರಗತಿಶೀಲ ನದಿ ಪ್ರಾಧಿಕಾರ) ರಚನೆಗೆ ಅಧಿಸೂಚನೆ ಹೊರಡಿಸಲು ಕೇಂದ್ರ ಸರ್ಕಾರ ಸೂಚಿಸಿರುವುದನ್ನು ಗೋವಾ ಮುಖ್ಯಮಂತ್ರಿ ಪ್ರಮೋದ್ ಸಾವಂತ್ ಸ್ವಾಗತಿಸಿದ್ದಾರೆ.

ಪ್ರಸ್ತುತ ದೆಹಲಿಯಲ್ಲಿ ನಡೆಯುತ್ತಿರುವ ನೀತಿ ಆಯೋಗದ ಸಭೆಯಲ್ಲಿ ಪಾಲ್ಗೊಂಡಿರುವ ಅವರು, 'ಕೇಂದ್ರ ಸರ್ಕಾರದ ಈ ನಿರ್ಣಯವು ಮಹದಾಯಿ ನದಿ ಉಳಿವಿನ ಹೋರಾಟದಲ್ಲಿ ಗೋವಾ ಪಾಲಿಗೆ ದೊಡ್ಡ ಮೈಲಿಗಲ್ಲು ಆಗಿದೆ' ಎಂದು ಟ್ವೀಟ್ ಮಾಡಿದ್ದಾರೆ.

'ಇದು ಗೋವಾ ಜನರಿಗೆ ದೊಡ್ಡ ಸುದ್ದಿ. ಮಹದಾಯಿ ನಿರ್ವಹಣೆಗೆ ಪ್ರವಾಹ್ ಪ್ರಾಧಿಕಾರ ರಚಿಸಬೇಕು. ಪಣಜಿಯಲ್ಲಿಯೇ ಅದರ ಕೇಂದ್ರ ಕಚೇರಿ ತೆರೆಯಬೇಕು ಎಂಬುದು ನಮ್ಮ ಬಹುದಿನದ ಬೇಡಿಕೆಯಾಗಿತ್ತು. ಅದು ಈಗ ಈಡೇರುತ್ತಿದೆ' ಎಂದು ತಿಳಿಸಿದ್ದಾರೆ.

ಒಎನ್‌ಜಿಸಿ ನಷ್ಟ ₹ 248 ಕೋಟಿ

ನವದೆಹಲಿ (ಪಿಟಿಐ): ಒಎನ್‌ಜಿಸಿ ಕಂಪನಿಯು 2023ರ ಮಾರ್ಚ್ ತ್ರೈಮಾಸಿಕದಲ್ಲಿ ₹ 247 ಕೋಟಿ ನಷ್ಟ ಅನುಭವಿಸಿದೆ. 2022ರ ಮಾರ್ಚ್ ತ್ರೈಮಾಸಿಕದಲ್ಲಿ ₹8,859 ಕೋಟಿ ಲಾಭ ಆಗಿತ್ತು ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ತೈಲ ಮತ್ತು ಅನಿಲ ಉತ್ಪಾದನೆ ಮಾಡಲು ಕೇಂದ್ರ ಮತ್ತು ರಾಜ್ಯಕ್ಕೆ ನೀಡುವ ಗೌರವಧನಕ್ಕೆ ಸೇವಾ ತೆರಿಗೆ ₹ 12,100 ಕೋಟಿ ತೆಗೆದಿಟ್ಟಿರುವುದೇ ನಷ್ಟಕ್ಕೆ ಕಾರಣ ಎಂದು ಹೇಳಿದೆ.

'ಭಾರತದ ಗಣಿತ, ವಿಜ್ಞಾನ ಶಿಕ್ಷಕರಿಗೆ ಬೇಡಿಕೆ'

ಲಂಡನ್ (ಪಿಟಿಐ): ಇಂಗ್ಲೆಂಡ್‌ನ ಶಾಲೆಗಳಲ್ಲಿ ಭಾರತದ ಗಣಿತ ಮತ್ತು ವಿಜ್ಞಾನ ವಿಷಯಗಳ ಶಿಕ್ಷಕರಿಗೆ ಬೇಡಿಕೆ ಹೆಚ್ಚಿದೆ. ಶಾಲೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ ಬ್ರಿಟನ್ ಕರೆನ್ಸಿ ಜಿಬಿಪಿ 10 ಸಾವಿರ (₹10 ಲಕ್ಷ) ನೀಡಿ ಶಿಕ್ಷಕರನ್ನು ನೇಮಕ ಮಾಡಿಕೊಳ್ಳಲು ಶಾಲೆಗಳು ಮುಂದಾಗಿವೆ ಎಂದು ಮಾಧ್ಯಮಗಳು ಶನಿವಾರ ವರದಿ ಮಾಡಿವೆ.

ಭಾರತ, ನೈಜೀರಿಯಾ ಸೇರಿ ಹಲವು ದೇಶಗಳಿಂದ ಈ ವರ್ಷ ನೂರಾರು ಗಣಿತ, ವಿಜ್ಞಾನ ಶಿಕ್ಷಕರನ್ನು ಕರೆಸಿಕೊಳ್ಳಲಾಗುತ್ತಿದೆ ಎಂದು ದಿ ಟೈಮ್ಸ್ ದೈನಿಕ ವರದಿ ಹೇಳಿದೆ.

ಹಕ್ಕಿ ಬಡಿದ ಶಂಕೆ: ಬೆಂಗಳೂರಿಗೆ ಬಾರದ ನೇಪಾಳ ವಿಮಾನ

ಕಠ್ಮಂಡು (ಪಿಟಿಐ): ಬೆಂಗಳೂರಿಗೆ ಹೊರಟಿದ್ದ ನೇಪಾಳ ಏರ್‌ಲೈನ್ಸ್ ವಿಮಾನವು ಹಕ್ಕಿ ಬಡಿದ ಶಂಕೆಯಿಂದಾಗಿ ಇಲ್ಲಿನ ತ್ರಿಭುವನ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಶನಿವಾರ ಹಿಂತಿರುಗಿದೆ. ವಿಮಾನ ಮಧ್ಯಾಹ್ನ 1.45ಕ್ಕೆ ಟೇಕ್ ಆಫ್ ಆದಾಗ ದೊಡ್ಡ ಶಬ್ದ ಕೇಳಿಸಿದ್ದರಿಂದ ವಿಮಾನವನ್ನು ಕೆಳಗಿಳಿಸಲಾಗಿದೆ ಎಂದು ನಿಲ್ದಾಣದ ವಕ್ತಾರ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಖೇಲೊ ಇಂಡಿಯಾ ಕುಸ್ತಿ: ಕಾಶೀನಾಥ್‌ಗೆ ಚಿನ್ನದ ಪದಕ

ಕಾಶಿನಾಥ್

ಬೆಂಗಳೂರು: ದಾವಣಗೆರೆ ವಿಶ್ವವಿದ್ಯಾಲಯದ ಕಾಶೀನಾಥ್ ಬೀಳಗಿ, ಖೇಲೊ ಇಂಡಿಯಾ ಅಖಿಲ ಭಾರತ ವಿಶ್ವವಿದ್ಯಾಲಯ ಕ್ರೀಡಾಕೂಟದ ಕುಸ್ತಿ ಸ್ಪರ್ಧೆಯಲ್ಲಿ ಶನಿವಾರ ಚಿನ್ನದ ಪದಕ ಗೆದ್ದುಕೊಂಡಿದ್ದಾರೆ. ಗ್ರಿಕೊ ರೋಮನ್ 67 ಕೆ.ಜಿ. ವಿಭಾಗದಲ್ಲಿ ಅವರು ವಿಜೇತರಾದರು.

ದಾವಣಗೆರೆಯ ಕ್ರೀಡಾನಿಲಯದಲ್ಲಿ ತರಬೇತಿ ಪಡೆಯುತ್ತಿರುವ ಕಾಶೀನಾಥ್ ಅವರು ಫೈನಲ್‌ನಲ್ಲಿ 8-0 ಪಾಯಿಂಟ್‌ಗಳಿಂದ ವೀರಬಹಾದ್ದೂರ್ ಸಿಂಗ್ ಪೂರ್ವಾಂಚಲ ವಿಶ್ವವಿದ್ಯಾಲಯದ ವಿಜಯಶಂಕರ್ ಯಾದವ್ ಅವರನ್ನು ಸೋಲಿಸಿದರು. ಸೆಮಿಫೈನಲ್‌ನಲ್ಲಿ ಗ್ವಾಲಿಯರ್‌ನ ಎಲ್‌ಎನ್‌ಐಪಿಇ ತಂಡದ ಪ್ರವೀಣ್ ಅವರನ್ನು ಮಣಿಸಿದ್ದರು ಎಂದು ಅವರ ತರಬೇತುದಾರ ಆರ್. ಶಿವಾನಂದ ಅವರು ತಿಳಿಸಿದ್ದಾರೆ.

ಟೈಗರ್ ಕಪ್: ಡಿಪಿಎಸ್ ಈಸ್ಟ್, ಸೌತ್‌ಗೆ ಜಯ

ಬೆಂಗಳೂರು: ಡಿಪಿಎಸ್ ಈಸ್ಟ್ ತಂಡವು ಟೈಗರ್ ಕಪ್ 14 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಜಯ ಗಳಿಸಿತು.

ಅಲ್ಟಾಯರ್ ಸ್ಪೋರ್ಟ್ಸ್ ಗ್ರೀನ್ ಪಾರ್ಕ್ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಡಿಪಿಎಸ್ ಈಸ್ಟ್ 9 ವಿಕೆಟ್‌ಗಳಿಂದ ಸ್ಕೂಲ್ ಆಫ್ ಕ್ರಿಕೆಟ್ ತಂಡಕ್ಕೆ ಸೋಲುಣಿಸಿತು.

ಇನ್ನೊಂದು ಪಂದ್ಯದಲ್ಲಿ ಡಿಪಿಎಸ್ ಸೌತ್ 131 ರನ್‌ಗಳಿಂದ ಪ್ಯಾಂಥರ್ಸ್ ಕ್ರಿಕೆಟ್ ಅಕಾಡೆಮಿ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರುಗಳು: ಸ್ಕೂಲ್ ಆಫ್ ಕ್ರಿಕೆಟ್: 30 ಓವರ್‌ಗಳಲ್ಲಿ 7 ವಿಕೆಟ್‌ಗೆ 84 (ಮಯೂರ್ ಜೋಷಿ 21; ಪುನೀತ್ 7ಕ್ಕೆ 2, ಆರುಷ್ ಜೈನ್ 15ಕ್ಕೆ 2). ಡಿಪಿಎಸ್ ಈಸ್ಟ್: 11 ಓವರ್‌ಗಳಲ್ಲಿ 1 ವಿಕೆಟ್‌ಗೆ 85 (ಶಹನ್ ಶಾದಾಬ್ 39, ಅಭಿನವ್ ಕುಲಕರ್ಣಿ 27)

ಡಿಪಿಎಸ್ ಸೌತ್: 30 ಓವರ್‌ಗಳಲ್ಲಿ 5 ವಿಕೆಟ್‌ಗೆ 207 (ಶಮಂತಕ್ 88, ರಚಿತ್ ದಾಸ್ 49, ನಿರಂತ್ ಎಸ್. 34ಕ್ಕೆ 3). ಪ್ಯಾಂಥರ್ಸ್ ಕ್ರಿಕೆಟ್ ಅಕಾಡೆಮಿ: 28.5 ಓವರ್‌ಗಳಲ್ಲಿ 76 (ಸಮರ್ಥ್ ಶ್ರೀಕಾಂತ್ 38, ವಿಯಾನ್ ಜೋಷಿ 9ಕ್ಕೆ 3, ಸಮರ್ಥ್ ರತೀಶ್ 0ಕ್ಕೆ 2, ಕಿಶನ್ ಜೆ. 13ಕ್ಕೆ 2)

ಶೂಟಿಂಗ್: ಭವನೀಶ್‌ಗೆ ಐದನೇ ಸ್ಥಾನ

ಅಲ್ಮಾಟಿ, ಕಜಕಸ್ತಾನ (ಪಿಟಿಐ): ಭಾರತದ ಭವನೀಶ್ ಮೆಂಡಿರಟ್ಟಾ ಅವರು ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶಾಟ್‌ಗನ್ ವಿಶ್ವಕಪ್ ಟೂರ್ನಿಯ ಟ್ರ್ಯಾಪ್ ಸ್ಪರ್ಧೆಯಲ್ಲಿ ಐದನೇ ಸ್ಥಾನ ಗಳಿಸಿದರು.

ಎರಡು ದಿನಗಳ ಅರ್ಹತಾ ಸುತ್ತಿನಲ್ಲಿ 125ರ ಪೈಕಿ 121 ಸರಾಸರಿ ಪಾಯಿಂಟ್ಸ್ ಕಲೆಹಾಕಿದ ಭವನೀಶ್, ಜಂಟಿ ನಾಲ್ಕನೇ ಸ್ಥಾನ ಪಡೆದು ಫೈನಲ್ಸ್ ತಲುಪಿದ್ದರು.

ಆದರೆ ಆರು ಮಂದಿಯ ಫೈನಲ್ಸ್‌ನಲ್ಲಿ ಐದನೇ ಸ್ಥಾನ ಪಡೆದರು.

ಎರಡು ಬಾರಿಯ ವಿಶ್ವ ಚಾಂಪಿಯನ್, ಇಟಲಿಯ ಫ್ಯಾಬ್ರಿಜಿ ಮ್ಯಾಸಿಮೊ ಚಿನ್ನ ಗೆದ್ದರು.

ಬೆಳ್ಳಿ ಪದಕವು ಆಸ್ಟ್ರೇಲಿಯಾದ ಜೇಮ್ಸ್ ವಿಲೆಟ್ ಪಾಲಾಯಿತು. ಕುವೈತ್‌ನ ಖಾಲಿದ್ ಅಲ್ಮುದಾಫ್ ಕಂಚಿನ ಪದಕ ತಮ್ಮದಾಗಿಸಿಕೊಂಡರು.

ಭಾರತದ ಇನ್ನಿಬ್ಬರು ಶೂಟರ್‌ಗಳಾದ ಜೊರಾವರ್ ಸಿಂಗ್ ಸಂಧು ಮತ್ತು ಪೃಥ್ವಿರಾಜ್ ತೊಂಡೈಮಲ್ ಕ್ರಮವಾಗಿ 16 ಮತ್ತು 17ನೇ ಸ್ಥಾನ ಗಳಿಸಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

|| Om Sai Ram ||
FEDERAL PUBLIC SCHOOL
(Affiliated to CISCE, New Delhi)
Thanisandra Main Rd., B'lore-64
ಬೇಕಾಗಿದ್ದಾರೆ
5 ವರ್ಷ ಅನುಭವವುಳ್ಳ ಅಡುಗೆ ಭಟ್ಟರು
ಸಹಾಯಕ ಅಡುಗೆ ಭಟ್ಟರು
ಶಾಲಾ ವಾಹನ ಚಾಲಕರು (ಡ್ರೈವರ್) ಬೇಕಾಗಿದ್ದಾರೆ.
:: ಸಂಪರ್ಕಿಸಿ ::
9008581599, 9845860935
federalpublicschool@gmail.com

ಬೊಮ್ಮಸಂದ್ರ ಏರಿಯಾದಲ್ಲಿರುವ ಒಂದು ಪ್ರಮುಖ ಪ್ರಿಂಟಿಂಗ್ & ಪ್ಯಾಕೇಜಿಂಗ್ ಕಂಪನಿಗೆ ಆಫ್ ಸೆಟ್ ಪ್ರಿಂಟರ್ಸ್/ ಅಸಿಸ್ಟಂಟ್ ಪ್ರಿಂಟರ್ಸ್/ ಹೆಲ್ಪರ್ಸ್/ ಪ್ರಿಂಟಿಂಗ್ ಸೂಪರ್ ವೈಸರ್ (ಹೈಡಲ್ಬರ್ಗ್) ಬೇಕಾಗಿದ್ದಾರೆ. ಯುವಿ ಪ್ರಿಂಟಿಂಗ್ ಅನುಭವಿಗಳಿಗೆ ಆದ್ಯತೆ. ಸಂಪರ್ಕಿಸಿ:9940247239

ಬೆಂಗಳೂರಿನ ನಾಗಸಂದ್ರ ಮೆಟ್ರೋ ಸ್ಟೇಷನ್ ಹತ್ತಿರವಿರುವ ತೋಟ ಮತ್ತು ಮನೆ ಕೆಲಸ ಮಾಡಲು ಗಂಡ- ಹೆಂಡತಿ ಬೇಕಾಗಿದ್ದಾರೆ. ವಸತಿ ಉಚಿತ. ಸಂಪರ್ಕಿಸಿ: 9845026475, 9845510722

Teju READY MIX MASALA
REQUIRED SALES REPRESENTATIVE
BANGALORE & MYSORE
(2 Years FMCG Experience)
Contact : J.S. Masala Company
#. 61/7, Petechannappa Industrial Estate, Magadi Main Road, Kamakshipalya, Bangalore - 79.
e-mail : tejumasala@yahoo.com
Web : www.tejumasala.com
9845182939 / 9611679507
8073441013 / 7411143331

Drivers

ಕವಿ ಲಾಜಿಸ್ಟಿಕ್ಸ್ ಬೆಂಗಳೂರು ಹೈದರಾಬಾದ್ ಮಾರ್ಗದಲ್ಲಿ ಚಲಾಯಿಸಲು ಡ್ರೈವರ್ಸ್ ಬೇಕಾಗಿದ್ದಾರೆ, ಹೆವಿ ಡ್ರೈವಿಂಗ್ ಲೈಸೆನ್ಸ್ ನೊಂದಿಗೆ ನಂ.4/1, 2ನೇ ಮುಖ್ಯ ರಸ್ತೆ, ಶ್ರೀರಾಂಪುರಂ, ಬೆಂಗಳೂರು: 9738421001, 9886683188

General

50 ಎಕರೆ ಜಮೀನಿಗೆ ಫಾರಂ/ ಅಗ್ರಿಕಲ್ಚರಲ್ ಸೂಪರ್‌ವೈಸರ್ ಬೇಕಾಗಿದ್ದಾರೆ. ವೇತನರೂ. 18000/- ಉಚಿತ ವಸತಿಸೌಲಭ್ಯ. ಬಿಎಸ್ಸಿ ಅಗ್ರಿ ಅಥವಾ ಅನುಭವಿ ಅಭ್ಯರ್ಥಿಗಳು ಸಂಪರ್ಕಿಸಿ: 9108270569

ಬೇಕಾಗಿದ್ದಾರೆ: PA. To Office. Reception ಹುಡುಗಿಯರು, ಮಹಿಳೆಯರು ಮನೆ ಕೆಲಸಕ್ಕೆ ಬೇಕಾಗಿದ್ದಾರೆ. ಊಟ ವಸತಿ ಉಚಿತ ಕೈತುಂಬ ಸಂಬಳ. Contact: 9902800702

ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

ಬೆಂಗಳೂರಿನ ಎಲೆಕ್ಟ್ರಾನಿಕ್ ಸಿಟಿ ಬಳಿ ಇರುವ ಹಾಸ್ಟೆಲ್‌ಗಾಗಿ ನಾರ್ತ್ ಇಂಡಿಯನ್ ಕುಕ್‌ಗಳು ಮತ್ತು ಸಪ್ಲೈಯರ್‌ಗಳು ತಕ್ಷಣ ಬೇಕಾಗಿದ್ದಾರೆ. ಆಕರ್ಷಕ ಸಂಬಳ. ಸಂಪರ್ಕಿಸಿ: 8892491613, 9739013813

ಮಂಡ್ಯ ಜಿಲ್ಲೆ ನಾಗಮಂಗಲ ತಾll, ದೇವಲಾಪುರ ಹೋಬಳಿ (ಯಡಿಯೂರುನಿಂದ 10 ಕಿಮೀ) ಹನಿ ನೀರಾವರಿ ತೋಟದಲ್ಲಿ ಕೆಲಸ ಮಾಡಲು ಕೆಲಸಗಾರರು ಬೇಕಾಗಿದ್ದಾರೆ. ವಸತಿ ಉಚಿತ, ಉತ್ತಮ ಸಂಬಳ ಕೊಡಲಾಗುವುದು. 8105839708, 9448253867

Multiple Vacancy

ಹೊರನಾಡು, ಕಳಸದ ಹತ್ತಿರವಿರುವ ರೆಸಾರ್ಟ್‌ನಲ್ಲಿ ಕೆಲಸ ಮಾಡಲು ಅಡುಗೆಯವರು, ರೂಮ್ ಬಾಯ್ಸ್ ಬೇಕಾಗಿದ್ದಾರೆ. ಸಂಪರ್ಕಿಸಿ: 9886789567/ 9632365251

Part-Time Jobs

ಮನೆಯಲ್ಲಿಯೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂ ತುಂಬುವ ಮೂಲಕ ತಿಂಗಳಿಗೆ 15,000- 20,000 ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. ತಕ್ಷಣ: 9611227266/ 9611221244

ಮನೆಯಿಂದಲೇ ಪುಸ್ತಕ ಬರೆಯುವ ಫಾರಂ ತುಂಬುವ ಕೆಲಸದ ಮೂಲಕ ತಿಂಗಳಿಗೆ 18,000-22,000/- ಸಂಪಾದಿಸಿ. ಕೊರಿಯರ್ ಇದೆ. 8050064329, 8050064330.

Situation Required

ಖಾಸಗಿ ಲಿಮಿಟೆಡ್ ಲೈಟಿಂಗ್ ಕಂಪನಿಯು ದ್ವಿ ಚಕ್ರ ವಾಹನ ಹೊಂದಿರುವ ಎಲೆಕ್ಟ್ರಿಷಿಯನ್‌ಗಾಗಿ ಹುಡುಕುತ್ತಿದೆ ಬೆಂಗಳೂರಿನಲ್ಲಿ 98450 54158 ಅನ್ನು ಸಂಪರ್ಕಿಸಿ

Engg/ Production Technical

Infra Support
Your complete Engineering partner
Infra Support Engineering Consultants Pvt. Ltd. Is a leading Infrastructure consultant at Bangalore. Infra Support is working on many Major infrastructure works like Highways, Bridges, Interchanges and urban Infra works across country and Karnataka. Infra Support is looking for Design Engineers and Managers at Bangalore office.
Highway Design Engineers having experience 6-8 years, 12 years & above for GM /DGM & Design Engineer positions
Bridge/structural Design Engineers having experience 5-8 years, 12 years & above for GM /DGM & Design Engineer positions
Quantity Survey Engineer having experience 5-10 years or above for Senior QS positions
Send Your CV to hr@infrasupport.in; infra.opportunities@gmail.com www.infrasupport.in

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಭವಿಷ್ಯ

Astrology

ನಂ.1 ವಶೀಕರಣ ಸ್ಪೆಷಲಿಸ್ಟ್, ಪ್ರೀತಿಯಲ್ಲಿ ನಂಬಿಮೋಸ, ಇಷ್ಟಪಟ್ಟವರು ನಿಮ್ಮಂತಾಗಲು ಸ್ತ್ರೀಪುರುಷ ವಶೀಕರಣ, ಶತ್ರುಕಾಟ, ದಾಂಪತ್ಯ ಕಲಹ 2ದಿನಗಳಲ್ಲಿ ಪರಿಹಾರ. 9844174018

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವೈವಾಹಿಕ

Matrimonial Bureaus

Krishna Rukmini Matrimony
Find your perfect partner
ಸರ್ವಧರ್ಮ ವಧು-ವರ ಮಾಹಿತಿ ಕೇಂದ್ರ
www.krishnarukmnimatrimony
ಎಲ್ಲಾ ಜಾತಿ, ಧರ್ಮದ ಸರ್ಕಾರಿ, ಖಾಸಗಿ, ಸ್ವಂತ ಉದ್ಯೋಗ, ವ್ಯಾಪಾರದ ವಧು, ವರರಿಗೆ ಸಂಪರ್ಕಿಸಿ
94834 84379
81972 31078
77956 68121
82776 58328
ಬಾಳೇಹಳ್ಳಿ ವೀರಸಿಂಹಾಸನ ಮಂಗಲ ಮಂಟಪ ಹತ್ತಿರ, ಪಿ.ಬಿ. ರೋಡ, ಕುಮಾರಪಟ್ಟಣ, ತಾ॥ರಾಣೇಬೆನ್ನೂರು, ಜಿ॥ ಹಾವೇರಿ-581123

ಪ್ರವಾಸ

Travel

★ಶ್ರೇಯಸ್ ಟೂರ್ಸ್★
15.06.2023 15ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯಪ್ರವಾಸ (ಅಮರಕಂಠಕ,ಮಯ್ಯಾರ್ ಸಹಿತ).20.06.2023 8ದಿನಗಳು ಕಾಶಿ ನೈಮಿಷಾರಣ್ಯ ಪ್ರಯಾಗ,ಗಯಾ,ಅಯೋಧ್ಯೆ ಇತರೆ.,10.07.2023 12ದಿನಗಳು ಅಮರನಾಥಯಾತ್ರಾ ಲೇ,ಲಡಾಖ್.,23.07.2023 10ದಿನಗಳು ಅಖಂಡ ಕೇರಳ ರಾಜ್ಯಪ್ರವಾಸ.20.06.2023 11ದಿನಗಳು ಚಂಡೀಗಡ್ ಸಿಮ್ಲಾ,ಮನಾಲಿ 5ದೇವಿಯರು ವೈಷ್ಣೋದೇವಿ,ಅಮೃತಸರ್ ವಾಘಗಡಿ,ಕುರುಕ್ಷೇತ್ರ,ದೆಹಲಿ. 8073824856, 6366322639, 9206979202

ಹೆಸರಾಂತ ಪ್ರವಾಸಿ ಸಂಸ್ಥೆಯಿಂದ: ವಿಮಾನ/ AC ಬಸ್ಸು/ AC ರೂಮ್ 01.06.2023 8 ದಿನಗಳ ಕಾಶಿ,ಬುದ್ದಗಯಾ ಅಲಹಾಬಾದ್. 08.06.2023 ಚಾರ್‌ಧಾಮ್ ಸಮೇತ ಪ್ರವಾಸ. 10.06.2023 ನೇಪಾಳ ಮುಕ್ತಿನಾಥ,ಪೋಕ್ರಾ. 23.06.2023 ಸೋಮನಾಥ ನಿಷ್ಕಳಂಕಮಹಾದೇವ ಓಂಕಾರೇಶ್ವರ್ ಮಂಹಾಕಾಳೇಶ್ವರ್. 05.07.2023 14.07.2023 ಅಮರನಾಥ ವೈಷ್ಣೋದೇವಿ,ಕಾಶ್ಮೀರ್ ಗುಲ್ಮಾರ್ಗ್ ಸಂಪರ್ಕಿಸಿ: ಏಷ್ಯನ್ ಟ್ರಾವಲ್ ಏಜೆನ್ಸಿ ಕೆಳಮಹಡಿ ಬೆಂಗಳೂರು-4. 26574131 9448508708 9686708171

ಪ್ರಜಾವಾಣಿ
ಹೆಸರು ಬದಲಾವಣೆಗಾಗಿ
BOOK YOUR NAME CHANGE AD IN PRAJAVANI ALL KARNATAKA ALL DAYS
CHANGE OF NAME @ 50/-* Per Word
*conditions apply
For More Details Contact:
9731810277 | 9901641752
9845114560 | 9886213331
080- 45557160 | 163 | 164

ನೂತನ ಸಂಸತ್ ಭವನ ಉದ್ಘಾಟನೆ ಇಂದು

ಭವನವು ಪ್ರಜಾಪ್ರಭುತ್ವದ ದೇವಾಲಯ: ಪ್ರಧಾನಿ ಮೋದಿ ● ಬೆಳಿಗ್ಗೆಯಿಂದಲೇ ಹಲವು ಕಾರ್ಯಕ್ರಮಗಳು ಶುರು

ಪ್ರಜಾವಾಣಿ ವಾರ್ತೆ

ನವದೆಹಲಿ: ಹಲವು ವಿರೋಧ ಪಕ್ಷಗಳ ಪ್ರಬಲ ವಿರೋಧ ಹಾಗೂ ಬಹಿಷ್ಕಾರದ ನಡುವೆಯೂ ಪ್ರಧಾನಿ ನರೇಂದ್ರ ಮೋದಿ ಅವರು ನೂತನ ಸಂಸತ್ ಭವನವನ್ನು ಭಾನುವಾರ ಉದ್ಘಾಟಿಸಲಿದ್ದಾರೆ.

ಬೆಳಿಗ್ಗೆಯಿಂದಲೇ ಕಾರ್ಯಕ್ರಮಗಳು ಆರಂಭಗೊಳ್ಳಲಿವೆ. ಐತಿಹಾಸಿಕ ಮಹತ್ವ ಹೊಂದಿರುವ 'ಸೆಂಗೋಲ್' ಅನ್ನು ನೂತನ ಸಂಸತ್ತಿನಲ್ಲಿ ಪ್ರತಿಷ್ಠಾಪಿಸುವುದೂ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ.

'ನೂತನ ಭವನವು ಪ್ರಜಾಪ್ರಭುತ್ವದ ದೇವಾಲಯ ಇದ್ದಂತೆ. ಇದು ಭಾರತದ ಅಭಿವೃದ್ಧಿಪಥವನ್ನು ಇನ್ನಷ್ಟು ಬಲಗೊಳಿಸುವುದು ಮತ್ತು ದೇಶದ ಕೋಟಿ ಕೋಟಿ ಜನರನ್ನು ಸಶಕ್ತಗೊಳಿಸುವುದನ್ನು ಮುಂದುವರೆಸುತ್ತದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಟ್ವೀಟ್ ಮಾಡಿದ್ದಾರೆ.

ನೂತನ ಸಂಸತ್ ಭವನದ ವಿಡಿಯೊವನ್ನು 'ಮೈಪಾರ್ಲಿಮೆಂಟ್‌ಮೈಪ್ರೈಡ್' ಹ್ಯಾಷ್‌ಟ್ಯಾಗ್ ಮೂಲಕ ಟ್ವಿಟರ್ ಖಾತೆಗಳಲ್ಲಿ ಹಂಚಿಕೊಳ್ಳುವಂತೆ ಮೋದಿ ಅವರು ಜನತೆಗೆ ಕರೆ ನೀಡಿದ್ದರು. ತಮ್ಮದೇ ಧ್ವನಿಯಲ್ಲಿ ಈ ವಿಡಿಯೊಗಳನ್ನು ಹಂಚುವಂತೆ ಅವರು ಕೋರಿದ್ದರು.

ವಿರೋಧ: ಸಮಾರಂಭವನ್ನು ಬಹಿಷ್ಕರಿಸುವುದಾಗಿ ಸುಮಾರು 20 ವಿರೋಧ ಪಕ್ಷಗಳ ನಾಯಕರು ಈಗಾಗಲೇ ತಿಳಿಸಿದ್ದಾರೆ. ಬುಡಕಟ್ಟು ಸಮುದಾಯಕ್ಕೆ ಸೇರಿದ, ದೇಶದ ಪ್ರಥಮ ಪ್ರಜೆಯಾದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸದೇ ಇರುವ ಕುರಿತು ಪ್ರಮುಖ ವಿರೋಧ ಪಕ್ಷವಾದ ಕಾಂಗ್ರೆಸ್, ಕೇಂದ್ರದ ವಿರುದ್ಧ ಟೀಕಾಪ್ರಹಾರ ನಡೆಸಿದೆ. 'ರಾಷ್ಟ್ರಪತಿಯನ್ನು ಆಹ್ವಾನಿಸದೇ, ಅವರನ್ನು ಮೂಲೆ ಗುಂಪು ಮಾಡಿದ್ದು 'ಪ್ರಜಾಪ್ರಭುತ್ವಕ್ಕೆ ಎಸಗಿದ ಘೋರ ಅಪಮಾನ' ಎಂದು ಕಾಂಗ್ರೆಸ್ ಹೇಳಿದೆ.

ನೂತನ ಸಂಸತ್ ಭವನದ ಒಂದು ನೋಟ (ಎಡ ಚಿತ್ರ). ಪ್ರಧಾನಿ ಮೋದಿ ಅವರಿಗೆ ತಮಿಳುನಾಡಿನ ಅಧೀನಾಮ್ ಮಠದ ಪ್ರತಿನಿಧಿಗಳು ಶನಿವಾರ 'ಸೆಂಗೋಲ್' ಅನ್ನು ಹಸ್ತಾಂತರಿಸಿದರು — ಪಿಟಿಐ ಚಿತ್ರಗಳು

ದೇಶಕ್ಕೆ ಕಾರಣ ನೀಡಿ: ಕಮಲ್ ಹಾಸನ್ ಆಗ್ರಹ

'ನಾನು ಪ್ರಧಾನಿಗೆ ಒಂದು ಸರಳ ಪ್ರಶ್ನೆ ಕೇಳುತ್ತೇನೆ, 'ನೂತನ ಸಂಸತ್ ಭವನದ ಉದ್ಘಾಟನೆಗೆ ಭಾರತದ ರಾಷ್ಟ್ರಪತಿ ಏಕೆ ಭಾಗವಹಿಸಬಾರದು ಎಂಬುದನ್ನು ದೇಶಕ್ಕೆ ತಿಳಿಸಿ' ಎಂದು ಮಕ್ಕಳ್ ನಿದಿ ಮಯ್ಯಂ ಮುಖ್ಯಸ್ಥ, ನಟ ಕಮಲ್ ಹಾಸನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಪ್ರಶ್ನಿಸಿದ್ದಾರೆ.

'ಇಂಥ ಐತಿಹಾಸಿಕ ಘಳಿಗೆಯಲ್ಲಿ ದೇಶದ ಮುಖ್ಯಸ್ಥರಾಗಿ ರಾಷ್ಟ್ರಪತಿ ಅವರು ಕಾರ್ಯಕ್ರಮದಲ್ಲಿ ಏಕೆ ಭಾಗವಹಿಸಬಾರದು ಎಂಬ ಬಗ್ಗೆ ಕಾರಣಗಳೂ ತೋಚುತ್ತಿಲ್ಲ' ಎಂದರು.

'ರಾಷ್ಟ್ರಪತಿ ಅವರನ್ನು ಆಹ್ವಾನಿಸದೇ ಇರುವ ಬಗ್ಗೆ ತಕರಾರು ಇದ್ದರೂ ರಾಷ್ಟ್ರದ ಹಿತದೃಷ್ಟಿಯಿಂದ ಇಡೀ ದೇಶವೇ ಸಂಭ್ರಮಿಸುವ ಈ ಘಳಿಗೆಯಲ್ಲಿ ಪಾಲ್ಗೊಳ್ಳುತ್ತೇನೆ' ಎಂದೂ ಕಮಲ್ ಹಾಸನ್ ಅವರು ಹೇಳಿದ್ದಾರೆ.

ನೂತನ ಸಂಸತ್ ಭವನವನ್ನು ರಾಷ್ಟ್ರಪತಿ ಬದಲು, ಪ್ರಧಾನಿ ಉದ್ಘಾಟಿಸುವ ಮೂಲಕ ದೇಶದ ಪ್ರಜಾಸತ್ತಾತ್ಮಕ ಚೌಕಟ್ಟಿನ ಸಂಪ್ರದಾಯ ಹಾಳುಗೆಡವುತ್ತಿದ್ದಾರೆ
ಗೌರವ್ ವಲ್ಲಬ್, ಕಾಂಗ್ರೆಸ್ ಮುಖಂಡ

ಕೆಲವರನ್ನು ಸಂಸತ್ತಿನಿಂದ ಹೊರ ಹಾಕಿದ್ದು ಬೇರೆ ವಿಷಯ. ಕಲಾಪ ನಡೆಸಲು ಬಿಡುತ್ತಿಲ್ಲ ಎಂದು ಈ ಹಿಂದೆ ಇವರೇ ಹೇಳುತ್ತಿದ್ದರು. ಆದರೆ, ಈಗ ಇವರೇ ಬಹಿಷ್ಕಾರದ ಮಾತನಾಡುತ್ತಿದ್ದಾರೆ
ಅನುರಾಗ್ ಠಾಕೂರ್, ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವ

ಕೇಂದ್ರಕ್ಕೆ ಇತಿಹಾಸದ ಕುರಿತು ಗೌರವ ಇಲ್ಲ. ದೇಶದ ಸ್ವಾತಂತ್ರ್ಯ ಹೋರಾಟಕ್ಕೆ ಯಾವುದೇ ಕೊಡುಗೆ ನೀಡದವರು ಇಂದು ಇತಿಹಾಸವನ್ನು ಬದಲಿಸಲು ಪ್ರಯತ್ನಿಸುತ್ತಿದ್ದಾರೆ
ನಿತೀಶ್ ಕುಮಾರ್, ಬಿಹಾರ ಮುಖ್ಯಮಂತ್ರಿ

ಉದ್ಘಾಟನೆಯ ಬಗ್ಗೆ ನಮ್ಮೊಂದಿಗೆ (ಸಂಸದರು) ಯಾರೂ ಸಮಾಲೋಚನೆ ನಡೆಸಿಲ್ಲ. ಆದ್ದರಿಂದ ವಿರೋಧ ಪಕ್ಷದ ಹಿರಿಯ ನಾಯಕರು ಕಾರ್ಯಕ್ರಮದಿಂದ ದೂರ ಇರಲು ನಿರ್ಧರಿಸಿದರು. ನಾನೂ ಒಪ್ಪಿದೆ
ಶರದ್ ಪವಾರ್, ಎನ್‌ಸಿಪಿ ಮುಖ್ಯಸ್ಥ

ದೆಹಲಿ ವಿಶ್ವವಿದ್ಯಾಲಯದ ಕ್ರಮ

'ಸಾರೇ ಜಹಾಂ ಸೇ ಅಚ್ಛಾ' ಕವಿಯ ಪಠ್ಯಕ್ಕೆ ಕೊಕ್

ನವದೆಹಲಿ (ಪಿಟಿಐ): ದೇಶಭಕ್ತಿಯ ಭಾವನೆಯನ್ನು ಅಭಿವ್ಯಕ್ತಗೊಳಿಸುವ ಜನಪ್ರಿಯ 'ಸಾರೇ ಜಹಾಂ ಸೇ ಅಚ್ಛಾ...' ಗೀತೆಯನ್ನು ರಚಿಸಿದ್ದ ಕವಿ ಇಕ್ಬಾಲ್ ಕುರಿತ ಪಠ್ಯವನ್ನು ದೆಹಲಿ ವಿಶ್ವವಿದ್ಯಾಲಯವು ಬಿ.ಎ ಪದವಿ ಪಠ್ಯಕ್ರಮದಿಂದ ಕೈಬಿಡಲು ತೀರ್ಮಾನಿಸಿದೆ.

ಕವಿ ಇಕ್ಬಾಲ್ ಅವರು ವಿಭಜನಾಪೂರ್ವ ಭಾರತದ ಸಿಯಾಲ್‌ಕೋಟ್‌ನಲ್ಲಿ 1877ರಲ್ಲಿ ಜನಿಸಿದ್ದರು. 'ಸಾರೇ ಜಹಾಂ ಸೇ ಅಚ್ಛಾ.. ಹಿಂದೂಸ್ತಾನ್ ಹಮಾರಾ.. ಹಮಾರಾ' ಗೀತೆಯ ಕರ್ತೃವಾಗಿದ್ದು, ಈ ಗೀತೆಯ ಮೂಲಕ ಜನಮಾನಸದಲ್ಲಿ ನೆಲೆಸಿದ್ದಾರೆ.

ಬಿ.ಎ ಪದವಿಯ 6ನೇ ಸೆಮಿಸ್ಟರ್‌ನ ರಾಜ್ಯಶಾಸ್ತ್ರ ಪಠ್ಯಕ್ರಮದಲ್ಲಿ 'ಮಾಡರ್ನ್ ಇಂಡಿಯಾ ಪೊಲಿಟಿಕಲ್ ಥಾಟ್' ಶೀರ್ಷಿಕೆಯಡಿ ಇದ್ದ ಇಕ್ಬಾಲ್ ಕುರಿತ ಪಠ್ಯ ಕೈಬಿಡುವ ನಿರ್ಣಯವನ್ನು ದೆಹಲಿ ವಿಶ್ವವಿದ್ಯಾಲಯದ ಶೈಕ್ಷಣಿಕ ಮಂಡಳಿ ಸಭೆಯು ಶುಕ್ರವಾರ ಅಂಗೀಕರಿಸಿತು.

ವಿಶ್ವವಿದ್ಯಾಲಯದ ಕ್ರಮವನ್ನು ಬಲವಾಗಿ ಸಮರ್ಥಿಸಿಕೊಂಡಿರುವ ಕುಲಪತಿ ಯೋಗೇಶ್ ಸಿಂಗ್ ಅವರು, 'ದೇಶವನ್ನು ವಿಭಜಿಸುವ ಚಿಂತನೆಗೆ ಅಡಿಗಲ್ಲು ಹಾಕಿದವರ ವಿವರ ಪಠ್ಯಕ್ರಮದಲ್ಲಿ ಇರಕೂಡದು' ಎಂದು ಪ್ರತಿಪಾದಿಸಿದರು. 'ಇಕ್ಬಾಲ್ ಅವರು ಪಾಕಿಸ್ತಾನದ ಕವಿ. ಮುಸ್ಲಿಂ ಲೀಗ್ ಮತ್ತು ಪಾಕಿಸ್ತಾನದ ಪರ ಜನಾಂದೋಲನವನ್ನು ಬೆಂಬಲಿಸಿಯೂ ಅವರು ಪದ್ಯವನ್ನು ಬರೆದಿದ್ದಾರೆ. ದೇಶವನ್ನು ವಿಭಜಿಸಿ, ಪಾಕಿಸ್ತಾನ ರಾಷ್ಟ್ರ ರಚಿಸಬಹುದು ಎಂಬ ಸಲಹೆಯನ್ನು ಮೊದಲಿಗೆ ನೀಡಿದ್ದೇ ಇಕ್ಬಾಲ್. ವಿದ್ಯಾರ್ಥಿಗಳು ಅವರ ಬಗ್ಗೆ ಅಧ್ಯಯನ ಮಾಡುವ ಬದಲು, ದೇಶದ ಸಾಧಕರನ್ನು ಕುರಿತು ಅಧ್ಯಯನ ಮಾಡಲಿ' ಎಂದು ಕುಲಪತಿ ಹೇಳಿದರು.

'ಶೈಕ್ಷಣಿಕ ಮಂಡಳಿ ಸಭೆಯು ಶುಕ್ರವಾರ ಬೆಳಿಗ್ಗೆ 10.30ಕ್ಕೆ ಆರಂಭವಾಗಿ, 15 ಗಂಟೆ ಕಾಲ ನಡೆಯಿತು. ಮಧ್ಯರಾತ್ರಿ 1.20ಕ್ಕೆ ಸಭೆ ಮುಗಿಯಿತು. ಅಂತಿಮವಾಗಿ ಪಠ್ಯವನ್ನು ಕೈಬಿಡುವ ಕುರಿತ ಕುಲಪತಿ ಮಂಡಿಸಿದ ನಿರ್ಣಯವನ್ನು ಅವಿರೋಧವಾಗಿ ಅಂಗೀಕರಿಸಿತು' ಎಂದು ವಿ.ವಿಯ ಹೇಳಿಕೆ ತಿಳಿಸಿದೆ.

ತತ್ವಶಾಸ್ತ್ರ ಪಠ್ಯಕ್ರಮಗಳಿಗೆ ಅನುಮೋದನೆ: ಇದೇ ಸಂದರ್ಭದಲ್ಲಿ ತತ್ವಶಾಸ್ತ್ರ ವಿಭಾಗವು ಬಿ.ಎ ಪದವಿ ಕೋರ್ಸ್‌ಗೆ ಪರಿಚಯಿಸಲು ಸೂಚಿಸಿ ಮಂಡಿಸಿದ ಪಠ್ಯಕ್ರಮಗಳಿಗೂ ಅವಿರೋಧವಾಗಿ ಅನುಮೋದನೆ ನೀಡಿತು. ವಿವಿಧ ಪದವಿ ಕೋರ್ಸ್‌ಗಳ ತತ್ವಶಾಸ್ತ್ರ ವಿಭಾಗದಲ್ಲಿ 'ಫಿಲಾಸಫಿ ಆಫ್ ಡಾ.ಅಂಬೇಡ್ಕರ್', 'ಫಿಲಾಸಫಿ ಆಫ್ ಮಹಾತ್ಮಗಾಂಧಿ', 'ಫಿಲಾಸಫಿ ಆಫ್ ಸ್ವಾಮಿ ವಿವೇಕಾನಂದ' ಸೇರಿವೆ.

'ಸ್ವಾತಂತ್ರ್ಯ ಹೋರಾಟ, ದೇಶ ವಿಭಜನೆ ಅಧ್ಯಯನಕ್ಕಾಗಿ ಪೀಠ ಸ್ಥಾಪನೆ'

ವಿಶ್ವವಿದ್ಯಾಲಯದ ಹೇಳಿಕೆಯ ಪ್ರಕಾರ, ವಿ.ವಿ.ಯಲ್ಲಿ 'ಸ್ವಾತಂತ್ರ್ಯ ಮತ್ತು ವಿಭಜನೆ ಅಧ್ಯಯನ ಕೇಂದ್ರ' ಪೀಠವನ್ನು ಸ್ಥಾಪಿಸುವ ಪ್ರಸ್ತಾಪಕ್ಕೂ ಶೈಕ್ಷಣಿಕ ಮಂಡಳಿ ಸಭೆಯು ಅನುಮೋದನೆ ನೀಡಿತು.

'ಸ್ವಾತಂತ್ರ್ಯ ಹೋರಾಟ ಸಂದರ್ಭದ ತೆರೆಮರೆಯ ಸಾಧಕರು, ಸ್ವಾತಂತ್ರ್ಯ ಚಳವಳಿ ಹಾಗೂ ಇತಿಹಾಸದಲ್ಲಿ ದಾಖಲಾಗದೇ ಉಳಿದ ವಿವಿಧ ಅಂಶಗಳು, ಬೆಳವಣಿಗೆಗಳ ಸಂಶೋಧನೆಯ ನಿಟ್ಟಿನಲ್ಲಿ ಈ ಕೇಂದ್ರವು ಕಾರ್ಯತತ್ಪರವಾಗಲಿದೆ' ಎಂದು ತಿಳಿಸಿದೆ.

'ಮಾನವೀಯತೆ ಆಧಾರದಲ್ಲಿ ನೆಟ್ಟಾರು ಪತ್ನಿಗೆ ಉದ್ಯೋಗ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರವೀಣ್ ನೆಟ್ಟಾರು ಅವರ ಪತ್ನಿ ನೂತನ ಕುಮಾರಿ ಅವರ ನೇಮಕಾತಿಯನ್ನು ವಿಶೇಷ ಪ್ರಕರಣವೆಂದು ಪರಿಗಣಿಸಿ ಮಾನವೀಯತೆ ಆಧಾರದಲ್ಲಿ ಮರು ನೇಮಕ ಮಾಡಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದಾರೆ.

'ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಬಳಿಕ ಪ್ರವೀಣ್ ನೆಟ್ಟಾರು ಪತ್ನಿಗೆ ಅನುಕಂಪದ ಆಧಾರದಲ್ಲಿ ನೀಡಿದ್ದ ಕೆಲಸವನ್ನು ವಾಪಸ್ ಪಡೆದಿದೆ' ಎಂಬ ಆರೋಪಕ್ಕೆ ಟ್ವೀಟ್ ಮೂಲಕ ಅವರು ಪ್ರತಿಕ್ರಿಯಿಸಿದ್ದಾರೆ.

'ಹೊಸ ಸರ್ಕಾರ ಬಂದ ನಂತರ ಹಿಂದಿನ ಸರ್ಕಾರ ನೇಮಕ ಮಾಡಿಕೊಂಡಿದ್ದ ತಾತ್ಕಾಲಿಕ ನೌಕರರನ್ನು ಸರ್ಕಾರಿ ಸೇವೆಯಿಂದ ವಜಾ ಮಾಡುವುದು ಒಂದು ಸಹಜ ಪ್ರಕ್ರಿಯೆ. ಪ್ರವೀಣ್ ನೆಟ್ಟಾರು ಅವರ ಪತ್ನಿ ಮಾತ್ರವಲ್ಲ ಸುಮಾರು 150ಕ್ಕೂ ಹೆಚ್ಚು ಗುತ್ತಿಗೆ ನೌಕರರನ್ನು ಈಗಾಗಲೇ ಸೇವೆಯಿಂದ ವಜಾ ಮಾಡಲಾಗಿದೆ. ಇದರಲ್ಲಿ ಸರ್ಕಾರದ ಯಾವುದೇ ಹಸ್ತಕ್ಷೇಪ ಇಲ್ಲ' ಎಂದೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದ್ದಾರೆ.

ಈ ಬಗ್ಗೆ ಸುದ್ದಿಗಾರರ ಜೊತೆ ಮಾತನಾಡಿದ ಸಚಿವ ರಾಮಲಿಂಗಾರೆಡ್ಡಿ, 'ಪ್ರವೀಣ್ ನೆಟ್ಟಾರು ಅವರ ಪತ್ನಿಗೆ ಬಿಜೆಪಿ ಮೋಸ ಮಾಡಿದೆ. ತಾತ್ಕಾಲಿಕ ಹುದ್ದೆ ಯಾಕೆ ಕೊಡಬೇಕಿತ್ತು? ಬಿಜೆಪಿ ಅಧಿಕಾರದಲ್ಲಿದ್ದಾಗ ಕಾಯಂ ಉದ್ಯೋಗವನ್ನೇ ಕೊಡಬೇಕಿತ್ತು' ಎಂದು ಹೇಳಿದರು.

'ಬಿಜೆಪಿ ದ್ವೇಷದ ರಾಜಕಾರಣ ಮಾಡುತ್ತಿದೆ. ಸಿದ್ಧರಾಮಯ್ಯ ವಿರುದ್ದ ಅಶ್ವತ್ಥನಾರಾಯಣ್ ನೀಡಿದ್ದ ಹೇಳಿಕೆ ಸರಿಯೇ? ಸಿದ್ಧರಾಮಯ್ಯ ಅವರು 24 ಹಿಂದೂ ಕಾರ್ಯಕರ್ತರನ್ನು ಕೊಲೆ ಮಾಡಿದ್ದಾರೆ ಎಂದು ಹರೀಶ್ ಪೂಂಜಾ ಅವರು ಕೂಡಾ ಹೇಳಿಕೆ ಕೊಟ್ಟಿದ್ದಾರೆ. ಇದು ದ್ವೇಷದ ರಾಜಕಾರಣ' ಎಂದೂ ಅವರು ಹರಿಹಾಯ್ದರು.

ಜನಗಣತಿ: ಆರು ಧರ್ಮಗಳಷ್ಟೇ ಆಧಾರ

ಪ್ರಜಾವಾಣಿ ವಾರ್ತೆ

ನವದೆಹಲಿ: ಲಿಂಗಾಯತ ಸೇರಿದಂತೆ ವಿವಿಧೆಡೆ, ಹಲವು ಸಮುದಾಯಗಳಿಂದ ಪ್ರತ್ಯೇಕ ಧರ್ಮದ ಮಾನ್ಯತೆಗಾಗಿ ಕೇಳಿಬಂದಿದ್ದ ತೀವ್ರ ಒತ್ತಡ ಹಾಗೂ ಪ್ರತಿಭಟನೆಗಳ ಹೊರತಾಗಿಯೂ ಜನಗಣತಿಯಲ್ಲಿ ಪ್ರಮುಖವಾಗಿ ಆರು ಧರ್ಮಗಳನ್ನಷ್ಟೇ ಪರಿಗಣಿಸಲು ತೀರ್ಮಾನಿಸಲಾಗಿದೆ.

ಹಿಂದೂ, ಮುಸ್ಲಿಂ, ಕ್ರೈಸ್ತ, ಬೌದ್ಧ, ಸಿಖ್ ಮತ್ತು ಜೈನ ಧರ್ಮಗಳನ್ನು ಆಧರಿಸಿ ಮುಂದಿನ ಜನಗಣತಿ ನಡೆಯಲಿದೆ. ಈ ಕುರಿತ ಕಾಲಂನಲ್ಲಿ ಇತರೆ ಯಾವುದೇ ಧರ್ಮ ಉಲ್ಲೇಖಿಸಲು ಅವಕಾಶವಿದೆ. ಆದರೆ, ಅದಕ್ಕಾಗಿ ಪ್ರತ್ಯೇಕವಾಗಿ ಕೋಡ್ ನಿಗದಿಪಡಿಸಿರುವುದಿಲ್ಲ.

ಈ ಮಾಹಿತಿಯನ್ನು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಈಚೆಗೆ ಗಣತಿ ಭವನದಲ್ಲಿ ಬಿಡುಗಡೆ ಮಾಡಿರುವ '1981ರಿಂದ ಭಾರತದಲ್ಲಿ ಜನಗಣತಿ' ಕುರಿತ ಕೈಪಿಡಿಯಲ್ಲಿ ಉಲ್ಲೇಖಿಸಲಾಗಿದೆ.

ಲಿಂಗಾಯತ ಅಲ್ಲದೆ, ಪ್ರತ್ಯೇಕ ಧರ್ಮದ ಮಾನ್ಯತೆ ನೀಡಬೇಕು ಎಂಬ ಒತ್ತಡ ಜಾರ್ಖಂಡ್, ಛತ್ತೀಸಗಢ, ಒಡಿಶಾದಲ್ಲೂ ಅಲ್ಲಿನ ಸ್ಥಳೀಯ ಸಮುದಾಯಗಳಿಂದ ಕೇಳಿಬಂದಿತ್ತು. ಅಲ್ಲಿ, ಪ್ರಕೃತಿಯನ್ನು ಆರಾಧಿಸುವ ಜನರು 'ಸರ್ನಾ'ಗೆ ಪ್ರತ್ಯೇಕ ಧರ್ಮದ ಮಾನ್ಯತೆ ನೀಡಬೇಕು ಎಂದು ಒತ್ತಾಯಿಸಿ ಹೋರಾಟ ನಡೆಸಿದ್ದರು.

ಜನಗಣತಿ ಅಧಿಕಾರಿಗಳ ಪ್ರಕಾರ, ಧರ್ಮವಾರು ಕೋಡ್‌ಗಳನ್ನು ಜನಗಣತಿ 2011ರ ದತ್ತಾಂಶ ಆಧರಿಸಿ ಹಾಗೂ ದತ್ತಾಂಶದ ಬಳಕೆದಾರರ ಸಮ್ಮೇಳನದಲ್ಲಿ ಭಾಗಿದಾರರ ಜೊತೆಗಿನ ಚರ್ಚೆಯನ್ನು ಆಧರಿಸಿ ಆರು ಧರ್ಮಗಳಿಗಷ್ಟೇ ನೀಡಲಾಗಿದೆ.

ಎರಡು ಹಂತಗಳಲ್ಲಿ 'ಜನಗಣತಿ–2021' ನಡೆಸಲು ಉದ್ದೇಶಿಸಲಾಗಿತ್ತು. ಕೋವಿಡ್ ಕಾರಣದಿಂದ ಅನಿರ್ದಿಷ್ಟಾವಧಿಗೆ ಅದನ್ನು ಮುಂದೂಡಲಾಗಿತ್ತು. ಜನಗಣತಿ ಪ್ರಕ್ರಿಯೆ ನಡೆಯುವ ಪರಿಷ್ಕೃತ ವೇಳಾಪಟ್ಟಿ ಕುರಿತ ವಿವರಗಳನ್ನು ಇನ್ನೂ ಪ್ರಕಟಿಸಿಲ್ಲ. ಮುಂದಿನ ಜನಗಣತಿ ಪ್ರಕ್ರಿಯೆಗೆ ಡಿಜಿಟಲ್ ಸ್ಪರ್ಶವಿರಲಿದೆ. ಜನರು ಮನೆಯಲ್ಲಿ ಕುಳಿತೇ ಪ್ರಶ್ನೋತ್ತರ ಭರ್ತಿ ಮಾಡಬಹುದು.

ಮೊದಲ ಹಂತದಲ್ಲಿ ಮನೆ ಮನೆ ಗಣತಿ, ಕುಟುಂಬಗಳ ಮಾಹಿತಿ ಪಡೆಯಲಿದ್ದು, 31 ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಜ.9, 2020ರಲ್ಲಿಯೇ ಅಧಿಸೂಚನೆ ಹೊರಬಿದ್ದಿದೆ. 2ನೇ ಹಂತದ ಜನಗಣತಿಯಲ್ಲಿ 28 ಪ್ರಶ್ನೆಗಳಿರುತ್ತವೆ. ಈ ಕುರಿತು ಇನ್ನು ಅಧಿಸೂಚನೆ ಪ್ರಕಟಿಸಬೇಕಾಗಿದೆ.

ಪ್ರಾಕೃತಿಕ ವಿಕೋಪ ಸೇರ್ಪಡೆ: ಜನರ ವಲಸೆಗೆ ಕಾರಣ ಆಗಬಹುದಾದ ಪರಿಣಾಮಗಳ ಪಟ್ಟಿಗೆ ಪ್ರಾಕೃತಿಕ ವಿಕೋಪವನ್ನೂ ಸೇರಿಸಲಾಗಿದೆ. ಶಿಕ್ಷಣ, ಮದುವೆ, ಕೆಲಸ ಹೊರತುಪಡಿಸಿ ಕುಟುಂಬ/ಒಬ್ಬರೇ ವಲಸೆ ಹೋಗಲು ಪ್ರಕೃತಿ ವಿಕೋಪ ಕಾರಣವೇ ಎಂದು ತಿಳಿಯುವುದು ಇದರ ಉದ್ದೇಶ.

ಎರಡನೇ ಹಂತದ ಗಣತಿಯಲ್ಲಿ ಇದೇ ಮೊದಲ ಬಾರಿಗೆ ಹೆಚ್ಚುವರಿ ಮಾಹಿತಿ ದಾಖಲಿಸಲು ಕೋಡ್ ಮಾದರಿ ಅನುಸರಿಸಲಾಗುತ್ತದೆ. ಕುಟುಂಬದ ಮುಖ್ಯಸ್ಥರ ಜೊತೆಗಿನ ಸಂಬಂಧ, ಮಾತೃಭಾಷೆ, ತಿಳಿದಿರುವ ಇತರೆ ಭಾಷೆಗಳು, ವೃತ್ತಿ, ಕೆಲಸ/ಸೇವೆಯ ಸ್ವರೂಪ, ಜನ್ಮಸ್ಥಳ, ಪರಿಶಿಷ್ಟ ಜಾತಿ, ಪಂಗಡ ಇತ್ಯಾದಿ ವಿವರ ದಾಖಲಾಗಿದೆ ನಿರ್ದಿಷ್ಟ ಕೋಡ್ ಇರುತ್ತವೆ. ಪೂರಕವಾಗಿ ಬರುವ ಸಂಭವನೀಯ ಉತ್ತರಗಳನ್ನು ದಾಖಲಿಸಲು ಉಪ ಕೋಡ್ ಬಳಸಲಾಗುತ್ತದೆ ಎಂದು ವರದಿ ತಿಳಿಸಿದೆ.

ವಾಸವಿರುವುದು ಸ್ವಂತ ಮನೆಯಾ?

ನೀವು ಮಿನರಲ್ ನೀರು ಕುಡಿಯುತ್ತೀರಾ, ಬಾಟಲ್ ನೀರು ಕುಡಿಯುತ್ತೀರಾ? ಮೆಟ್ರೊ ರೈಲು ಬಳಸುತ್ತೀರಾ? ಎಷ್ಟು ಗಂಟೆ, ಎಷ್ಟು ನಿಮಿಷ ಪ್ರಯಾಣಿಸುತ್ತೀರಿ? ನಿಮ್ಮ ಪ್ರಯಾಣದ ಒಟ್ಟು ಅವಧಿ ಎಷ್ಟು?

ಮುಂದಿನ ಜನಗಣತಿ ವೇಳೆ ಕೇಳುವ ಪ್ರಶ್ನೆಗಳಲ್ಲಿ ಇವು ಕೂಡಾ ಸೇರಿರುತ್ತವೆ ಎಂದು ತಿಳಿಸಲಾಗಿದೆ. ಅಂಗವಿಕಲರಾಗಿದ್ದಲ್ಲಿ ಅದಕ್ಕೆ ಕಾರಣವೇನು? ಆ್ಯಸಿಡ್ ದಾಳಿ, ಬೌದ್ಧಿಕ ಅಂಗವಿಕಲತೆ, ಗಂಭೀರ ಸ್ವರೂಪದ ನರರೋಗ, ರಕ್ತದಲ್ಲಿನ ಏರುಪೇರು... ಇತ್ಯಾದಿ ಪ್ರಶ್ನೆಗಳು ಇರುತ್ತವೆ.

ವಾಸವಿರುವುದು ಸ್ವಂತ ಮನೆಯಾ, ಬಾಡಿಗೆಯಾ? ನೀರಿನ ಲಭ್ಯತೆ ಇದೆಯಾ? ಇದ್ದರೆ ಎಷ್ಟು ದೂರ? ಮನೆಯ ಹತ್ತಿರದಲ್ಲಿ, ನಗರ ಪ್ರದೇಶದಲ್ಲಿಯಾದರೆ 100 ಮೀಟರ್ ವ್ಯಾಪ್ತಿಯಲ್ಲಿ, ಗ್ರಾಮೀಣ ವ್ಯಾಪ್ತಿಯಲ್ಲಿಯಾದರೆ 500 ಮೀಟರ್ ವ್ಯಾಪ್ತಿಯಲ್ಲಿ ಇದೆಯಾ ಎಂಬ ಪ್ರಶ್ನೆಗಳಿರುತ್ತವೆ.

ಕನ್ನಡ ಮಾಧ್ಯಮದಲ್ಲಿ ಪಿಯುಸಿ ವಿಜ್ಞಾನ ಶಿಕ್ಷಣ ಸಂಪೂರ್ಣ ಉಚಿತ

ಪ್ರಜಾವಾಣಿ ವಾರ್ತೆ

ಮೈಸೂರು: ಕನ್ನಡ ಮಾಧ್ಯಮದಲ್ಲಿ ಪಿಯುಸಿ ವಿಜ್ಞಾನ ಮತ್ತು ವಾಣಿಜ್ಯ ವಿಷಯಗಳನ್ನು ಬೋಧಿಸುತ್ತಿರುವ ರಾಜ್ಯದ ಏಕೈಕ ಕಾಲೇಜಾದ, ಇಲ್ಲಿನ ನೃಪತುಂಗ ಪದವಿಪೂರ್ವ ಕಾಲೇಜಿನಲ್ಲಿ ವಿಜ್ಞಾನ ಶಿಕ್ಷಣವನ್ನು ಎರಡು ವರ್ಷ ಸಂಪೂರ್ಣ ಉಚಿತವಾಗಿ ನೀಡಲಾಗುತ್ತಿದೆ. ವಸತಿ ಸೌಲಭ್ಯವೂ ಉಚಿತ.

ಪ್ರಸಕ್ತ ಸಾಲಿನಲ್ಲಿ ಪಿಸಿಎಂಬಿ (ಭೌತವಿಜ್ಞಾನ, ರಸಾಯನವಿಜ್ಞಾನ, ಜೀವವಿಜ್ಞಾನ, ಗಣಿತ) ಮತ್ತು ಪಿಸಿಎಂಸಿಎಸ್ (ಭೌತವಿಜ್ಞಾನ, ರಸಾಯನ ವಿಜ್ಞಾನ, ಗಣಿತ ಹಾಗೂ ಕಂಪ್ಯೂಟರ್ ವಿಜ್ಞಾನ) ಐಚ್ಛಿಕ ವಿಷಯಗಳು ಲಭ್ಯ.

'ವಾಣಿಜ್ಯ ವಿಭಾಗಕ್ಕೆ ಕೈಗೆಟಕುವ ಶುಲ್ಕ ನಿಗದಿ ಮಾಡಲಾಗಿದ್ದು, ಐಚ್ಛಿಕ ವಿಷಯಗಳಲ್ಲಿ ಕಂಪ್ಯೂಟರ್ ವಿಜ್ಞಾನದ ಕಲಿಕೆ ಕಡ್ಡಾಯ' ಎಂದು ಕನ್ನಡ ವಿಕಾಸ ಶೈಕ್ಷಣಿಕ, ಸಾಮಾಜಿಕ, ಸಾಂಸ್ಕೃತಿಕ ಸಂಸ್ಥೆಯ ಉಪಾಧ್ಯಕ್ಷ ಸ.ರ. ಸುದರ್ಶನ ತಿಳಿಸಿದ್ದಾರೆ.

'ನೀಟ್ ಮತ್ತು ಸಿಇಟಿ ಪರೀಕ್ಷೆಗಳಲ್ಲಿ ಕನ್ನಡದಲ್ಲಿ ಉತ್ತರಿಸಲು ಅವಕಾಶ ಸಿಕ್ಕಿದ್ದು, ರಾಜ್ಯದಾದ್ಯಂತ ಗ್ರಾಮೀಣ ವಿದ್ಯಾರ್ಥಿಗಳು ಜೂನ್ 3ರ ಒಳಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು' ಎಂದು ಹೇಳಿದ್ದಾರೆ.

ಅರ್ಜಿ ಸಲ್ಲಿಸಲು: kannadavikas1989@gmail.com ಹೆಚ್ಚಿನ ವಿವರಕ್ಕೆ:63667 09737.

ರೇಕಲಮರಡಿ ಘಟನೆ: ಪಿಡಿಒ ಅಮಾನತು

ಪ್ರಜಾವಾಣಿ ವಾರ್ತೆ

ದೇವದುರ್ಗ (ರಾಯಚೂರು): ತಾಲ್ಲೂಕಿನ ರೇಕಲಮರಡಿ ಗ್ರಾಮದಲ್ಲಿ ಕಲುಷಿತ ನೀರು ಕುಡಿದು ಮೂರು ವರ್ಷದ ಬಾಲಕ ಮೃತಪಟ್ಟ ಘಟನೆ ಸಂಬಂಧ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ರೇಣುಕಾ ಅವರನ್ನು ಅಮಾನತು ಮಾಡಲಾಗಿದೆ. ಈ ಸಂಬಂಧ ಜಿಲ್ಲಾ ಪಂಚಾಯಿತಿ ಸಿಇಒ ಅಮಾನತು ಮಾಡಿ ಶನಿವಾರ ಆದೇಶ ಹೊರಡಿಸಿದ್ದಾರೆ.

ಕಲುಷಿತ ನೀರು ಕುಡಿದು ಅಸ್ವಸ್ಥರಾದ ಜನರಿಗೆ ವೈದ್ಯರ ತಂಡ ಚಿಕಿತ್ಸೆ ಮುಂದುವರಿಸಿದೆ. ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿಶೇಷ ತುರ್ತು ಚಿಕಿತ್ಸಾ ಘಟಕ ಸ್ಥಾಪಿಸಿ, ಚಿಕಿತ್ಸೆ ನೀಡಲಾಗುತ್ತಿದೆ.

'ಗ್ರಾಮದ ಪ್ರತಿಯೊಂದು ಕುಟುಂಬದ ಸದಸ್ಯರ ಮೇಲೆ ನಿಗಾ ವಹಿಸಿದ್ದೇವೆ. ತಪಾಸಣೆಗೆ ಹಿಂದೇಟು ಹಾಕುವವರ ಮನೆ–ಮನೆಗೆ ಆರೋಗ್ಯ ಇಲಾಖೆ ಸಿಬ್ಬಂದಿ, ಕಾರ್ಯಕರ್ತರು ಭೇಟಿ ನೀಡಿ ಆರೋಗ್ಯ ವಿಚಾರಿಸುತ್ತಿದ್ದಾರೆ. ಅಗತ್ಯವಿದ್ದರೆ ಜಿಲ್ಲಾ–ತಾಲ್ಲೂಕು ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ವ್ಯವಸ್ಥೆ ಮಾಡಲಾಗುವುದು' ಎಂದು ತಾಲ್ಲೂಕು ಆರೋಗ್ಯಾಧಿಕಾರಿ ಡಾ.ಬನದೇಶ್ವರ ಅವರು ಮಾಹಿತಿ ನೀಡಿದ್ದಾರೆ.

ಸುಗ್ರೀವಾಜ್ಞೆ ವಾಪಸ್: ಕೆಸಿಆರ್ ಆಗ್ರಹ

ಹೈದರಾಬಾದ್ (ಪಿಟಿಐ): 'ದೆಹಲಿ ಸೇವಾ ವಿಷಯಗಳ ಆಡಳಿತಾತ್ಮಕ ನಿಯಂತ್ರಣ ಕುರಿತು ಹೊರಡಿಸಿರುವ ಸುಗ್ರೀವಾಜ್ಞೆಯನ್ನು ಕೇಂದ್ರ ಸರ್ಕಾರ ಕೂಡಲೇ ಹಿಂಪಡೆಯಬೇಕು. ಇಲ್ಲವಾದರೆ ಅದಕ್ಕೆ ಲೋಕಸಭೆಯಲ್ಲಿ ಸೋಲು ನಿಶ್ಚಿತ' ಎಂದು ತೆಲಂಗಾಣ ಮುಖ್ಯಮಂತ್ರಿ ಕೆ. ಚಂದ್ರಶೇಖರ್ ರಾವ್ ಅವರು, ಪ್ರಧಾನಿ ನರೇಂದ್ರ ಮೋದಿಗೆ ಒತ್ತಾಯಿಸಿದ್ದಾರೆ.

ಸುಗ್ರೀವಾಜ್ಞೆ ವಿರುದ್ಧದ ಹೋರಾಟಕ್ಕೆ ಬೆಂಬಲ ಕೋರಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಮತ್ತು ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಅವರು ಚಂದ್ರಶೇಖರ್ ರಾವ್ ಜೊತೆಗೆ ಶನಿವಾರ ಚರ್ಚಿಸಿದರು.

ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಚಂದ್ರಶೇಖರ್ ರಾವ್, 'ಮೋದಿ ಅವರು ಸ್ವಯಂಪ್ರೇರಣೆಯಿಂದ ಸುಗ್ರೀವಾಜ್ಞೆಯನ್ನು ಹಿಂದಕ್ಕೆ ಪಡೆಯಬೇಕು. ಇಲ್ಲವಾದರೆ ನಾವು ಕೇಜ್ರಿವಾಲ್‌ಗೆ ಬೆಂಬಲ ನೀಡುತ್ತೇವೆ. ಲೋಕಸಭೆ ಮತ್ತು ರಾಜ್ಯಸಭೆಯಲ್ಲಿ ಇದರ ವಿರುದ್ಧ ಮತ ಚಲಾಯಿಸುತ್ತೇವೆ' ಎಂದರು.

ದೆಹಲಿ ಸರ್ಕಾರ ಸುಗಮವಾಗಿ ಕಾರ್ಯ ನಿರ್ವಹಿಸಲು ಅನುವು ಮಾಡಿಕೊಡಬೇಕು. ಅನಗತ್ಯವಾಗಿ ಗೊಂದಲ ಸೃಷ್ಟಿಸುವುದು ಸರಿಯಲ್ಲ ಎಂದು ಹೇಳಿದರು.

ಸುಗ್ರೀವಾಜ್ಞೆ ಜಾರಿ ಮೂಲಕ ದೆಹಲಿಯ ಜನರಿಗೆ ಕೇಂದ್ರ ಸರ್ಕಾರ ಅವಮಾನ ಮಾಡಿದೆ. ಪ್ರಜಾಸತ್ತಾತ್ಮಕವಾಗಿ ಅಧಿಕಾರಕ್ಕೆ ಬಂದಿರುವ ಚುನಾಯಿತ ಸರ್ಕಾರಕ್ಕೆ ಕೇಂದ್ರವು ಕಿರುಕುಳ ನೀಡುತ್ತಿದೆ. ತುರ್ತುಪರಿಸ್ಥಿತಿ ಜಾರಿಯಲ್ಲಿದ್ದ ಕಾಲಕ್ಕೂ, ಈಗಿನ ಪರಿಸ್ಥಿತಿಗೂ ಯಾವುದೇ ವ್ಯತ್ಯಾಸವಿಲ್ಲ ಎಂದರು.

ನಾಲ್ಕು ದೇವಾಲಯಗಳಲ್ಲಿ ವಸ್ತ್ರಸಂಹಿತೆ ಜಾರಿ

ನಾಗ್ಪುರ (ಪಿಟಿಐ): ಮಹಾರಾಷ್ಟ್ರದ ನಾಗ್ಪುರ ಜಿಲ್ಲೆಯ ನಾಲ್ಕು ದೇವಾಲಯಗಳಲ್ಲಿ ಭಕ್ತರಿಗೆ ವಸ್ತ್ರಸಂಹಿತೆಯನ್ನು ಜಾರಿಗೊಳಿಸಲಾಗಿದೆ ಎಂದು ಮಹಾರಾಷ್ಟ್ರ ಮಂದಿರ ಮಹಾಸಂಘವು (ರಾಜ್ಯ ದೇವಾಲಯಗಳ ಒಕ್ಕೂಟ) ತಿಳಿಸಿದೆ.

'ಮೇ 26ರಿಂದಲೇ ಧಾಂತೋಳಿಯ ಗೋಪಾಲಕೃಷ್ಣ ದೇವಾಲಯ, ಬೆಳ್ಳೂರಿನ ಸಂಕಟಮೋಚನ ಪಂಚ ಮುಖಿ ಹನುಮಾನ್ ದೇವಾಲಯ (ಸಾಯೋನೆರ್), ಕನೋಲಿಬರದ ಬೃಹಸ್ಪತಿ ದೇವಾಲಯ ಮತ್ತು ನಾಗ್ಪುರ ನಗರದ ದುರ್ಗಾಮಾತಾ ದೇವಾಲಯದಲ್ಲಿ ಭಕ್ತರಿಗೆ ವಸ್ತ್ರಸಂಹಿತೆ ಜಾರಿಗೊಳಿಸಲಾಗಿದೆ. ಸಂಘವು ಮಹಾರಾಷ್ಟ್ರದ ಎಲ್ಲಾ ದೇವಾಲಯಗಳಲ್ಲೂ ವಸ್ತ್ರಸಂಹಿತೆ ಜಾರಿಗೊಳಿಸಲು ಮುಂದಾಗಿದೆ' ಎಂದು ಸಂಘದ ಸಂಯೋಜಕ ಸುನೀಲ್ ಘನವತ್ ಅವರು ತಿಳಿಸಿದ್ದಾರೆ.

'ಭಕ್ತರು ಯಾವುದೇ ರೀತಿಯ ಆಕ್ಷೇಪಾರ್ಹವಾದ ಉಡುಪುಗಳನ್ನು ಧರಿಸಬಾರದು ಎಂಬುದನ್ನು ಫೆಬ್ರುವರಿಯಲ್ಲಿ ಜಲಗಾಂವ್‌ನಲ್ಲಿ ನಡೆದ ಮಹಾರಾಷ್ಟ್ರ ದೇವಾಲಯ ಟ್ರಸ್ಟ್ ಕೌನ್ಸಿಲ್ ಸಭೆಯ ಬಳಿಕ ನಿರ್ಧರಿಸಲಾಗಿದೆ' ಎಂದೂ ಅವರು ತಿಳಿಸಿದ್ದಾರೆ.

'ದೇವಾಲಯಗಳ ಪಾವಿತ್ರ್ಯವನ್ನು ರಕ್ಷಿಸುವುದು ಪ್ರಾಥಮಿಕ ಉದ್ದೇಶವಾಗಿದ್ದು, ಇಂತಹ ನಿಯಮಗಳು ಅನೇಕ ದೇವಾಲಯಗಳಲ್ಲಿ ಈಗಾಗಲೇ ಜಾರಿಯಲ್ಲಿವೆ. ಸರ್ಕಾರದ ನಿಯಂತ್ರಣದಲ್ಲಿರುವ ದೇವಾಲಯಗಳಲ್ಲೂ ವಸ್ತ್ರಸಂಹಿತೆ ನಿಯಮವನ್ನು ಜಾರಿಗೊಳಿಸಲು ಮುಖ್ಯಮಂತ್ರಿ ಏಕನಾಥ ಶಿಂದೆ ಮತ್ತು ಉಪಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರಿಗೂ ಮನವಿ ಮಾಡಲಾಗುವುದು' ಎಂದು ಘನವತ್ ಅವರು ಹೇಳಿದ್ದಾರೆ.

ರಾಜ್ಯದ ಸುಪ್ರಸಿದ್ಧ ತುಳಜಾ ಭವಾನಿ ದೇವಸ್ಥಾನದಲ್ಲಿ ಶಾರ್ಟ್ಸ್ ಮತ್ತು ಬರ್ಮುಡಾ ಧರಿಸುವುದನ್ನು ನಿಷೇಧಿಸಲು ಪ್ರಯತ್ನಿಸಲಾಗಿತ್ತು. ಆದರೆ, ಇದಕ್ಕೆ ವ್ಯಾಪಕ ಆಕ್ರೋಶ ವ್ಯಕ್ತವಾದ ಕಾರಣ, ಕೆಲವೇ ಗಂಟೆಗಳಲ್ಲಿ ಆ ಆದೇಶವನ್ನು ಹಿಂದಕ್ಕೆ ಪಡೆಯಲಾಗಿತ್ತು.

'ಗ್ಯಾರಂಟಿ' ಜಾರಿ ಮತ್ತೆ ಮುಂದಕ್ಕೆ

ಒಂದನೇ ಪುಟದಿಂದ..

ಸಭೆ ಬಳಿಕ ಸುದ್ದಿಗಾರರ ಜತೆ ಮಾತನಾಡಿದ ಸಿದ್ದರಾಮಯ್ಯ, 'ಐದು ಗ್ಯಾರಂಟಿಗಳ ಕುರಿತು ಸಂಪುಟದ ಮುಂದಿನ ಸಭೆಯಲ್ಲಿ ವಿವರಗಳನ್ನು ಮಂಡಿಸಲು ಸೂಚಿಸಲಾಗಿದೆ. ಈ ಕುರಿತು ಚರ್ಚಿಸಿ ಅನುಮೋದನೆ ನೀಡಿ, ಶೀಘ್ರವೇ ಜಾರಿಗೆ ತರಲಾಗುವುದು' ಎಂದು ತಿಳಿಸಿದರು. 'ಸರ್ಕಾರವಾಗಿ ನಾವು ಕೊಟ್ಟ ಭರವಸೆಗಳನ್ನು ಈಡೇರಿಸಬೇಕು. ವಿರೋಧ ಪಕ್ಷಗಳು ತಾವು ಕೊಟ್ಟ ಮಾತನ್ನು ಈಡೇರಿಸಿಲ್ಲ. ನಾವು ಹಿಂದೆಯೂ ಕೊಟ್ಟ ಮಾತಿನಂತೆ ಭರವಸೆ ಈಡೇರಿಸಿದ್ದೇವೆ, ಈಗಲೂ ಈಡೇರಿಸುತ್ತೇವೆ' ಎಂದರು.

ಬಿಕ್ಕಟ್ಟು ಅಂತ್ಯ: ಅಧಿಸೂಚನೆ ಬಾಕಿ

ಒಂದನೇ ಪುಟದಿಂದ...

ಹೀಗಾಗಿ, ಖಾತೆ ಹಂಚಿಕೆ ಪಟ್ಟಿಯನ್ನು ರಾಜ್ಯಪಾಲರಿಗೆ ಕಳುಹಿಸದಂತೆ ಸಿದ್ದರಾಮಯ್ಯ ಅವರು ತಮ್ಮ ಸಚಿವಾಲಯದ ಅಧಿಕಾರಿಗಳಿಗೆ ಸೂಚಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ನಿರ್ದಿಷ್ಟ ಖಾತೆಗೆ ಬೇಡಿಕೆ ಇಟ್ಟಿರುವ ಸಚಿವರ ಜತೆ ಮುಖ್ಯಮಂತ್ರಿಯವರು ಚರ್ಚಿಸಲಿದ್ದಾರೆ. ಬಳಿಕ ರಾಜಭವನಕ್ಕೆ ಪಟ್ಟಿ ರವಾನೆಯಾಗಲಿದೆ. ಭಾನುವಾರ ಖಾತೆ ಹಂಚಿಕೆ ಪ್ರಕ್ರಿಯೆ ಪೂರ್ಣಗೊಳ್ಳಬಹುದು ಎಂಬ ಮಾಹಿತಿ ಲಭಿಸಿದೆ.

ಅಲ್ಲಗಳೆದ ಸಿ.ಎಂ ಸಚಿವಾಲಯ: 'ಸಚಿವರ ಖಾತೆ ಹಂಚಿಕೆಗೆ ಸಂಬಂಧಿಸಿದಂತೆ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ಪಟ್ಟಿ ಅಧಿಕೃತವಲ್ಲ. ಅದು ನಕಲಿ ಪಟ್ಟಿ' ಎಂದು ಮುಖ್ಯಮಂತ್ರಿಯವರ ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ.

ಎರಡನೇ ಸಂಪುಟ ಸಭೆ

ಸ್ಪಷ್ಟ ಬಹುಮತ ಪಡೆದ ಕಾಂಗ್ರೆಸ್, ಮೇ 20ರಂದು ಸರ್ಕಾರ ರಚಿಸಿತ್ತು. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಎಂಟು ಸಚಿವರೊಂದಿಗೆ ಪ್ರಮಾಣವಚನ ಸ್ವೀಕರಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಅದೇ ದಿನ ಮೊದಲ ಸಂಪುಟ ಸಭೆ ನಡೆಸಿದ್ದರು.

ಐದು ಗ್ಯಾರಂಟಿಗಳ ಅನುಷ್ಠಾನದ ಪ್ರಸ್ತಾವಗಳಿಗೆ ಮೊದಲ ಸಂಪುಟ ಸಭೆಯಲ್ಲಿ ತಾತ್ವಿಕ ಅನುಮೋದನೆಯನ್ನಷ್ಟೇ ನೀಡಲಾಗಿತ್ತು. ಸಂಪುಟದ ನಿರ್ಣಯದಂತೆ ಯೋಜನೆ ಅನುಷ್ಠಾನಗೊಳಿಸಲು ಅದೇ ದಿನ ಸಂಬಂಧಪಟ್ಟ ಇಲಾಖೆಗಳು ಐದು ಆದೇಶಗಳನ್ನು ಹೊರಡಿಸಿದ್ದವು.

ಗ್ಯಾರಂಟಿ ಯೋಜನೆಗಳ ಅನುಷ್ಠಾನಕ್ಕೆ ನಿಖರ ಅಂಕಿಅಂಶಗಳ ವರದಿಯೊಂದಿಗೆ ಚರ್ಚಿಸಿ, ಮಾರ್ಗಸೂಚಿಗಳನ್ನು ಅಂತಿಮಗೊಳಿಸ ಬೇಕಿದೆ. ಪ್ರತಿ ಯೋಜನೆಗೂ ಪ್ರತ್ಯೇಕವಾಗಿ ಅನುದಾನ ಮೀಸಲಿರಿಸುವ ಹಾಗೂ ವೆಚ್ಚಕ್ಕೆ ಒಪ್ಪಿಗೆ ನೀಡುವ ನಿರ್ಧಾರವೂ ಆಗಬೇಕಿದೆ. ಶನಿವಾರ ನಡೆದ ಎರಡನೇ ಸಂಪುಟ ಸಭೆಯಲ್ಲೂ ಈ ಪ್ರಕ್ರಿಯೆ ಪೂರ್ಣ ಆಗಿಲ್ಲ.

'ಮೇ ಸಾಹಿತ್ಯ ಮೇಳ'ದಲ್ಲಿ ಚಿಂತಕ ಡಾ.ಪ್ರಕಾಶ್ ಅಂಬೇಡ್ಕರ್ ಕಳವಳ

ಸಂತ ಸಂಸ್ಕೃತಿ ಕೊನೆಗಾಣಿಸಲು ಸಂಘದ ಹವಣಿಕೆ

ಪ್ರಜಾವಾಣಿ ವಾರ್ತೆ

ವಿಜಯಪುರ: 'ಸಂಘ ಪರಿವಾರ ಸರ್ವಾಧಿಕಾರ ಧೋರಣೆಯ ವೈದಿಕ ಸಂಸ್ಕೃತಿಯನ್ನು ಸ್ಥಾಪಿಸಿ ಭಾರತದ ಸಂತ ಸಂಸ್ಕೃತಿಯನ್ನು ಕೊನೆಗಾಣಿಸಲು ಹವಣಿಸುತ್ತಿದೆ' ಎಂದು ಚಿಂತಕ, ಡಾ.ಬಿ. ಆರ್. ಅಂಬೇಡ್ಕರ್ ಅವರ ಮೊಮ್ಮಗ ಡಾ.ಪ್ರಕಾಶ್ ಅಂಬೇಡ್ಕರ್ ಕಳವಳ ವ್ಯಕ್ತಪಡಿಸಿದರು.

ನಗರದ ಕಂದಗಲ್ ಹಣಮಂತರಾಯ ರಂಗಮಂದಿರದಲ್ಲಿ ಗದುಗಿನ ಲಡಾಯಿ ಪ್ರಕಾಶನ, ಕವಲಕ್ಕಿಯ ಕವಿ ಪ್ರಕಾಶನ, ಧಾರವಾಡದ ಚಿತ್ತಾರ ಕಲಾ ಬಳಗ ಜಂಟಿಯಾಗಿ ಶನಿವಾರ ಆಯೋಜಿಸಿದ್ದ 'ಮೇ ಸಾಹಿತ್ಯ ಮೇಳ'ದಲ್ಲಿ ಅವರು ದಿಕ್ಸೂಚಿ ಭಾಷಣ ಮಾಡಿದರು.

ವಿಜಯಪುರ ನಗರದಲ್ಲಿ ಶನಿವಾರ ನಡೆದ ಮೇ ಸಾಹಿತ್ಯ ಮೇಳದಲ್ಲಿ ಡಾ.ಪ್ರಕಾಶ್ ಅಂಬೇಡ್ಕರ್ ಮಾತನಾಡಿದರು —ಪ್ರಜಾವಾಣಿ ಚಿತ್ರ

'ಹಿಂದೂ ಎಂಬ ಶಬ್ದದಲ್ಲಿ ಎರಡು ಸಂಸ್ಕೃತಿಗಳು ಅಡಕವಾಗಿವೆ. ಹಿಂದೂ ಶಬ್ದದಲ್ಲಿ ವೈದಿಕ ಸಂಸ್ಕೃತಿ ಹಾಗೂ ಸಂತ ಸಂಸ್ಕೃತಿ ಇದೆ. ವೈದಿಕ ಸಂಸ್ಕೃತಿಯನ್ನು ಬಿಜೆಪಿ, ಸಂಘ ಪರಿವಾರ ಅನುಸರಿಸುತ್ತಿದೆ. ಇಲ್ಲಿ ಯೋಚನೆಗೆ ಅವಕಾಶವಿಲ್ಲ, ಸರ್ವಾಧಿಕಾರ ಧೋರಣೆಯೇ ಇಲ್ಲಿ ಪ್ರಧಾನ. ಆದರೆ, ಇದಕ್ಕೆ ವ್ಯತಿರಿಕ್ತವಾದ ಸಂತ ಸಂಸ್ಕೃತಿ ಚಾರ್ವಾಕರಿಂದ ಹಿಡಿದು ಪೆರಿಯಾರ್ ರಾಮಸ್ವಾಮಿ ಅವರವರೆಗೂ ವಿಸ್ತರಿಸಿದೆ. ಇಲ್ಲಿ ಶಾಂತಿ ಇದೆ, ಸ್ವೀಕಾರವಿದೆ, ಸಹನೆ ಇದೆ, ಸಹೋದರತೆ ಇದೆ ಹಾಗೂ ಸಮಾನತೆ ಇದೆ, ಭಾರತೀಯ ಸಂವಿಧಾನವು ಸಹ ಈ ಸಂತ ಸಂಸ್ಕೃತಿಯ ಪರಿಭಾಷೆಯಾಗಿದೆ' ಎಂದರು.

'ವೈದಿಕ ಸಂಸ್ಕೃತಿಯಲ್ಲಿ ಮಹಿಳೆಗೆ ಗೌರವವಿಲ್ಲ, ವಿಧವೆಯಾದರೆ ಕೇಶ ಮುಂಡನ ಮಾಡುವ ಕೆಟ್ಟ ಸಂಸ್ಕೃತಿ ಅಲ್ಲಿದೆ. ಆದರೆ, ಸಂತ ಸಂಸ್ಕೃತಿಯಲ್ಲಿ ವಿಧವಾ ಪುನರ್ ವಿವಾಹಕ್ಕೆ ಅವಕಾಶವಿದೆ' ಎಂದು ಹೇಳಿದರು.

ಪರಿಷ್ಕರಣೆ ಅಗತ್ಯ: ಮಾನವ ಹಕ್ಕುಗಳ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್, 'ಸಿಆರ್‌ಪಿಸಿ, ಐಪಿಸಿ ಸೇರಿದಂತೆ ಹಲವಾರು ಕಾನೂನುಗಳನ್ನು ಪರಿಷ್ಕರಣೆ ಮಾಡಿ, ಪುನರ್ ರಚಿತವಾಗದೇ ಹೋದರೆ ಸಂಸದೀಯ ಪ್ರಜಾಪ್ರಭುತ್ವ ರಕ್ಷಣೆ ಸಾಧ್ಯವಾಗುವುದಿಲ್ಲ' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ನಾಗರಿಕತೆಯ ಹೋರಾಟ: ಚಿಂತಕ ಹರ್ಷ ಮಂದೇರ್ ಮಾತನಾಡಿ, 'ಕೇಂದ್ರದಲ್ಲಿ 2014ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ಬಳಿಕ ದೇಶ ಮೊದಲ ಬಾರಿಗೆ ದೊಡ್ಡ ಅಪಾಯಕ್ಕೆ ಒಳಗಾಗಿದೆ. ಜೊತೆಗೆ ವಿಭಜಿತವಾಗತೊಡಗಿದೆ. ಸಮಾಜದ ಮನಸು, ಹೃದಯಗಳಲ್ಲಿ ದ್ವೇಷದ ವಿಷ ಹರಡಲಾಗುತ್ತಿದೆ. ಇದನ್ನು ಸುಲಭವಾಗಿ ಸರಿಪಡಿಸಲಾಗದು. ಇದೊಂದು ಕೇವಲ ರಾಜಕೀಯ ಹೋರಾಟವಲ್ಲ, ನಾಗರಿಕತೆಯ ಹೋರಾಟವಾಗಿದೆ' ಎಂದು ಹೇಳಿದರು.

ನೀತಿ ಆಯೋಗದ ಸಭೆ: 11 ಸಿ.ಎಂಗಳು ಗೈರು

ಒಂದನೇ ಪುಟದಿಂದ...

ಸಂಸತ್ತಿನ ನೂತನ ಭವನದ ಉದ್ಘಾಟನೆಗೆ ಪ್ರತಿಪಕ್ಷಗಳು ಬಹಿಷ್ಕಾರ ಹಾಕಿರುವುದರ ಹಿಂದೆಯೇ, ಅದರ ಮುನ್ನಾದಿನದಂದು ಪ್ರಧಾನಿ ಅಧ್ಯಕ್ಷತೆಯಲ್ಲಿಯೇ ನಡೆದ ನೀತಿ ಆಯೋಗದ ಸಭೆಗೂ ಎನ್‌ಡಿಎಯೇತರ ಮುಖ್ಯಮಂತ್ರಿಗಳಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಯಿತು.

19 ಸಿ.ಎಂಗಳ ಹಾಜರಿ: ಸಭೆ ಕುರಿತು ನಂತರ ಮಾಹಿತಿ ನೀಡಿದ ನೀತಿ ಆಯೋಗದ ಸಿಇಒ ಬಿ.ವಿ.ಆರ್. ಸುಬ್ರಹ್ಮಣ್ಯಂ, '19 ರಾಜ್ಯಗಳ ಮುಖ್ಯಮಂತ್ರಿಗಳು ಮತ್ತು ಆರು ಕೇಂದ್ರಾಡಳಿತ ಪ್ರದೇಶಗಳ ಲೆಫ್ಟಿನೆಂಟ್ ಗವರ್ನರ್‌ಗಳು ಸಭೆಯಲ್ಲಿ ಭಾಗವಹಿಸಿದ್ದರು' ಎಂದು ತಿಳಿಸಿದರು.

ರಾಷ್ಟ್ರೀಯ ಅಭಿವೃದ್ಧಿಯ ಕಾರ್ಯಸೂಚಿಗೆ ಪೂರಕವಾಗಿ ಮುಂದಿನ 25 ವರ್ಷಗಳಲ್ಲಿ ರಾಜ್ಯಗಳು ಅಭಿವೃದ್ಧಿ ಕಾರ್ಯಕ್ರಮಗಳನ್ನು ರೂಪಿಸುವ ದಿಸೆಯಲ್ಲಿ ನೀತಿ ಆಯೋಗವು ನಿರ್ಣಾಯಕ ಪಾತ್ರವನ್ನು ವಹಿಸಲಿದೆ ಎಂದು ಅವರು ಹೇಳಿದರು.

ಹಣಕಾಸು ಕುರಿತು ವಿವೇಕಯುತ ತೀರ್ಮಾನ: ಪ್ರಧಾನಿ ಸಲಹೆ

ನವದೆಹಲಿ (ಪಿಟಿಐ): 'ದೇಶವನ್ನು 2047ರ ವೇಳೆಗೆ ಅಭಿವೃದ್ಧಿ ರಾಷ್ಟ್ರವಾಗಿಸುವ ಗುರಿ ಸಾಧನೆಗಾಗಿ ರಾಜ್ಯಗಳು ಜನರ ಆಶಯಗಳನ್ನು ಈಡೇರಿಸುವ ಏಕರೂಪದ ಚಿಂತನೆ ಹೊಂದಿರಬೇಕು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೇಳಿದರು.

ನೀತಿ ಆಯೋಗದ ಸಭೆಯಲ್ಲಿ ಮಾತನಾಡಿದ ಅವರು, 'ಅಭಿವೃದ್ಧಿ ಗುರಿ ಸಾಧಿಸಲು ರಾಜ್ಯಗಳಿಗೆ ಆರ್ಥಿಕ ಶಿಸ್ತಿರಬೇಕು. ಹಣಕಾಸಿನ ವಿಷಯದಲ್ಲಿ ವಿವೇಕದ ನಿರ್ಧಾರ ಕೈಗೊಳ್ಳಬೇಕು. ಆಡಳಿತದಲ್ಲಿ ಸನ್ನಡತೆ ಹೊಂದಿರಬೇಕು' ಎಂದು ಹೇಳಿದರು.

'2047ರಲ್ಲಿ ಸ್ವಾತಂತ್ರ್ಯದ ಶತಮಾನೋತ್ಸವ ಆಚರಿಸುವ ವೇಳೆಗೆ ದೇಶ ಅಭಿವೃದ್ಧಿ ಹೊಂದಿದ ರಾಷ್ಟ್ರವಾಗಬೇಕು. ಇದಕ್ಕಾಗಿ ಜನರ ಆಶಯಗಳಿಗೆ ಸ್ಪಂದಿಸಲು ಆರ್ಥಿಕ ನಿರ್ಧಾರಗಳಲ್ಲಿ ವಿವೇಕಯುತ ತೀರ್ಮಾನ ಅಗತ್ಯ' ಎಂದು ಹೇಳಿದರು.

ಜಾತಿ ಆಧಾರಿತ ಜನಗಣತಿ, ರಾಜ್ಯಕ್ಕೆ ವಿಶೇಷ ಸ್ಥಾನಮಾನ ಬೇಡಿಕೆ ಕುರಿತು ಸಭೆಯಲ್ಲಿ ಪ್ರಸ್ತಾಪಿಸುವ ಉದ್ದೇಶವಿತ್ತು. ಆದರೆ, ಕೇಂದ್ರದ ಧೋರಣೆಯಿಂದ ಭಾಗವಹಿಸಲು ಆಗಲಿಲ್ಲ
ನಿತೀಶ್ ಕುಮಾರ್
ಬಿಹಾರ ಮುಖ್ಯಮಂತ್ರಿ

ಕ್ರಿಕೆಟ್ ಮಾತಿನ ಮಂಟಪದಲ್ಲಿ ಕನ್ನಡ

ಗಿರೀಶ ದೊಡ್ಡಮನಿ

'ನಮ್ಮಲ್ಲಿ ಕೆಲವು ಕ್ರಿಕೆಟಿಗರು ಕನ್ನಡ ಮಾತನಾಡುವುದೇ ಅವಮಾನವೆಂದುಕೊಳ್ಳುತ್ತಾರೆ. ಯಾಕೆ ಅಂತ ಗೊತ್ತಿಲ್ಲ. ಆದರೆ ಇದು ನಮ್ಮ ಮಾತೃಭಾಷೆ, ಅನ್ನದ ಭಾಷೆ. ಇವತ್ತು ನನ್ನ ಕುಟುಂಬವನ್ನು ಸಲಹುತ್ತಿದೆ. ಈ ಭಾಷೆಯನ್ನು ಪೂಜಿಸುತ್ತೇನೆ'

ಭಾರತ ಕ್ರಿಕೆಟ್ ತಂಡದ ಮಾಜಿ ಆಟಗಾರ ಮತ್ತು ಸ್ಟಾರ್ ಸ್ಪೋರ್ಟ್ಸ್ ಕನ್ನಡ ವಾಹಿನಿಯ ವೀಕ್ಷಕ ವಿವರಣೆಗಾರ ವಿಜಯ್ ಭಾರದ್ವಾಜ್ ಅವರ ಅಂತರಾಳದ ಮಾತಿದು.

ಇಂಗ್ಲೆಂಡ್‌ನಲ್ಲಿ ಜನಿಸಿದ ಕ್ರಿಕೆಟ್ ಇವತ್ತು ಭಾರತದಲ್ಲಿ ಅತ್ಯಂತ ಜನಪ್ರಿಯ ಕ್ರೀಡೆ. ಕ್ರಿಕೆಟ್ ಜಗತ್ತಿಗೆ ಭಾರತವೇ ದೊಡ್ಡಣ್ಣ. ಆದರೆ ಬಹುಭಾಷೆ ಮತ್ತು ಬಹುಸಂಸ್ಕೃತಿಗಳ ದೇಶದಲ್ಲಿ ದೃಶ್ಯ ಮಾಧ್ಯಮದಲ್ಲಿ ಕ್ರಿಕೆಟ್ ವೀಕ್ಷಕ ವಿವರಣೆ ಇಂಗ್ಲಿಷ್‌ನಲ್ಲಿ ಮಾತ್ರ ಇರಬೇಕೆ ಎಂಬ ಪ್ರಶ್ನೆಗೆ ಉತ್ತರರೂಪದಲ್ಲಿ ಪ್ರಾದೇಶಿಕ ಭಾಷೆಗಳ ವಿವರಣೆ ನಿಧನಿಧಾನವಾಗಿ ಜನಪ್ರಿಯವಾಗುತ್ತಿದೆ. ಇದರ ಹಿಂದೆ ಪ್ರಾದೇಶಿಕ ಹಾಗೂ ಗ್ರಾಮಾಂತರ ಮಾರುಕಟ್ಟೆಗಳನ್ನು ಸೆಳೆಯುವ ಉದ್ದೇಶ ಇದ್ದರೂ ಕನ್ನಡ ಭಾಷೆಯನ್ನು ಕ್ರಿಕೆಟ್ ಹಾಗೂ ಇತರ ಕ್ರೀಡೆಗಳೊಂದಿಗೆ ಬೆಸೆಯುವ ಹೊಸ ಅವಕಾಶವನ್ನೂ ತೆರೆದಿಟ್ಟಿದೆ. ಈ ಬೆಳವಣಿಗೆಯೊಂದಿಗೆ ಕನ್ನಡ ವೀಕ್ಷಕ ವಿವರಣೆ ಒಂದು ವೃತ್ತಿಯಾಗಿಯೂ ಗಟ್ಟಿಗೊಳ್ಳುತ್ತಿರುವುದು ಆಸಕ್ತಿಕರ.

ಪ್ರೊ ಕಬಡ್ಡಿ, ಇಂಡಿಯನ್ ಸೂಪರ್ ಲೀಗ್ ಫುಟ್‌ಬಾಲ್ ಹಾಗೂ ಖೇಲೊ ಇಂಡಿಯಾ ಸೇರಿ ಸ್ಟಾರ್ ನೆಟ್‌ವರ್ಕ್ ಪ್ರಸಾರ ಹಕ್ಕುಗಳಿರುವ ಕ್ರೀಡಾ ಚಟುವಟಿಕೆಗಳಲ್ಲಿ ಈಗ ಕನ್ನಡ ಅನುರಣಿಸುತ್ತಿದೆ.

ಈ ಬಾರಿಯ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಮೂಲಕ ಡಿಜಿಟಲ್ ಆ್ಯಪ್ ಮೂಲಕ ಕನ್ನಡದಲ್ಲಿ ಕಾಮೆಂಟ್ರಿ ಕೇಳುತ್ತ ಪಂದ್ಯ ವೀಕ್ಷಿಸುವ ಅವಕಾಶ ಲಭಿಸಿದೆ. ಈ ಸಲ ಮಾಧ್ಯಮ ಹಕ್ಕುಗಳ ಹರಾಜಿನಿಂದಲೇ ಬಿಸಿಸಿಐ ಭರ್ತಿ ₹ 48 ಸಾವಿರ ಕೋಟಿ ಗಳಿಸಿದೆ.

> ಇಂದು(ಮೇ 28) ಇಂಡಿಯನ್ ಪ್ರೀಮಿಯರ್ ಲೀಗ್ (ಐಪಿಎಲ್) ಟ್ವೆಂಟಿ20 ಕ್ರಿಕೆಟ್‌ನ ಫೈನಲ್ ಪಂದ್ಯ. ಕನ್ನಡದಲ್ಲಿ ಈಗ ಕ್ರಿಕೆಟ್ ವೀಕ್ಷಕ ವಿವರಣೆ ಬೇರೆಯದೇ ಧ್ವನಿಯನ್ನು ಪಡೆದುಕೊಂಡಿದೆ. ಕನ್ನಡ ಕ್ರಿಕೆಟ್ ಕಾಮೆಂಟರಿಯ ಸುತ್ತಲಿನ ಆಸಕ್ತಿಕರ ಮಾಹಿತಿ ಈ ಬರಹದಲ್ಲಿದೆ.

ಟಿವಿ ಹಾಗೂ ಡಿಜಿಟಲ್ ಪ್ರಸಾರ ಹಕ್ಕುಗಳನ್ನು ಪ್ರತ್ಯೇಕವಾಗಿ ಬಿಸಿಸಿಐ ಹರಾಜು ಮಾಡಿತ್ತು. ಅದರಿಂದಾಗಿ ಟಿ.ವಿ. ಹಕ್ಕುಗಳು ಸ್ಟಾರ್ ಸ್ಪೋರ್ಟ್ಸ್‌ಗೆ ಲಭಿಸಿವೆ. ವಯಾಕಾಮ್ 18 (ಜಿಯೋ ಸಿನೆಮಾ) ಡಿಜಿಟಲ್ ಹಕ್ಕುಗಳನ್ನು ಪಡೆದಿತ್ತು.

2015ರಿಂದಲೇ ಸ್ಟಾರ್ ನೆಟ್‌ವರ್ಕ್ ಕನ್ನಡ ಕಾಮೆಂಟ್ರಿಗೆ ಶ್ರೀಕಾರ ಹಾಕಿತು. ಹಾಟ್‌ಸ್ಟಾರ್ ಆ್ಯಪ್ ಹಾಗೂ ವಾಹಿನಿ ಮೂಲಕ ಹಂತಹಂತವಾಗಿ ವಾಹಿನಿ ಬೆಳೆಯಿತು. ಅದರೊಂದಿಗೆ ಮಾಜಿ ಆಟಗಾರರೂ ವೀಕ್ಷಕ ವಿವರಣೆಗಾರರಾಗಿ ಬೆಳೆಯುತ್ತಿದ್ದಾರೆ.

ಭಾರದ್ವಾಜ್ ಅವರ ತಂಡದಲ್ಲಿ ಜಿ.ಕೆ. ಅನಿಲ್‌ಕುಮಾರ್, ಶ್ರೀನಿವಾಸ್ ಮೂರ್ತಿ, ರಣಜಿ ಆಟಗಾರರಾದ ಭರತ್ ಚಿಪ್ಲಿ, ಪವನ್ ದೇಶಪಾಂಡೆ ಹಾಗೂ ಅಖಿಲ್ ಬಾಲಚಂದ್ರ ಇದ್ದಾರೆ. ಪರಿಣತರಾಗಿ ಜಿ.ಆರ್. ವಿಶ್ವನಾಥ್ ಮತ್ತು ಸುನಿಲ್ ಜೋಶಿ ಆಗಾಗ ಕಾಣಿಸಿಕೊಂಡಿದ್ದರು.

'ನನಗಂತೂ ಕಳೆದ ಏಳೆಂಟು ವರ್ಷಗಳಿಂದ ವೀಕ್ಷಕ ವಿವರಣೆಯೇ ಪೂರ್ಣಾವಧಿ ವೃತ್ತಿಯಾಗಿದೆ. ಕ್ರಿಕೆಟ್ ಆಟ, ತರಬೇತಿ ಎಲ್ಲವನ್ನೂ ಬಿಟ್ಟಿದ್ದೇನೆ. ಕ್ರಿಕೆಟ್ ಅನ್ನು ನನ್ನ ಭಾಷೆಯ ಮೂಲಕ ನಮ್ಮ ರಾಜ್ಯದ ಜನರಿಗೆ ತಲುಪಿಸುವ ಸಾರ್ಥಕ ಕೆಲಸ ಇದು. ನಾನು ಇತ್ತೀಚೆಗೆ ಒಂದು ಮದುವೆಗೆ ಹೋಗಿದ್ದೆ. ಅಲ್ಲಿ 80 ದಾಟಿದ್ದ ಮಹಿಳೆಯೊಬ್ಬರು ನನ್ನನ್ನು ಮಾತನಾಡಿಸಿದರು. ನಿಮ್ಮ ಕಾಮೆಂಟ್ರಿ ಕೇಳಲು ಶುರು ಮಾಡಿದಾಗಿನಿಂದ ಎಲ್‌ಬಿಡಬ್ಲ್ಯು, ಡಿಆರ್‌ಎಸ್‌ಗಳೆಲ್ಲ ಅರ್ಥ ಆಗ್ತಿವೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದ್ದರು. ಅದಕ್ಕಿಂತ ದೊಡ್ಡ ಪ್ರಶಸ್ತಿ ಇನ್ನೇನು ಬೇಕು' ಎಂದು ಭಾರದ್ವಾಜ್ ಭಾವುಕರಾಗುತ್ತಾರೆ.

ಸುಮಾರು ಒಂದು ದಶಕದಿಂದ ಅಂತರರಾಷ್ಟ್ರೀಯ ಕ್ರಿಕೆಟ್ ಮತ್ತು ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಗಳಲ್ಲಿ ವಿಜಯ್ ಮತ್ತು ಅವರ ತಂಡದ ವಾಗ್ಝರಿ ಹರಿಯುತ್ತಿದೆ. ಇತ್ತೀಚಿನ ಸಮೀಕ್ಷೆಯ ಪ್ರಕಾರ ಸುಮಾರು ಒಂದೂವರೆ ಕೋಟಿಗೂ ಹೆಚ್ಚು ಜನರು ಈ ವಾಹಿನಿಯ ಮೂಲಕ ಐಪಿಎಲ್ ಪಂದ್ಯಗಳನ್ನು ವೀಕ್ಷಿಸುತ್ತಿದ್ದಾರೆ.

ಈ ಬಾರಿ ಜಿಯೊ ಸಿನೆಮಾ ಕೂಡ ಕನ್ನಡ, ಇಂಗ್ಲಿಷ್, ಹಿಂದಿ, ಮರಾಠಿ, ತಮಿಳು ಹಾಗೂ ತೆಲುಗು ಭಾಷೆಗಳಲ್ಲಿ ವೀಕ್ಷಕ ವಿವರಣೆಗಳನ್ನು ನೀಡುತ್ತಿದೆ. ಅದರಲ್ಲಿಯೂ ಕರ್ನಾಟಕದ ಮಾಜಿ ಕ್ರಿಕೆಟಿಗರಾದ ವೆಂಕಟೇಶ್ ಪ್ರಸಾದ್, ಎಸ್. ಅರವಿಂದ್, ಅಮಿತ್ ವರ್ಮಾ, ವೇದಾ ಕೃಷ್ಣಮೂರ್ತಿ, ದೀಪಕ್ ಚೌಗುಲೆ ಹಾಗೂ ಎಚ್. ಶರತ್ ಗಮನ ಸೆಳೆಯುತ್ತಿದ್ದಾರೆ. ದಿಗ್ಗಜ ಆಟಗಾರ, ಕನ್ನಡಿಗ ಅನಿಲ್ ಕುಂಬ್ಳೆ ಮತ್ತು ರಾಬಿನ್ ಉತ್ತಪ್ಪ ಅವರು ಹಿಂದಿ ವಿಭಾಗದಲ್ಲಿ ಪರಿಣತರಾಗಿರುವುದು ವಿಶೇಷ.

ಖ್ಯಾತ ಕ್ರಿಕೆಟ್ ಆಟಗಾರ ಕ್ರಿಸ್ ಗೇಲ್ ಜೊತೆಗೆ ಅಂಕಿತಾ ಅಮರ್

ನಿರೂಪಣೆಯಲ್ಲೂ ಕನ್ನಡದ ಮಿಂಚು: ವೀಕ್ಷಕ ವಿವರಣೆಯ ಜೊತೆಗೆ ಐಪಿಎಲ್ ನಿರೂಪಣೆಯಲ್ಲೂ ಕನ್ನಡದ ನಟಿಯರೂ ಸೈ ಎನಿಸಿಕೊಳ್ಳುತ್ತಿದ್ದಾರೆ. ನಟಿಯರಾದ ಅಂಕಿತಾ ಅಮರ್, ಹಿತಾ ಚಂದ್ರಶೇಖರ್ ಈ ಪೈಕಿ ಪ್ರಮುಖರು. 'ಮುಂಬೈ ಕನಸುಗಳ ನಗರಿ. ಅಲ್ಲಿಗೆ ಹೋಗಿ ಜಿಯೊ ಸಿನಿಮಾದಲ್ಲಿ ಕನ್ನಡದಲ್ಲಿ ಕ್ರಿಕೆಟ್ ಪಂದ್ಯಗಳ ನಿರೂಪಣೆಯ ಅನುಭವ ಅದ್ಭುತ. ಜೊತೆಗೆ ಲೆಜೆಂಡರಿ ಕ್ರಿಕೆಟ್ ಆಟಗಾರರನ್ನು ಭೇಟಿಯಾಗುವ ಅವಕಾಶದೊರಕಿತು.ನೇರಪ್ರಸಾರದಲ್ಲಿಹೆಚ್ಚಿನಇಂಗ್ಲಿಷ್‌ಬಳಸದೆಕನ್ನಡದಲ್ಲಷ್ಟೇ ಕ್ರಿಕೆಟ್ ನಿರೂಪಣೆ ಮಾಡುವುದು ಸವಾಲಾಗಿತ್ತು. ಅಲ್ಲಿನ ತಾಂತ್ರಿಕ ಪದಗಳನ್ನು ಹೊರತುಪಡಿಸಿ ಉಳಿದೆಲ್ಲವನ್ನೂ ಸ್ಪಷ್ಟ ಕನ್ನಡದಲ್ಲೇ ನಿರೂಪಣೆ ಮಾಡಿದ ಖುಷಿ ಇದೆ' ಎನ್ನುತ್ತಾರೆ ಅಂಕಿತಾ ಅಮರ್.

ಐತಿಹಾಸಿಕ ನಂಟು

ಕ್ರಿಕೆಟ್ ಮತ್ತು ಕಾಮೆಂಟ್ರಿಗೆ ದೀರ್ಘ ಕಾಲದ ನಂಟಿದೆ. ಇಂಗ್ಲಿಷ್ ವೀಕ್ಷಕ ವಿವರಣೆ ಹಾಗೂ ಬರವಣಿಗೆಗಳಿಂದಾಗಿಯೇ ಜಾಗತಿಕಮಟ್ಟದಲ್ಲಿ ಕ್ರಿಕೆಟ್ ದೊಡ್ಡ ಮಟ್ಟದಲ್ಲಿ ಬೆಳೆಯಲು ಸಾಧ್ಯವಾಯಿತು. ನೆವಿಲ್ ಕಾರ್ಡಸ್ ಅವರ ಕ್ರಿಕೆಟ್ ಲೇಖನಗಳು ಇಂದಿಗೂ ಪ್ರಸ್ತುತ. ಬಿಬಿಸಿ ರೇಡಿಯೊ ಹಾಗೂ ಟಿ.ವಿಯಲ್ಲಿ ಇಂಗ್ಲಿಷ್ ಕಾಮೆಂಟ್ರಿ ಕೇಳಲು ಜನರು ಪಾಕೆಟ್ ರೇಡಿಯೊಗಳನ್ನು ಕಿವಿಗಂಟಿಸಿಕೊಂಡಿರುತ್ತಿದ್ದರು. ಭಾರತದಲ್ಲಿ 1950ರ ದಶಕದಲ್ಲಿಯೇ ಕ್ರಿಕೆಟ್ ಕಾಮೆಂಟ್ರಿ ಆರಂಭವಾಗಿತ್ತು.

ಭಾರತ ಟೆಸ್ಟ್ ತಂಡದ ಮೊದಲ ನಾಯಕ ಕರ್ನಲ್ ಸಿ.ಕೆ. ನಾಯ್ಡು ಅವರ ಮಗಳು ಚಂದ್ರಾ ನಾಯ್ಡು ಭಾರತದ ಮೊಟ್ಟಮೊದಲ ಇಂಗ್ಲಿಷ್ ವೀಕ್ಷಕ ವಿವರಣೆಗಾರರಾಗಿದ್ದರು. ಅದೇ ರೀತಿ ಹಿಂದಿಯಲ್ಲಿ ಪ್ರಥಮ ಕಾಮೆಂಟೇಟರ್ ಆಗಿದ್ದ ಸುಶೀಲ್ ದೋಶಿ ಶಾರೀರ ಬಹುಕಾಲ ಕ್ರಿಕೆಟ್ ಅಭಿಮಾನಿಗಳನ್ನು ರಂಜಿಸಿತ್ತು. ಟಿ20 ಕ್ರಿಕೆಟ್ ಕಾಲದಲ್ಲಿಯೂ ಅವರ ವಾಗ್ಝರಿಗೆ ಮನಸೋತವರೆಷ್ಟೋ ಮಂದಿ. ಕನ್ನಡದಲ್ಲಿ ಮೊದಲಿಗೆ ಕಾಮೆಂಟ್ರಿ ಆರಂಭಿಸಿದ ಶ್ರೇಯ ಬಾನುಲಿಗೇ ಸಲ್ಲುತ್ತದೆ. 1960ರಲ್ಲಿ ಕೃಷ್ಣಮೂರ್ತಿ, ಸೂರ್ಯನಾರಾಯಣ ಅವರ ಧ್ವನಿಗಳು ಜನಪ್ರಿಯವಾಗಿದ್ದವು.

ಚಂದ್ರಮೌಳಿ ಕಣವಿ ಅವರು ಕ್ರಿಕೆಟ್, ಕಬಡ್ಡಿ, ಫುಟ್‌ಬಾಲ್ ಕ್ರೀಡೆಗಳಲ್ಲಿ ದಶಕಗಳಿಂದಲೂ ವೀಕ್ಷಕ ವಿವರಣೆಗಾರರಾಗಿ ಗುರುತಿಸಿಕೊಂಡಿದ್ದಾರೆ. ಬಾನುಲಿಯ ದಿನಗಳಲ್ಲಿಯೂ ಜನಪ್ರಿಯರಾಗಿದ್ದ ಅವರು ಸದ್ಯ ಸ್ಟಾರ್ ನೆಟ್‌ವರ್ಕ್‌ನಲ್ಲಿ ಪ್ರಮುಖ ಕಾಮೆಂಟೇಟರ್ ಆಗಿದ್ದಾರೆ.

ಚಂದ್ರಮೌಳಿ ಕಣವಿ

'ರಣಜಿ ಟ್ರೋಫಿಯಂತಹ ದೇಶಿ ಟೂರ್ನಿಗಳಿಗೆ ಕಾಮೆಂಟ್ರಿ ನೀಡುತ್ತಿದ್ದೆವು. ಬಾನುಲಿಗೆ ಮಾಡುವ ದಿನಗಳಲ್ಲಿ ಹಲವು ಸವಾಲುಗಳಿದ್ದವು. ಅದರೆ ಜನರಿಂದ ಸಿಗುತ್ತಿದ್ದ ಪ್ರತಿಕ್ರಿಯೆ ಅದ್ಭುತವಾಗಿರುತ್ತಿತ್ತು. ಕನ್ನಡದಲ್ಲಿ ಟಿವಿಯ ಮೂಲಕ ಕಾಮೆಂಟ್ರಿ 1990ರ ದಶಕದಲ್ಲಿ ಹಂತಹಂತವಾಗಿ ಶುರುವಾಯಿತು. 2011ರಲ್ಲಿ ಸೆಲಿಬ್ರಿಟಿ ಕ್ರಿಕೆಟ್ ಲೀಗ್ ಟೂರ್ನಿಗಾಗಿ ಕನ್ನಡದ ವಾಹಿನಿಗಳಲ್ಲಿ ಕಾಮೆಂಟ್ರಿ ಇತ್ತು. ಅದಕ್ಕೂ ಮುನ್ನ ಕರ್ನಾಟಕ ಪ್ರೀಮಿಯರ್ ಲೀಗ್ (ಕೆಪಿಎಲ್) ಟೂರ್ನಿಯಲ್ಲಿಯೂ ಪ್ರಯೋಗ ಇತ್ತು. ಆದರೆ ಸ್ಟಾರ್ ನೆಟ್‌ವರ್ಕ್ ಕನ್ನಡ ಆರಂಭಿಸಿದ ನಂತರ ನಿರಂತರವಾಗಿ ನಡೆಯುತ್ತಿದೆ' ಎಂದು ಕಣವಿ ವಿವರಿಸುತ್ತಾರೆ.

ಆಟದ ಕುರಿತು ಜನರಿಗೆ ಮನದಟ್ಟು ಮಾಡುವಂತೆ ಮಾತನಾಡುವುದು ಸುಲಭವಲ್ಲ. ಬಹಳಷ್ಟು ಪೂರ್ವ ಸಿದ್ಧತೆ ಮತ್ತು ಆಟದ ಜ್ಞಾನ ಬೇಕು.

'ಪ್ರತಿಯೊಂದು ಕ್ರೀಡೆಯ ವೀಕ್ಷಕ ವಿವರಣೆಗೆ ತನ್ನದೇ ಆದ ಸವಾಲುಗಳು ಇರುತ್ತವೆ. ನಮ್ಮಲ್ಲಿ ಕ್ರಿಕೆಟ್ ಬಗ್ಗೆ ಚಿಕ್ಕಮಕ್ಕಳಿಂದ ವಯೋವೃದ್ಧರವರೆಗೆ ಅಪಾರ ತಿಳಿವಳಿಕೆ ಇರುತ್ತದೆ. ಅಲ್ಲಿ ನಮ್ಮ ಒಂದು ಅತಿ ಸಣ್ಣ ತಪ್ಪನ್ನು ಕೂಡ ಗುರುತಿಸಿಬಿಡುತ್ತಾರೆ. ಸಾಮಾಜಿಕ ಜಾಲತಾಣಗಳ ಈ ಯುಗದಲ್ಲಿ ಟೀಕೆಗಳು ಮಹಾಪೂರವಾಗುತ್ತವೆ. ಅದೇ ಕಬಡ್ಡಿಯ ವೀಕ್ಷಕ ವಿವರಣೆ ಮಾಡುವಾಗ ಈ ಆಟದ ಕುರಿತು ತಿಳಿವಳಿಕೆ ಇಲ್ಲದವರಿಗೂ ಸಂವಹನ ಮಾಡುವ ಕಲೆ ಬೇಕು. ತುಸು ವೇಗವಾಗಿ ಈ ಆಟ ನಡೆಯುತ್ತದೆ. ಅದಕ್ಕೆ ತಕ್ಕಂತೆ ನಮ್ಮ ಕಾಮೆಂಟ್ರಿ ಇರಬೇಕು. ಭಾಷೆ, ಧ್ವನಿಯ ಏರಿಳಿತ ಮತ್ತು ತಾಂತ್ರಿಕ ಅಂಶಗಳನ್ನು ಕರಾರುವಾಕ್ಕಾಗಿ ಹೇಳಬೇಕು. ಫುಟ್‌ಬಾಲ್‌ನಲ್ಲಿಯೂ ಇದೇ ಕೌಶಲ ಬೇಕು. ಆದರೆ, ಕಬಡ್ಡಿ ಹಾಗೂ ಫುಟ್‌ಬಾಲ್‌ನಲ್ಲಿ ಆಟಗಾರರ ಕುರಿತ ವಿವರಗಳನ್ನು ತಿಳಿದುಕೊಂಡಿರಬೇಕು. ಅದಕ್ಕಾಗಿ ಪ್ರತಿದಿನ ಐದಾರು ಗಂಟೆ ಅವಧಿಯ ಪೂರ್ವತಯಾರಿ ಅಗತ್ಯ' ಎಂದು ಕಣವಿ ಹೇಳುತ್ತಾರೆ.

ಕ್ರಿಕೆಟ್ ಇಂಗ್ಲಿಷರ ಆಟ. ಆದನ್ನು ಕನ್ನಡಕ್ಕೆ ಅಕ್ಷರಶಃ ತರ್ಜುಮೆ ಮಾಡುವುದು ಸಾಧ್ಯವಿಲ್ಲದ ಕೆಲಸ. ಆಡುಭಾಷೆಯಲ್ಲಿ ತಾಂತ್ರಿಕ ಭಾಷೆಯನ್ನು ಮಿಶ್ರ ಮಾಡಿ ಕಾಮೆಂಟ್ರಿ ಮಾಡುವುದೇ ದಾರಿ ಎಂಬುದು ವಿಜಯ್ ಭಾರದ್ವಾಜ್ ಮತ್ತು ಕಣವಿ ಅವರಿಬ್ಬರ ಅಭಿಪ್ರಾಯವೂ ಹೌದು. ಹೊಸಪೀಳಿಗೆಯ ಕಾಮೆಂಟೇಟರ್‌ಗಳಾದ ಅರವಿಂದ್ ಮತ್ತು ಪವನ್ ಕೂಡ ಇದೇ ಮಾತು ಹೇಳುತ್ತಾರೆ.

ಕನ್ನಡ ಕಾಮೆಂಟ್ರಿ ಕೇವಲ ರಾಜ್ಯದ ಮಾರುಕಟ್ಟೆಯನ್ನು ಸೆಳೆಯಲಷ್ಟೇ ಮಾಧ್ಯಮವಾಗಬಾರದು. ಕ್ರಿಕೆಟ್ ಮತ್ತು ಕ್ರಿಕೆಟಿಗರಲ್ಲಿ ಕನ್ನಡದ ಬಳಕೆ ವ್ಯಾಪಕವಾಗುವಂತೆ ಮಾಡಬೇಕು ಎಂಬ ಅಭಿಯಾನವೂ ಈಗ ಆರಂಭವಾಗುತ್ತಿರುವುದು ಆಶಾದಾಯಕ.

ಜಿ.ಆರ್. ವಿಶ್ವನಾಥ್, ಶ್ರೀನಿವಾಸಮೂರ್ತಿ, ವಿಜಯ್ ಭಾರದ್ವಾಜ್ ಮತ್ತು ಜಿ.ಕೆ. ಅನಿಲ್ ಕುಮಾರ್

ಅನ್ನಾಹಾರ...ಬದಲಾದ ಸಾರ

ಸುಮಾ ಬಿ.

ತನುವ ತಣಿಸುವ ತುತ್ತು ಮನಕೆ ನಂಜಾದೀತು
ಮನಮೋಹ ಜೀವಕ್ಕೆ ಗಾಳವಾದೀತು
ಅನುಭವದ ಪರಿಣಾಮವೊಂದರಿಂದೊದಕ್ಕೆ
ಗಣಿಸಾತ್ಮ ಲಾಭವನು – ಮಂಕುತಿಮ್ಮ

ಶರೀರವನ್ನು ತೃಪ್ತಿ ಪಡಿಸುವ ಆಹಾರ ಮನಸ್ಸಿಗೆ ವಿಷವಾಗಬಲ್ಲದು. ಪ್ರೀತಿ ಇಲ್ಲದವರ ಮನೆಯಲ್ಲಿ ಮಾಡಿದ ಭೂರಿ ಭೋಜನವು ನಾಲಗೆಗೆ ಅಮೃತವಾದರೂ ಮನಸ್ಸಿಗೆ ವಿಷವಾಗುವುದು. ಮನಸ್ಸಿನಲ್ಲಿ ಮೂಡಿದ ಮೋಹ, ಮಮತೆ, ನಾನು, ನನ್ನದು, ನನ್ನವರು ಎಂಬ ಭಾವನೆಗಳು ಜೀವಕ್ಕೆ ಗಾಳವಾಗಬಹುದು.

ಆಹಾರ ಹಾಗೂ ಜೀವನ ಮೌಲ್ಯದ ಬಗ್ಗೆ ಡಿ.ವಿ.ಜಿ ಅವರು 'ಮಂಕುತಿಮ್ಮನ ಕಗ್ಗ'ದಲ್ಲಿ ಬರೆದಿರುವ ಈ ಸಾಲುಗಳು ಪ್ರಸ್ತುತವೆನಿಸುತ್ತವೆ. ಈಗ ಎಲ್ಲರ ಚಿತ್ತ ತನುವ ತಣಿಸುವ ಆಹಾರದತ್ತಲೇ ಇದೆ. ಅದು ದೇಹಕ್ಕೆ, ಮನಸಿಗೆ ಎಷ್ಟು ಹಿತ ಎಂದು ಯಾರೂ ಯೋಚಿಸುವುದಿಲ್ಲ. ನಾಗಾಲೋಟದಲ್ಲಿ ಓಡುತ್ತಿರುವ ಒತ್ತಡದ ಜೀವನಶೈಲಿಗೆ ಕಟ್ಟುಬಿದ್ದ ಬಹುತೇಕರು ತಿನ್ನುವ ಆಹಾರದ ಬಗ್ಗೆ ಗಮನ ಹರಿಸುವುದು ಅಷ್ಟಕ್ಕಷ್ಟೇ. ಏನೋ ಒಂದಷ್ಟು ತಿಂದು ಹೊಟ್ಟೆ ತುಂಬಿಸಿಕೊಂಡರಾಯಿತು ಎನ್ನುವ ಮನೋಭಾವ ಬಹುತೇಕರದ್ದು. ಫಾಸ್ಟ್‌ಫುಡ್‌ನ ಈ ಯುಗದಲ್ಲಿ ಅಮ್ಮ ಅಡುಗೆ ಮಾಡುವವರೆಗೂ ಕಾಯುವ ವ್ಯವಧಾನ ಉಳಿದಿಲ್ಲ. ಆನ್‌ಲೈನ್‌ನಲ್ಲಿ ಆರ್ಡರ್ ಮಾಡಿ ಹೋಟೆಲ್ ಆಹಾರವನ್ನು ಮನೆಗೆ ತರಿಸಿಕೊಂಡು ತಿನ್ನುವವರ ಸಂಖ್ಯೆ ಹೆಚ್ಚುತ್ತಿದೆ.

ಒಂದು ಕಡೆ ಪ್ರೊಟೀನ್‌ಯುಕ್ತ ಆಹಾರವನ್ನೇ ನೆಚ್ಚಿಕೊಳ್ಳುವ ಮಧುಮೇಹಿಗಳು. ಇನ್ನೊಂದೆಡೆ ಪಿಜ್ಜಾ, ಬರ್ಗರ್ ತರಹದ ಜಂಕ್‌ಫುಡ್ ಮೋಹಿಗಳು. ಜನಸಂಖ್ಯೆ ಏರಿದಂತೆ ಭಾರತೀಯರ ಆಹಾರ ಸೇವನೆಯ ಪ್ರಮಾಣವೂ ಹೆಚ್ಚಾಗಿದೆ.

ಆಹಾರಗಳು ಕಾಲಾನಂತರದಲ್ಲಿ ಬದಲಾಗುತ್ತವೆ. ಜತೆಗೆ ವಿಕಸನಗೊಳ್ಳುತ್ತವೆ. ಆದಾಯ, ಆಹಾರದ ಬೆಲೆ, ವೈಯಕ್ತಿಕ ಆದ್ಯತೆ, ಸಂಪ್ರದಾಯದ ಜತೆಗೆ ಭೌಗೋಳಿಕ ಪರಿಸರ, ಸಾಮಾಜಿಕ ಮತ್ತು ಆರ್ಥಿಕ ಅಂಶಗಳು ವ್ಯಕ್ತಿಯ ಆಹಾರದ ಬದಲಾವಣೆ ಮೇಲೆ ಸಹಜವಾಗಿ ಪ್ರಭಾವ ಬೀರಿವೆ.

ವಿಶ್ವಸಂಸ್ಥೆಯ ಆಹಾರ ಮತ್ತು ಕೃಷಿ ಸಂಸ್ಥೆ (FAOSTAT) ಅಧ್ಯಯನದ ಪ್ರಕಾರ 50 ವರ್ಷಗಳಿಗೆ ಹೋಲಿಸಿದರೆ ಪ್ರಸ್ತುತ ಭಾರತೀಯರ ಆಹಾರ ಸೇವನೆ ಪ್ರಮಾಣ ಹೆಚ್ಚಾಗಿದೆ. ಜೀವಿತಾವಧಿ ಹಿಂದಿಗಿಂತಲೂ ಸುಧಾರಿಸಿದೆ. ಆದರೆ, ಬದುಕು ಆರೋಗ್ಯಯುತವಾಗಿ ಇಲ್ಲ. ಕಡಿಮೆ ವಯಸ್ಸಿಗೇ ಸಮಸ್ಯೆಗಳು ಹೆಚ್ಚಾಗುತ್ತಿದೆ. ಇವುಗಳ ನಡುವೆಯೂ ಜೀವಿತಾವಧಿ ಹೆಚ್ಚಾಗಿದೆ. 1961ರಲ್ಲಿ ಭಾರತೀಯರ ದೈನಂದಿನ ಸರಾಸರಿ ಕ್ಯಾಲೊರಿ ಸೇವನೆ 2,010 ಇತ್ತು. 2011ರಲ್ಲಿ ಈ ಪ್ರಮಾಣ 2,458 ಕ್ಯಾಲೊರಿಗೆ ಏರಿಕೆಯಾಯಿತು.

ಧಾನ್ಯ (ಅಕ್ಕಿ, ಗೋದಿ, ಜೋಳ, ಇತರೆ ಧಾನ್ಯಗಳು), ಹಾಲಿನ ಉತ್ಪನ್ನ ಹಾಗೂ ಮೊಟ್ಟೆಗಳು, ಸಸ್ಯ ಉತ್ಪನ್ನಗಳು, ಮಾಂಸ, ಸಕ್ಕರೆ ಮತ್ತು ಕೊಬ್ಬು ಹಾಗೂ ಇತರ ಪದಾರ್ಥಗಳು ಈ ಆರು ಪ್ರಮುಖ ಆಹಾರ ಗುಂಪುಗಳಲ್ಲಿ ವ್ಯಕ್ತಿಯ ಸರಾಸರಿ ಸೇವನೆಯನ್ನು ಆಹಾರ ಮತ್ತು ಕೃಷಿ ಸಂಸ್ಥೆ ವಿಶ್ಲೇಷಿಸಿದೆ. ಕಳೆದ 25 ವರ್ಷಗಳಲ್ಲಿ ಸರಾಸರಿ ದೈನಂದಿನ ಪ್ರೊಟೀನ್ ಸೇವನೆಯೂ 55 ಗ್ರಾಂನಿಂದ 59 ಗ್ರಾಂಗೆ ಏರಿದೆ. ಧಾನ್ಯಗಳ ಬಳಕೆ ಕಡಿಮೆಯಾಗಿದ್ದು, ಸಕ್ಕರೆ ಮತ್ತು ಕೊಬ್ಬಿನ ಸೇವನೆ ಹೆಚ್ಚಾಗಿದೆ. ಮೊಟ್ಟೆ ಹಾಗೂ ಹಾಲಿನ ಉತ್ಪನ್ನ ಎರಡು ಪಟ್ಟು ಹೆಚ್ಚಾಗಿದ್ದು, ಸಹಜವಾಗಿ ಅವುಗಳ ಬಳಕೆಯೂ ಇಮ್ಮಡಿಸಿದೆ. ಕಾರ್ಬೊಹೈಡ್ರೇಟ್ ಸೇವನೆಯೂ ಅಧಿಕವಾಗುತ್ತಿದೆ ಎಂದು ಸಂಸ್ಥೆ ವರದಿ ಕಳವಳ ಹೊರಹಾಕಿದೆ.

'ಇತ್ತೀಚಿನ ದಿನಗಳಲ್ಲಿ ಗೂಗಲ್, ಯೂಟ್ಯೂಬ್ ನೋಡಿ ಡಯಟ್ ಮಾಡುವವರ ಸಂಖ್ಯೆ ಹೆಚ್ಚಾಗಿದೆ. ಹೀಗಾಗಿ ಇನ್ನಿಲ್ಲದ ಆರೋಗ್ಯದ ಸಮಸ್ಯೆಗೆ ಯುವ ಸಮೂಹ ಒಳಗಾಗುತ್ತಿದೆ' ಎನ್ನುತ್ತಾರೆ ನೆಪ್ರೊಪ್ಲಸ್‌ನ ಚೀಫ್ ಡಯಟೀಶಿಯನ್ ಅಪೇಕ್ಷಾ ಎಕಬೋಟೆ.


ಅಪೇಕ್ಷಾ ಎಕಬೋಟೆ

'ಬಹುತೇಕರು ಆಹಾರವನ್ನು ಸಮಯಕ್ಕೆ ಸರಿಯಾಗಿ ತಿನ್ನುವುದಿಲ್ಲ. ಬೇಕೆನಿಸಿದ ತಿನಿಸನ್ನು ಬೇಕೆಂದಾಗ ಕುಳಿತಲ್ಲೇ ತರಿಸಿಕೊಳ್ಳುವ ಅವಕಾಶದ ಬಾಗಿಲು ಸದಾ ತೆರೆದಿರುವುದರಿಂದ ಭಾರತೀಯರ ಆಹಾರ ಕ್ರಮವೂ ಹಳಿ ತಪ್ಪಿದೆ. ದೇಹಕ್ಕೆ ಬೇಡವಾದದ್ದನ್ನು ತಿಂದು ಹೊಟ್ಟೆ ತುಂಬಿಸಿಕೊಳ್ಳುವ ಜನ ಹೊಟ್ಟೆ ಉಬ್ಬಿದೊಡನೆ ಅದನ್ನು ಕಡಿಮೆ ಮಾಡಬೇಕು, ತೂಕ ಇಳಿಸಬೇಕು ಎಂದು ದಿಢೀರ್ ಪ್ರಯೋಗಕ್ಕೆ ಇಳಿಯುತ್ತಿದ್ದಾರೆ. ಇದರಿಂದ ಸಹಜವಾಗೇ ಕಿಡ್ನಿ ಸಮಸ್ಯೆ, ಮಧುಮೇಹದಂತಹ ಕಾಯಿಲೆಗಳು ಅಂಟಿಕೊಳ್ಳುತ್ತಿವೆ' ಎನ್ನುವರು ಅಪೇಕ್ಷಾ ಎಕಬೋಟೆ.

ಒಂದು ಅಂದಾಜಿನ ಪ್ರಕಾರ 2021ರಲ್ಲಿ ಏಳೂವರೆ ಕೋಟಿ ಭಾರತೀಯರು ಮಧುಮೇಹದಿಂದ ಬಳಲುತ್ತಿದ್ದಾರೆ. ಇದು 2045ರ ಹೊತ್ತಿಗೆ ಹನ್ನೆರಡೂವರೆ ಕೋಟಿ ಆಗುವ ಎಲ್ಲ ಸಾಧ್ಯತೆಗಳೂ ಇವೆ. ಅಷ್ಟು ವೇಗದಲ್ಲಿ ಮಧುಮೇಹ ಭಾರತೀಯರನ್ನು ಅಪ್ಪಿಕೊಳ್ಳುತ್ತಿದೆ. ವಿಶ್ವದಲ್ಲಿ ಅತಿ ಹೆಚ್ಚು ಮಧುಮೇಹಿಗಳನ್ನು ಒಳಗೊಂಡ ದೇಶಗಳಲ್ಲಿ ಭಾರತ ಎರಡನೇ ಸ್ಥಾನದಲ್ಲಿದೆ. (ಚೀನಾ ಮೊದಲ ಸ್ಥಾನದಲ್ಲಿದೆ) ಬದಲಾದ ಜೀವನ ಶೈಲಿ, ಆಹಾರ ಕ್ರಮ ಇದಕ್ಕೆ ನೇರ ಕಾರಣ ಎಂಬುದು ವೈದ್ಯರ ದೃಢ ಮಾತು.

ಸಮಯದ ಹೊಂದಾಣಿಕೆಗಾಗಿ ದಿಢೀರ್ ಸಿದ್ಧವಾಗುವ (ಇನ್‌ಸ್ಟಂಟ್) ಹಾಗೂ ಸಂಸ್ಕರಿತ ಆಹಾರಗಳ ಮೊರೆ ಹೋಗಿರುವ ಬಹುತೇಕರು ತಮ್ಮ ಅರಿವಿಗೆ ಬಾರದಂತೆ ಅನಾರೋಗ್ಯಕ್ಕೆ ತುತ್ತಾಗುತ್ತಿದ್ದಾರೆ. ಸಾಮಾನ್ಯವಾಗಿ ಒಂದು ನಿರ್ದಿಷ್ಟ ಪ್ರದೇಶದ ಆಹಾರ ಕ್ರಮ ಆಯಾ ದೇಶಗಳ ಜೀವನ ಶೈಲಿ, ಹವಾಗುಣಕ್ಕೆ ತಕ್ಕಂತೆ ರೂಪಿತವಾಗಿರುತ್ತದೆ. ಅದು ಎಲ್ಲ ಭಾಗದ ಜನರಿಗೂ ಒಗ್ಗುವುದಿಲ್ಲ. ಪಿಜ್ಜಾ, ಬರ್ಗರ್, ಮೈದಾ, ಕಾರ್ನ್‌ಫ್ಲೋರ್, ಚೀಸ್‌ನಿಂದ ತಯಾರಿಸಿದ ತಿನಿಸು ನಮ್ಮಲ್ಲಿನ ಪರಿಸರಕ್ಕೆ ಒಗ್ಗುವುದಿಲ್ಲ. ಆದರೆ ನಾಲಿಗೆಯ ಚಾಪಲ್ಯ ಅದನ್ನು ಬಿಡಲೊಲ್ಲದು.

'ಭಾರತದ ಬಹುತೇಕರು ಚೈನೀಸ್, ಇಟಾಲಿಯನ್ ಶೈಲಿಯ ಆಹಾರ ಕ್ರಮವನ್ನು ಇಷ್ಟಪಡುತ್ತಾರೆ. ಇದು ಇಲ್ಲಿನವರ ದೇಹಕ್ಕೆ ಹೊಂದುವುದಿಲ್ಲ. ಆದ್ದರಿಂದ ಬಹುತೇಕರು ಬೊಜ್ಜು (ಒಬೆಸಿಟಿ), ಅಜೀರ್ಣ, ರಕ್ತದೊತ್ತಡದಂತಹ ಸಮಸ್ಯೆಗಳಿಗೆ ಬಹುಬೇಗ ತೆರೆದುಕೊಳ್ಳುತ್ತಿದ್ದಾರೆ' ಎನ್ನುತ್ತಾರೆ ಬೆಂಗಳೂರಿನ ಸಿರಿಧಾನ್ಯ ಮಹತ್ವ ಪ್ರಚಾರಕ ಕೆ.ಆರ್.ನಾಗೇಶ್.

ಭಾರತೀಯ ಆಹಾರ ಕ್ರಮ ಷಡ್‌ರಸಗಳಾದ ಉಪ್ಪು, ಹುಳಿ, ಸಿಹಿ, ಖಾರ, ಒಗರು, ಕಹಿಗಳನ್ನು ಒಳಗೊಂಡಿದೆ. ಈ ಬಗೆಯ ಆಹಾರ ಕ್ರಮಗಳನ್ನು ಅನುಸರಿಸಿದರೆ ಬಹುತೇಕ ಆರೋಗ್ಯ ಸಮಸ್ಯೆಗಳನ್ನು ದೂರವಿಡಬಹುದು.

'ಭಾರತೀಯ ಆಯುರ್ವೇದ ಪದ್ಧತಿ ನಿಜವಾದ ಆಹಾರ ಕ್ರಮವನ್ನು ತಿಳಿಸುತ್ತದೆ. ಆದರೆ ಬಹುತೇಕರು ಆಯುರ್ವೇದ ಎಂದರೆ ಕೇವಲ ಔಷಧ ಎಂದು ಪರಿಗಣಿಸಿದ್ದಾರೆ. ಹಾಗಾಗಿ ಅದರ ಬಗ್ಗೆ ತಾತ್ಸಾರದಿಂದ ನೋಡುತ್ತಾರೆ. ಆಯುರ್ವೇದದಲ್ಲಿ ಶೇ 20ರಷ್ಟು ಔಷಧದ ಬಗ್ಗೆ ಹೇಳಿದರೆ ಉಳಿದ ಶೇ 80ರಷ್ಟು ಭಾಗ ಮನುಷ್ಯನ ಜೀವನ ಶೈಲಿ, ಆಹಾರ ಕ್ರಮವನ್ನು ವಿವರಿಸುತ್ತದೆ' ಎನ್ನುವುದು ನಾಗೇಶ್ ಅವರ ಮಾತು.

ಬದಲಾದ ಮದುವೆ ಮನೆ ಊಟದ ಮೆನು

ಕಾಲಕ್ಕೆ ಅನುಗುಣವಾಗಿ ಮದುವೆ ಮನೆಯ ಊಟದ ಮೆನುವೂ ಬದಲಾಗಿದೆ. ಲಾಡು, ಪಾಯಸ, ಚಿತ್ರಾನ್ನ, ಬೋಂಡ, ಗೋಧಿ ಹುಗ್ಗಿ ಇದು ಮದುವೆ ಮನೆಯ ಸಾಂಪ್ರದಾಯಿಕ ಊಟ. ಲಾಡು, ಪಾಯಸದ ಜಾಗದಲ್ಲಿ ಬಗೆ ಬಗೆ ಸಿಹಿ ತಿನಿಸುಗಳು ಬಂದು ಕುಳಿತಿವೆ. ಬೋಂಡಾ, ಚಿತ್ರಾನ್ನ ಈಗಿನ ಕಾಲದ ಯುವ ಸಮೂಹಕ್ಕೆ ರುಚಿಸುವುದಿಲ್ಲ. ಹಾಗಾಗಿ ವೈವಿಧ್ಯಮಯ ಭಕ್ಷ್ಯಗಳು ಮದುವೆ ಮನೆಯ ಬಾಳೆಎಲೆಯನ್ನು ಅಲಂಕರಿಸುತ್ತಿವೆ.

ಪಾನಿಪೂರಿಗೆ ಬಳಸುವ ಪೂರಿಯನ್ನು ಚಾಕ್ಲೆಟ್ ಸಾಸ್‌ನಲ್ಲಿ ಅದ್ದಿ ಒಣಗಿದ ಬಳಿಕ ಬಾಸುಂದಿಯನ್ನು ಅದರಲ್ಲಿ ತುಂಬಲಾಗುತ್ತದೆ. ಇದು 'ಚಾಕ್ಲೆಟ್ ಮಲಾಯ್ ಪೂರಿ'. ಹಾಗೇ ರಸ್‌ಮಲಾಯ್‌ನಲ್ಲಿ ವಿವಿಧ ಫ್ಲೇವರ್‌ಗಳು, ಪೇಟಾ ಸ್ಯಾಂಡ್‌ವಿಚ್, ಪಾನ್ ಪೇಟಾ ಹೀಗೆ ವೈವಿಧ್ಯ ರೆಸಿಪಿಗಳು ಜನರನ್ನು ಆಕರ್ಷಿಸಿವೆ.

'ಮದುವೆ ಮನೆ ಊಟದ ಮೆನು ಪೂರ್ಣ ಬದಲಾಗಿದೆ. ಆಗಿನ ಬೂಂದಿ, ಲಾಡು, ಬಾದುಷಾ, ಚಂಪಾಕಲಿಯನ್ನು ಈಗ ಯಾರೂ ಕೇಳುವುದಿಲ್ಲ. ಬೆಂಗಾಲಿ ಸ್ವೀಟ್‌ಗಳನ್ನು ಜನರು ಹೆಚ್ಚು ಬಯಸುತ್ತಾರೆ. ಪ್ರತಿ ಬಾರಿ ಅಡುಗೆ ಆರ್ಡರ್ ತೆಗೆದುಕೊಳ್ಳುವಾಗಲೂ ಎಲ್ಲರೂ ಹೊಸದೇನಿದೆ ಎಂದು ಕೇಳುತ್ತಾರೆ. ನಮ್ಮಲ್ಲಿ 250ರಿಂದ 300 ಬಗೆಯ ಸಿಹಿ ತಿನಿಸಿನ ರೆಸಿಪಿ ಇದ್ದರೂ 'ಇವನ್ನು ಬಿಟ್ಟು ಹೊಸದೇನಿದೆ' ಎಂದು ಹೇಳುತ್ತಾರೆ. ಅವರ ಬೇಡಿಕೆಗೆ ತಕ್ಕಂತೆ ನಮ್ಮ ರೆಸಿಪಿಯೂ ಬದಲಾಗುತ್ತಿರುತ್ತದೆ' ಎನ್ನುವರು ದಾವಣಗೆರೆ ಜಿಲ್ಲೆ ಹರಿಹರದ ಅನಘ ಗ್ರೂಪ್ಸ್‌ನ ಅಡುಗೆ ಗುತ್ತಿಗೆದಾರ ಜೆ.ಎಚ್.ನಾಗರಾಜ್.

ಅಜ್ಜಿಯರು ಸೌಟು ಹಿಡಿಯಲಿ

ಭಾರತೀಯ ಆಹಾರ ಪದ್ಧತಿಯನ್ನು ಪಾಶ್ಚಿಮಾತ್ಯ ಆಹಾರ ಕ್ರಮ ಕಸಿದುಕೊಂಡಿದೆ. ಮಕ್ಕಳಿಗೆ ಭಾರತದ ಸಾಂಪ್ರದಾಯಿಕ ಅಡುಗೆಗಳ ಬಗ್ಗೆ ಜ್ಞಾನವೇ ಇಲ್ಲದಂತಾಗಿದೆ. ಪೋಷಕರು ಮಕ್ಕಳಿಗೆ ಫಾಸ್ಟ್‌ಫುಡ್ ತಿನ್ನಿಸಿ ಇದೇ ನಮ್ಮ ಆಹಾರ ಎನ್ನುವ ಭಾವ ಬರುವ ರೀತಿ ಮಾಡುತ್ತಿದ್ದಾರೆ.

'ಇದಕ್ಕೆ ನೇರ ಕಾರಣ ನಾವೇ' ಎನ್ನುತ್ತಾರೆ ನಟ, ಪಾಕತಜ್ಞ ಸಿಹಿ ಕಹಿ ಚಂದ್ರು.

'ಒಂದೊಂದು ಪ್ರದೇಶದಲ್ಲಿನ ಆಹಾರ ಕ್ರಮ ಅಲ್ಲಿನ ವಾತಾವರಣಕ್ಕೆ, ಅಲ್ಲಿನ ಜನರ ದೇಹಕ್ಕೆ ಒಗ್ಗಿಕೊಂಡಿರುತ್ತದೆ. ಆದರೆ, ನಾಲಿಗೆ ರುಚಿ ಕೇಳುತ್ತದೆ ಎಂದು ನಾವೂ ತಿಂದು, ಮಕ್ಕಳಿಗೂ ಪಾಶ್ಚಾತ್ಯ ಶೈಲಿ ಪದಾರ್ಥಗಳನ್ನು ತಿನ್ನಿಸಿ ವ್ಯಸನಿಗಳನ್ನಾಗಿ ಮಾಡಿಬಿಟ್ಟಿದ್ದೇವೆ. ಎಲ್ಲರೂ ಅದನ್ನೇ ಇಷ್ಟಪಡುತ್ತಿದ್ದಾರೆ. ನಮ್ಮ ಸಾಂಪ್ರದಾಯಿಕ ಅಡುಗೆಯ ಮೌಲ್ಯ ಈಗಿನವರಿಗೆ ತಿಳಿಯುತ್ತಿಲ್ಲ' ಎನ್ನುವ ಅವರು, ಮನೆಯಲ್ಲಿ ಅಡುಗೆ ಮಾಡಲಿಕ್ಕೆಂದು ಮೀಸಲಿಡುವ ಸಮಯವೂ ಕಡಿತಗೊಂಡಿದೆ. ಇದರಿಂದ ಅಪೌಷ್ಟಿಕತೆ, ಬೇರೆ ಬೇರೆ ಅನಾರೋಗ್ಯ ಸಮಸ್ಯೆಗಳು ಹೆಚ್ಚಾಗುತ್ತಿವೆ' ಎನ್ನುವುದನ್ನು ಉಲ್ಲೇಖಿಸುತ್ತಾರೆ.

ಸಾಂಪ್ರದಾಯಿಕ ಅಡುಗೆಗಳನ್ನು ಇಲ್ಲಿನ ಜನ ಮರತೇಬಿಡುವ ಆತಂಕವೂ ಢಾಳವಾಗಿ ಕಾಣುತ್ತಿದೆ.

'ಇಂದಿನ ಯುವ ಸಮೂಹಕ್ಕೆ ಒತ್‌ಶಾವಿಗೆ ಬಗ್ಗೆ ಪ್ರಶ್ನಿಸಿದರೆ 10 ಜನರಲ್ಲಿ 8 ಜನ 'ಗೊತ್ತಿಲ್ಲ' ಎಂದೇ ಹೇಳುತ್ತಾರೆ. ಮುಂದಿನ ದಿನಗಳಲ್ಲಿ ಆ ಹತ್ತೂ ಜನರಿಂದಲೂ 'ಗೊತ್ತಿಲ್ಲ' ಎಂಬ ಉತ್ತರ ಬರುವುದರಲ್ಲಿ ಸಂದೇಹವಿಲ್ಲ. ಮನೆಯಲ್ಲಿ ಅಜ್ಜಿಯರು ಸೌಟು ಹಿಡಿಯಬೇಕು. ಸಾಂಪ್ರದಾಯಿಕ ಅಡುಗೆಗಳ ಬಗ್ಗೆ ಮೊಮ್ಮಕ್ಕಳಲ್ಲಿ ಅರಿವು ಮೂಡಿಸುವ ಕೆಲಸ ಮಾಡಬೇಕು. ಪ್ರತಿ ಮನೆಗಳಲ್ಲಿ ಭಾರತೀಯ ಆಹಾರ ಕ್ರಮದ ಅರಿವು ಆರಂಭಿಸಬೇಕಿದೆ' ಎನ್ನುವ ಸಲಹೆ ಸಿಹಿ ಕಹಿ ಚಂದ್ರು ಅವರದ್ದು.


ಸಿಹಿ ಕಹಿ ಚಂದ್ರು

9ನೇ ಪುಟಕ್ಕೆ...

ಓಹೋ ಹಿಮಾಲಯ..!

ಸುಮಾರು ಹದಿನಾಲ್ಕು ಸಾವಿರ ಅಡಿ ಎತ್ತರದಷ್ಟು ಹಿಮಾಲಯದ ಸರ್ಪಾಸ್ ಎಂಬಲ್ಲಿಗೆ ಟ್ರೆಕ್ಕಿಂಗ್‌ಗೆ ಹೊರಟಾಗ ನನ್ನ ಮೇಲೇ ನನಗೇ ನಂಬಿಕೆ ಇರಲಿಲ್ಲ. ಟ್ರೆಕ್ಕಿಂಗ್ ಕೂಡ ಒಂದು ಧ್ಯಾನವೆಂದು ಹಿರಿಯ ಟ್ರೆಕ್ಕಿಗರು ಹೇಳಿದ್ದರಿಂದಾಗಿ ಮತ್ತು ಕಂಫರ್ಟ್ ಝೋನ್ ಆಚೆಗಿನ ಬದುಕಿಗೆ ತೆರೆದುಕೊಳ್ಳುವ ಉದ್ದೇಶದಿಂದ ಟ್ರೆಕ್ಕಿಂಗ್ ಬಗ್ಗೆ ಉತ್ಸಾಹವಿತ್ತಷ್ಟೆ...

ವೀರಕಪುತ್ರ ಶ್ರೀನಿವಾಸ

ಪ್ರವಾಸ

ಮೊದಲನೇ ಸಲವೇ ಸರ್ಪಾಸ್‌ನಂತಹ ದುರ್ಗಮ ಟ್ರೆಕ್ಕಿಂಗ್ ಸ್ಥಳಕ್ಕೆ ಹೋಗಬಾರದಿತ್ತು ಅಂತ ಅನ್ನಿಸಿದ್ದು ನಿಜ. ಹಿಮಾಲಯ ಪರ್ವತ ಶ್ರೇಣಿಯ ಸುತ್ತಮುತ್ತ ನೂರಾರು ಟ್ರೆಕ್ಕಿಂಗ್ ಪಾಯಿಂಟ್‌ಗಳಿವೆ. ಅವು ಉತ್ತರಾಖಂಡ, ಹಿಮಾಚಲ ಪ್ರದೇಶ, ಲಡಾಖ್, ಕಠ್ಮಂಡು, ಸಿಕ್ಕಿಂ, ಜಮ್ಮು ಕಾಶ್ಮೀರ, ಟಿಬೆಟ್ ಹೀಗೆ ಅನೇಕ ಸ್ಥಳಗಳಿಂದ ಶುರುವಾಗುತ್ತವೆ. ಅಂತಹ ಹಾದಿಗಳಲ್ಲಿ ಸರ್ಪಾಸ್ ಕೂಡ ಒಂದು. ಇದು ಹಿಮಾಚಲ ಪ್ರದೇಶದ ಕಸೋಲ್ ಎಂಬಲ್ಲಿಂದ ಶುರುವಾಗುತ್ತದೆ. ಇಲ್ಲಿ ಹತ್ತಾರು ಟ್ರೆಕ್ಕಿಂಗ್ ಏಜೆನ್ಸಿಗಳಿವೆ. ಚಳಿ, ವಸಂತ, ಮುಂಗಾರು, ಬೇಸಿಗೆ, ಶರತ್ಕಾಲ, ಮಳೆಗಾಲಕ್ಕೆ ಸಂಬಂಧಿಸಿದಂತಹ ಟ್ರೆಕ್ಕಿಂಗ್ ಪಾಯಿಂಟ್‌ಗಳು ಇವರಲ್ಲಿ ಲಭ್ಯವಿರುತ್ತವೆ. ಪ್ರತಿ ಏಜೆನ್ಸಿಯಲ್ಲಿಯೂ ನಾಲ್ಕು ದಿನ ಐದು ರಾತ್ರಿ, ಆರು ರಾತ್ರಿ ಏಳು ದಿನ ಎಂಬಂತಹ ಬೇರೆ ಬೇರೆ ಮೊತ್ತದ ಪ್ಯಾಕೇಜ್‌ಗಳು ಲಭ್ಯವಿರುತ್ತವೆ. ನಮಗೆ ಅನುಕೂಲವಾಗುವ ಸಮಯಕ್ಕೆ, ಅನುಕೂಲವಾಗುವ ಪ್ಯಾಕೇಜ್ ಪಡೆದು ನೋಂದಾಯಿಸಿಕೊಳ್ಳಬಹುದು.

ಸಿದ್ಧವಾಗಿ ಒಂದು ದಿನ ಮೊದಲೇ ನಾವು ಅಲ್ಲಿಗೆ ತಲುಪಿದ್ದೆವು. ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳುವುದು ಮತ್ತು ಟ್ರೆಕ್ಕಿಂಗ್‌ಗೆ ಸಂಬಂಧಿಸಿದ ವಿವರಣೆಗಳನ್ನು ನೀಡುವ ಸಲುವಾಗಿ ಅವರು ಒಂದು ದಿನ ಮೊದಲೇ ಹಾಜರಿರಲು ಹೇಳಿರುತ್ತಾರೆ. ನಾವು ‘ಕೈಲಾಸ ರಥ’ ಎಂಬ ಏಜೆನ್ಸಿಯಲ್ಲಿ ನೋಂದಾಯಿಸಿಕೊಂಡಿದ್ದೆವು. ಈ ‘ಕೈಲಾಸ ರಥ’ದ ಕರ್ನಾಟಕ ಚಾಪ್ಟರ್‌ನ ನೇತೃತ್ವವನ್ನು ನಮ್ಮವರೇ ಆದ ರಂಗಕರ್ಮಿ ಕಿರಣ್ ವಟಿ ಅವರು ವಹಿಸಿಕೊಂಡಿದ್ದಾರೆ. ಎಲ್ಲಾ ಸೀಸನ್ನಿನಲ್ಲೂ ಈ ಸರ್ಪಾಸ್ ಟ್ರೆಕ್ಕಿಂಗ್ ಇರುವುದಿಲ್ಲ. ಏಪ್ರಿಲ್‌ನಿಂದ ಮೇ ತಿಂಗಳ ಅವಧಿಯಲ್ಲಿ ಮಾತ್ರ ಅಂದರೆ ವರ್ಷಕ್ಕೆ ಕೇವಲ ಎರಡು ತಿಂಗಳು ಅಲ್ಲಿಗೆ ಹೋಗಲು ಅವಕಾಶವಿರುತ್ತದೆ. ನಾವು ಮೂರು ತಿಂಗಳ ಮುಂಚೆಯೇ ನೋಂದಾಯಿಸಿಕೊಂಡಿದ್ದರಿಂದಲೋ ಏನೋ ಈ ಋತುಮಾನದ ಮೊದಲನೇ ತಂಡ ನಮ್ಮದೇ ಆಗಿತ್ತು. ನಮ್ಮ ತಂಡದಲ್ಲಿ ಒಟ್ಟು ಒಂಬತ್ತು ಜನರಿದ್ದೆವು. ಅದರಲ್ಲಿ ಇಬ್ಬರು ಬಾಲಕಿಯರು, ನಾಲ್ವರು ಮಹಿಳೆಯರು ಮತ್ತು ಮೂವರು ಪುರುಷರಿದ್ದೆವು.

ಕಸೋಲ್‌ನ ಬೇಸ್ ಕ್ಯಾಂಪ್‌ನಲ್ಲಿ ಮೊದಲನೇ ದಿನ ಆರಕ್ಕೆ ಆರಡಿ ಸುತ್ತಳತೆಯ ಟೆಂಟ್‌ಗಳಲ್ಲಿ ನಮ್ಮ ವಾಸ್ತವ್ಯಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಅಲ್ಲಿಂದಲೇ ನಮ್ಮ ಕಂಫರ್ಟ್ ಜೋನ್ ಛಿದ್ರವಾಗುತ್ತಾ ಹೋಯ್ತು. ಪ್ರತ್ಯೇಕ ಬೆಡ್‌ರೂಮ್, ಸ್ನಾನದ ಮನೆ, ಡೈನಿಂಗ್ ಹಾಲ್, ರೀಡಿಂಗ್ ರೂಮ್ ತರಹದ ಅಭ್ಯಾಸವಿದ್ದವರು ಈ ಟೆಂಟ್‌ಗಳಲ್ಲಿ ಅನನುಕೂಲ ಅನುಭವಿಸುತ್ತಾರೆ. ಇಲ್ಲಿ ಪ್ರತ್ಯೇಕತೆ ಎಂಬುದೇ ಇಲ್ಲ. ಗಂಡ ಹೆಂಡ್ತಿ ಒಟ್ಟಿಗೆ ಮಲಗ್ತೀವಿ, ನಮ್ಮ ಬಳಗ ಪ್ರತ್ಯೇಕವಾಗಿರ್ತೀವಿ ಅಂದ್ರೆ ಸಾಧ್ಯವಿಲ್ಲ. ಪುರುಷರಿಗೆ, ಮಹಿಳೆಯರಿಗೆ ಅಂತ ಟೆಂಟ್‌ಗಳು ಸಿದ್ಧವಾಗಿರುತ್ತವೆ. ಅದರ ಪ್ರಕಾರವೇ ವಾಸ್ತವ್ಯ. ನೋಂದಣಿ ಪ್ರಕ್ರಿಯೆ ಮುಗಿದ ಕೂಡಲೇ ನಮ್ಮ ಪಕ್ಕದಲ್ಲಿಯೇ ರಿಹರ್ಸಲ್ ನಡೆಯುತ್ತದೆ. ಬೇಸ್ ಕ್ಯಾಂಪ್ ತಲೆ ಮೇಲಿನ ಗುಡ್ಡವೊಂದನ್ನು ಹತ್ತಿಸಲು ಕರೆದೊಯ್ಯುತ್ತಾರೆ. ಅದು ಮೂರು ಕಿ.ಮೀಗಳಷ್ಟು ಉದ್ದದ ಹಾದಿ. ಸರ್ಪಾಸ್‌ನ ಟ್ರೆಕ್ಕಿಂಗ್ ಹಾದಿ ಬಗ್ಗೆ ನಾವು ಎಷ್ಟು ಅಮಾಯಕರಾಗಿದ್ದೆವು ಎಂದರೆ, ಆ ದಿನದ ರಿಹರ್ಸಲ್ಲೇ ನಮಗೆ ಮಹಾನ್ ಸಾಹಸ ಎಂಬಂತೆ ಭಾಸವಾಗಿತ್ತು. ಬಹುಶಃ ಸರ್ಪಾಸ್‌ಗೆ ತೆರಳುವ ಹಾದಿ ಈ ಗುಡ್ಡ ಹತ್ತಿದಷ್ಟು ಸಲೀಸಿನದಲ್ಲ ಎಂಬ ಕನಿಷ್ಠ ಅಂದಾಜು ನಮಗಿದ್ದಿದ್ದರೂ ನಾವು ಸರ್ಪಾಸ್ ಸಾಹಸಕ್ಕೆ ಕಾಲು ಹಾಕುತ್ತಿರಲಿಲ್ಲ ಅನಿಸುತ್ತೆ.

ಎರಡನೇ ದಿನ ಬೆಳಿಗ್ಗೆ ಐದೂವರೆಗೆಲ್ಲಾ ನಮ್ಮನ್ನು ಎಬ್ಬಿಸಿ, ಏಳು ಗಂಟೆಗೆಲ್ಲಾ ತಿಂಡಿ ತಿನ್ನಿಸಿ ಸರ್ಪಾಸ್ ಟ್ರೆಕ್ಕಿಂಗ್‌ಗೆ ಸಿದ್ಧಗೊಳಿಸಿದರು. ಭಾರದ ಬ್ಯಾಗ್ ಹೊತ್ತು, ತೂಕದ ಶೂಸ್ ಧರಿಸಿ, ಕೈಯಲ್ಲೊಂದು ಕೋಲು ಹಿಡಿದು, ತಲೆಗೊಂದು ಕ್ಯಾಪು ಸಿಕ್ಕಿಸಿ ನಾವು ಬೇಸ್ ಕ್ಯಾಂಪಿನಿಂದ ಹೊರಡುವಾಗ ಅಲ್ಲಿನ ಸಿಬ್ಬಂದಿ ಒಟ್ಟಿಗೆ ನಿಂತು ನಮ್ಮತ್ತ ಕೈಬೀಸಿ ಶುಭಾಶಯ ಕೋರಿದ ಕ್ಷಣ ನಾವೇನಾದರೂ ಯುದ್ಧಕ್ಕೆ ಹೊರಟಿದ್ದೀವಾ ಅಂತ ಅನುಮಾನ ಶುರುವಾಗಿಬಿಟ್ಟಿತು. ಆದರೂ ಅದೊಂಥರಾ ಖುಷಿ. ಆ ಉತ್ಸಾಹದಲ್ಲಿ ಅಗತ್ಯಕ್ಕಿಂತ ಹೆಚ್ಚಿನ ವೇಗದಲ್ಲಿ ಹೆಜ್ಜೆ ಹಾಕತೊಡಗಿದೆವು. ಕಸೋಲ್‌ನಿಂದ ಆರಂಭವಾಗಿ ಗ್ರಹಣ್ ತಲುಪುವುದು ಮೊದಲನೇ ದಿನದ ಕಾರ್ಯಕ್ರಮವಾಗಿತ್ತು. ಪಾರ್ವತಿ ನದಿ ತೀರದಲ್ಲಿಯೇ ಸಾಗಬೇಕಾದ ಆ ಏಳು ಕಿ.ಮೀಗಳ ಹಾದಿ ಮಾಮೂಲಿ ಬಂಡಿಜಾಡು. ಅಷ್ಟೇನೂ ಕಷ್ಟವಲ್ಲದ ಆ ಹಾದಿಯಲ್ಲಿ ನಮಗೆ ಎಲ್ಲದರ ಬಗ್ಗೆಯೂ ಉತ್ಸಾಹ, ಕಂಡ ಕಂಡ ಕಡೆ ನಿಂತು, ಫೋಟೋ ಕ್ಲಿಕ್ಕಿಸಿಕೊಳ್ಳುವ ಸಂಭ್ರಮ. ಸಣ್ಣದೊಂದು ಹೂವಿಗೆ ಮನಸೋಲುತ್ತಿತ್ತು. ಚಿಟ್ಟೆಗೆ ಮನ ಹಾರುತಿತ್ತು. ನದಿಯಂತೆ ಮನ ಹರಿಯುತಿತ್ತು. ಆದರೆ ನಾವು ಕೇವಲ ಮೂರೇ ಗಂಟೆಗಳಲ್ಲಿ ಸ್ವಲ್ಪ ಗಂಭೀರ ಸ್ಥಿತಿಗೆ ತಲುಪಿಬಿಟ್ಟೆವು. ಕಿಲಕಿಲ ನಗು ಮಾಯವಾಗಿತ್ತು. ಭುಜಗಳು ಸೋತವು, ಕಣ್ಣುಗಳು ದಾರಿಯನ್ನಷ್ಟೇ ನೋಡಲಾರಂಭಿಸಿದವು. ಕಾಲುಗಳು ನಿತ್ರಾಣಗೊಂಡವು. ಬೆವರು ಹರಿಯಿತು. ಟ್ರೆಕ್ಕಿಂಗ್ ತನ್ನ ಕಾಠಿಣ್ಯ ಪ್ರದರ್ಶನಕ್ಕೆ ಇಳಿದಿತ್ತು. ಕಾಲುದಾರಿಗಿಂತ ಕಿರಿದಾದ ದಾರಿಯಲ್ಲಿ ಸಾಗಬೇಕಿತ್ತು ಅಥವಾ ದಾರಿಯೇ ಅಲ್ಲದ ದಾರಿಯಲ್ಲಿ ಸಾಗಬೇಕಿತ್ತು.

ಈ ದಾರಿ ಪಕ್ಕದಲ್ಲೇ ಹರಿಯುವ ಪಾರ್ವತಿ ನದಿ ನಮ್ಮ ಉತ್ಸಾಹವನ್ನು ಹಿಡಿದಿಟ್ಟುಕೊಂಡಿತ್ತು. ಸುಮಾರು ಏಳು ಕಿ.ಮೀಗಳಷ್ಟು ಉದ್ದ ಅದು ನಮಗೆ ಎದುರಾಗಿ ಹರಿಯುತ್ತಲೇ ಇತ್ತು. ನೀವೂ ಆ ನದಿಯಂತೆ ಸಾಗಬೇಕು ಅಂತ ನಮ್ಮ ಗೈಡ್ ಹೇಳುತ್ತಿದ್ದರು. ಆ ನದಿಗೆ ಓಡುವ ಆತುರವಿರಲಿಲ್ಲ. ನಿಧಾನವಾದರೂ ಸಮಾಧಾನದಿಂದ ಹರಿಯುತ್ತಲೇ ಇರಬೇಕೆಂಬುದು ಆ ಮಾತಿನ ಅರ್ಥವಾಗಿತ್ತು. ಈ ತತ್ವ ಅದೆಷ್ಟು ಮುಖ್ಯ ಎಂಬುದು ನಮಗೆ ಅರಿವಾಗಲು ನಾವು ಮೂರನೇ ದಿನದ ತನಕ ಕಾಯಬೇಕಿತ್ತು. ನಮ್ಮೊಡನಿದ್ದ ಗೈಡ್‌ಗಳ ನೆರವಿನಿಂದ ನಾವು ಮಧ್ಯಾಹ್ನ ಮೂರು ಗಂಟೆಗೆಲ್ಲಾ ನಮ್ಮ ಮೊದಲನೇ ಕ್ಯಾಂಪ್ 7700 ಅಡಿ ಎತ್ತರದ ‘ಗ್ರಹಣ್’ ತಲುಪಿದ್ದೆವು. ಗ್ರಹಣ್ ಎಂಬುದು ಹಳ್ಳಿ. ಅರವತ್ತಕ್ಕೂ ಹೆಚ್ಚು ಕುಟುಂಬಗಳು ಅಲ್ಲಿ ವಾಸಿಸುತ್ತವೆ. ನಮ್ಮೂರಿಗೆ ಇನ್ನೂರು ವರ್ಷಗಳ ಇತಿಹಾಸವಿದೆ ಎಂದು ಹೆಮ್ಮೆಯಿಂದ ಹೇಳಿಕೊಳ್ಳುವ ಈ ಗ್ರಾಮಸ್ಥರ ಆದಾಯದ ಮೂಲ ಪ್ರವಾಸಿಗರು. ಟ್ರೆಕ್ಕಿಂಗ್‌ಗೆ ಬರುವ ಜನರಿಗಾಗಿ ಇವರು ರೂಮ್‌ಗಳನ್ನು ನಿರ್ಮಿಸಿದ್ದಾರೆ. ಅಂಗಡಿ, ಹೋಟೆಲ್, ವೈಫೈ ಮೊದಲಾದ ಸೌಲಭ್ಯಗಳನ್ನು ಸಿದ್ಧಗೊಳಿಸಿಟ್ಟುಕೊಂಡಿದ್ದಾರೆ. ಕುದುರೆಯೂ ಅಲ್ಲದ ಕತ್ತೆಯೂ ಅಲ್ಲದ ಮಿಶ್ರತಳಿ ಮ್ಯೂಲ್ಸ್ ಎಂಬ ಪ್ರಾಣಿಯ ಮೂಲಕ ಇವರು ತಮಗೆ ಅಗತ್ಯವಿರುವ ವಸ್ತುಗಳನ್ನು ಕಸೋಲ್‌ನಿಂದ ತರಿಸಿಕೊಳ್ಳುತ್ತಾರೆ. ಮನುಷ್ಯರೇ ಓಡಾಡಲು ಆಗದ ರಸ್ತೆಗಳಲ್ಲಿ ಆ ಪ್ರಾಣಿ ಐವತ್ತರಿಂದ ನೂರು ಕೆ.ಜಿಯಷ್ಟು ಭಾರ ಹೊತ್ತು ದಿನಕ್ಕೆ ಮೂರು ಸಲ ಗ್ರಹಣ್ ಹತ್ತಿ ಇಳಿಯುತ್ತದೆ. ನಮಗೆ ಟ್ರೆಕ್ಕಿಂಗ್ ಒಂದು ಪ್ಯಾಶನ್ ಆದರೆ ಅವುಗಳಿಗೆ ಅದೊಂದು ಅನಿವಾರ್ಯ. ನಾವು ಏದುಸಿರು ಬಿಡ್ತಾ, ಹೆಜ್ಜೆ ಮೇಲೆ ಹೆಜ್ಜೆ ಇಟ್ಟು, ಏಳೆಂಟು ಕಡೆ ಕೂತು ಸುಧಾರಿಸಿಕೊಂಡು 7,700 ಅಡಿ ತಲುಪುವಷ್ಟರಲ್ಲಿ ಈ ಪ್ರಾಣಿ ನಾಲ್ಕು ಸಲ ಹತ್ತಿ ಇಳಿದುಬಿಡುತ್ತದೆ.

ಮೂರನೇ ದಿನ ಗ್ರಹಣ್‌ನಿಂದ ‘ಪದ್ರಿ’ಯತ್ತ ಸಾಗುವ ಹಾದಿಯಂತೂ ಸ್ವರ್ಗವೇ ಸರಿ. ಅಷ್ಟೇನೂ ಕಠಿಣವಲ್ಲದ ಆದರೆ ಹತ್ತುವ ವಿಷಯದಲ್ಲಿ ರಾಜಿಗೆ ಒಳಪಡದ ಆ ಹಾದಿ ಖುಷಿಕೊಡುತ್ತದೆ. ಮೂರೂವರೆ ಗಂಟೆಗಳ ಆ ಪಯಣದಲ್ಲಿ ನಾನು ಕನಿಷ್ಠ ನೂರು ಸಲ ವಾಹ್ ಅಂದಿರುತ್ತೇನೆ. ಕಣ್ಣುಹಾಯಿಸಿದಷ್ಟು ದೂರಕ್ಕೂ ಕಾಣುವ ಪರ್ವತಗಳು, ಹಕ್ಕಿಗಳ ಕಲರವ, ನದಿಯ ಜುಳುಜುಳು ಸದ್ದು, ಎತ್ತರೆತ್ತರದ ಮರಗಳು, ಬೃಹತ್ ಬಂಡೆಗಳು, ಜಲಪಾತ, ಹಿಮಾವೃತ ಶಿಖರಗಳು, ಹತ್ತು ಜನರ ಅಪ್ಪುಗೆಗೂ ಸಿಗದಂತಹ ದೊಡ್ಡದೊಡ್ಡ ಮರಗಳು, ಹಚ್ಚಹಸಿರು, ತಣ್ಣನೆಯ ಉಸಿರು, ಜೀವನದ ಅತ್ಯಂತ ಸಾರ್ಥಕ ಕ್ಷಣದ ಪರಿಚಯ ಮಾಡಿಸಿಬಿಟ್ಟಿತು. ಪದ್ರಿ ತಲುಪಿದ ನಂತರವಂತೂ ಕುಣಿದೇಬಿಟ್ಟೆವು. ಏನಿಲ್ಲ ಅಲ್ಲಿ! ವಿಶಾಲವಾದ ಹಸಿರಿನ ಬಯಲು, ಮುಗಿಲೆತ್ತರದ ಮರಗಳು, ಜೋಗ್ ಅನ್ನು ನೆನಪಿಸುವ ವಟಿ ವಾಟರ್‌ಫಾಲ್ಸ್, ನಮ್ಮ ಪಕ್ಕದಲ್ಲೇ ಇರುವಂತೆ ಕಾಣುವ ಮಂಜಿನ ಪರ್ವತಗಳು, ಕಣ್ಣು ಹಾಯಿಸಿದಷ್ಟು ದೂರವೂ ಕಾಣುವ ಪ್ರಕೃತಿ. ನಮಗೆ ಆ ಕ್ಷಣಕ್ಕೆ ಅದು ಸ್ವರ್ಗದಂತೆಯೇ ಅನ್ನಿಸಿತು. ನಾವು ಮೂರನೇ ದಿನವನ್ನು ಅಲ್ಲಿಯೇ ಕಳೆಯಬೇಕಿತ್ತು. ಆದರೆ ಪದ್ರಿಯಿಂದ ಮುಂಘ್ತಾಜ್‌ಗೆ ಹೋಗುವ ಹಾದಿಯು ಹಿಮಾವೃತವಾಗಿದ್ದರಿಂದ ಮತ್ತೆ ಗ್ರಹಣ್ ಗ್ರಾಮಕ್ಕೆ ವಾಪಸ್ಸಾಗಿ ಮಾರನೇ ದಿನ ಅಲ್ಲಿಂದ ನಾವು ಮುಂಘ್ತಾಚತ್‌ನತ್ತ ಹೊರಟೆವು. ಅದು ಒಡ್ಡಿದ ಸವಾಲೂ ಅಷ್ಟಿಷ್ಟಲ್ಲ.

ಏಜೆನ್ಸಿಯವರು ಕಳುಹಿಸಿದ್ದ ಗೈಡ್‌ಗಳು ನಮ್ಮನ್ನು ಪ್ರತಿ ಹೆಜ್ಜೆಯಲ್ಲೂ ಜೋಪಾನ ಮಾಡುತ್ತಿದ್ದರು. ಪುಟ್ಟಪುಟ್ಟ ಟೆಂಟ್‌ಗಳಲ್ಲಿ ಮಲಗಬೇಕಾದ ಕ್ರಮ, ಹೊದಿಕೆಗಳನ್ನು ಧರಿಸುವ ವಿಧಾನ, ದೇಹದಲ್ಲಿ ನೀರಿನಂಶ ಕಡಿಮೆಯಾಗದಂತೆ ಎಚ್ಚರ ವಹಿಸುವ ಬಗೆ, ಕಾಲಕಾಲಕ್ಕೆ ಆಕ್ಸಿಜನ್ ಮಟ್ಟ ಪರೀಕ್ಷೆ, ಗಾಯಗಳಾದರೆ, ಸುಸ್ತಾದರೆ, ಚಳಿಯಾದರೆ ಉಪಚರಿಸುತ್ತಿದ್ದಂತಹ ರೀತಿ ನಮ್ಮನ್ನು ಧೈರ್ಯಗೆಡದಂತೆ ಮಾಡುತ್ತಿದ್ದವು. ಆ ಚಳಿಯಲ್ಲಿ ನೀರು ಕುಡಿಯುವುದೆಂದರೆ ಎಂತಹವರಿಗೂ ಹಿಂಸೆ!

ಅದನ್ನು ಅರಿತಿದ್ದ ಆ ತಂಡ ನಮಗೆ ಬಗೆಬಗೆಯ ಸೂಪ್‌ಗಳನ್ನು ಸಮಯಾನುಸಾರ ನೀಡುತ್ತಿದ್ದರು. ಟೀ, ಕಾಫಿಗಳಂತೂ ಲೀಟರ್ ಲೆಕ್ಕದಲ್ಲಿ ಕುಡಿಯಬಹುದಿತ್ತು. ಅಜೀರ್ಣವಾಗುವ ಆಹಾರ ಕೊಡುತ್ತಲೇ ಇರಲಿಲ್ಲ. ನಾನ್ ವೆಜ್ ಬಿಡಿ ಮೊಟ್ಟೆಯನ್ನೂ ತಿನ್ನಬಾರದಿತ್ತು. ಬೂಟುಗಳು ಕಾಲುಗಳನ್ನು ಕಚ್ಚಲು ಶುರುಮಾಡಿದರೆ ಕೂಡಲೇ ಮುಂಜಾಗ್ರತ ಕ್ರಮಗಳನ್ನು ಕೈಗೊಳ್ಳುತ್ತಿದ್ದರು.

ಆರನೇ ದಿನ ಬೆಳಗಿನ ಜಾವ ಮೂರು ಗಂಟೆಗೆಲ್ಲಾ ಎದ್ದು ನಾವು ಸರ್ಪಾಸ್‌ನತ್ತ ಹೊರಡಬೇಕಿತ್ತು. ಸೂರ್ಯ ಕೆಂಪೇರುವ ಮುಂಚೆ ನಾವು ಆ ಹಿಮಬೆಟ್ಟ ಹತ್ತದಿದ್ದರೆ ಹಿಮಕರಗಿ, ನಡೆಯುವ ಹಾದಿ ಅಪಾಯಕ್ಕೆ ಸಿಕ್ಕಿಕೊಳ್ಳುತಿತ್ತು. ಬೆಳಗಿನ ಜಾವ ಮೂರು ಗಂಟೆಗೆ ಪಯಣ ಪ್ರಾರಂಭಿಸಿದೆವು. ಅಲ್ಲಿ ಸಂಪೂರ್ಣ ಕತ್ತಲು! ಏನೂ ಕಾಣುತ್ತಿರಲಿಲ್ಲ ಆದರೂ ನಾವು ನಡೆಯುತ್ತಿದ್ದೆವು ಏಕೆಂದರೆ ನಮ್ಮ ಗಮ್ಯ ನಮಗೆ ಗೊತ್ತಿತ್ತು. ಕೊರೆಯುವ ಚಳಿ, ಕತ್ತಲಿದ್ದರೂ ನಮ್ಮ ಕನಸೇ ನಮ್ಮನ್ನು ಮುನ್ನಡೆಸುತಿತ್ತು. ಮಧ್ಯಾಹ್ನ ಒಂದು ಗಂಟೆಗೆಲ್ಲಾ ನಾವು ಗಮ್ಯ ತಲುಪಿದ್ದೆವು!

ಸರ್ಪಾಸ್!!

ಸರ್ಪಾಸ್ ಎಂದರೆ ಸರೋವರ. ತಿಲಾಲೊಟ್‌ನಿಯಿಂದ ಬಿಸ್ಕೇರಿ ರಿಡ್ಜ್‌ಗೆ ಹೋಗುವ ಹಾದಿಯಲ್ಲಿ ಸಾಮಾನ್ಯವಾಗಿ ಹೆಪ್ಪುಗಟ್ಟಿದ ಒಂದು ಸಣ್ಣ ಸರೋವರದ ಮೂಲಕ ಹಾದು ಹೋಗಬೇಕು. ಆದ್ದರಿಂದಲೇ ಇದನ್ನು ಸರ್ಪಾಸ್ ಟ್ರೆಕ್ ಎಂದು ಕರೆಯುತ್ತಾರೆ. ಈ ಸ್ಥಳ ಭೂಮಿಯಿಂದ 13850 ಅಡಿ ಎತ್ತರದಲ್ಲಿದೆ. ಇಲ್ಲಿನ ಜನ ನಾವು ಒಂದು ವಾರ ಹತ್ತಬೇಕಿರುವ ಎತ್ತರವನ್ನು ದಿನಕ್ಕೆ ಎರಡು ಸಲ ಹತ್ತಿ ಇಳಿಯುತ್ತಾರೆ. ನಮಗೆ ಈ ಟ್ರೆಕ್ಕಿಂಗ್ ಪ್ಯಾಶನ್ ಆದರೆ ಅವರಿಗೆ ಹೊಟ್ಟೆಪಾಡು! ಹೀಗೆಲ್ಲಾ ಅನ್ನಿಸುತಿತ್ತು. ಆದರೆ ಯಾವಾಗ ನಾವು ಸರ್ಪಾಸ್ ತಲುಪಿದೆವೋ, ಆ ಕ್ಷಣ ಅನುಭವಿಸಿದ ಧನ್ಯತಾ ಭಾವವನ್ನು ವರ್ಣಿಸುವುದು ಕಷ್ಟಸಾಧ್ಯ. ಜಗತ್ತನ್ನೇ ಗೆದ್ದಂತಹ ಅನುಭವ ಮತ್ತು ಏನು ಬೇಕಾದರೂ ಸಾಧಿಸಬಲ್ಲೆವು ಎಂಬ ಆತ್ಮವಿಶ್ವಾಸ ಒಟ್ಟೊಟ್ಟಿಗೆ ನಮ್ಮಲ್ಲಿ ಹುಟ್ಟಿಕೊಂಡವು. ಕಂಫರ್ಟ್ ಝೋನ್ ಆಚೆಗಿನ ಬದುಕು ಹೇಗಿರುತ್ತೆ ಎಂಬುದರ ಸಾಕ್ಷಾತ್ಕಾರವಾದ ಕ್ಷಣವದು. ಸರ್ಪಾಸ್ ಏರುವುದು ಕಷ್ಟಕರವಾದುದು. ಪ್ರತಿಹೆಜ್ಜೆಯೂ ಕಷ್ಟಕರವಾಗಿರುತ್ತದೆ. ಆದರೆ ಏರಿದ ನಂತರ ಮಿಕ್ಕೆಲ್ಲವೂ ಸಲೀಸು. ಆ ಎತ್ತರದಿಂದ ನಾವು ಕಷ್ಟಪಟ್ಟು ಇಳಿಯಬೇಕಿಲ್ಲ. ಇಳಿಯುವಾಗ ಕಿ.ಮೀಗಳಷ್ಟು ದೊಡ್ಡದಾದ ಜಾರುಹಾದಿಗಳಿರುತ್ತವೆ. ನೀವು ಸುಮ್ಮನೆ ಕೂತರೆ ಸಾಕು ಒಂದೆರಡು ಕಿ.ಮೀಗಳಷ್ಟು ದೂರದ ತನಕ ಒಂದೆರಡು ನಿಮಿಷದಲ್ಲಿ ಜಾರಿಬಿಡಬಹುದು. ಮತ್ತೆ ಅಲ್ಲಿಂದ ಮತ್ತೊಂದು ಜಾರುಹಾದಿಯಲ್ಲಿ ಕೂತರೆ ಮತ್ತೆ ಮತ್ತಷ್ಟು ದೂರ. ಬದುಕೂ ಹೀಗೇ ಅಲ್ಲವಾ? ಸಾಧಿಸುವ ತನಕ, ಗಳಿಸುವ ತನಕ ಅದೆಷ್ಟು ಕಠಿಣ. ಆದರೆ ಸಾಧಿಸಿಬಿಟ್ಟರೆ ಎಲ್ಲವೂ ನಿಮ್ಮ ಕಣ್ಣಳತೆ ದೂರದಲ್ಲಿ!

ಹಿಮಾಲಯದಲ್ಲಿ ಕನ್ನಡಿಗರ ತಂಡ

ಅನ್ನಾಹಾರ...ಬದಲಾದ ಸಾರ

8ನೇ ಪುಟದಿಂದ...

ಸರ್ಕಾರದ ನೀತಿ ಬದಲಾಗಬೇಕು


ಡಾ.ಎಚ್.ವಿ.ವಾಸು

ದೇಹದ ಆರೋಗ್ಯಕ್ಕೆ ಮಾರಕವಾಗುವ ಸಂಸ್ಕರಿತ ಆಹಾರ ಪದಾರ್ಥ ಹಾಗೂ ಕಾರ್ಬೊಹೈಡ್ರೇಟ್(ಷರ್ಕರಪಿಷ್ಟ) ಬಳಕೆ ಜಗತ್ತಿನಾದ್ಯಂತ ಹೆಚ್ಚಾಗುತ್ತಿದೆ. ಅಕ್ಕಿ, ಗೋಧಿ, ರಾಗಿ, ಜೋಳ ಹೀಗೆ ಬಿಳಿ ಹಿಟ್ಟಿನ ಅಂಶವಿರುವ ಎಲ್ಲವೂ ಕಾರ್ಬೊಹೈಡ್ರೇಟ್. ಇದು ದೇಹಕ್ಕೆ ಅಗತ್ಯವಿದ್ದರೂ ಬಳಕೆ ಅತಿಯಾಗಿದೆ. ರಾಜ್ಯ ಸರ್ಕಾರ ಪಡಿತರದಲ್ಲಿ ಕಾರ್ಬೊಹೈಡ್ರೇಟ್ ಹೊಂದಿರುವ ಪದಾರ್ಥಗಳನ್ನೇ ಕೊಡುವುದರಿಂದ ಬಡವರ ಆಹಾರದಲ್ಲೂ ಅಗತ್ಯವಿರುವ ಎಲ್ಲ ಪೋಷಕಾಂಶಗಳು ಸಿಗುತ್ತಿಲ್ಲ. ಬೇಳೆ, ಕಾಳು, ಮೀನು, ಮೊಟ್ಟೆ, ಮಾಂಸ ಬಳಕೆ ಹೆಚ್ಚಾಗುವುದು ಒಳ್ಳೆಯದು ಎನ್ನುವುದನ್ನು ಹಲವು ವೈದ್ಯರು ಅನುಮೋದಿಸುತ್ತಾರೆ.

‘ಡಯಟ್ ಮಾಡಬೇಕು ಎಂಬ ಉದ್ದೇಶದಿಂದ ಬಹುತೇಕರು ಕೊಬ್ಬಿನ ಅಂಶವಿರುವ ಪದಾರ್ಥವನ್ನು ಸಂಪೂರ್ಣ ತ್ಯಜಿಸಿ ಕಾರ್ಬೊಹೈಡ್ರೇಟ್ ಹೆಚ್ಚು ತಿನ್ನುತ್ತಾರೆ. ಅದು ಡಯಟ್‌ನ ಕ್ರಮವಲ್ಲ. ಇದರಿಂದ ಬೇರೆ ಬೇರೆ ಅನಾರೋಗ್ಯ ಉಂಟಾಗುತ್ತವೆ. ಪ್ರೊಟೀನ್ ಹಾಗೂ ಪೋಷಕಾಂಶಯುಕ್ತ ಆಹಾರ ಧಾನ್ಯ ನೀಡುವತ್ತ ಸರ್ಕಾರ ಯೋಜನೆ ರೂಪಿಸಬೇಕು. ಜತೆಗೆ ಅಂತಹ ಬೆಳೆಗಳನ್ನು ಬೆಳೆಯಲು ರೈತರಿಗೆ ಪ್ರೋತ್ಸಾಹ ನೀಡಬೇಕು. ಮಕ್ಕಳಿಗೆ, ಗರ್ಭಿಣಿಯರಿಗೂ ಪೋಷಕಾಂಶಯುಕ್ತ ಆಹಾರ ಲಭಿಸುವಂತೆ ಮಾಡಬೇಕು’ ಎನ್ನುವರು ವೈದ್ಯ ಡಾ.ಎಚ್.ವಿ.ವಾಸು.

ಸರ್ಕಾರವೇ ವೈಜ್ಞಾನಿಕ ಆಹಾರ ಕ್ರಮ ರೂಪಿಸಲಿ: ‘ಡಯಟ್ ವಿಷಯದಲ್ಲಿ ಒಬ್ಬೊಬ್ಬ ವೈದ್ಯರು ಒಂದೊಂದು ರೀತಿಯ ಸಲಹೆ ನೀಡುತ್ತಾರೆ. ಕೆಲ ಅಂಗಡಿಗಳಲ್ಲಿ ಪ್ರೊಟೀನ್ ಪೌಡರ್‌ಗಳನ್ನು ಮಾರುವುದು, ಜಿಮ್‌ಗಳಲ್ಲಿ ಸಲಹಾ ಕೇಂದ್ರಗಳನ್ನು ತೆರೆಯುವುದು...ಹೀಗೆ ಇದೂ ಒಂದು ಉದ್ಯಮವಾಗಿ ಮಾರ್ಪಾಡಾಗುತ್ತಿದೆ. ಇದರ ಬದಲಿಗೆ ICMR (ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್) ವೈಜ್ಞಾನಿಕ ಆಹಾರ ಪದ್ಧತಿ ಬಗ್ಗೆ ರೂಪುರೇಷೆ ಸಿದ್ಧಪಡಿಸಿ ಜನರಲ್ಲಿ ಅರಿವು ಮೂಡಿಸಬೇಕು. ಯುನೈಟೆಡ್ ಕಿಂಗ್‌ಡಂನಲ್ಲಿ ಎನ್‌ಎಚ್‌ಎಸ್ (ರಾಷ್ಟ್ರೀಯ ಆರೋಗ್ಯ ಸೇವೆ) ಅಲ್ಲಿನ ಜನರಿಗೆ ಹೊಂದಿಕೊಳ್ಳುವಂತಹ ಆಹಾರ ಕ್ರಮದ ಪ್ರೋಟೋಕಾಲ್ ಸಿದ್ಧಪಡಿಸಿದೆ. ಆ ರೀತಿ ಎಲ್ಲರಿಗೂ ಲಭ್ಯವಾಗುವಂತಹ ಪ್ರೊಟೊಕಾಲ್ ನಮ್ಮ ದೇಶಕ್ಕೂ ಅಗತ್ಯವಿದೆ. ಸಿರಿಧಾನ್ಯಗಳು ಕಾರ್ಬೊಹೈಡ್ರೇಟ್‌ಗೆ ಪರ್ಯಾಯವಾಗಿ ಬಳಸಬಹುದಾದರೂ ಸಿರಿಧಾನ್ಯವೇ ಎಲ್ಲದಕ್ಕೂ ರಾಮಬಾಣ ಎನ್ನುವುದು ಸರಿಯಲ್ಲ’ ಎನ್ನುವ ಸಲಹೆ ವಾಸು ಅವರದ್ದು.

ಪ್ರತಿಕ್ರಿಯೆಗಳು

ಆಳವಾದ ಚಿಂತನೆಗೆ ಇಂಬು ಕೊಡುವ ಲೇಖನ

ಮೇ 14ರ ಭಾನುವಾರದ ಪುರವಣಿಯ ಅಮ್ಮಂದಿರ ದಿನದ ವಿಶೇಷ ಲೇಖನವಾಗಿ ಎಂ.ಎಸ್.ಆಶಾದೇವಿ ಅವರು ಬರೆದಿರುವುದು ಅಮ್ಮನನ್ನು ಕುರಿತ ಆಳವಾದ ಚಿಂತನೆಗೆ ಇಂಬು ಕೊಡುತ್ತದೆ. ತಾಯಿಯ ಸಂಪೂರ್ಣ, ಸಮಗ್ರ ಚಿತ್ರವನ್ನು ಪರಿಪೂರ್ಣವಾಗಿ ಕಟ್ಟಿಕೊಡುವುದು ಕಷ್ಟ! ಏನೆಲ್ಲ ಹೇಳಿದರೂ ಇನ್ನೂ ಏನೋ ಹೇಳದೆ ಇರುವುದು ಉಳಿದೇ ಇರುತ್ತದೆ. ಹಳೆಯ ಸಾಂಪ್ರದಾಯಿಕ ದಿನಗಳಲ್ಲಿ ಅಮ್ಮ, ಮತ್ತು ಇಂದಿನ ಆಧುನಿಕ ಅಮ್ಮಂದಿರ ಒತ್ತಡಗಳ ಬಗ್ಗೆ ಸಮರ್ಥ ಲೇಖನ ನೀಡಿರುವ ಆಶಾದೇವಿ ಅವರಿಗೆ ಮತ್ತು ‘ಪ್ರಜಾವಾಣಿ’ಗೆ ಹೃತ್ಪೂರ್ವಕ ನಮನಗಳು.

ಎಲ್.ಗಿರಿಜಾರಾಜ್

ಹೊಸ ಸಂಗೀತ ಪ್ರಯೋಗವೇ ಪರಿಹಾರ

ಸಂಗೀತ ಈಗ ದೃಶ್ಯ ಮಾಧ್ಯಮಗಳ ಪ್ರಭಾವಕ್ಕೆ ಹಿಂದೆಂದಿಗಿಂತಲೂ ಹೆಚ್ಚಾಗಿ ಒಳಪಟ್ಟಿದೆ. ಕರ್ನಾಟಕ ಶಾಸ್ತ್ರೀಯ ಸಂಗೀತಗಾರರು ಕಛೇರಿಗಳಲ್ಲಿ ಸಿಂಹಪಾಲು ತಮಗೇ ಸಿಗಬೇಕು ಎಂದು ಆಗ್ರಹಿಸುತ್ತಿರುವುದಕ್ಕೂ ಇದಕ್ಕೂ ಸಾವಯವ ಸಂಬಂಧ ಇದೆ. ನಾನು ಸಂಗೀತಗಾರಳಲ್ಲ. ಆದರೆ ರಸಿಕಳು. ಎಷ್ಟೋ ಶಾಸ್ತ್ರೀಯ ಸಂಗೀತ (ಮೇ 21ರ ಲೇಖನ) ಕಛೇರಿಗಳನ್ನು ಆಸ್ವಾದಿಸಿರುವೆ. ಬಾಲಮುರಳಿಕೃಷ್ಣ ಅವರ ಸಂಗೀತ ಬೆಂಗಳೂರಿನಲ್ಲಿ ಇದೆ ಎಂದಾಗ ಬಿಡುವು ಮಾಡಿಕೊಂಡು ಟಿಕೆಟ್ ಕೊಂಡದ್ದು, ಕೋಟೆ ಮೈದಾನದ ರಾಮನವಮಿ ಸಂಗೀತೋತ್ಸವದ ರಸಾನುಭವ ಉಂಡದ್ದು ಇನ್ನೂ ನೆನಪಿದೆ. ಈಗ ಅಂತಹ ಸಾಹಸ ಮಾಡುವಷ್ಟು ಉತ್ಸಾಹ ಉಳಿದಿಲ್ಲ.

ಟೀವಿ ವಾಹಿನಿಗಳಲ್ಲಿ ಬರುವ ರಿಯಾಲಿಟಿ ಶೋಗಳಲ್ಲಿ ಹಾಡುಗಳನ್ನು ನಾನು ನೋಡುತ್ತೇನೆ. ಇದಕ್ಕೆ ಭಾಷೆಯ ಮಿತಿ ಇಲ್ಲ. ಅಲ್ಲಿ ಚೆನ್ನಾಗಿ ಹಾಡುವ ಮಕ್ಕಳು, ದೊಡ್ಡವರು ಎಲ್ಲರೂ ಎಲ್ಲ ರೀತಿಯ ಸಂಗೀತ ಪ್ರಕಾರಗಳನ್ನು ಕೇಳಿಸುತ್ತಾರೆ. ಯಾಕೆಂದರೆ, ಸಿನಿಮಾ ಸಂಗೀತವೇ ಅಲ್ಲಿ ಪ್ರಧಾನ.

ಇದರ ಪರಿಣಮವಾಗಿ ಸಂಗೀತ ಒಂದು ನಿರ್ದಿಷ್ಟ ಶಾಸ್ತ್ರೀಯ ಪ್ರಕಾರವಾಗಿ ಈಗ ಮೊದಲಿನಷ್ಟು ರಸಿಕರನ್ನು ಸೆಳೆಯುತ್ತಿಲ್ಲವೇನೋ? ಹೀಗಾಗಿ ಶುದ್ಧ ಸಂಗೀತಕ್ಕೆ ಹೆಚ್ಚು ವೇದಿಕೆ ಸಿಗುತ್ತಿಲ್ಲ ಎನ್ನುವುದು ಮೇಲ್ನೋಟ್ಟದಲ್ಲಿ ಕಾಣುತ್ತದೆ.

ಪ್ರಮುಖ ಸಂಗೀತಗಾರರು ಸಾಂಘಿಕವಾಗಿ ಪ್ರಯೋಗಗಳನ್ನು ಮಾಡುವ ನಿಟ್ಟಿನಲ್ಲಿ ಯೋಚಿಸಬಹುದೇನೋ? ಪರಿಣತರು, ಹಿರಿಯರು ಹಾಗೂ ಕಿರಿಯ ಪ್ರತಿಭೆಗಳು ಒಂದೇ ವೇದಿಕೆಯಲ್ಲಿ ಕಾಣಿಸಿಕೊಳ್ಳುವ ಪ್ರಯೋಗಗಳು ಈ ಬಿಕ್ಕಟ್ಟಿನ ಪರಿಹಾರಕ್ಕೆ ಒಂದು ದಾರಿಯಾದೀತು.

ಮನೋರಮಾ, ಶಿವಮೊಗ್ಗ

ಮುನ್ನೋಟ 28-05-2023 ರಿಂದ -03-06-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಧಾರ್ಮಿಕ ಕಾರ್ಯಗಳಿಂದ ಧನಸಂಪಾದನೆ ಆಗುವ ಯೋಗವಿದೆ. ಸಾಮಾಜಿಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ಆಸಕ್ತಿಯನ್ನು ತೋರುವಿರಿ. ವೃತ್ತಿಯ ಭಾಗವಾಗಿ ದೂರಪ್ರಯಾಣ ಮಾಡುವ ಸಾಧ್ಯತೆ ಇದೆ. ನಗರ ರಕ್ಷಕರಾಗಿರುವವರು ಹೆಚ್ಚಿನ ಒತ್ತಡದಿಂದ ಕೆಲಸ ಮಾಡಬೇಕಾದ ಪರಿಸ್ಥಿತಿ ಇದೆ. ಮಕ್ಕಳ ಭವಿಷ್ಯದ ಬಗ್ಗೆ ಹೆಚ್ಚು ಚಿಂತೆ ಮೂಡುತ್ತದೆ. ಸರ್ಕಾರಿ ಸಹಾಯಧನ ಶೀಘ್ರವಾಗಿ ಬಂದು ತಲುಪುತ್ತವೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಕಾರ್ಯಕ್ಷೇತ್ರದಲ್ಲಿ ಉತ್ತಮ ಸ್ಥಾನಮಾನ ದೊರೆಯುವ ಯೋಗವಿದೆ. ಕಟ್ಟಡ ನಿರ್ಮಾಣ ಮಾಡುವವರು ನಿಗದಿತ ಸಮಯಕ್ಕೆ ನಿರ್ಮಾಣಕಾರ್ಯವನ್ನು ಮಾಡುವುದು ಒಳ್ಳೆಯದು. ಸಂಸಾರದೊಡನೆ ಈಗ ಸಂತೋಷವಾಗಿ ಕಾಲ ಕಳೆಯುವ ಯೋಗವಿದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಈಗ ಸ್ವಲ್ಪ ಮಟ್ಟಿನ ಹಿನ್ನಡೆ ಇರುತ್ತ-ದೆ. ಸಂಗಾತಿಯ ಅಭಿಪ್ರಾಯಗಳಿಗೆ ಹೆಚ್ಚು ಬೆಲೆ ಕೊಡುವಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಜನರನ್ನು ಆಕರ್ಷಿಸುವ ಕಲೆ ಹಾಗೂ ಜನರನ್ನು ನಂಬಿಸುವ ಕಲೆ ಕರಗತವಾಗು-ತ್ತದೆ. ಸಂಶೋಧನೆ ಮಾಡುವವರು ವಿಷಯಗಳನ್ನು ಸರಿಯಾಗಿ ಅರಿಯುವುದು ಒಳ್ಳೆಯದು. ಕಲಾವಿದರಿಗೆ ಉತ್ತಮ ಅವಕಾಶಗಳು ದೊರೆತು ಹೆಚ್ಚುಸಂಪಾದನೆ ಆಗುವ ಯೋಗವಿದೆ. ಸಾಮಾಜಿಕ ಸ್ಥಾನಮಾನಗಳನ್ನು ಹೆಚ್ಚಿಸಿಕೊಳ್ಳುವ ನಿಮ್ಮ ಪ್ರಯತ್ನಕ್ಕೆ ಬೆಂಬಲ ದೊರೆಯುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಆದಾಯ ಉತ್ತಮವಾಗಿದ್ದರೂ ದುಂದು ವೆಚ್ಚಗಳು ಅಧಿಕವಾಗಬಹುದು. ವ್ಯಾಪಾರಸ್ಥರಿಗೆ ಮಾರಾಟ ಉತ್ತಮವಾಗಿ ಆದಾಯ ಹೆಚ್ಚುತ್ತದೆ. ಹೊಸ ಆಸ್ತಿ ಖರೀದಿಯ ವಿಷಯದಲ್ಲಿ ಆತುರ ಬೇಡ. ಮಕ್ಕಳ ವಿಚಾರದಲ್ಲಿ ಅನವಶ್ಯಕ ಚಿಂತೆ ಬೇಡ. ಆಡಳಿತಾತ್ಮಕ ಹುದ್ದೆಯಲ್ಲಿರುವವರು ಕೆಲವು ದೃಢ ನಿರ್ಧಾರಗಳನ್ನು ಕೈಗೊಳ್ಳಲೇಬೇ-ಕಾಗುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ನಿಮ್ಮ ಖಾಸಗಿ ಬದುಕಿನಲ್ಲಿ ಆಸೆಗಳು ಬಹುಮಟ್ಟಿಗೆ ಈಡೇರುವುದರಿಂದ ಹೊಸ ಹುರುಪು ಮೂಡಲಿದೆ. ಕೆಲವೊಂದು ವಿಷಯಗಳಲ್ಲಿ ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುವುದಕ್ಕಿಂತ ಕುಟುಂಬದವರೊಡನೆ ಕುಳಿತು ಚರ್ಚಿಸಿ ನಿರ್ಧಾರ ತೆಗೆದುಕೊಳ್ಳುವುದು ಒಳ್ಳೆಯದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಬಂಧುಗಳಲ್ಲಿ ನಿಮ್ಮ ಸಲಹೆಯನ್ನು ಒಪ್ಪುವಂತೆ ಮನ ಪರಿವರ್ತನೆ ಮಾಡಲು ವಿಫಲರಾಗುವಿರಿ. ಅನಾರೋಗ್ಯ ಪೀಡಿತರ ಆರೋಗ್ಯದಲ್ಲಿ ಸ್ವಲ್ಪಮಟ್ಟಿನ ಸುಧಾ-ರಣೆಯನ್ನು ಕಾಣಬಹುದು. ವೃತ್ತಿಯಲ್ಲಿ ಉತ್ತಮ ವಿದ್ಯಾಬಲ ಇದ್ದವರಿಗೆ ಸೂಕ್ತ ಸ್ಥಾ-ನಮಾನ ದೊರೆಯುವ ಸಾಧ್ಯತೆಯಿದೆ. ಕೃಷಿಕರಿಗೆ ಕೃಷಿಯಿಂದ ಆದಾಯದ ಜೊತೆಗೆ ಬಹಳ ನೆಮ್ಮದಿ ಸಹ ಇರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಪಾಲುದಾರರ ಜೊತೆ ಇದ್ದ ಮುನಿಸುಗಳನ್ನು ಬಿಟ್ಟು ಹೊಂದಾಣಿಕೆ ಮಾಡಿಕೊ-ಳ್ಳುವುದು ನಿಮಗೆ ಒಳ್ಳೆಯದು. ಸಾಮಾಜಿಕ ಸೇವೆಯಲ್ಲಿರುವವರು ಸರಿಯಾಗಿ ಲೆಕ್ಕಪತ್ರ ಇಡುವುದು ಬಹಳ ಉತ್ತಮ. ಸಂಶೋಧಕರಿಗೆ ಅವರ ಸಂಶೋಧನಾ ವಿಷಯಕ್ಕೆ ಇರುವ ಪ್ರಾಮುಖ್ಯ ಈಗ ಅರಿವಾಗುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಆಸಕ್ತಿ ಕಡಿಮೆಯಾಗುವ ಸಂದರ್ಭವಿದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ದಕ್ಷತೆ ಹಾಗೂ ಸೇವಾ ಮನೋಭಾವಗಳಿಂದ ಸಂಘ ಸಂಸ್ಥೆಗಳಲ್ಲಿ ಜವಾಬ್ದಾರಿ-ಯುತ ಹುದ್ದೆ ನಿಮಗೆ ದೊರೆಯುತ್ತದೆ. ಹಿರಿಯರನ್ನು ಸನ್ಮಾನಿಸಿ ಸಂತೋಷಪ-ಡುವಿರಿ. ರಾಜಕೀಯ ವ್ಯಕ್ತಿಗಳು ಜನಮನ್ನಣೆ ಪಡೆಯಲು ಸಾಕಷ್ಟು ಶ್ರಮಪಡುವರು. ಪ್ರವೃ-ತ್ತಿಯಿಂದ ಹಣ ಸಂಪಾದನೆ ಹೆಚ್ಚಾಗುತ್ತದೆ. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿರುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಸಂಸಾರದಲ್ಲಿ ಎಲ್ಲರನ್ನೂ ಅನುಸರಿಸಿಕೊಂಡು ಜಾಣ್ಮೆ ತೋರುವಿರಿ. ವೃತ್ತಿಪರವಾ-ಗಿ ಬಹಳ ದಿನಗಳ ನಿರೀಕ್ಷಿತ ಕಾರ್ಯಕ್ಕೆ ಈಗ ಒಪ್ಪಿಗೆ ದೊರೆಯುವುದು. ತರಕಾರಿ ಬೆಳೆಗಾರರಿಗೆ ಸಮಾಧಾನಕರ ವರಮಾನ ಇರುತ್ತದೆ.ಸಾಕು ಪ್ರಾಣಿಗಳಿಂದ ತೊಂದರೆ-ಯಾಗಬಹುದು. ಅವುಗಳ ಜೊತೆ ಎಚ್ಚರದಿಂದ ವ್ಯವಹರಿಸಿ.ಕೌಟುಂಬಿಕ ಸಮಸ್ಯೆಗಳು ಹೊಸ ಆಯಾಮ ಪಡೆದು ಸುಖಾಂತ್ಯ ಆಗುತ್ತದೆ

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಅಬಕಾರಿ ಅಧಿಕಾರಿಗಳಿಗೆ ಹೊಸ ಪ್ರಸಂಗವನ್ನು ಭೇದಿಸುವ ಕೆಲಸ ದೊರೆಯು-ತ್ತದೆ. ಆದಾಯ ತೆರಿಗೆ ಇಲಾಖೆಯ ಅಧಿಕಾರಿಗಳಿಗೆ ಸಾಕಷ್ಟು ಒತ್ತಡವಿರುತ್ತದೆ. ಸಿವಿಲ್ ಗುತ್ತಿಗೆದಾರರಿಗೆ ಉತ್ತಮ ಕೆಲಸ ದೊರೆತು ಸಂತಸವಾಗುತ್ತದೆ. ತಂದೆ ತಾಯಿಯರ ಆರೋಗ್ಯದಲ್ಲಿ ಸುಧಾರಣೆಯನ್ನು ಕಾಣಬಹುದು. ಒಳ್ಳೆಯ ಪಾಲುದಾರಿಕೆ ವ್ಯವ-ಹಾರಗಳಲ್ಲಿ ನಿಮಗೆ ಅವಕಾಶ ದೊರೆಯುವ ಸಂಭವವಿದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಗೃಹ ನಿರ್ಮಾಣ ಕಾರ್ಯವನ್ನು ಆಲೋಚಿಸಿ ಮಾಡಿರಿ. ನಿಮ್ಮ ಕೆಲಸ ಕಾರ್ಯಗ-ಳಿಂದ ಹೆಚ್ಚಿನ ಹಣ ಸಂಪಾದನೆಯಾಗುತ್ತದೆ. ಧಾರ್ಮಿಕ ವೃತ್ತಿ ಮಾಡುವವರಿಗೆ ಹೆಚ್ಚಿನ ಆದಾಯವಿರುತ್ತದೆ. ಕೃಷಿಕರು ದಳ್ಳಾಳಿಗಳಿಂದ ಮೋಸ ಹೋಗುವ ಸಾಧ್ಯತೆಗಳಿವೆ, ಎಚ್ಚರ ವಹಿಸಿರಿ. ಯುವಕರು ಅತಿಯಾದ ಮಾತಿನಿಂದ ಅವಮಾನಕ್ಕೆ ಒಳಗಾಗುವ ಸಾಧ್ಯತೆ-ಗಳಿವೆ. ವಿದ್ಯಾರ್ಥಿಗಳಿಗೆ ಉತ್ತಮ ಕಾಲ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಉದ್ಯೋಗಸ್ಥ ಮಹಿಳೆಯರಿಗೆ ಅಧಿಕ ಕೆಲಸದ ಜೊತೆ ಅಧಿಕ ಆದಾಯವು ಇರು-ತ್ತದೆ. ದಿನಸಿ ಸಗಟು ವ್ಯಾಪಾರಿಗಳಿಗೆ ಉತ್ತಮ ವ್ಯಾಪಾರವಿರುತ್ತದೆ. ಆರ್ಥಿಕ ಸ್ಥಿತಿಯು ಉತ್ತಮವಾಗಿರುತ್ತದೆ. ಹಿರಿಯರನ್ನು ಒಪ್ಪಿಸಿ ಮನೆ ನವೀಕರಣ ಕಾರ್ಯಕ್ಕೆ ಕೈ ಹಾಕುವಿರಿ, ಇದಕ್ಕೆ ಅವರಿಂದ ಧನಸಹಾಯ ಸಿಗುವ ಸಾಧ್ಯತೆ ಇದೆ. ಹೊಸ ವಾಹನ ಮಾ-ರಾಟಗಾರರಿಗೆ ವ್ಯವಹಾರ ವೃದ್ಧಿಸುವ ಸಾಧ್ಯತೆ ಇದೆ.

ಪದಬಂಧ 2791

ಮೇಲಿನಿಂದ ಕೆಳಕ್ಕೆ
1. ಚುಂಬನದ ಬಿಳಿಮಣಿಯನ್ನು ಕೊಡುವ ಅರಸ 4
2. ಸಂಧ್ಯಾವಂದನೆಗೆ ಸೂಕ್ತವಾದ ಮೂರು ಹೊತ್ತು 3
3. ಲೋಕದಿಂದ ಲೋಕಕ್ಕೆ ಸುದ್ದಿಯನ್ನು ಮುಟ್ಟಿಸಿದ ಮುನಿ 3
4. ಮದುವೆಯಾದ ಹೆಣ್ಣು 4
6. ಯಾವುದೂ ಸ್ಥಿರವಲ್ಲ ಎನ್ನುವ ವಾದ 4
7. ಇದರಿಂದ ಅತೀತವಾದ ಸಂವಿಧಾನ-ವಿದ್ದರೂ ರಾಜಕಾರಣದಲ್ಲಿ ಮಹತ್ವ ಪಡೆವ ವರ್ಗ ವಿಂಗಡನೆ 2
9. ನನ್ನದು ಎಂಬುದನ್ನು ಸಂಸ್ಕೃತದಲ್ಲಿ ಹೇಗೆ ಬೇಕಾದರೂ ಹೇಳಬಹುದು 2
11. ಆಕಾಶದಲ್ಲಿ ಚಲಿಸುವವ 5
13. ವಾಕ್ಯದಲ್ಲಿ ಜೋಡಿಸಿದ ಪದಗಳ ರೂಪುರೇಷೆ 5
14. ಸ್ವಚ್ಛವಾದ ಬದುಕು 5
16. ಮತ್ತೆ ಬರುವ ಮಾರನೆಯ ದಿನ 5
19. ಚಲಿಸುವ ಮತ್ತು ಸ್ಥಿರ ಎರಡೂ ಸ್ಥಿತಿಗಳ ಸಮ್ಮಿಲನ 4
20. ಕಸಿವಿಸಿಯ ಅರ್ಧಾವಸ್ಥೆ 2
22. ಸರೋವರದಂಥ ಅಂತರಂಗವುಳ್ಳ-ವಳು 3
23. ಕೋಲಿನಿಂದ ಹೊಡಿ 2
26. ಮಂಜಿನ ಬೆಟ್ಟದಲ್ಲಿ ಹುಟ್ಟಿದವಳು 3
24. ಕೊನೆಯಲ್ಲಿ ಕ್ಷಾಮಪೀಡಿತನಾದ ವಸ್ತ್ರಹೀನ 4

ಎಡದಿಂದ ಬಲಕ್ಕೆ
1. ರಾಜ್ಯದ ಆಡಳಿತ ಸೂತ್ರ ಹಿಡಿದ ಪ್ರಮುಖ 4
3. ನಮ್ಮ ರಾಜ್ಯದ ಆರಾಧ್ಯಮೂರ್ತಿ ಈ ತಾಯಿ 4
5. ನಾಣ್ಯಗಳಿಂದ ಮಾಡಿಸಿದ ಮಾಲೆ 5
7. ಮಾಯೆಯಿಂದ ಬೀಸಿದ ಬಲೆ 2
8. ಅರಿಷಡ್ವರ್ಗಗಳಲ್ಲಿ ಹಿಂದು ಮುಂದಾದ ಅಹಂಕಾರ 2
10. ಜಗತ್ತಿಗೆ ದಿಕ್ಕು ತೋರಿಸುವ ಹೆಣ್ಣು 3
13. ರೇಣುಕೆಯ ಮಗನ ಆಯುಧ 3
15. ಮಾತೆ ಮಗುವಿಗೆ ತೋರುವ ಅಕ್ಕರೆ ಪ್ರೀತಿ 3
17. ನವೋದಯದ ಆಚೆಗೆ ಆಧುನಿಕ ಪ್ರಕಾರದ ಕವನ ಬರೆಯುವವ 4
18. ಎಂದೂ ಇಂಗದ ಸದಾ ಬದುಕು ನೀಡುವ ಹೊಳೆ 4
19. ಗಾಂಧಿ ನೂಲು ತೆಗೆದ ಗಾಲಿ 3
21. ಹೆಚ್ಚುಕಡಿಮೆಯಾಗದ ಮರ್ಯಾದೆ 3
23. ಜೈನರ ವಸತಿ 3
25. ಸಂತೋಷಕ್ಕೆ ಹಂಚುವ ಸ್ವೀಟು 2
27. ಹಲ್ಲಿನಿಂದ ಕತ್ತರಿಸು 2
28. ಇದು ಸಣ್ಣ ಯುದ್ಧವಂತೂ ಅಲ್ಲ ವಿಶ್ವ ಈಗಾಗಲೇ ಎರಡು ಸಲ ಎದುರಿಸಿದ ದೊಡ್ಡ ಯುದ್ಧ 5
29. ಸೂರ್ಯನ ವರ್ಚಸ್ಸನ್ನು ಪಡೆದವ 4
30. ಗವಿ ಸೇರಿದ ಶಿವ; ಅಲ್ಲಮಪ್ರಭುವಿನ ಅಂಕಿತನಾಮ 4

ಪದಬಂಧ ಉತ್ತರ -2790

ಮೇಲಿಂದ ಕೆಳಕ್ಕೆ

1. ವಿರಾಗಿ 2.ವನರಕ್ಷಕ 3.ನೀತಿನಿಯಮ 4.ರೆಹನ 6.ಶಿಕ್ಷಕ 8.ನೂಪುರ 10.ಧರ್ಮಜ 11.ನವಮ 13.ಧುಮುಕು 14.ತಿಸವ 16.ನುರಿತ 17.ತತ್ವರಹಿತ 18.ನತಮಸ್ತಕ 19.ಲಕುಮಿ 21.ಕಂಟಕ 23.ನದವ

ಎಡದಿಂದ ಬಲಕ್ಕೆ

1. ವಿಜಯೋತ್ಸವ 3.ನೀರುಕುದುರೆ 5.ಗಿರಿಶಿಖರ 7.ನಿತ್ಯನೂತನ 9.ಕ್ಷತ್ರಿಯ 10.ಧನಕ-ನಕ 12.ಮಧುರಸ್ಮೃತಿ 15.ಜನಾನುಮತ 18.ನಕುಲದೇವ 20.ತ್ವರಿತ 21.ಕಂಪಿತಸ್ವರ 22.ಮಹಾಮಿಲನ 24.ಕಲ್ಪನಾತೀತ 25.ಕಲ್ಯಾಣೋತ್ಸವ

ಮೂಡಣದ ಹೆಜ್ಜೆಗಳ ಪುನರುತ್ಥಾನಕ್ಕೆ ಟೊಂಕ

'ಕರ್ಣಾವಸಾನ' ಮೂಡಲಪಾಯ ಯಕ್ಷಗಾನ ಪ್ರಸಂಗ ಪ್ರದರ್ಶಿಸಿದ್ದ ಮಂಡ್ಯ ತಾಲ್ಲೂಕು ಬೇಲೂರು ಸರ್ಕಾರಿ ಪ್ರೌಢಶಾಲೆ ಮಕ್ಕಳು

ಎಂ.ಎನ್.ಯೋಗೇಶ್

ಅರ್ಧ ಅಡಿ ಉದ್ದದ ಪುಟಾಣಿ ವಾದ್ಯ ಮುಖವೀಣೆ ನುಡಿಸುವವರು ನಮ್ಮ ನಾಡಿನಲ್ಲಿ ಎಷ್ಟಿರಬಹುದು? ಅಬ್ಬಬ್ಬಾ ಅಂದರೆ ಮೂರ್ನಾಲ್ಕು ಮಂದಿ ಸಿಗಬಹುದಷ್ಟೆ. ಮೂಡಲಪಾಯ ಯಕ್ಷಗಾನ ಮರಣಶಯ್ಯೆಯಲ್ಲಿದೆ ಎನ್ನಲು ಇದಕ್ಕಿಂತ ಉದಾಹರಣೆ ಬೇಕಿಲ್ಲ.

ಸಾಹಿತ್ಯ, ಸಂಗೀತ, ನೃತ್ಯದೊಂದಿಗೆ ಸಂಯೋಜಿತಗೊಂಡಿರುವ ವಿಶಿಷ್ಟ ಜನಪದ ಕಲೆ ಮೂಡಲಪಾಯ ಯಕ್ಷಗಾನ ಇಂದು ವಿನಾಶದ ಅಂಚು ತಲುಪಿದೆ. ಮೂಡಲಪಾಯಕ್ಕೆ ಅವಿಭಾಜ್ಯ ಅಂಗವಾಗಿದ್ದ ಮುಖವೀಣೆ, ಮದ್ದಳೆ, ಭಾಗವತಿಕೆ ಈಗ ಪಳೆಯುಳಿಕೆ ಸ್ಥಿತಿಯಲ್ಲಿದೆ.

> ಮೂಡಲಪಾಯ ಮರಣಶಯ್ಯೆಯಲ್ಲಿರುವ ಕಲೆ. ಇಂತಹ ಸಂದರ್ಭದಲ್ಲಿ ಮಂಡ್ಯ ಕರ್ನಾಟಕ ಸಂಘದ ಆವರಣದಲ್ಲಿ 'ಆದಿಚುಂಚನಗಿರಿ ಮೂಡಲಪಾಯ ಯಕ್ಷಗಾನ ಕಲಿಕಾ ಕೇಂದ್ರ' ತಲೆ ಎತ್ತಿದ್ದು, ಅಲ್ಲಿ 40ಕ್ಕೂ ಹೆಚ್ಚು ಶಾಲಾ ಮಕ್ಕಳು ಹೆಜ್ಜೆ ಕಲಿಯುತ್ತಿರುವುದು ಈ ಕಲೆಗೆ ದೊರೆತ ಜೀವಾನಿಲ. ಇದರ ಮುಂದುವರಿದ ಭಾಗವಾಗಿ 'ಮೂಡಲಪಾಯ ಯಕ್ಷಗಾನ ಪರಿಷತ್ತು' ಸ್ಥಾಪನೆಯಾಗಿದ್ದು, ಅದರ ಕೆಲಸಗಳು ಭವಿತವ್ಯದ ಕುರಿತು ಭರವಸೆ ಮೂಡಿಸಿವೆ.

'ದೇವಿ ಮಹಾತ್ಮೆ' ಮೂಡಲಪಾಯ ಯಕ್ಷಗಾನ ಪ್ರಸಂಗ

ಮಂಡ್ಯ, ಮೈಸೂರು, ಚಾಮರಾಜನಗರ, ಹಾಸನ, ತುಮಕೂರು ಜಿಲ್ಲೆಗಳಲ್ಲಿ ಜೀವಂತವಾಗಿದ್ದ ಕಲೆ ಇನ್ನಿಲ್ಲವಾಗುತ್ತಿದೆ. ಹುಡುಕಾಡಿದರೂ 10 ಮಂದಿ ಭಾಗವತರು ಸಿಗುವುದಿಲ್ಲ. ಮುಖವೀಣೆ ನುಡಿಸಾಣಿಕೆಯುಳ್ಳ ಬದುಕು ಕಂಡವರು ಇಲ್ಲವೇ ಇಲ್ಲ. ಮದ್ದಳೆ ಕಲಾವಿದರೂ ಸಿಗುವುದಿಲ್ಲ. ಕಲಾ ತಂಡಗಳು ಜೀವ ಕಳೆದುಕೊಂಡಿವೆ. ಕುಣಿಯುವ ಕಾಲುಗಳು ಇಲ್ಲವಾಗಿವೆ. ಖ್ಯಾತನಾಮ ಭಾಗವತರ, ವಾದ್ಯಗಾರರ ಹೆಸರು ಅರಸಿ ಹೊರಟರೆ ಅವರು ಮೃತಪಟ್ಟು ಹಲವು ವರ್ಷಗಳೇ ಕಳೆದಿವೆ. ಅವರ ಮಕ್ಕಳು, ಮೊಮ್ಮಕ್ಕಳಿಗೆ ಮೂಡಲಪಾಯದ ಮೇಲೆ ಮೋಹ ಇಲ್ಲ, ಅವರ ಮನೆಯಲ್ಲಿದ್ದ ಅಪರೂಪದ ವಾದ್ಯಗಳು ಶ್ರುತಿ ಕಳೆದು ಅಟ್ಟ ಸೇರಿಕೊಂಡಿವೆ. ಆದರೆ, ಪಡುವಲಪಾಯ ಯಕ್ಷಗಾನಕ್ಕೆ ಈ ಪರಿಸ್ಥಿತಿ ಇಲ್ಲ. ಇದು ಕರಾವಳಿ, ಮಲೆನಾಡಿನ ಜನಸಂಸ್ಕೃತಿಯ ಭಾಗವಾಗಿದ್ದು ಉತ್ತುಂಗ ಸ್ಥಿತಿಯಲ್ಲಿದೆ.

ವೃತ್ತಿಪರ ಯಕ್ಷಗಾನ ಮೇಳ, ಪಾತ್ರಧಾರಿಗಳು, ಭಾಗವತರು, ಹಿಮ್ಮೇಳ ಕಲಾವಿದರು ಪಡುವಲಪಾಯ ಪ್ರಕಾರವನ್ನು ಪೊರೆಯುತ್ತಿದ್ದಾರೆ. ಪಡುವಲಪಾಯಕ್ಕೆ ವಿದ್ಯಾವಂತರು ಪ್ರವೇಶಿಸುತ್ತಿರುವ ಕಾರಣ ಅದು ಆ ಭಾಗದ ಅಸ್ಮಿತೆಯ ರೂಪ ಪಡೆದುಕೊಂಡಿದೆ. ಪಡುವಲಪಾಯದಷ್ಟೇ ಪ್ರಾಚೀನ, ಪೌರಾಣಿಕ ಹಿನ್ನೆಲೆ ಹೊಂದಿರುವ ಮೂಡಲಪಾಯ ಯಕ್ಷಗಾನಕ್ಕೆ ವಿದ್ಯಾವಂತರು ಪದಾರ್ಪಣೆ ಮಾಡುತ್ತಿಲ್ಲ. ಹೀಗಾಗಿ ಅದು ಅಳಿಯುತ್ತಿದೆ.

ಮೂಡಲಪಾಯದ ಬೇರುಗಳು ಹಾಸನ ಜಿಲ್ಲೆಯ ಅರಕಲಗೂಡಿನಿಂದ ಆರಂಭವಾದರೆ ಚನ್ನರಾಯಪಟ್ಟಣ, ಮಂಡ್ಯ ಜಿಲ್ಲೆಯ ನಾಗಮಂಗಲ, ಬೆಳ್ಳೂರು, ತುಮಕೂರು ಜಿಲ್ಲೆಯ ತಿಪಟೂರು, ತುರುವೇಕೆರೆ, ಶಿರಾ, ಮಧುಗಿರಿ ಮೂಲಕ ದಾವಣಗೆರೆ, ಹಿರಿಯೂರುವರೆಗೂ ಸಾಗುತ್ತವೆ.

ತ್ರಿಮೂರ್ತಿಗಳು ಎಂದೇ ಪ್ರಸಿದ್ಧಿ ಪಡೆದಿದ್ದ ಜಿ.ಸಂಜೀವಪ್ಪ, ಪಟೇಲ್ ನಾರಸಪ್ಪ, ಜೀ.ಶಂ.ಪರಮಶಿವಯ್ಯ (ಜೀಶಂಪ) ಅವರು ತುಮಕೂರು ಜಿಲ್ಲೆಯ ಕೋಣೆಹಳ್ಳಿ ಗ್ರಾಮದಲ್ಲಿ 'ಮೂಡಲಪಾಯ ಯಕ್ಷಗಾನ ಕಲಾಕೇಂದ್ರ' ಸ್ಥಾಪಿಸಿ ಕಲೆಗೆ ಹೊಸ ರೂಪ ನೀಡಿದ್ದರು. ಹೊಸ ತಲೆಮಾರಿನ ಮನಸ್ಸುಗಳನ್ನು ಸೆಳೆಯುವತ್ತ ಪ್ರಮುಖ ಹೆಜ್ಜೆ ಇಟ್ಟಿದ್ದರು. ಹೊಸ ರಂಗ ಮಂದಿರವೂ ನಿರ್ಮಾಣಗೊಂಡಿತ್ತು. ಆದರೆ, ತ್ರಿಮೂರ್ತಿಗಳು ತೀರಿಹೋದ ನಂತರ ಕೋಣೆಹಳ್ಳಿಯ ಕಲಾಯಾತ್ರೆಯೂ ನೇಪಥ್ಯಕ್ಕೆ ಸರಿಯಿತು.

ಇಷ್ಟೆಲ್ಲ ಇಲ್ಲಗಳ ನಡುವೆಯೂ ಮೂಡಲಪಾಯ ಯಕ್ಷಗಾನಕ್ಕೆ ಜೀವ ತುಂಬುವ ಕಾರ್ಯವೊಂದು ಕಳೆದೆರಡು ವರ್ಷಗಳಿಂದ ಸದ್ದಿಲ್ಲದೇ ನಡೆಯುತ್ತಿದೆ. ಮಂಡ್ಯ ಕರ್ನಾಟಕ ಸಂಘ, ಅದರ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶಗೌಡ ಅವರ ಪ್ರಯತ್ನದಿಂದಾಗಿ ಶಾಲಾ ಮಕ್ಕಳು ಮೂಡಲಪಾಯ ಯಕ್ಷಗಾನಕ್ಕೆ ಗೆಜ್ಜೆ ಕಟ್ಟಿದ್ದಾರೆ. ಜಯಪ್ರಕಾಶಗೌಡರ ಪ್ರಯತ್ನಕ್ಕೆ ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಒತ್ತಾಸೆಯಾಗಿ ನಿಂತಿದ್ದಾರೆ.

ಮಂಡ್ಯ ಕರ್ನಾಟಕ ಸಂಘದ ಆವರಣದಲ್ಲಿ 'ಆದಿಚುಂಚನಗಿರಿ ಮೂಡಲಪಾಯ ಯಕ್ಷಗಾನ ಕಲಿಕಾ ಕೇಂದ್ರ' ತಲೆ ಎತ್ತಿದ್ದು, ಅಲ್ಲಿ 40ಕ್ಕೂ ಹೆಚ್ಚು ಶಾಲಾ ಮಕ್ಕಳು ಹೆಜ್ಜೆ ಕಲಿಯುತ್ತಿದ್ದಾರೆ. ಇದರ ಮುಂದುವರಿದ ಭಾಗವಾಗಿ 'ಮೂಡಲಪಾಯ ಯಕ್ಷಗಾನ ಪರಿಷತ್ತು' ಸ್ಥಾಪನೆಯಾಗಿದೆ. ಇದಕ್ಕೆ ಹಿರಿಯ ಐಎಎಸ್ ಅಧಿಕಾರಿ, ಸಾಹಿತಿ ಜಯರಾಂ ರಾಯಪುರ ಅವರು ಗೌರವಾಧ್ಯಕ್ಷರಾಗಿದ್ದಾರೆ. ಆ ಮೂಲಕ ರಾಜ್ಯ ಮಟ್ಟದಲ್ಲೂ ಪ್ರಾಚೀನ ಯಕ್ಷಕಲೆಯ ಪುನರುತ್ಥಾನಕ್ಕಾಗಿ ಹಲವು ಪ್ರಯತ್ನಗಳು ನಡೆಯುತ್ತಿವೆ.

ಜನಪದ

ಕಲಿಕಾ ಕೇಂದ್ರದ ವತಿಯಿಂದ ಮೂಡಲಪಾಯ ಹೆಜ್ಜೆಗಳ ತರಬೇತಿ, ಭಾಗವತಿಕೆ, ವಾದ್ಯ ಕಲಿಕಾ ಶಿಬಿರಗಳು ನಡೆಯುತ್ತಿವೆ. ಮಂಡ್ಯ ತಾಲ್ಲೂಕು ಬೇಲೂರು ಸರ್ಕಾರಿ ಪ್ರೌಢಶಾಲೆ ಮಕ್ಕಳು ಪ್ರದರ್ಶಿಸಿದ 'ಕರ್ಣಾವಸಾನ' ಯಕ್ಷಗಾನ ಪ್ರಸಂಗ 10ಕ್ಕೂ ಹೆಚ್ಚು ಪ್ರದರ್ಶನ ಕಂಡಿದೆ. ಮಂಡ್ಯದ ಸದ್ವಿದ್ಯಾ ಶಾಲೆ ವಿದ್ಯಾರ್ಥಿಗಳು ಪ್ರದರ್ಶಿಸಿದ 'ತ್ರಿಪುರ ದಹನ', ಹನಕೆರೆಯ ವಿವೇಕಾ ವಿದ್ಯಾಸಂಸ್ಥೆ ಮಕ್ಕಳು ಅಭಿನಯಿಸಿದ 'ದೇವಿ ಮಹಾತ್ಮೆ' ಪ್ರಸಂಗಗಳು ಜನರ ಹೃದಯ ಗೆದ್ದಿವೆ. ಮಕ್ಕಳ ಪುಟ್ಟ ಹೆಜ್ಜೆಗಳು, ಸಾಮರ್ಥ್ಯ, ಆಸಕ್ತಿ ಮೂಡಲಪಾಯ ಯಕ್ಷಗಾನಕ್ಕೆ ಹೊಸ ರೂಪ ನೀಡುವ ಭರವಸೆಯನ್ನು ಅಭಿವ್ಯಕ್ತಿಗೊಳಿಸಿವೆ. ಸರ್ಕಾರಿ ಶಾಲೆಗಳನ್ನೇ ಗುರಿಯಾಗಿಸಿಕೊಂಡು ತರಬೇತಿ ನೀಡಲು ಉದ್ದೇಶಿಸಲಾಗಿದೆ. ಮಂಡ್ಯ ಜಿಲ್ಲೆಯ ಆರೇಳು ಮೊರಾರ್ಜಿ ದೇಸಾಯಿ ವಸತಿಶಾಲೆಗಳು ತರಬೇತಿ ಶಿಬಿರ ಆಯೋಜಿಸಲು ಒಪ್ಪಿಗೆ ನೀಡಿವೆ. ಆದಿಚುಂಚನಗಿರಿಯ ಬಿಜಿಎಸ್ ಶಾಲೆಯಲ್ಲೂ ಮೂಡಲಪಾಯ ಯಕ್ಷಗಾನದ ತಾಲೀಮು ನಡೆಯುತ್ತಿದೆ. ಮುಂದೆ ಹೊರಜಿಲ್ಲೆಗಳಲ್ಲೂ ಶಿಬಿರ ನಡೆಸುವ ಗುರಿಯಿದೆ. ಕರಿಭಂಟ ಕಾಳಗ, ಗದಾಯುದ್ಧ, ಬೊಮ್ಮನಹಳ್ಳಿ ಕಿಂದರಿಜೋಗಿ ಪ್ರಸಂಗಗಳು ಸಿದ್ಧಗೊಳ್ಳುತ್ತಿವೆ.

ದಕ್ಷಿಣ ಕರ್ನಾಟಕದಲ್ಲಿ ಮೂಡಲಪಾಯದ ಹೆಸರು ಹೇಳಲು ಉಳಿದಿರುವ ಹಿರಿಯ ಭಾಗವತರನ್ನು ಮಂಡ್ಯಕ್ಕೆ ಕರೆದು ತರಲಾಗಿದೆ. ತಲಕಾಡಿನ ಹಿರಿಯ ಭಾಗವತ, ಮದ್ದಳೆವಾದಕ ರವೀಂದ್ರ, ಟಿ.ನರಸೀಪುರ ತಾಲ್ಲೂಕು, ಹೆಮ್ಮಿಗೆ ಗ್ರಾಮದ ಮುಖವೀಣೆ ವಾದಕ ನಾರಾಯಣಸ್ವಾಮಿ, ನಾಗಮಂಗಲ ತಾಲ್ಲೂಕು ನೆಲ್ಲಿಗೆರೆ ಮೂರ್ತಾಚಾರ್, ತಿಪಟೂರು ತಾಲ್ಲೂಕು ಅರಳಕುಪ್ಪೆಯ ನಂಜಪ್ಪ (ಕೇಂದ್ರ ಸಂಗೀತ ಮತ್ತು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ), ಅವರ ಶಿಷ್ಯ ಪುಟ್ಟಸ್ವಾಮಿ ಮುಂತಾದ ಭಾಗವತರಿಂದ ಮಕ್ಕಳಿಗೆ ತರಬೇತಿ ಕೊಡಿಸಲಾಗುತ್ತಿದೆ. ಮೂಡಲಪಾಯ ಯಕ್ಷಗಾನದ ಒರಟು ಹೆಜ್ಜೆಗಳನ್ನು ಮಕ್ಕಳಿಗೆ ಕಲಿಸುವುದು ಅಷ್ಟು ಸುಲಭದ ಮಾತಲ್ಲ. ಹೀಗಾಗಿ ಮೂಡಲಪಾಯದ ಮೂಲಕ್ಕೆ ಧಕ್ಕೆಯಾಗದಂತೆ ಹೆಜ್ಜೆಗಳ ಪರಿಷ್ಕರಣೆ ಮಾಡಲಾಗಿದ್ದು, ಅದಕ್ಕೆ ಆಧುನಿಕ ರಂಗಭೂಮಿ ನಿರ್ದೇಶಕರ ಸಹಾಯ ಪಡೆಯಲಾಗಿದೆ. ಸಿ.ಬಸವಲಿಂಗಯ್ಯ, ಪ್ರಮೋದ್ ಶಿಗ್ಗಾಂವ್, ಮಂಜುನಾಥ ಬಡಿಗೇರ, ಅಜಯ್ ನೀನಾಸಂ ಮುಂತಾದವರು ಹೆಜ್ಜೆಗಳನ್ನು ಪರಿಷ್ಕರಣೆ ಮಾಡಿದ್ದಾರೆ.

ಪಡುವಲಪಾಯದಲ್ಲಿರುವ ತೆಂಕತಿಟ್ಟು, ಬಡಗತಿಟ್ಟು ಪ್ರಕಾರದಂತೆ ಮೂಡಲಪಾಯದಲ್ಲಿ ಎಚ್.ಡಿ.ಕೋಟೆ ಭಾಗದ ಘಟ್ಟದಕೋರೆ, ಕೋಲಾರ ಭಾಗದ ಕೇಳಿಕೆ ಪ್ರಭೇದಗಳಿವೆ. ಆಯಾ ಭಾಗದ ಕಲಾವಿದರನ್ನೂ ಒಂದೆಡೆ ಸೇರಿಸುವ ಪ್ರಯತ್ನ ಮಾಡಲಾಗಿದೆ. ಅಳಿದುಳಿದ ಭಾಗವತರನ್ನು ಒಂದೆಡೆ ಸೇರಿಸಿ ಮೂಡಲಪಾಯ ಯಕ್ಷಗಾನ ಪರಿಷತ್ ವತಿಯಿಂದ ಭಾಗವತರ ಸಮಾವೇಶವನ್ನೂ ಮಾಡಲಾಗಿದೆ. ಜಯರಾಂ ರಾಯಪುರ ಅವರ ಬೆಂಗಳೂರು ನಿವಾಸವೇ ಪರಿಷತ್ ವಿಳಾಸವಾಗಿದೆ. ಸಂಸ್ಕೃತಿ ಚಿಂತಕರಾದ ಜಯರಾಂ ರಾಯಪುರ ಮೂಡಲಪಾಯ ಯಕ್ಷಗಾನದ ಪುನಶ್ಚೇತನಕ್ಕಾಗಿ ಅಪಾರ ಶ್ರಮ ಹಾಕುತ್ತಿದ್ದಾರೆ.

ಹಗುರ ವಸ್ತ್ರವಿನ್ಯಾಸ: ಉದ್ದಂಡ ಕಿರೀಟ, ಭುಜಕೀರ್ತಿ, ಮುಖವರ್ಣಿಕೆ, ಗೆಜ್ಜೆ, ಕಾಲು ಕಡಗ, ಪೇಟ, ಮುಂದಲೆ ವಸ್ತ್ರ, ವೀರಗಾಸೆ ಕಟ್ಟು, ತೋಳ್ ಬಾಪುರಿ, ಹೆಗಲು ವಲ್ಲಿ, ವಡ್ಯಾಣ, ಎದೆಹಾರ ಮುಂತಾದ ದೈತ್ಯ ವಸ್ತ್ರಗಳನ್ನು ಹೊರುವುದು ಮಕ್ಕಳಿಗೆ ಬಲು ಕಷ್ಟ. ಹೀಗಾಗಿ ವಸ್ತ್ರವಿನ್ಯಾಸವನ್ನೂ ಬದಲಾಯಿಸಲಾಗಿದೆ. ಅದಕ್ಕಾಗಿ ರಂಗಪರಿಕರ ತಜ್ಞ ಗುರುಮೂರ್ತಿ ವರದಾಮೂಲ, ವಸ್ತ್ರವಿನ್ಯಾಸಕರಾಗಿಯೂ ಗುರುತಿಸಿಕೊಂಡಿರುವ ಪ್ರಮೋದ್ ಶಿಗ್ಗಾಂವ್ ಅವರ ಸಹಕಾರ ಪಡೆಯಲಾಗಿದೆ.

ಮಕ್ಕಳಿಗಾಗಿ ಬಣ್ಣಬಣ್ಣದ ಹೊಸ ವಸ್ತ್ರಗಳು ಕರ್ನಾಟಕದ ಸಂಘದ ಆವರಣದಲ್ಲೇ ಸಿದ್ಧಗೊಂಡಿವೆ. ಮಕ್ಕಳಿಗೆ ಹಗುರಾಗಿರುವ ಫೈಬರ್, ಫೋಮ್, ಥರ್ಮಕೋಲ್ ಬಳಸಿ ವಸ್ತ್ರ ರೂಪಿಸಲಾಗಿದೆ. ಅದಕ್ಕಾಗಿ ಕರ್ನಾಟಕ ಸಂಘ ಲಕ್ಷಾಂತರ ರೂಪಾಯಿ ಬಂಡವಾಳವನ್ನೂ ತೊಡಗಿಸಿದೆ.

'ನನ್ನಂಥ ಭಾಗವತರಿಗೆ ವಯಸ್ಸಾಗಿದೆ, ಅನಾರೋಗ್ಯ ಕಾಡುತ್ತಿದೆ. ಈ ವಯಸ್ಸಿನಲ್ಲಿ ಮಕ್ಕಳಿಗೆ ಮೂಡಲಪಾಯ ಯಕ್ಷಗಾನದ ಪಾಠ ಹೇಳಿಕೊಡುವ ಅವಕಾಶ ಸಿಕ್ಕಿರುವುದು ಸುಯೋಗವೇ ಸರಿ. ಕರ್ನಾಟಕ ಸಂಘ, ಜಯಪ್ರಕಾಶಗೌಡರ ಪ್ರಯತ್ನದಿಂದಾಗಿ ಮಕ್ಕಳ ಕಾಲಿಗೆ ಮೂಡಲಪಾಯದ ಹೆಜ್ಜೆಗಳು ದಕ್ಕುತ್ತಿವೆ' ಎಂದು ಹಿರಿಯ ಭಾಗವತ ತಲಕಾಡು ರವೀಂದ್ರ ಹೇಳಿದರು.

ಯಕ್ಷಕವಿ ಹುಟ್ಟೂರಿನ ಅಭಿವೃದ್ಧಿ

ಡಾ.ಶಿವರಾಮ ಕಾರಂತರು ಯಕ್ಷಗಾನದ ಪ್ರಾಚೀನತೆಯನ್ನು 18ನೇ ಶತಮಾನಕ್ಕೆ ಕೊಂಡೊಯ್ದಿದ್ದಾರೆ. ಹೊಸ್ತೋಟ ಮಂಜುನಾಥ ಭಾಗವತರು ಯಕ್ಷಗಾನದ ಪರಂಪರೆಯನ್ನು 17 ಶತಮಾನದಲ್ಲೇ ಗುರುತಿಸುತ್ತಾರೆ. ಆದರೆ 15ನೇ ಶತಮಾನದಲ್ಲಿ ಜೀವಿಸಿದ್ದ 'ಯಕ್ಷಕವಿ ಕೆಂಪಣ್ಣಗೌಡ'ನೇ ಯಕ್ಷಗಾನ ಪರಂಪರೆಗೆ ಮೂಲ ಎಂಬುದನ್ನು ಹಲವು ಸಂಶೋಧನೆಗಳು ತಿಳಿಸಿವೆ.

ಇದಕ್ಕೆ ಸಾಕ್ಷಿ ಎಂಬಂತೆ ಜನಪದ ವಿದ್ವಾಂಸ ಹ.ಕ.ರಾಜೇಗೌಡ 'ಕೆಂಪಣ್ಣಗೌಡರ ಯಕ್ಷಗಾನ ಸಂಪುಟ' ಕೃತಿ ಹೊರತಂದಿದ್ದಾರೆ. ಸಂಶೋಧಕ ನರಹಳ್ಳಿ ಬಾಲಸುಬ್ರಹ್ಮಣ್ಯ 'ಯಕ್ಷಕವಿ ಕೆಂಪಣ್ಣಗೌಡ– ಸಮಗ್ರ ಸಾಹಿತ್ಯ ಶೋಧ' ಕೃತಿ ರಚಿಸಿದ್ದಾರೆ. ಆ ಮೂಲಕ ಕನ್ನಡ ಸಾಹಿತ್ಯ ಲೋಕದಲ್ಲಿ ಅಜ್ಞಾತವಾಗಿ ಉಳಿದಿರುವ ಯಕ್ಷಕವಿಯನ್ನು ಮುನ್ನೆಲೆಗೆ ತರುವ ಪ್ರಯತ್ನ ಮಾಡಿದ್ದಾರೆ. ಇಲ್ಲಿ ನರಹಳ್ಳಿಯವರು ಕೆಂಪಣ್ಣಗೌಡ ರಚಿಸಿರುವ ಕರಿರಾಯ ಚರಿತ್ರೆ, ನಳಚರಿತ್ರೆ, ಶನಿಮಹಾತ್ಮೆ ಯಕ್ಷ ಕಾವ್ಯಗಳ ಸಮಗ್ರ ವಿವರ ನೀಡಿದ್ದಾರೆ.

ಕೆಂಪಣ್ಣಗೌಡ ಒಕ್ಕಲಿಗ ಸಂಸ್ಕೃತಿಯ ಮೊದಲ ಕವಿ. ಈತ ಹುಟ್ಟಿದ್ದು ನಾಗಮಂಗಲ ತಾಲ್ಲೂಕು ಹಂದೇನಹಳ್ಳಿ. ಹಲವು ಪ್ರಭೇದಗಳುಳ್ಳ ಯಕ್ಷಗಾನ ಪರಂಪರೆಗೆ ಮಂಡ್ಯ ಜಿಲ್ಲೆಯೇ ಮೂಲ ಎಂಬುದು ಮೂಡಲಪಾಯ ಯಕ್ಷಗಾನ ಪರಿಷತ್ ವಾದ. ಈ ಹಿನ್ನೆಲೆಯಲ್ಲಿ ಹಂದೇನಹಳ್ಳಿ ಗ್ರಾಮವನ್ನು 'ಯಕ್ಷಗಾನ ಹಳ್ಳಿ'ಯನ್ನಾಗಿ ಪರಿವರ್ತಿಸಲು ಪರಿಷತ್ ಪಣ ತೊಟ್ಟಿದೆ. ಈಗಲಾಗಲೇ ಸ್ಥಳೀಯ ಗ್ರಾಮ ಪಂಚಾಯಿತಿ, ಜಿಲ್ಲಾಡಳಿತದ ಸಹಯೋಗದಲ್ಲಿ ಬಯಲು ರಂಗಮಂದಿರ ನಿರ್ಮಾಣಕ್ಕೆ ಶಂಕುಸ್ಥಾಪನೆ ನೆರವೇರಿಸಲಾಗಿದೆ.

ಪ್ರತ್ಯೇಕ ಅಕಾಡೆಮಿ ಸ್ಥಾಪನೆಯಾಗಲಿ


ಪ್ರೊ.ಬಿ.ಜಯಪ್ರಕಾಶಗೌಡ

'ಯಾವುದೇ ಕಲೆ ಉಳಿಯಬೇಕಾದರೆ ಮೊದಲು ಕಲಾವಿದ ಉಳಿಯಬೇಕು. ಕಲಾವಿದರ ಸಮಸ್ಯೆಗಳಿಗೆ ಸರ್ಕಾರ ಸ್ಪಂದಿಸಬೇಕು. ಸರ್ಕಾರದ ಸಹಾಯ ಇಲ್ಲದೆ ಕಲೆಗಳನ್ನು ಉಳಿಸುವುದು ಅಸಾಧ್ಯ. ಮೂಡಲಪಾಯ ಯಕ್ಷಗಾನದ ಸಮಗ್ರ ಅಧ್ಯಯನ, ಸಂವರ್ಧನೆ, ಸಂರಕ್ಷಣೆಗಾಗಿ ಪ್ರತ್ಯೇಕ ಅಕಾಡೆಮಿ ಸ್ಥಾಪನೆಯಾಗುವುದು ಅತ್ಯವಶ್ಯ' ಎಂದು ಕರ್ನಾಟಕ ಸಂಘ, ಮೂಡಲಪಾಯ ಯಕ್ಷಗಾನ ಪರಿಷತ್ ಅಧ್ಯಕ್ಷ ಪ್ರೊ.ಬಿ.ಜಯಪ್ರಕಾಶಗೌಡ ಹೇಳಿದರು.

'ಕರಾವಳಿ ಭಾಗದ ಪಡುವಲಪಾಯದ ಸಂರಕ್ಷಣೆಗಾಗಿ ಯಕ್ಷಗಾನ ಅಕಾಡೆಮಿ ಇದೆ. ಉತ್ತರ ಕರ್ನಾಟದ ಜನಪದ ಕಲೆಗಳ ಉಳಿವಿಗಾಗಿ ಬಯಲಾಟ ಅಕಾಡೆಮಿ ಇದೆ. ಅದರಂತೆ ದಕ್ಷಿಣ ಕರ್ನಾಟಕ ಭಾಗದ ಮೂಡಲಪಾಯ ಯಕ್ಷಗಾನದ ರಕ್ಷಣೆಗಾಗಿ ಪ್ರತ್ಯೇಕ ಅಕಾಡೆಮಿ ಸ್ಥಾಪನೆಯಾಗಬೇಕು. ಈ ಕುರಿತು ಸರ್ಕಾರಕ್ಕೆ ಮನವಿಯನ್ನೂ ಸಲ್ಲಿಸಲಾಗಿದೆ' ಎಂದು ಅವರು ತಿಳಿಸಿದರು.
(ಜಯಪ್ರಕಾಶಗೌಡರ ಸಂಪರ್ಕ ಸಂಖ್ಯೆ; 9448194456)

ಸಮ್ಮಿಶ್ರಣ ಸಾಧ್ಯತೆಯ ಹದ, ಓದಿನ ಮುದ

ಎಚ್. ಎ. ಅನಿಲ್ ಕುಮಾರ್

ವಿಮರ್ಶೆ

ದೃಶ್ಯ ಕಲಾವಿದ ವೆಂಕಟಾಚಲಪತಿ ಅವರನ್ನು ಕುರಿತಾದ ಈ ದ್ವಿಭಾಷೀಯ ಚಿತ್ರ-ಪುಸ್ತಕವು ಕಳೆದ ಮೂರ್ನಾಲ್ಕು ದಶಕಗಳ ನಮ್ಮ ಕಲಾವಲಯದ ಆಗುಹೋಗುಗಳ ಬಹುಮುಖ್ಯ ದೃಶ್ಯ ದಾಖಲೆಯಾಗಿದೆ. ವಿಪುಲ ಸಂಖ್ಯೆಯ ಛಾಯಾಚಿತ್ರಗಳ ಜೊತೆ ಜೊತೆಗೆ ಕಲಾವಿದರು ಸಾಂಪ್ರದಾಯಿಕವಾಗಿ ತಮ್ಮ 'ಬಡತನದಿಂದ-ನೆಮ್ಮದಿವರೆಗಿನ' ಕಥೆಯನ್ನು ಆಪ್ತವಾಗಿ, ಸರಳ ವಾಕ್ಯಗಳಲ್ಲಿ ಸ್ವತಃ ತಾವೇ ಬರೆದಿದ್ದಾರೆ. ಕಲಾವಲಯಕ್ಕೆ ಚಿರಪರಿಚಿತರಾಗಿರುವ ಕಲಾ ಬರಹಗಾರರಾದ ಕೆ.ವಿ. ಸುಬ್ರಹ್ಮಣ್ಯಂ, ಆ.ಲ.ನರಸಿಂಹನ್, ಪ್ರಮೀಳಾ ಲೋಚನ ಅಂತಹವರುಗಳು ವಿವಿಧ ಸಂದರ್ಭಗಳಲ್ಲಿ ಇವರ ಕೃತಿಗಳನ್ನು ಕುರಿತು ಬರೆದ ಇಂಗ್ಲಿಷ್-ಕನ್ನಡ ಲೇಖನ, ವಿಮರ್ಶೆ, ವರದಿಗಳನ್ನೂ ಪುನರ್ ಪ್ರಕಟಿಸಲಾಗಿದೆ. ಸಮಾಜದ ಜನಪ್ರಿಯ ವ್ಯಕ್ತಿಗಳು ವೆಂಕಟಾಚಲಪತಿಯವರ ಬಗ್ಗೆ ಬರೆದ ಪತ್ರಗಳೂ ಇವೆ. ಎಲ್ಲಕ್ಕಿಂತಲೂ ಹೆಚ್ಚಾಗಿ, ಸ್ವತಃ ಶಿಲ್ಪಕಲಾ ಅಕಾಡೆಮಿಯ ಅಧ್ಯಕ್ಷರಾಗಿದ್ದ ಇವರ ಈ ಪುಸ್ತಕವು ಯಾವುದೇ ಅಕಾಡೆಮಿಯ ವತಿಯಿಂದ ಮೂಡಿಬಂದ ಹೊತ್ತಿಗೆಯಾಗಿರದೆ, ವ್ಯಕ್ತಿಗತ ಸಾಹಸ ಆಗಿದೆ. ಅಂದರೆ ಈ ಪುಸ್ತಕದ ಒಟ್ಟಾರೆ ವಿನ್ಯಾಸ-ನಿರೂಪಣೆಯೇ ಈ ಕಲಾವಿದರ ಒಟ್ಟಾರೆ ವ್ಯಕ್ತಿತ್ವದ ಆತ್ಮಚರಿತ್ರೆಯಂತಾಗಿಬಿಟ್ಟಿದೆ.

ಕನ್ನಡದಲ್ಲಿ ಕಲಾವಿದರನ್ನು ಕುರಿತ ಪುಸ್ತಕ ಪ್ರಕಟಣಾ ಸಂಪ್ರದಾಯಕ್ಕೆ ಒಂದು ವಿಕ್ಷಿಪ್ತವಾದರೂ, ಮುಖ್ಯವಾಹಿನಿ ಸಾಹಿತ್ಯಕ್ಕಿಂತಲೂ ವಿಭಿನ್ನವಾದ ಒಂದು 'ಆಚರಣೆ' ಇದೆ. ಅಂತಹ ಆಚರಣೆಗಳ ಒಳಗಿನಿಂದ ಈ ಪುಸ್ತಕವು ಆತ್ಮಕಥನ, ಗ್ಯಾಲರಿ ಕೆಟಲಾಗ್, ಕಲಾಗೆಳೆಯರ ಬಳಗದ ಆಲ್ಬಮ್, ಅಭಿನಂದನಾ ಗ್ರಂಥ, ಪರಿಚಯಾತ್ಮಕ ಬ್ರೋಷರ್, ಪತ್ರಾಗಾರ, ಕಾಫಿ ಟೇಬಲ್ ಪುಸ್ತಕ - ಇವಿಷ್ಟು ಪ್ರಕಟಣಾ ವೈಶಿಷ್ಟ್ಯಗಳ ಆಯಾಮಗಳನ್ನು ಒಟ್ಟಾಗಿ ಸೇರಿಸಿಕೊಡುತ್ತವೆ. ಇಂತಹ ಸಮ್ಮಿಶ್ರಣ ಸಾಧ್ಯತೆಯನ್ನು ಮನಸ್ಸಿನಲ್ಲಿರಿಸಿಕೊಂಡೇ 'ಪುಸ್ತಕವು ಗೋಡೆಗಳಿಲ್ಲದ ಸಂಗ್ರಹಾಲಯ' ಎಂದು ಕಲಾ ಇತಿಹಾಸಕಾರ ಆದ್ರೆ ಮಲ್ರಾವ್ ಹೇಳಿದ್ದಾನೆ. ಈ ಪುಸ್ತಕವನ್ನು ಓದುವಾಗ, ಪುಸ್ತಕ ಸಂಸ್ಕೃತಿಯ ಈ ಎಲ್ಲ ಅವತಾರಗಳೂ ಒಟ್ಟುಗೂಡಿ, ಚಲಪತಿಯವರ ಬರವಣಿಗೆಗೆ ಮುದ ನೀಡುತ್ತದೆ.

ಕರಾರುವಾಕ್ ಆಗಿ ಎರಕ ಹೊಯ್ದ ಸಣ್ಣ ಸಣ್ಣ ವಾಕ್ಯಗಳು. ಅಚ್ಚು ತೆಗೆದಂತೆ ತಮ್ಮ ಬದುಕಿನ ಯಾವ ಘಟನೆಗಳನ್ನು ಯಾವ ಕೋನಗಳಿಂದ ಅರಿಯಬೇಕು, ಅಷ್ಟನ್ನು ಮಾತ್ರ ತಿಳಿಸುವ ಎಚ್ಚರ. ಬಾಲ್ಯಕಾಲದ ವಿವರ ಹಾಗೂ ತಾವು ಧಾವಂತಕ್ಕೆ ಒಳಗಾದ ಸಂದರ್ಭಗಳನ್ನು ವಿವರಿಸುವಾಗ ಮಾತ್ರ ಬಲೂನು-ಶಿಲ್ಪವೊಂದರಂತೆ ಒಂದು ಅತಿಯಾಗಿ ಓಲಾಡುವ ಉಮೇದು. ಬರವಣಿಗೆಯಲ್ಲಿ ತಮ್ಮ ಶಿಲ್ಪಾಭ್ಯಾಸವು ಎಲ್ಲಿ, ಯಾವ ಕಲಾ ಶಿಬಿರಗಳಲ್ಲಿ, ಊರಿನಲ್ಲಿ, ಯಾರ ನೆರವಿನಲ್ಲಿ, ಯಾವಾಗ ಮೂಡಿಬಂದಿತು ಎಂಬ ಒಂದು ಶಿಲ್ಪಿ-ಕೊರೆದಂತಹ, ಎರಕ ಹೊಯ್ದ ವಿವರಗಳ ವಿಪುಲ ಬರವಣಿಗೆ ಚಲಪತಿಯವರದ್ದು. ಜೊತೆ ಜೊತೆಗೆ 'ಹೆಬ್ಬಾರರನ್ನು ನೆನಪುಸುವಂತೆ' ಎಂದು ಸುಮತೀಂದ್ರ ನಾಡಿಗರಿಂದ ಹೊಗಳಿಸಿಕೊಂಡ, ಅನೇಕ ಕರಡು ರೇಖಾಚಿತ್ರಗಳಿದ್ದು, ಇಲ್ಲಿನ ಅಕ್ಷರದ ಲೆಕ್ಕಾಚಾರದ ಬರವಣಿಗೆಗೊಂದು ಕಾವ್ಯಾತ್ಮಕ ಲಯ ತಂದುಕೊಡುತ್ತವೆ.

***

ಕಳೆದ ನಾಲ್ಕು ದಶಕಗಳ ರಾಜಕೀಯ ಹಾಗೂ ಸಾಂಸ್ಕೃತಿಕ ಉದ್ದುರಿಗಳ ಭಾವಶಿಲ್ಪಗಳನ್ನು ರೂಪಿಸಿದವರು ಚಲಪತಿ. ಅಂತಹ ಪ್ರತಿಯೊಂದು ಕೃತಿಯ ನಿರೂಪಣೆಯ ಕಾಲಕ್ಕೆ ಒದಗಿಬಂದ ಪರಿಚಯ, ಪ್ರಭಾವಗಳ ದಾಖಲೆಯೂ ಇಲ್ಲಿದೆ. 'ನಮ್ಮ ಸಾಂಸ್ಕೃತಿಕ ನಾಯಕರುಗಳ ಬರವಣಿಗೆಗಳ ಪರಿಚಯವೇ ಇಲ್ಲದಂತಾಗಿದೆ ಇತ್ತೀಚಿನ ತಲೆಮಾರುಗಳಿಗೆ. ಅಂತಹವರ ಭಾವಶಿಲ್ಪಗಳು ಕಣ್ಣುಮುಂದೆ ಇದ್ದಾದರೂ, ಇದೇ ನೆಪದಿಂದ ಮತ್ತೆ ಅವರ ಪ್ರತಿಭೆಗಳ ಕುರಿತು ವೀಕ್ಷಕರಲ್ಲಿ ಕುತೂಹಲ ಮೂಡುವಂತಾಗಲಿ' ಎಂಬ ಉದಾತ್ತ ಆಶಯವಿದೆ ಚಲಪತಿಯವರ ಪುಸ್ತಕದ ಬರಹ-ವಿನ್ಯಾಸಗಳ ವಿವರಣೆಯಲ್ಲಿ.

ಕರ್ನಾಟಕದ, ಅದರಲ್ಲೂ ಬೆಂಗಳೂರಿನ ಕಲಾಚಟುವಟಿಕೆಗಳ ದೃಶ್ಯದಾಖಲಾತಿಯ ಮುಖ್ಯ ಘಟ್ಟಗಳನ್ನೂ ಇಲ್ಲಿನ ಛಾಯಾಚಿತ್ರಗಳು ಕಟ್ಟಿಕೊಡುತ್ತವೆ. ಈ ನಾಡಿನ ಗುರುತರವಾದ ಕಲಾಘಟ್ಟಗಳಾದ ಕಲಾಮೇಳ, 'ಸಮೂಹ ಶಿಲ್ಪಿ' ರಚನೆ (ರವೀಂದ್ರ ಕಲಾಕ್ಷೇತ್ರದ ಶಿಲ್ಪವನದಲ್ಲಿ) ಮುಂತಾದವುಗಳಲ್ಲಿನ ತಮ್ಮ ವ್ಯಕ್ತಿಗತ ಪಾತ್ರವನ್ನು ವಿವರಿಸುತ್ತಾರೆ. ದೇವರಾಜ ಅರಸು, ಕಿಟೆಲ್ ಮುಂತಾದವರ ಶಿಲ್ಪಗಳು ಮೂಡಿಸುವಾಗಿನ ಅನುಭವದ ನೋವು-ನಲಿವಿನ ಚುರುಕು ವಿವರಗಳಿವೆ. ಯಾರನ್ನೂ ನೋಯಿಸದ, ಕಾಡಿಸದ, ಆದರೆ ತಮ್ಮ ಪ್ರಸ್ತುತಿಯನ್ನು ಉಳಿಸಿಕೊಳ್ಳಲು ಬಯಸುವ ಬರವಣಿಗೆ ವೆಂಕಟಾಚಲಪತಿಯವರದ್ದು, ಸ್ವತಃ ಅವರ ಕಲಾಕೃತಿಗಳಂತೆ. ಮತ್ತೊಂದು ಅರ್ಥದಲ್ಲಿ, ಚಿತ್ರಕಲಾವಿದರೂ, ರೇಖಾಚಿತ್ರ ಪ್ರವೀಣರೂ ಆಗಿರುವ ಚಲಪತಿಯವರ ಕೃತಿಗಳ ಬಗ್ಗೆ, ಅವರದೇ ಶಿಲ್ಪಗಳನ್ನು ಒಟ್ಟಾಗಿ ಒಂದೆಡೆ ವೀಕ್ಷಿಸುವ ಮೂಲಕ ಕಲಾರಸಿಕರು ಆಸಕ್ತರಾಗಲಿ ಎಂಬ ಕ್ರಿಯಾಶೀಲ ಉಪಾಯವೂ ಈ 'ಆತ್ಮಕಥನ'ದ ಪುಸ್ತಕದ ವಿನ್ಯಾಸ-ಬರವಣಿಗೆಯಲ್ಲ ಅಡಕವಾಗಿದೆ.



ಪು: 292
₹600

ನನ್ನ ಜೀವನ ಶಿಲ್ಪ
(ಆತ್ಮಕಥನ)
ಲೇ: ವೆಂಕಟಾಚಲಪತಿ
ಸಂಪಾದಕರು: ಕೆ.ವಿ.ಸುಬ್ರಮಣ್ಯಮ್
ಪ್ರ: ಸ್ಟುಡಿಯೋ 94 , ಬೆಂಗಳೂರು
ಸಂ: **9448408563**

ಪ್ರಜಾವಾಣಿಯ 'ವ್ಯಕ್ತಿ ವಿಷಯ' ಕಾಲಮ್ಮಿನಲ್ಲಿ 2001ರಲ್ಲಿ ಪ್ರಕಟಗೊಂಡ, ಚಲಪತಿಯವರನ್ನು ಕುರಿತಾದ ಪುಟ್ಟ ಬರಹವು (ಈ ಪುಸ್ತಕದಲ್ಲೂ ಪ್ರಕಟಿತ) ಇಡಿಯ ಪುಸ್ತಕದ ಸಂರಚನೆಯ ಸಂಕ್ಷಿಪ್ತ ರೂಪದ ಹೂರಣವೂ ಆಗಿರುವುದೊಂದು ವಿಶೇಷ. ಇವರ ಕೃತಿಗಳ ವರ್ಣಚಿತ್ರಗಳನ್ನು ಸುಮಾರು ಎಪ್ಪತ್ತು ಪುಟಗಳ ವಿಸ್ತಾರದಲ್ಲಿ ಹರಡಲಾಗಿದೆ ಸಹ. ಚಿತ್ರಕಲೆಯಲ್ಲೂ ನೈಪುಣ್ಯ ಸಾಧಿಸಿರುವ ಇವರ ಈ ಪುಸ್ತಕದ ಮತ್ತೊಂದು ಮುಖ್ಯ ಸಾಧನೆ ಎಂದರೆ: ಚಲಪತಿಯವರ ಗೆಳೆಯರ ಬಳಗದ ವಿಸ್ತಾರ. ಇವರ ವೃತ್ತಿಜೀವನಕ್ಕೆ ಸಂಬಂಧಿಸಿದ ಅಧಿಕಾರಿಗಳು, ಕಲಾವಿದರು, ಬರಹಗಾರರು, ರಾಜಕಾರಣಿಗಳೇ ಇವರ ಗೆಳೆಯರ ಬಳಗದಲ್ಲಿ ಇರುವುದು ಒಂದು ವಿಶೇಷ.

***

'ಆತ್ಮಕತೆ' ಎಂದು ಸ್ವತಃ ಕಲಾವಿದರೇ ಈ ಪುಸ್ತಕವನ್ನು ವರ್ಗೀಕರಿಸಿದ್ದರೂ, ಅದನ್ನು ಮೀರಿದ ಆಯಾಮಗಳು ಈ ಪುಸ್ತಕ-ಸಂಗ್ರಹಾಲಯದ ಹೊತ್ತಗೆಗಿದೆ. ಇಲ್ಲಿನ ಚಲಪತಿಯವರ ಬದುಕಿನ ಪಯಣ, ಕಲಾಕೃತಿಗಳ ನಿರ್ಮಿತಿ, ವಿದೇಶ ಪಯಣ, ಹತ್ತು ಹಲವು ಶಿಲ್ಪಕಲಾ ಮಾಧ್ಯಮಗಳ, ಹಲವು ಗುರುತರ ಕೃತಿಗಳ ನಿರ್ಮಿತಿಯ ಹಂತಗಳು, ಸೂಕ್ಷ್ಮಾತಿ ಸೂಕ್ಷ್ಮವಾದ, ತಾಳ್ಮೆಯ ವಿವರಗಳು ಮಡುಗಟ್ಟಿವೆ. ಕರ್ನಾಟಕದ ಕಲಾರಂಗದ ಒಳಗಿನವರಿಗೆ ತಮ್ಮ ತಮ್ಮ ಹಿನ್ನೆನಪಿನ ಆಹ್ಲಾದವನ್ನು ಮೆಲುಕು ಹಾಕಲು ಒಂದು ಒಳ್ಳೆಯ ಅವಕಾಶವಿದು. ಆದರೆ ಕೆಲವು ವಿವರಗಳ (ದೇವರಾಜ ಅರಸು ಶಿಲ್ಪದ ಸುತ್ತಲಿನ ವಿವಾದ, ಇವರ ಜನಪ್ರಿಯತೆಯ ಕುರಿತು ಮೇಲಧಿಕಾರಿಗಳ ಈರ್ಷ್ಯೆಯ ನಡಾವಳಿ) ಸಂಕ್ಷಿಪ್ತ ನಮೂದು ಮಾತ್ರ ಇದೆ. ವಿಸ್ತಾರವಾದ ಕ್ಯಾನ್ವಾಸ್ಸಿನ ಆತ್ಮಕಥೆಯಲ್ಲಿ ಈ ನಿಲುವು ಸೂಕ್ತವೂ ಇರಬಹುದು. ಆದರೆ ನಿಯಮಿತ ಮುದ್ರಣ ದೋಷಗಳಾಚೆಗೆ ಈ ಪುಸ್ತಕವನ್ನು ಶಿಲ್ಪಿಯೊಬ್ಬರು ಕೆತ್ತಿಕೊರೆದ ಹೊತ್ತಗೆ ಎಂದು ಸ್ವೀಕರಿಸಬೇಕಿದೆ.

ಕನ್ನಡದಲ್ಲಿ ಆತ್ಮಕಥನ ಬರೆದ ಕಲಾವಿದರು ಅಪರೂಪ, ಇತರರು ಬರೆದ ಅಭಿನಂದನಾ ಗ್ರಂಥಗಳು ಮತ್ತು ಜೀವನ ಚರಿತ್ರೆಗಳೇ ಹೆಚ್ಚು. ಎಂ.ಟಿ.ವಿ. ಆಚಾರ್ಯರ 'ನನ್ನ ಕಲೆ ಮತ್ತು ನಾನು', ಶಿವರಾಮ ಕಾರಂತರ 'ಅಪೂರ್ವ ಪಶ್ಚಿಮ' ಮತ್ತು ಕನಕಮೂರ್ತಿ ಅವರ 'ಹೌದೇ, ಇದು ನಾನೇ?' ಪುಸ್ತಕಗಳಲ್ಲಿ ಇತರ ಕಲಾವಿದರ ಕೃತಿಗಳ, ಗ್ಯಾಲರಿ, ಸಂಗ್ರಹಾಲಯಗಳ, ವಿದೇಶಿ ಕಲಾ ವಲಯಗಳ ಪ್ರವಾಸ ಕುರಿತು ಕೊಡುವ ಒಳನೋಟಗಳನ್ನು ನೀಡಲು ಚಲಪತಿಯವರು ಹೆಚ್ಚಾಗಿ ಯತ್ನಿಸಬಹುದಿತ್ತು. ಇದು ಅವರಿಗೆ ಸಾಧ್ಯವೂ ಇತ್ತು. ಆದರೆ ಎಲ್ಲಿ ಆಚಾರ್ಯರು, ಕಾರಂತರು ತಮ್ಮನ್ನು 'ಸಾಂಸ್ಕೃತಿಕ ಉದ್ದುರಿಗಳು' ಎಂದು ಭಾವಿಸಿದ್ದರೋ ಅಂತಲ್ಲಿ ಚಲಪತಿಯವರು, ಕಲಾವಿದ ಕೆ. ವೆಂಕಟಪ್ಪನವರಂತೆ (ಇವರ ನಾಲ್ಕು ದಶಕಗಳ ದಿನಚರಿಗಳಲ್ಲಿ ಇರುವಂತೆ) ತಮ್ಮನ್ನು ಈ ಕಲಾಜಗತ್ತಿನ ನಮ್ರ ವಿದ್ಯಾರ್ಥಿಯನ್ನಾಗಿ, ಕುತೂಹಲಕರ ಕಂಗಳಿಂದ ಜಗತ್ತನ್ನು ಭಾವಿಸುವಲ್ಲೇ ಧನ್ಯತೆಯನ್ನು ಅನುಭವಿಸುತ್ತಾರೆ. ತಮ್ಮ ಅಭಿಪ್ರಾಯ, ದೃಶ್ಯ ವಿಶ್ಲೇಷಣೆ, ಹೊರನೋಟ, ಒಡಲಾಳದ ತುಮುಲ, ಸುತ್ತಲಿನ ಆಧುನಿಕ-ಸಮಕಾಲೀನ ಕಲಾ ವಾಗ್ವಾದಗಳ ಸೊಬಗು ಇತ್ಯಾದಿ ಬರೆಯುವುದನ್ನು ಅಹಮಿಕೆಯ ಆಯಾಮ ಎಂದು ಭಾವಿಸಿ, ಅದನ್ನು ತಡೆಹಿಡಿದಿದ್ದಾರೆ. ಇಷ್ಟಾದರೂ ಸ್ವಂತ ಪ್ರಕಟಣೆಯ ಈ ಅಪರೂಪದ ಪುಸ್ತಕವು (ಎಸ್.ಜಿ. ವಾಸುದೇವ್, ಜಿ.ಎಸ್.ಶೆಣೈ, ಯೂಸಫ್ ಅರಕ್ಕಲ್, ವಿ.ಎ. ದೇಶಪಾಂಡೆ, ಎಂ.ಜೆ. ಕಮಲಾಕ್ಷಿ ಅವರುಗಳನ್ನು ಕುರಿತ ಖಾಸಗಿ ಪ್ರಕಟಣೆಗಳಂತೆ) ವ್ಯಕ್ತಿಗತ ಪ್ರಕಟಣೆಯ ಶ್ರೀಮಂತಿಕೆಯ, ಮಹತ್ವಾಕಾಂಕ್ಷೆಯ ಮೈವಳಿಕೆಯನ್ನು ಹೊಂದಿದೆ. ಶಿಲ್ಪಿ ಚಲಪತಿಯವರು ತಮ್ಮದೇ ಒಂದು ರಭಸಯುಕ್ತ, ಎಕ್ಸ್ ಪ್ರೆಸಿವ್ ಶೈಲಿಯ ಕ್ರಿಯಾಶೀಲತೆಗೆ ಹೆಸರುವಾಸಿಯಾಗಿದ್ದಾರೆ. ಅಂತೆಯೇ ಈ ಪುಸ್ತಕವನ್ನೂ ಸಹ ಅವರ ಇತ್ತೀಚಿನ ಒಂದು ಶಿಲ್ಪಕೃತಿ ಎಂದು ಸುಲಭವಾಗಿ ಸ್ವೀಕರಿಸಿಬಿಡಬಹುದು.

ಮೊದಲ ಓದು

ಬಾನುಲಿಯ ಗಮನಾರ್ಹ ಧ್ವನಿ

ಶಾಂತಾದೇವಿ ಕಣವಿ ಅವರ ಹೆಸರು ಆಕಾಶವಾಣಿ ಶ್ರೋತೃಗಳಿಗೆ ಚಿರಪರಿಚಿತ. 1960ರ ದಶಕದಿಂದಲೇ ಅವರು ಬಾನುಲಿ ನಾಟಕಗಳ, ಭಾಷಣಗಳ, ಸಣ್ಣಕಥೆಗಳ ಮೂಲಕ ಛಾಪು ಮೂಡಿಸಿದವರು. ಮನಸ್ಸು ಕದಡುವಂಥ ಮೌಢ್ಯ, ಕೌಟುಂಬಿಕ ದೌರ್ಜನ್ಯಗಳನ್ನು ಖಂಡಿಸಿದ ಧ್ವನಿಯ ಅವರ ನಾಟಕಗಳು ಆ ಕಾಲಘಟ್ಟಕ್ಕೆ ತಕ್ಕಂತೆ ಅರ್ಥಪೂರ್ಣ ಧ್ವನಿ ಹೊಮ್ಮಿಸಿದ್ದವು. ಮೈಸೂರಿನ 'ಸಂವಾದ' ಅವರ ಬಾನುಲಿ ಸೃಜನಶೀಲ ಕೆಲಸಗಳೆಲ್ಲವನ್ನೂ ಅಡಕಮಾಡಿ, 'ಬಾನುಲಿ ಧ್ವನಿ' ಎಂಬ ಪುಸ್ತಕವಾಗಿ ಪ್ರಕಟಿಸಿದೆ.

ಬಾನುಲಿ ನಾಟಕಗಳು, ಬಾನುಲಿ ಭಾಷಣಗಳು, ಇತರ ಲೇಖನಗಳು, ಅನುವಾದಿತ ಕಥೆಗಳು ಎಂದು ನಾಲ್ಕು ವಿಭಾಗಗಳಾಗಿ ಕೃತಿಯನ್ನು ವಿಂಗಡಿಸಲಾಗಿದೆ. ಲಘು ಧಾಟಿಯ ನಾಟಕಗಳಿಂದ ಹಿಡಿದು ಬೋಧನಾಪ್ರಧಾನವಾದ ನಾಟಕಗಳವರೆಗೆ ನಾಟಕಗಳ ಶೈಲಿಯನ್ನು ಗುರುತಿಸಬಹುದು. 1960ರ ದಶಕದಿಂದ ಶುರುವಾಗುವ ಈ ನಾಟಕಗಳ ಶಿಲ್ಪವು ಈಗಿನ ರಂಗಭೂಮಿ ಆಸಕ್ತರೂ ಗಮನಿಸಬಹುದಾಗಿದೆ.

ಬಸವಣ್ಣ, ಗಾಂಧಿ, ಆ್ಯನಿಬೆಸೆಂಟ್ ಅವರಂತಹ ಮಹನೀಯರ ಕುರಿತ ಬಾನುಲಿ ಭಾಷಣಗಳು ಕೃತಿಯಲ್ಲಿವೆ. ವಿದ್ಯಾರ್ಥಿಗಳು ಈ ಭಾಗವನ್ನು ಗಮನಿಸಿದರೆ, ಚುಟುಕಾಗಿ ವ್ಯಕ್ತಿಚಿತ್ರ ಕಟ್ಟಿಕೊಡುವುದು ಹೇಗೆ ಎಂದು ಅರಿವಾದೀತು. ಕೃತಿಯಲ್ಲಿ ಶಾಂತಾದೇವಿ ಅವರ ಸಂದರ್ಶನಗಳು ಹಾಗೂ ಅವರಿಗೆ ಸಂದಿರುವ ಪ್ರಶಸ್ತಿಗಳ ಮಾಹಿತಿಯೂ ಇದೆ. ಅವರ ವ್ಯಕ್ತಿತ್ವ ಎಂಥದೆನ್ನುವುದಕ್ಕೆ ಅವೇ ಸಾಕ್ಷ್ಯಗಳು. ಕೊನೆಯ ಭಾಗದಲ್ಲಿರುವ ಅನುವಾದಿತ ಕಥೆಗಳು ಅವರ ಬಹುಭಾಷಾ ಆಸಕ್ತಿಗೆ ಹಿಡಿದ ಕನ್ನಡಿ. ಸುತ್ತಲ ಸಮಾಜವನ್ನು ಬಾನುಲಿ ಮಾಧ್ಯಮದ ಮೂಲಕ ಹೆಣ್ಣುಕಣ್ಣಿನ ನೋಟ ಕಾಣಿಸಿದ್ದು ಹೇಗೆನ್ನುವುದಕ್ಕೂ ಕೃತಿ ಉದಾಹರಣೆಯಂತಿದೆ.

ಪು: 464
₹450

ಬಾನುಲಿ ಧ್ವನಿ
ಲೇ: ಶಾಂತಾದೇವಿ ಕಣವಿ
ಪ್ರ: ಸಂವಾದ
ಸಂ: **9902639593**

ಮಂಜುನಾಥನ ಸ್ಮರಣೆಯ ವಚನಗಳು



ಪು: 180
₹180

ವಚನಸಿರಿ
ಲೇ:ಎಚ್.ಆರ್.ಲೀಲಾವತಿ
ಪ್ರ:ಸಂವಹನ, ಮೈಸೂರು
ಸಂ: **9379252241**

'**ಸಾವಿರದ** ಸಂಚಯ' ಕೃತಿಯಿಂದ ಸಾಹಿತ್ಯ ಜಗತ್ತಿಗೆ ಚಿರಪರಿಚಿತರು ಎಚ್.ಆರ್.ಲೀಲಾವತಿ. ವಿ.ಕೃ. ಗೋಕಾಕ್, ಗೋಪಾಲಕೃಷ್ಣ ಅಡಿಗರಂತಹ ಮಹನೀಯರು ಆ ಕೃತಿಯನ್ನು ಮೆಚ್ಚಿದ್ದರು. ಇದೀಗ ಲೀಲಾವತಿಯವರು 'ವಚನ ಸಿರಿ' ಎಂಬ ನೂತನ ಕೃತಿ ರಚಿಸಿದ್ದಾರೆ. 180 ಪುಟಗಳ ಈ ಕೃತಿಯಲ್ಲಿ 500ಕ್ಕೂ ಅಧಿಕ ಚಿಕ್ಕ ಚಿಕ್ಕ ವಚನಗಳಿವೆ. ವಿವಿಧ ವಿಷಯಗಳ ಕುರಿತಾದ ಈ ಪ್ರತಿ ವಚನವು ಧರ್ಮಸ್ಥಳದ ಮಂಜುನಾಥ ಸ್ವಾಮಿಯ ಸ್ಮರಣೆಯೊಂದಿಗೆ ಅಂತ್ಯವಾಗುತ್ತದೆ.

ಎದೆಯ ಹಣತೆಯ ಮಾಡಿ
ಬುದ್ಧಿ ಬತ್ತಿಯ ಹೊಸೆದು
ಭಾವ ತೈಲದೊಳದ್ದಿ ಭಕ್ತಿ ದೀವಿಗೆ ಬೆಳಗಿ
ನಾನಿನ್ನ ಚರಣಗಳಿಗರ್ಪಿಸುವೆ ತೊದಲಿಲಿಯ
ಸ್ವೀಕರಿಸಿ ಹರಸೆನ್ನ ಮಂಜುನಾಥ

ಎಂದು ಸ್ವಾಮಿಯನ್ನು ಸ್ಮರಿಸುತ್ತ, ಕೃತಿಯನ್ನು ಧರ್ಮಸ್ಥಳಪುರಾಧೀಶನಿಗೆ ಅರ್ಪಿಸಿದ್ದಾರೆ.

'ಛಂದಸ್ಸಿನ ನಿರ್ವಹಣೆಯಲ್ಲಾಗಲೀ ಶಬ್ದಗಳ ಪ್ರಯೋಗದಲ್ಲಿ ಆಗಲೀ ಲೀಲಾವತಿಯವರ ಕವನಗಳು ಕುಂಟುವುದಿಲ್ಲ' ಎಂದು ಗೋಪಾಲಕೃಷ್ಣ ಅಡಿಗರು ಲೀಲಾ ಅವರ ಬರವಣಿಗೆಯನ್ನು ಪ್ರಶಂಸಿಸಿದ್ದರು. ಈ ಕೃತಿಯ ಕವನಗಳಲ್ಲೂ ಆ ಬನಿ ಇದೆ. ಬದುಕಿನ ಒಲವು, ಗೆಲುವು, ನೋವು, ನಲಿವುಗಳನ್ನು ಶಬ್ದಗಳಲ್ಲಿ ಸೆರೆ ಹಿಡಿದಿದ್ದಾರೆ. ಭಾಷೆ ಸರಳವಾಗಿದೆ.

ಹುಟ್ಟುತಲೆ ಸೂತಕವು ಸಾವಿನಲು ಸೂತಕವೆ
ನಟ್ಟ ನಡುವಿನಲಷ್ಟೇ ಮಡಿ ಹುಡಿಯ ಆರ್ಭಟವು
ಕೋಟಿ ಜೀವಿಗಳಲ್ಲಿ ನಮಗೆ ಮಾತ್ರವೆ ಏಕೊ
ಈ ತೆರೆನ ಬೇಲಿಗಳು ಮಂಜುನಾಥ...

'ಬೇಲಿ' ಎಂಬ ಪದ್ಯದ ಸಾಲಿದು. ಈ ರೀತಿಯ ಓದಿ ನೆನಪಿನಲ್ಲಿಟ್ಟುಕೊಳ್ಳಬೇಕಾದ, ಅರ್ಥೈಸಿಕೊಂಡು ಬದುಕಿನಲ್ಲಿ ಅಳವಡಿಸಿಕೊಳ್ಳಬೇಕಾದ ಬಹಳಷ್ಟು ಸಾಲುಗಳು ಈ ಕೃತಿಯಲ್ಲಿ ಸಿಗುತ್ತವೆ.

ಕಥೆ
ಬಿ.ಎಲ್.ವೇಣು
ಅವರ
ಕರುಣಾಳು ಬಾ ಬೆಳಕೆ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಸದಾಶಿವ್ ಸೊರಟೂರು
ಅವರ
ನಾವು ಸಂಧಿಸುವುದಾದರೂ ಎಲ್ಲಿ?
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ
bhanuvara@prajavani.co.in

‘ಕೆಂಪು ಕೋಟೆ’ಯಲ್ಲಿ ಬೆಳಕಿನೋಕುಳಿ


‘ಅಫ್ಸಾನ’ ಮೂಲಕ ‘ಕೆಂಪು ಕೋಟೆ’ಯ ಕಥೆ ಅರುಹುತ್ತಿರುವ 150 ವರ್ಷ ಹಳೆಯ ಬ್ರಿಟಿಷರ ಕಾಲದ ಕಟ್ಟಡ

400 ವರ್ಷಗಳಿಗೂ ಅಧಿಕ ಕಾಲ ಹಲವು ಘಟನೆಗಳನ್ನು ನೋಡಿವೆ ಇಲ್ಲಿನ ಕೆಂಪು ಕಲ್ಲುಗಳು. ಮಳೆಗೆ ಒದ್ದೆಯಾಗುತ್ತಾ, ಬಿಸಿಲಿಗೆ ಒಡ್ಡಿಕೊಳ್ಳುತ್ತಾ, ಚಂದ್ರನ ಬೆಳದಿಂಗಳಲ್ಲಿ ಮೀಯುತ್ತಾ ಇರುವ ದೆಹಲಿಯ ‘ಕೆಂಪು ಕೋಟೆ’ಯೊಳಗೆ ಇದೀಗ ಹೊಸ ಲೋಕವೊಂದು ಸೃಷ್ಟಿಯಾಗಿದೆ.

ಅಭಿಲಾಷ್ ಪಿ.ಎಸ್.

ಛತ್ತಾ ಬಜಾರ್‌ನಲ್ಲಿ ಹೀಗೆ ನಡೆಯುತ್ತಿತ್ತಂತೆ ವ್ಯಾಪಾರ...

ಪಶ್ಚಿಮದಲ್ಲಿ ಸೂರ್ಯಾಸ್ತವಾಗುತ್ತಿದ್ದಂತೆ ದೆಹಲಿಯ ಕೆಂಪು ಕೋಟೆ ಬಣ್ಣದೋಕುಳಿಯಲ್ಲಿ ಮುಳುಗೇಳಲು ಸಿದ್ಧವಾಗುತ್ತದೆ. ಕೋಟೆಯ ಒಳಗಿರುವ ಛತ್ತಾ ಬಜಾರ್‌ನ ವ್ಯಾಪಾರಿಗಳು ದಿನದ ವ್ಯವಹಾರ ಪೂರ್ಣಗೊಳಿಸಿ ಮನೆಗೆ ಮರಳುವ ಸಮಯವದು. ಅಲ್ಲೊಂದು ಬೃಹತ್ ಆಕೃತಿ ನಟ ಅಮಿತಾಬ್ ಬಚ್ಚನ್ ಧ್ವನಿಯೊಳಗಿಂದ ಜೀವತಳೆದು ಕಥಾ ಸಾಮ್ರಾಜ್ಯವೊಂದಕ್ಕೆ ಹೆಜ್ಜೆ ಇಡುತ್ತಾ ಸಾಗುತ್ತದೆ.

‘ತನ್ನ ಹಳೆಯ ರಾಜಧಾನಿ ಆಗ್ರಾವನ್ನು ಬಿಟ್ಟು ಷಹಜಹಾನ್ ಕೆಂಪು ಕೋಟೆಗೆ ಬುನಾದಿ ಹಾಕಿದ. ದೆಹಲಿಯನ್ನೇ ತನ್ನ ಹೊಸ ರಾಜಧಾನಿಯನ್ನಾಗಿ ಮಾಡಿಕೊಂಡು ಇಲ್ಲಿಂದಲೇ ಮೊಘಲ್ ಸಾಮ್ರಾಜ್ಯವನ್ನು ಮುನ್ನಡೆಸಿದ...ಇಲ್ಲಿನ ಕೆಂಪು ಗೋಡೆಗಳು ಅದೆಷ್ಟೋ ಘಟನೆಗಳನ್ನು ನೋಡಿವೆ; ಇದೇ ಸ್ಥಳದಲ್ಲಿದ್ದುಕೊಂಡು ಇಡೀ ದೇಶವನ್ನು ಕೆಲವರು ಆಳಿದ್ದಾರೆ. ಇನ್ನು ಇದೇ ಸ್ಥಳದಲ್ಲಿ ದೇಶಭಕ್ತರ ಮೇಲೆ ಮೊಕದ್ದಮೆಗಳು ದಾಖಲಾದ ಉದಾಹರಣೆಗಳೂ ಇವೆ. ಈ ಕೋಟೆಯ ಮೇಲೆ ಆದ ದಾಳಿಗಳಿಗೂ ಲೆಕ್ಕವಿಲ್ಲ... 400 ವರ್ಷಗಳಿಗೂ ಅಧಿಕ ಕಾಲ ಸದೃಢವಾಗಿ ನಿಂತಿರುವ ಈ ಕೋಟೆ ಇಂದಿಗೂ ಭಾರತದ ಗುರುತಾಗಿದೆ...’

ಹೀಗೆ ಬಚ್ಚನ್ ಅವರ ಆ ಗಡಸು ಧ್ವನಿ ಇಳಿಸಂಜೆಯ ತಂಗಾಳಿ ಜೊತೆ ತೇಲಿಬರುತ್ತಿದ್ದರೆ, ವೀಕ್ಷಿಸುತ್ತಿರುವ ಪ್ರವಾಸಿಗರಿಗೂ 1648ರ ಆ ಅವಧಿಯಲ್ಲಿದ್ದಂಥ ಅನುಭವ. ಸಾರಂಗಿಯ ಸಂಗೀತದ ಹಿನ್ನೆಲೆಯಲ್ಲಿ ಯಮುನೆ ಕೋಟೆಯ ಹಿಂದೆಯೇ ಹರಿಯುತ್ತಿರುವಂಥ ಭಾವ.

ಅಷ್ಟರಲ್ಲೇ...

ಜೈಕಾರದ ಸದ್ದು. ಕೆಂಪು ಕೋಟೆ ಪೂರ್ಣಗೊಂಡ ಸುದ್ದಿ ತಿಳಿದು ಕಾಬೂಲ್‌ನಲ್ಲಿದ್ದ ಷಹಜಹಾನ್ ಆಗ್ರಾಗೆ ಬಂದಿದ್ದಾನೆ. ಅಲ್ಲಿಂದ ಆತ ಯಮುನಾ ನದಿ ಮೂಲಕ ತನ್ನ ಇಡೀ ಕುಟುಂಬದೊಂದಿಗೆ ಅದ್ಧೂರಿಯಾದ ತೇರಿನಲ್ಲಿ ತೇಲಿಬಂದು ಮೊದಲ ಬಾರಿ ಕೆಂಪು ಕೋಟೆಯೊಳಗೆ ಹೆಜ್ಜೆ ಇಡುತ್ತಿರುವಾಗ ಅಲ್ಲಿ ನಗಾರಿಗಳ ಸದ್ದು...

ದೆಹಲಿ ಎಂದಾಕ್ಷಣ ಪ್ರವಾಸಿಗರ ಮನಸ್ಸಿನಲ್ಲಿ ಮೊದಲು ಮೂಡುವುದು ಆಗ್ರಾದಲ್ಲಿರುವ ತಾಜ್‌ಮಹಲ್. ಆ ನಂತರದಲ್ಲಿ ಇಂಡಿಯಾ ಗೇಟ್, ಕೆಂಪು ಕೋಟೆ ಹೀಗೆ ಉಳಿದ ಪ್ರವಾಸಿ ಸ್ಥಳಗಳ ಹೆಸರುಗಳು. ಹೀಗಿರುವಾಗ ತಾಜ್‌ಮಹಲ್‌ನಷ್ಟೇ ಪ್ರಾಮುಖ್ಯ ಹೊಂದಿರುವ ಕೆಂಪು ಕೋಟೆಯತ್ತ ಮತ್ತಷ್ಟು ಪ್ರವಾಸಿಗರನ್ನು ಸೆಳೆಯುವುದು ಹೇಗೆ? ಇದಕ್ಕೆ ‘ಜೈ ಹಿಂದ್’ ಮೂಲಕ ಉತ್ತರ ಕಂಡುಕೊಂಡಿದೆ ‘ದಾಲ್ಮಿಯಾ ಭಾರತ್ ಲಿ.’. ನೆರಳು, ಬೆಳಕಿನಾಟದಲ್ಲಿ ಕೆಂಪುಕೋಟೆಯನ್ನೇ ಬೃಹತ್ ಪರದೆಯನ್ನಾಗಿಸಿ, ಅದರೊಳಗಿರುವ ಪ್ರಮುಖ ಸ್ಥಳಗಳನ್ನು ವೇದಿಕೆಗಳನ್ನಾಗಿಸಿ ‘ಕೆಂಪು ಕೋಟೆ’ಯ ಇತಿಹಾಸವನ್ನು ಪ್ರೇಕ್ಷಕರಿಗೆ ನೃತ್ಯ, ಗೊಂಬೆಯಾಟದ ಮೂಲಕ ತೋರಿಸುವ ಕಾರ್ಯಕ್ರಮವೇ ಜೈ ಹಿಂದ್.

ಕೇಂದ್ರ ಸರ್ಕಾರದ ಪ್ರವಾಸಿ ತಾಣಗಳ ದತ್ತು ಯೋಜನೆಯಡಿ ದಾಲ್ಮಿಯಾ ಕೆಂಪು ಕೋಟೆಯನ್ನು ದತ್ತು ಪಡೆದಿದೆ. 17ನೇ ಶತಮಾನದ ಈ ಯುನೆಸ್ಕೊ ಪರಂಪರೆಯ ತಾಣ ಇದೀಗ ನೂತನ ತಂತ್ರಜ್ಞಾನಗಳನ್ನು ಅಳವಡಿಸಿಕೊಂಡು ಪ್ರವಾಸಿಗರೆದುರಿಗೆ ಬಂದಿದೆ.


ಕೋಟೆಯ ಇತಿಹಾಸ ತಿಳಿಸುವ ‘ಜೈ ಹಿಂದ್’ ಕಾರ್ಯಕ್ರಮಕ್ಕೆ ಸಜ್ಜಾದ ಇಳಿಸಂಜೆಯ ಕೆಂಪು ಕೋಟೆ

ಬೃಹತ್ ಗೊಂಬೆಯಾಟದಲ್ಲಿ ಜೀವತಳೆದ ಷಹಜಹಾನ್

‘ಅಫ್ಸಾನ’ದೊಳಗೊಂದು 3ಡಿ ಕೋಟೆ

ಕೆಂಪು ಕೋಟೆ ಮುಖ್ಯದ್ವಾರದಿಂದ ಒಳಹೋಗುತ್ತಲೇ ಛತ್ತಾ ಬಜಾರ್ ಪ್ರವಾಸಿಗರನ್ನು ಎದುರುಗೊಳ್ಳುತ್ತದೆ. ಇದನ್ನು ದಾಟಿ ಮುಂದೆ ಹೆಜ್ಜೆ ಇಟ್ಟರೆ 150 ವರ್ಷ ಹಳೆಯ ಬ್ರಿಟಿಷರು ನಿರ್ಮಿಸಿದ ಕಟ್ಟಡವೊಂದಿದೆ. ಕೋಟೆಯನ್ನು ಬ್ರಿಟಿಷರು ವಶಕ್ಕೆ ಪಡೆದಾಗ ಷಹಜಹಾನ್ ನಿರ್ಮಿಸಿದ್ದ ಕಟ್ಟಡಗಳನ್ನು ಧ್ವಂಸಗೊಳಿಸಿ ಇದನ್ನು ನಿರ್ಮಿಸಲಾಗಿತ್ತಂತೆ. ಪ್ರಸ್ತುತ ಇದನ್ನೇ ಕೆಂಪು ಕೋಟೆಯ ಇತಿಹಾಸ, ವಾಸ್ತುಶಿಲ್ಪ, ಪರಂಪರೆ ಹಾಗೂ ಸಂಸ್ಕೃತಿಯನ್ನು ತಂತ್ರಜ್ಞಾನದ ಮುಖಾಂತರ ಕಟ್ಟಿಕೊಡುವ ಕಟ್ಟಡವಾಗಿ ಮಾರ್ಪಾಡುಗೊಳಿಸಿದೆ ದಾಲ್ಮಿಯಾ ಕಂಪನಿ. ನಾಲ್ಕು ವಲಯಗಳಲ್ಲಿ ಕೋಟೆಯ ಇತಿಹಾಸವನ್ನು ಇಲ್ಲಿ ಬಿಂಬಿಸಲಾಗಿದೆ.

- **‘ಸಫರ್’:** ದೆಹಲಿ ಎಂಬ ಪ್ರದೇಶದ ಇತಿಹಾಸವನ್ನು ಹೇಳುವ ಈ ವಲಯದಲ್ಲಿ, ‘ಕೆಂಪು ಕೋಟೆ’ ಹಾಗೂ ಶಾಜಹಾನಬಾದ್ ಸ್ಥಾಪನೆ ಆಗುವುದಕ್ಕಿಂತ ಮುಂಚಿನ ನೆಲದ ಇತಿಹಾಸವಿದೆ.

‘ಕೆಂಪು ಕೋಟೆ’ಯೊಳಗೆ ಆಳಿದವರ್‍ಯಾರು? ತಂತ್ರಜ್ಞಾನದಲ್ಲಿ ಜೀವತಳೆದ ಕೋಟೆ

- **‘ಜಿಂದಗಿ’:** ಈ ವಲಯ ಕೋಟೆಯ ಅತ್ಯಾಕರ್ಷಕ ವಾಸ್ತುಶಿಲ್ಪ, ಅದರೊಳಗೆ ವಾಸವಿದ್ದ ದೊರೆಗಳ ಸಂಸ್ಕೃತಿ ಹಾಗೂ ಐಷಾರಾಮಿ ಜೀವನದ ಬಗೆಗಿನ ನೋಟವಿದೆ.
- **‘ತಾರೀಖ್’:** ಪ್ರಮುಖ ಘಟನೆಗಳ ದಾಖಲೆ ಹೊತ್ತ ಸ್ಥಳವಿದು. ಆಕರ್ಷಕ ಚಿತ್ರಗಳು, 3ಡಿ ತಂತ್ರಜ್ಞಾನವನ್ನು ಬಳಸಿಕೊಂಡು ಕೋಟೆ ನಿರ್ಮಾಣದ ಹಂತ ಹಂತದ ವಿವರಣೆಯನ್ನು ಇಲ್ಲಿ ಪ್ರವಾಸಿಗರು ಕಣ್ತುಂಬಿಕೊಳ್ಳಬಹುದು. 1707ರಲ್ಲಿ ಔರಂಗಜೇಬನ ನಿಧನದ ಬಳಿಕ ಮೊಘಲ್ ಸಾಮ್ರಾಜ್ಯದ ಪತನದ ಕಥನವೂ ಇಲ್ಲಿದೆ.
- **‘ಹಮ್ ಏಕ್ ಹೈ’:** ಕೊನೆಯ ಹಂತದಲ್ಲಿ ಏಕತೆಯನ್ನು ಸಾರುವ ಕೊಠಡಿಯೊಂದಿದೆ. ಇಲ್ಲಿ ಭಾರತದ ಎಲ್ಲ ಭಾಷೆಗಳಲ್ಲಿ ‘ವಂದೇ ಮಾತರಂ’ ಎಂಬ ವಾಕ್ಯವನ್ನು ಬರೆಯಲಾಗಿದ್ದು, ಅದರ ಪಕ್ಕದಲ್ಲೇ ಇರುವ ವಾದ್ಯಗಳನ್ನು ಒತ್ತಿದರೆ ‘ವಂದೇ ಮಾತರಂ’ ಹಾಡಿಗೆ ಹಿನ್ನೆಲೆ ಸಂಗೀತವನ್ನು ಕೇಳಬಹುದು. ಜೊತೆಗೆ ಅಸಂಖ್ಯ ಅಶೋಕ ಚಕ್ರಗಳು ದೇಶಕ್ಕಾಗಿ ಬಲಿದಾನ ನೀಡಿದ ಸೈನಿಕರನ್ನು ಬಿಂಬಿಸುತ್ತವೆ.

ಇವೆಲ್ಲವನ್ನು ವೀಕ್ಷಿಸುತ್ತಾ ದೃಶ್ಯಲೋಕಕ್ಕೆ ಕಾಲಿಡುವ ಕ್ಷಣವಿದು. ಕೆಂಪು ಕೋಟೆಯೊಳಗೆ ಮೂರು ವೇದಿಕೆಗಳಲ್ಲಿ 60ಕ್ಕೂ ಅಧಿಕ ಕಲಾವಿದರು ತೆರೆದಿಡುವ ವಿಭಿನ್ನ ಲೋಕದಲ್ಲಿ ಸುತ್ತಾಡಿ ಬರುವುದು ಇತಿಹಾಸದೊಳಗೊಂದು ಇಣುಕು ನೋಟದಂತೆ. 1739ರಲ್ಲಿ ನಡೆದ ನಾದಿರ್ ಶಾನ ದಾಳಿ ಹಾಗೂ ಆತನ ದುಷ್ಕೃತ್ಯ, ಕೋಹಿನೂರ್ ವಜ್ರದ ಹಿಂದಿನ ಕಥೆ, ಸಿಖ್ ಹಾಗೂ ಮರಾಠರ ಆಕ್ರಮಣ, ಬ್ರಿಟಿಷರ ದಾಳಿ, 1947ರ ಆಗಸ್ಟ್ 16ರಂದು ಕೆಂಪು ಕೋಟೆಯ ಮೇಲೆ ಮೊದಲ ಬಾರಿ ಧ್ವಜಾರೋಹಣ ಹೀಗೆ ಹಲವು ಘಟನೆಗಳನ್ನು ದೃಶ್ಯರೂಪಕದಲ್ಲಿ ಕಟ್ಟಿಕೊಡಲಾಗಿದೆ. ಇದನ್ನು ಕಣ್ತುಂಬಿಕೊಳ್ಳುವುದು ಒಂದು ವಿಶಿಷ್ಟ ಅನುಭವವೇ ಸರಿ.

ಜೈ ಹಿಂದ್ ಕಾರ್ಯಕ್ರಮದ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಇಲ್ಲಿ ಪಡೆಯಬಹುದು: https://www.jaihind.show/

(ದಾಲ್ಮಿಯಾ ಕಂಪನಿಯ ಆಹ್ವಾನದ ಮೇರೆಗೆ ಲೇಖಕರು ದೆಹಲಿಗೆ ತೆರಳಿದ್ದರು)

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿಗಮ್ಮತ್ತು

ಕೂಡಿಸಿ ನೋಡು ಗುಣಿಸಿ ನೋಡು ಉತ್ತರ ಬದಲಿ ಆಗದು!

ನಿನ್ನ ಮಿತ್ರನಿಗೆ ಒಂದು ಸಂಖ್ಯೆ ಬರೆದುಕೊಳ್ಳುವಂತೆ ತಿಳಿಸು. ಅದೇ ಸಂಖ್ಯೆಯನ್ನು ಎರಡುಬಾರಿ ಒಂದರ ಕೆಳಗೆ ಒಂದನ್ನು ಬರೆದು ಎರಡೂ ಸಂಖ್ಯೆ ಕೂಡಿಸಿ ಮೂರನೇ ಸಂಖ್ಯೆಯಾಗಿ ಮತ್ತೆ ಅದರ ಕೆಳಗೆ ಬರೆಯಲಿ. ಈಗ ಎರಡನೇ ಸಂಖ್ಯೆ ಹಾಗೂ ಮೂರನೇ ಸಂಖ್ಯೆ ಕೂಡಿಸಿ ನಾಲ್ಕನೇ ಸಂಖ್ಯೆಯಾಗಿ ಮತ್ತೆ ಬರೆಯಲಿ. ಹೀಗೆ ಹತ್ತು ಸಾರಿ ಬರೆದು ಕೂಡಿಸಲು ಹೇಳು. ಹಾಗೂ ಮೇಲೆ ಬರೆದ ಸಂಖ್ಯಾ ಸಾಲಿನಲ್ಲಿ 7ನೇ ಸಂಖ್ಯೆಯನ್ನು ಮಾತ್ರ ನಿನಗೆ ಹೇಳಲಿ. ಈಗ ನೀನು 7ನೇ ಸಂಖ್ಯೆಗೆ 11ರಿಂದ ಗುಣಿಸಿದರೆ ಬರುವ ಉತ್ತರ ಹಾಗೂ ನಿನ್ನ ಮಿತ್ರ 10 ಸಂಖ್ಯೆ ಕೂಡಿಸಿದ ಸಿಗುವ ಉತ್ತರ ಎರಡೂ ಒಂದೇ ಆಗಿರುತ್ತದೆ. ಮಾಡಿ ನೋಡು.

ಉದಾ:
6 ನಿನ್ನ ಮಿತ್ರನ ಸಂಖ್ಯೆ
6 ಐಮತ್ತೆ ಅದೇ ಸಂಖ್ಯೆ ಬರೆದಾಗ
12 ಮೇಲಿನ ಎರಡೂ ಸಂಖ್ಯೆ ಕೂಡಿಸಿದಾಗ
18 ಹೀಗೆ ಮುಂದುವರಿಸಿದಾಗ
30
\+ 48
(78) (ನಿಮ್ಮ ಮಿತ್ರ ಹೇಳುವ 7ನೇ ಸಂಖ್ಯೆ)
126
204
330
858

78 X 11 = 858 –ನೀನು ಗುಣಿಸಿದಾಗ ಇಬ್ಬರ ಉತ್ತರವೂ ಒಂದೇ!

ಸೂಟಿ ಬಂತು ಸೂಟಿ ಬಂತು

ಸೂಟಿ ಬಂತು ಸೂಟಿ ಬಂತು
ನಮ್ಮ ನಮ್ಮ ಶಾಲೆಗೆ
ಪಾಟಿಗಂಟು ಏಕೆ ಬೇಕು
ಹೋಯ್ತು ಎಲ್ಲೋ ಮೂಲೆಗೆ
ಪಾಠವಿಲ್ಲ: ಕಾಟವಿಲ್ಲ
ಬರೀ ಆಟ ಮೋಜಿಗೆ
ಓಣಿ ಎಲ್ಲ ತಿರುಗಿ ತಿರುಗಿ ಕುಡಿದರಾಯ್ತು
ಮಜ್ಜಿಗೆ
ಬಿಸಿಲೆ ಇರಲಿ, ಬೆವರೆ ಬರಲಿ
ಚಿಂತೆಯಿಲ್ಲ ಆಟಕೆ
ಆಟದಲ್ಲಿ ಮಗ್ನರಾಗೆ
ಲಕ್ಷ್ಯವಿಲ್ಲ ಊಟಕೆ
ಬ್ಯಾಟುಚೆಂಡು ಹಿಡಿದುದಂಡು
ಹೊರಟೇ ಬಿಡ್ತು ಗ್ರೌಂಡಿಗೆ
ಆಟವಾಡಿ ದಣಿದು ದಣಿದು
ಮರಳಿ ಬಂತು ಸಂಜೆಗೆ

ಒತ್ತಕ್ಷರ ಆಟ

ಇಲ್ಲಿ ಕೊಟ್ಟಿರುವ ‘ಲ್ಲಾ’ ಒತ್ತಕ್ಷರದ ಆಚೆ ಈಚೆ ಅಕ್ಷರ ಪಟ್ಟಿಯಿಂದ ಎರಡಕ್ಷರ ಆರಿಸಿ ತುಂಬಿ ಮೂರಕ್ಷರದ ಪದ ಮಾಡಿ

ಬ	ಗು	ಳಿ	ವಿ	ಡು
ಅ	ದ	ಸ	ಡು	ಗು
ರಿ	ಪ	ಚೆ	ಕೊ	ಳ
ಕ	ಕ	ಉ	ಸ	ಹು

1)___ಲ್ಲಾ___ 6)___ಲ್ಲಾ___
2)___ಲ್ಲಾ___ 7)___ಲ್ಲಾ___
3)___ಲ್ಲಾ___ 8)___ಲ್ಲಾ___
4)___ಲ್ಲಾ___ 9)___ಲ್ಲಾ___
5)___ಲ್ಲಾ___ 10)___ಲ್ಲಾ___

ದಶ್ಗ ಚಿಕ್ಕ ಶೇಶ್ರಪ್ಪು ಕಥೆಯ — ಕೈಗೆ ಬಂದ ತುತ್ತು...!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಅದಲು ಬದಲು ಕಂಚಿ ಕದಲು

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನು ಮರು ಜೋಡಿಸಿ ಅಷ್ಟೇ ಅಕ್ಷರಗಳ ಮತ್ತೊಂದು ಪದಮಾಡಿ

1) ಮೊದಲಬೇಟೆ = ________
2) ಕವಡೆಕೊಡು = ________
3) ಹೊಗೆರಹಿತ = ________
4) ಬರಿಹಗೆ = ________

ಪುಟಾಣಿ ಪದಬಂಧ

1			ಕ	ತ್ತು	ಕತ್ತು ಹಿಡಿದು ಮಾಡಿದ ಅಡೆತಡೆ
2			ಪ	ತಿ	ಪತಿಯಿಂದ ನಡೆದ ಸಲ್ಲದ ಕಾರ್ಯ
3		ವ	ರ		ವರ ಜಳಕ ಮಾಡಿದ ನದಿ
4			ಲಾ	ಡಿ	ಲಾಡಿ ಹಿಡಿದಿರುವ ಈಕೆ ವಯ್ಯಾರಿ
5			ಕ	ರ	ಕರ ಮುಗಿಯಿರಿ ಈತ ಜಗತ್ತನ್ನು ಬೆಳಗುವ ಸೂರ್ಯ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪುಟಾಣಿ ಪದಬಂಧ: 1.ಉಪಯೋಗ 2.ಗಡಿಬಿಡಿ 3.ಸಿಡಿಮಿಡಿ 4.ದಸ್ತಗಿರಿ 5.ಚಿನಿವಾರ

ಅದಲು ಬದಲು ಕಂಚಿ ಕದಲು: 1.ಸರತಿಸಾಲು 2.ಜನನಮರಣ 3.ಗುಡಿಮಾಳಿಗೆ 4.ಗಣಿತಜ್ಞ

ಪದಸಂಪತ್ತಿಗೆ ಸವಾಲ್: 1.ಬ್ರಹ್ಮಾಸ್ತ್ರ 2.ಪ್ರತ್ಯಾಸ್ತ್ರ 3.ಪ್ರತ್ಯಕ್ಷ 4.ಕ್ಯಾತ್ಸಂದ್ರ 5.ಬ್ರಹ್ಮರ್ಷಿ 6.ವೃದ್ಧಾಪ್ಯ 7.ಬ್ರಹ್ಮೇಂದ್ರ 8.ಪ್ರಶ್ನಾರ್ಹ .ಹೃತ್ಕರ್ಣ 10.ಶ್ರೀಕೃಷ್ಣ

ಜಾಣಪದ ಆಟ: 1.ನೇರಳೆಹಣ್ಣು 2.ಸರಬರಾಜು 3.ಗೌರಿಶಂಕರ 4.ಹಯವದನ 5.ಗರಡಿಮನೆ 6.ಗಜಕೇಸರಿ 7.ಬನಶಂಕರಿ 8.ಗಾನಲಹರಿ 9.ಉಪಕರಣ 10.ಗಣತಿದಾರ

ಗಣಿತದಲ್ಲಿ ಗರ್ದಿಗಮ್ಮತ್ತು

		7
		7
	8	8
+	9	8
7	9	9
9	9	9

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ-20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಹೊಯ್ಸಳ ತ್ರಿನೇಶ್ ಎಂ.ಎಸ್
ಚಾಮರಾಜನಗರ

ಮೋಕ್ಷ,
ಬೆಂಗಳೂರು ಗ್ರಾಮಾಂತರ

ಸಂಸ್ಕೃತಿ ಎಂ.ಎಸ್.
ಮೈಸೂರು

ಫೈನಲ್ ಇಂದು: ಗುಜರಾತ್ ಟೈಟನ್ಸ್–ಚೆನ್ನೈ ಸೂಪರ್ ಕಿಂಗ್ಸ್ ಸೆಣಸಾಟ; ಗಿಲ್, ಡೆವೊನ್ ಮೇಲೆ ಕಣ್ಣು

ಧೋನಿ ಅನುಭವಕ್ಕೆ ಹಾರ್ದಿಕ್ ಛಲದ ಸವಾಲು

ಮಹೇಂದ್ರ ಸಿಂಗ್ ಧೋನಿ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಒಂದು ಲಕ್ಷಕ್ಕೂ ಹೆಚ್ಚು ಪ್ರೇಕ್ಷಕರ ಆಸನ ಸಾಮರ್ಥ್ಯ ಹೊಂದಿರುವ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ಹಾಲಿ ಚಾಂಪಿಯನ್ ಗುಜರಾತ್ ಟೈಟನ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳು ಹದಿನಾರನೇ ಆವೃತ್ತಿಯ ಐಪಿಎಲ್ ಪ್ರಶಸ್ತಿಗಾಗಿ ಸೆಣಸಲಿವೆ.

58 ದಿನಗಳ ಹಿಂದೆ ಇದೇ ಅಂಗಳದಲ್ಲಿ ಉದ್ಘಾಟನೆಗೊಂಡಿದ್ದ ಟೂರ್ನಿಯ ಮೊದಲ ಪಂದ್ಯದಲ್ಲಿ ಧೋನಿ ಬಳಗವು ಆತಿಥೇಯ ಗುಜರಾತ್ ಟೈಟನ್ಸ್ ತಂಡವನ್ನು ಎದುರಿಸಿತ್ತು. ಭಾನುವಾರ ಇಲ್ಲಿ ನಡೆಯಲಿರುವ ಫೈನಲ್ ಪಂದ್ಯದಲ್ಲಿ ಧೋನಿಯ ಅನುಭವ ಹಾಗೂ ಯುವ ನಾಯಕ ಹಾರ್ದಿಕ್ ಪಾಂಡ್ಯ ಅವರ ಛಲದ ಆಟವು ರಂಗೇರುವ ನಿರೀಕ್ಷೆ ಇದೆ.

ಕಳೆದ ಒಂದೂವರೆ ತಿಂಗಳಿನಲ್ಲಿ ಉಭಯ ತಂಡಗಳು ಹಲವು ಏರಿಳಿತಗಳನ್ನು ಕಂಡು ಅಂತಿಮ ಸುತ್ತಿಗೆ ಬಂದು ತಲುಪಿವೆ. ಧೋನಿ ಬಳಗವು ಐದನೇ ಬಾರಿ ಪ್ರಶಸ್ತಿ ಜಯಿಸುವ ಹುಮ್ಮಸ್ಸಿನಲ್ಲಿದೆ. ಅದೇ ಗುಜರಾತ್ ತಂಡವು ಸತತ ಎರಡನೇ ಸಲ ಟ್ರೋಫಿ ತನ್ನದಾಗಿಸಿಕೊಳ್ಳುವ ಛಲದಲ್ಲಿದೆ.

ಹೋದ ವಾರವಷ್ಟೇ ಚೆನ್ನೈನಲ್ಲಿ ನಡೆದಿದ್ದ ಮೊದಲ ಕ್ವಾಲಿಫೈಯರ್‌ನಲ್ಲಿ ಉಭಯ ತಂಡಗಳು ಮುಖಾಮುಖಿಯಾಗಿದ್ದವು. ಅದರಲ್ಲಿ ಧೋನಿ ಬಳಗವು ಅಮೋಘ ಜಯ ಸಾಧಿಸಿ ಫೈನಲ್‌ಗೆ ಲಗ್ಗೆ ಇಟ್ಟಿತ್ತು. ಆದರೆ ಗುಜರಾತ್ ತಂಡವು ಎರಡನೇ ಕ್ವಾಲಿಫೈಯರ್‌ನಲ್ಲಿ ಮುಂಬೈ ಇಂಡಿಯನ್ಸ್ ಬಳಗವನ್ನು ಮಣಿಸಿ ಈ ಹಂತಕ್ಕೆ ಬಂದಿದೆ.

ಟೂರ್ನಿಯುದ್ದಕ್ಕೂ ಚೆಂದದ ಬ್ಯಾಟಿಂಗ್ ಮಾಡಿ ಮೂರು ಶತಕಗಳನ್ನು ಗಳಿಸಿರುವ ಗುಜರಾತ್ ತಂಡದ ಆರಂಭಿಕ ಬ್ಯಾಟರ್ ಶುಭಮನ್ ಗಿಲ್ ಹಾಗೂ ಚೆನ್ನೈ ಬ್ಯಾಟಿಂಗ್‌ನ ಬೆನ್ನೆಲುಬಾಗಿರುವ ಡೆವೊನ್ ಕಾನ್ವೆ ಅವರ ನಡುವಿನ ಹಣಾಹಣಿಯಾಗಿಯೂ ಈ ಪಂದ್ಯ ಗಮನ ಸೆಳೆಯುತ್ತಿದೆ. ಚೆನ್ನೈನ ಋತುರಾಜ್ ಗಾಯಕವಾಡ, ಅಜಿಂಕ್ಯ ರಹಾನೆ ಮತ್ತು ಶಿವಂ ದುಬೆ ಕೂಡ ಅಮೋಘ ಲಯದಲ್ಲಿದ್ದಾರೆ. ಅವರಿಗೆ ಪೈಪೋಟಿಯೊಡ್ಡಲು ಟೈಟನ್ಸ್ ತಂಡದ ವೃದ್ಧಿಮಾನ್ ಸಹಾ, ವಿಜಯ್ ಶಂಕರ್ ಇದ್ದಾರೆ. ಬೌಲಿಂಗ್‌ನಲ್ಲಿ ಅನುಭವಿ ಮೊಹಮ್ಮದ್ ಶಮಿ ಹಾಗೂ ಸ್ಪಿನ್ನರ್ ರಶೀದ್ ಖಾನ್ ಅವರ ಬಲ ತಂಡಕ್ಕೆ ಇದೆ.

ಟೂರ್ನಿಯ ಆರಂಭಿಕ ಪಂದ್ಯಗಳಲ್ಲಿ ಅಪಾರ ವೈಫಲ್ಯ ಅನುಭವಿಸಿದ್ದ ಯುವ ಬೌಲರ್‌ಗಳನ್ನು ಪಳಗಿಸುವಲ್ಲಿ ಧೋನಿ ಯಶಸ್ವಿಯಾಗಿದ್ದಾರೆ. ಅದರಿಂದಾಗಿ ಮಥೀಷ ಪಥಿರಾಣ, ಮಹೀಷ್ ತೀಕ್ಷಣ ಪಂದ್ಯ ಗೆದ್ದುಕೊಡಬಲ್ಲ ಮಟ್ಟಕ್ಕೆ ಬೆಳೆದಿದ್ದಾರೆ. ಅಲ್ಲದೇ ದೀಪಕ್ ಚಾಹರ್, ಮೊಯಿನ್ ಅಲಿ ಮತ್ತು ರವೀಂದ್ರ ಜಡೇಜ ತಮ್ಮ ಆಲ್‌ರೌಂಡ್ ಆಟದ ಮೂಲಕ ಮಿಂಚುವ ಹುಮ್ಮಸ್ಸಿನಲ್ಲಿದ್ದಾರೆ. ಹೋದ ವರ್ಷದ ಟೂರ್ನಿಯಲ್ಲಿ ಪ್ಲೇ ಆಫ್ ಪ್ರವೇಶಿಸಲೂ ವಿಫಲವಾಗಿದ್ದ ಚೆನ್ನೈ ತಂಡ ಈ ಬಾರಿ ಪ್ರಶಸ್ತಿ ಸನಿಹ ಬಂದು ನಿಂತಿದೆ. 2021ರಲ್ಲಿ ತಂಡವು ಚಾಂಪಿಯನ್ ಆಗಿತ್ತು.

ಧೋನಿಗಿದು ಕೊನೆಯ ಪಂದ್ಯವೇ?

ಚೆನ್ನೈ ಸೂಪರ್ ಕಿಂಗ್ಸ್ ತಂಡದ ನಾಯಕ ಮಹೇಂದ್ರಸಿಂಗ್ ಧೋನಿ ಅವರು ಆಡುತ್ತಿರುವ ಕೊನೆಯ ಐಪಿಎಲ್ ಟೂರ್ನಿ ಇದು ಎನ್ನಲಾಗಿದೆ. ಟೂರ್ನಿ ಆರಂಭವಾದಾಗಿನಿಂದಲೂ ಧೋನಿ ಆಟವನ್ನು ನೋಡಲು ಜನರು ಮುಗಿಬೀಳುತ್ತಿದ್ದಾರೆ. ಅದಕ್ಕೆ ಕಾರಣ ಅವರು ಈ ಟೂರ್ನಿಯ ನಂತರ ನಿವೃತ್ತಿಯಾಗುವುದಾಗಿ ಹರಡಿರುವ ಸುದ್ದಿ. ಚೆನ್ನೈ ತಂಡವು ಇದುವರೆಗೆ ಆಡಿರುವ ತಾಣಗಳಲ್ಲಿ ಕ್ರೀಡಾಂಗಣದ ಪ್ರೇಕ್ಷಕರ ಗ್ಯಾಲರಿಯಲ್ಲಿ ಹಳದಿ ಪೋಷಾಕು ತೊಟ್ಟ ಅಭಿಮಾನಿಗಳ ದಂಡು ಗಮನ ಸೆಳೆದಿತ್ತು.

ಭಾನುವಾರ ನಡೆಯಲಿರುವ ಫೈನಲ್ ಧೋನಿಯ ಕೊನೆಯ ಪಂದ್ಯವೆಂದೇ ಹೇಳಲಾಗುತ್ತಿದೆ. ಅದರಿಂದಾಗಿ ಒಂದು ಲಕ್ಷಕ್ಕೂ ಹೆಚ್ಚು ಆಸನಗಳ ಟಿಕೆಟ್‌ಗಳು ಬಿಕರಿಯಾಗಿವೆ. ಟಿವಿ. ಮೊಬೈಲ್ ಆ್ಯಪ್‌ಗಳಲ್ಲಿಯೂ ಪಂದ್ಯ ವೀಕ್ಷಿಸಲು ಜನರು ಸಿದ್ಧರಾಗಿದ್ದಾರೆ.

ಆದರೆ ಈಚೆಗೆ ಮಾಧ್ಯಮಗೋಷ್ಠಿಯೊಂದರಲ್ಲಿ ಧೋನಿ, 'ಮುಂದಿನ ಹರಾಜು ಪ್ರಕ್ರಿಯೆಗೆ ಎಂಟು ತಿಂಗಳುಗಳು ಬಾಕಿಯಿವೆ' ಎಂದು ಹೇಳಿದ್ದರು. ಆ ಮೂಲಕ ತಾವು ಇನ್ನೂ ನಿವೃತ್ತಿಯ ನಿರ್ಧಾರ ಕೈಗೊಂಡಿಲ್ಲವೆಂಬುದನ್ನು ಸೂಚ್ಯವಾಗಿ ಹೇಳಿದ್ದರು.

ಬಲಾಬಲ

ಹಾರ್ದಿಕ್ ಪಾಂಡ್ಯ (ನಾಯಕ–ಗುಜರಾತ್)
122 ಪಂದ್ಯ
- 2288 ರನ್
- 10 ಅರ್ಧಶತಕ
- 172 ಬೌಂಡರಿ
- 123 ಸಿಕ್ಸರ್
- 65 ಕ್ಯಾಚ್
- 53 ವಿಕೆಟ್

ಶುಭಮನ್ ಗಿಲ್ (ಬ್ಯಾಟರ್)
16 ಪಂದ್ಯ
- 851 ರನ್
- 129 ಶ್ರೇಷ್ಠ
- 3 ಶತಕ
- 4 ಅರ್ಧಶತಕ
- 78 ಬೌಂಡರಿ
- 33 ಸಿಕ್ಸರ್ • 6 ಕ್ಯಾಚ್

ಮೊಹಮ್ಮದ್ ಶಮಿ (ಬೌಲರ್)
16 ಪಂದ್ಯ
- 372 ಎಸೆತ
- 493 ರನ್
- 28 ವಿಕೆಟ್
- 65 ಕ್ಯಾಚ್
- ಶ್ರೇಷ್ಠ 11 ಕ್ಕೆ4

ರಶೀದ್ ಖಾನ್ (ಸ್ಪಿನ್ನರ್)
16 ಪಂದ್ಯ
- 384 ಎಸೆತ
- 508 ರನ್
- 27 ವಿಕೆಟ್
- ಶ್ರೇಷ್ಠ 30 ಕ್ಕೆ4

2 ಗುಜರಾತ್ ಟೈಟನ್ಸ್ ಸತತ ಎರಡನೇ ವರ್ಷ ಫೈನಲ್ ಪ್ರವೇಶ

3 ಶುಭಮನ್ ಗಿಲ್ ಈ ಟೂರ್ನಿಯಲ್ಲಿ ಹೊಡೆದಿರುವ ಶತಕಗಳು

ಧೋನಿ (ನಾಯಕ–ಚೆನ್ನೈ)
249 ಪಂದ್ಯ
- 5082 ರನ್
- 84* ಶ್ರೇಷ್ಠ
- 24 ಅರ್ಧಶತಕ
- 349 ಬೌಂಡರಿ
- 239 ಸಿಕ್ಸರ್
- 141 ಕ್ಯಾಚ್
- 41 ಸ್ಟಂಪ್ಡ್

ಡೆವೊನ್ ಕಾನ್ವೆ (ಬ್ಯಾಟರ್)
- 15 ಪಂದ್ಯ
- 625 ರನ್
- 92* ಶ್ರೇಷ್ಠ
- 6 ಅರ್ಧಶತಕ
- 73 ಬೌಂಡರಿ
- 16 ಸಿಕ್ಸರ್
- 6 ಕ್ಯಾಚ್

ಮಥೀಷ ಪಥಿರಾಣ (ಬೌಲರ್)
- 11 ಪಂದ್ಯ
- 254 ಎಸೆತ
- 327 ರನ್
- 17 ವಿಕೆಟ್
- ಶ್ರೇಷ್ಠ;15ಕ್ಕೆ3

ಮಹೀಷ ತೀಕ್ಷಣ (ಸ್ಪಿನ್ನರ್)
- 12 ಪಂದ್ಯ
- 270 ಎಸೆತ
- 356 ರನ್
- 11 ವಿಕೆಟ್
- ಶ್ರೇಷ್ಠ;23ಕ್ಕೆ2

10 ಚೆನ್ನೈ ತಂಡವು ಫೈನಲ್ ಪ್ರವೇಶ

4 ಚೆನ್ನೈ ಗೆದ್ದಿರುವ ಪ್ರಶಸ್ತಿಗಳ ಸಂಖ್ಯೆ

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಶುಭಮನ್	ಗುಜರಾತ್	851

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	28

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

1,32,000 ನರೇಂದ್ರ ಮೋದಿ ಕ್ರೀಡಾಂಗಣದ ಆಸನ ಸಾಮರ್ಥ್ಯ

* ಇಬ್ಬರೂ ನಾಯಕರದ್ದು ಟೂರ್ನಿಯ ಸಮಗ್ರ ಸಾಧನೆ; ಉಳಿದವರದ್ದು ಈ ಆವೃತ್ತಿಯದ್ದು.

ಫ್ರೆಂಚ್ ಓಪನ್ ಗ್ರ್ಯಾನ್‌ಸ್ಲಾಮ್ ಟೆನಿಸ್ ಇಂದಿನಿಂದ

ದಾಖಲೆ ಮೇಲೆ ಜೊಕೊ ಕಣ್ಣು

ಪ್ಯಾರಿಸ್ (ಎಎಫ್‌ಪಿ): ದಾಖಲೆಯ 23ನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ನೊವಾಕ್ ಜೊಕೊವಿಚ್ ಅವರು ಭಾನುವಾರ ಇಲ್ಲಿ ಆರಂಭವಾಗುವ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಕಣಕ್ಕಿಳಿಯಲಿದ್ದಾರೆ. ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಉಳಿಸಿಕೊಳ್ಳುವ ಸವಾಲಿನೊಂದಿಗೆ ಇಗಾ ಶ್ವಾಂಟೆಕ್ ಆಡಲಿದ್ದಾರೆ.

ಮೊಣಕೈ ಗಾಯದಿಂದ ಬಳಲಿದ್ದ, ಸರ್ಬಿಯಾದ ನೊವಾಕ್ ಅವರು ಈ ಋತುವಿನಲ್ಲಿ ಆಡಿದ್ದ ಮಣ್ಣಿನಂಗಣದ ಮೂರು ಟೂರ್ನಿಗಳಲ್ಲಿ ಕ್ವಾರ್ಟರ್‌ಫೈನಲ್ ಹಂತ ದಾಟಿರಲಿಲ್ಲ. ಹೀಗಾಗಿ ಅವರು ಈ ಟೂರ್ನಿಯಲ್ಲಿ ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರ ಎನಿಸಿಲ್ಲ.

ಸ್ಪೇನ್‌ನ ರಫೆಲ್ ನಡಾಲ್ ಅವರು ಗಾಯದ ಹಿನ್ನೆಲೆಯಲ್ಲಿ ಈ ಟೂರ್ನಿಯಲ್ಲಿ ಆಡುತ್ತಿಲ್ಲ.

ಜೊಕೊವಿಚ್ ಹಾಗೂ ನಡಾಲ್ ತಲಾ 22 ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಗಳನ್ನು ಗೆದ್ದಿದ್ದು, ಪುರುಷರ ಸಿಂಗಲ್ಸ್ ವಿಭಾಗದಲ್ಲಿ ಅತಿ ಹೆಚ್ಚು ಪ್ರಶಸ್ತಿ ಗೆದ್ದ ಆಟಗಾರರು ಎನಿಸಿದ್ದಾರೆ. ಇಲ್ಲಿ ಪ್ರಶಸ್ತಿಗೆ ಮುತ್ತಿಟ್ಟರೆ ಜೊಕೊವಿಚ್ ದಾಖಲೆ ನಿರ್ಮಿಸಲಿದ್ದಾರೆ.

ಟೂರ್ನಿಯಲ್ಲಿ ಮೊದಲ ಶ್ರೇಯಾಂಕ ಪಡೆದಿರುವ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್ ಮತ್ತು ಎರಡನೇ ಶ್ರೇಯಾಂಕ ಹೊಂದಿರುವ ರಷ್ಯಾದ ಡೇನಿಯಲ್ ಮೆಡ್ವೆಡೇವ್ ಕೂಡ ಪ್ರಶಸ್ತಿ ಮೇಲೆ ಕಣ್ಣಿಟ್ಟಿದ್ದಾರೆ. ಜೊಕೊವಿಚ್ ಅವರಿಗೆ ಮೂರನೇ ಶ್ರೇಯಾಂಕ ಲಭಿಸಿದೆ.

ಡ್ರಾದಲ್ಲಿ ಒಂದೇ ಭಾಗದಲ್ಲಿ ಸ್ಥಾನ ಪಡೆದಿರುವುದರಿಂದ ಜೊಕೊವಿಚ್ ಹಾಗೂ ಅಲ್ಕರಾಜ್ ಸೆಮಿಫೈನಲ್‌ನಲ್ಲಿ ಎದುರಾಗುವ ಸಾಧ್ಯತೆಯಿದೆ.

ನಾರ್ವೆಯ ಕಾಸ್ಪರ್ ರೂಡ್ ಮತ್ತು ಗ್ರೀಸ್‌ನ ಸ್ಟೆಫನೊಸ್ ಸಿಟ್ಸಿಪಾಸ್ ಕೂಡ ಟೂರ್ನಿಯಲ್ಲಿ ಕಣಕ್ಕಿಳಿಯಲಿರುವ ಪ್ರಮುಖ ಆಟಗಾರರಲ್ಲಿ ಸೇರಿದ್ದಾರೆ.

ಕಳೆದ ಬಾರಿಯ ಚಾಂಪಿಯನ್, ಪೋಲೆಂಡ್‌ನ ಶ್ವಾಂಟೆಕ್, ಆಸ್ಟ್ರೇಲಿಯಾ ಓಪನ್ ವಿಜೇತೆ ಬೆಲಾರೂಸ್‌ನ ಅರಿನಾ ಸಬಲೆಂಕಾ, ಕಜಕಸ್ತಾನದ ಎಲೆನಾ ರಿಬಾಕಿನಾ ಪ್ರಶಸ್ತಿ ಗೆಲ್ಲುವ ನೆಚ್ಚಿನ ಆಟಗಾರ್ತಿಯರು ಎನಿಸಿದ್ದಾರೆ.

ಪಂದ್ಯಗಳ ಆರಂಭ: ಮಧ್ಯಾಹ್ನ 2.30
ನೇರ ಪ್ರಸಾರ: ಸೋನಿ ಟೆನ್ 5

ಸರ್ಬಿಯಾದ ನೊವಾಕ್ (ಎಡ) ಜೊಕೊವಿಚ್ ಹಾಗೂ ಸ್ಪೇನ್‌ನ ಕಾರ್ಲೋಸ್ ಅಲ್ಕರಾಜ್

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ಶನಿವಾರ ನಡೆದ ರೇಸ್‌ನಲ್ಲಿ ವಿಜಯಿಯಾದ ಇನ್ ದ್ಯೆ ಲೈಟ್ ಕುದುರೆಯ ಮಾಲೀಕರಾದ ರಾಜೇಂದ್ರನ್ (ಮಧ್ಯದಲ್ಲಿ) ಮತ್ತು ಮಂತ್ರಿ ಹಾರ್ಸ್ ಬ್ರೀಡರ್ ನಿರ್ದೇಶಕ ಸರೋಷ್ ಮೋದಿ ಅವರಿಗೆ ನಿಖಿಲ್ ಕಣೇಕಲ್ (ಎಡಬದಿ) ಅವರು ಕೆ.ಎನ್. ಗುರುಸ್ವಾಮಿ ಮೆಮೊರಿಯಲ್ ಟ್ರೋಫಿ ಪ್ರದಾನ ಮಾಡಿದರು. ಬಿಟಿಸಿಯ ಸ್ಟೀವರ್ಡ್ ಕೆ.ಎನ್. ಶಾಂತಕುಮಾರ್, ಎ.ಸಿ. ಸತೀಶ್ ಚಂದ್ರ ಮತ್ತು ಅರವಿಂದ್ ರಾಘವನ್ ಇದ್ದಾರೆ –ಪ್ರಜಾವಾಣಿ ಚಿತ್ರ

ಇನ್ ದ್ಯೆ ಲೈಟ್‌ಗೆ ಕೆ.ಎನ್. ಗುರುಸ್ವಾಮಿ ಸ್ಮಾರಕ ಪ್ರಶಸ್ತಿ

ಬೆಂಗಳೂರು: ಇನ್ ದ್ಯೆ ಲೈಟ್ ಕುದುರೆಯು ಶನಿವಾರ ನಡೆದ ರೇಸ್‌ನಲ್ಲಿ ಕೆ.ಎನ್.ಗುರುಸ್ವಾಮಿ ಸ್ಮಾರಕ ಟ್ರೋಫಿ ಜಯಿಸಿತು.

ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ ನಡೆದ ರೇಸ್‌ನಲ್ಲಿ ಮೂರು ವರ್ಷ ವಯಸ್ಸಿನ ಕುದುರೆ ಇನ್ ದ್ಯೆ ಲೈಟ್ ಪ್ರಥಮ ಸ್ಥಾನ ಗಳಿಸಿತು. ಈ ಕುದುರೆಗೆ ಪ್ರಸನ್ನ ಕುಮಾರ್ ತರಬೇತಿ ನೀಡಿದ್ದು, ಜಾಕಿ ಅಕ್ಷಯ್‌ಕುಮಾರ್ ಸವಾರಿ ಮಾಡಿದರು. ಮೆರೋಪಿ ಎರಡನೇ ಸ್ಥಾನ ಪಡೆಯಿತು. ಅಂಜ್ಯಾಕ್ ಪಿಪರ್ನಲ್ ಮತ್ತು ಶೀ ಕ್ಯಾನ್ ಕ್ರಮವಾಗಿ ಮೂರು ಮತ್ತು ನಾಲ್ಕನೇ ಸ್ಥಾನ ಪಡೆದವು.

ಪ್ರಜಾವಾಣಿ–ಡೆಕ್ಕನ್ ಹೆರಾಲ್ಡ್ ಪತ್ರಿಕಾ ಬಳಗದ ಸಂಸ್ಥಾಪಕರಾದ ಕೆ.ಎನ್. ಗುರುಸ್ವಾಮಿ ಅವರು ಬಿಟಿಸಿಯ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು.

ಜೀಶನ್‌ಗೆ ಪ್ರಶಸ್ತಿ

ನವದೆಹಲಿ (ಪಿಟಿಐ): ಭಾರತದ ಖ್ಯಾತನಾಮ ಟೆನಿಸ್ ಆಟಗಾರರಲ್ಲಿ ಒಬ್ಬರಾದ ಜೀಶನ್ ಅಲಿ ಅವರು ಶನಿವಾರ ಐಟಿಎಫ್ ತರಬೇತುದಾರರ ಪ್ರಶಸ್ತಿ ಸ್ವೀಕರಿಸಿದರು.

ಏಷ್ಯನ್ ಗೇಮ್ಸ್ ಚಿನ್ನದ ಪದಕ ವಿಜೇತರಾಗಿರುವ ಜೀಶನ್ ಅಲಿ ಅವರು ಆಟದಿಂದ ನಿವೃತ್ತರಾದ ನಂತರ ಭಾರತ ತಂಡದ ಕೋಚ್ ಆಗಿದ್ದರು. 2013ರಿಂದ ಭಾರತ ಡೇವಿಸ್ ಕಪ್ ತಂಡಕ್ಕೆ ಮಾರ್ಗದರ್ಶನ ನೀಡಿದ್ದಾರೆ. ಅವರ ಸಾಧನೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ. ಜೀಶನ್, ಎರಡು ದಶಕಕ್ಕಿಂತಲೂ ಹೆಚ್ಚು ಕಾಲದಿಂದ ಆಟಗಾರರಿಗೆ ತರಬೇತಿ ನೀಡುತ್ತಿದ್ದಾರೆ.

ಬೆಂಗಳೂರು ರೇಸ್

ಎ ಸ್ಟಾರ್ ಈಸ್ ಬಾರ್ನ್ ಗೆಲ್ಲುವ ನಿರೀಕ್ಷೆ

ಜಯಚಾಮರಾಜ ಒಡೆಯರ್ ಕಪ್ ಭಾನುವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಎ ಸ್ಟಾರ್ ಈಸ್ ಬಾರ್ನ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1.00ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿದೆ

1ನೇ ರೇಸ್: ಸೀಕ್ರೆಟ್ ಲೇಡಿ 5, ರಾಫಲ್ಸ್ 3, ವೀನಸ್ 6
2ನೇ ರೇಸ್: ಮೈ ಸಾಲಿಟೇರ್ 3, ಬೆಲ್ವಿಡಿರ್ 1, ಪ್ರಿನ್ಸೆಸ್ ಜಾಸ್ಮೈನ್ 6
3ನೇ ರೇಸ್: ರಾಯಲ್ ಮೈಸೂರು 3, ಗೋಲ್ಡನ್ ಪೀಕ್ಸ್ 5, ಸಸ್ಪಿ 7
4ನೇ ರೇಸ್: ಸ್ಟೆಪ್ ಟು ಡೆಸ್ಟಿನಿ 3, ಫಾಯ್ 5, ಓಪಸ್ ಒನ್ 8
5ನೇ ರೇಸ್: ಕ್ರಿಸ್ಟೊಫೆಲ್ 4, ಪ್ಲೇಸ್ ವೆಂಡೊಮ್ 1, ಟಿಗನೆಲ್ಲೊ 2
6ನೇ ರೇಸ್: ಎ ಸ್ಟಾರ್ ಈಸ್ ಬಾರ್ನ್ 1, ನಾರ್ದರನ್ ಲೈಟ್ಸ್ 2, ಮೊಯಿಟೊ 3
7ನೇ ರೇಸ್: ನೆಜಿಯಾ 7, ರಿವರ್ ಆಫ್ ಗೋಲ್ಡ್ 6, ಡಬಲ್ ಸ್ಕಾಚ್ 2
8ನೇ ರೇಸ್: ಅಲ್ಸಿಡಸ್ ಸಿನರ್ಜಿ 4, ಅಗೆರ 3, ಸ್ಕಾಫನ್‌ಬರ್ಗ್ 2

ಉತ್ತಮ ಬೆಟ್: ನೆಜಿಯಾ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	3,4,5	6,7,8.

ಹಾಕಿ: ಬ್ರಿಟನ್‌ಗೆ ಮಣಿದ ಭಾರತ

ಲಂಡನ್ (ಪಿಟಿಐ): ನೀರಸ ಪ್ರದರ್ಶನ ನೀಡಿದ ಭಾರತ ತಂಡದವರು ಎಫ್‌ಐಎಚ್ ಯುರೋಪಿಯನ್ ಲೆಗ್ ಪುರುಷರ ಹಾಕಿ ಪ್ರೊ ಲೀಗ್ ಪಂದ್ಯದಲ್ಲಿ ಎರಡನೇ ಸೋಲು ಅನುಭವಿಸಿದರು. ಲೀ ವ್ಯಾಲಿ ಹಾಕಿ ಸೆಂಟರ್‌ನಲ್ಲಿ ಶನಿವಾರ ನಡೆದ ಪಂದ್ಯದಲ್ಲಿ ಬ್ರಿಟನ್ 4–2 ಗೋಲುಗಳಿಂದ ಭಾರತ ತಂಡವನ್ನು ಸೋಲಿಸಿತು.

ಬ್ರಿಟನ್ ಪರ ತಿಮೋತಿ ನರ್ಸ್ (6ನೇ ನಿಮಿಷ), ಸೋರ್ಸ್‌ಬಿ ಥಾಮಸ್ (31ನೇ ನಿಮಿಷ), ಲೀ ಮಾರ್ಟನ್ (33ನೇ ನಿಮಿಷ) ಮತ್ತು ಬಿ.ನಿಕೋಲಸ್ (53ನೇ ನಿಮಿಷ) ಗೋಲು ಗಳಿಸಿದರು.

ಭಾರತ ತಂಡದ ಎರಡೂ ಗೋಲುಗಳನ್ನು ಹರ್ಮನ್ ಪ್ರೀತ್ ಪೆನಾಲ್ಟಿ ಕಾರ್ನರ್ ಮೂಲಕ ಗಳಿಸಿದರು. ಮೊದಲ ಗೋಲನ್ನು 31ನೇ ನಿಮಿಷ ಮತ್ತು ಎರಡನೇ ಗೋಲು 42ನೇ ನಿಮಿಷ ದಾಖಲಾಯಿತು. ಎರಡನೇ ಗೋಲು ಗಳಿಸುವ ಮೂಲಕ ಅವರು ಹಾಕಿ ಪ್ರೊ ಲೀಗ್‌ನಲ್ಲಿ ಅತಿ ಹೆಚ್ಚಿನ ಗೋಲುಗಳನ್ನು (35 ಗೋಲು) ಗಳಿಸಿದ ಹಿರಿಮೆಗೆ ಪಾತ್ರರಾದರು.

ಪಂದ್ಯ ಡ್ರಾ: ಒಮನ್‌ನ ಸಲಾಲಾದಲ್ಲಿ ನಡೆದ ಭಾರತ ಮತ್ತು ಪಾಕಿಸ್ತಾನ ತಂಡಗಳ ನಡುವಣ ಏಷ್ಯಾಕಪ್ ಜೂನಿಯರ್ ಹಾಕಿ ಟೂರ್ನಿಯ ಪಂದ್ಯವು 1–1ರಿಂದ ಡ್ರಾ ಆಯಿತು.

'ಡಬ್ಲ್ಯುಟಿಸಿ ಫೈನಲ್ ವೇಳೆ ಏಕದಿನ ವಿಶ್ವಕಪ್ ವೇಳಾಪಟ್ಟಿ'

ಅಹಮದಾಬಾದ್ (ಎಎಫ್‌ಪಿ): ಈ ವರ್ಷ ಭಾರತದಲ್ಲಿ ನಡೆಯುವ ಏಕದಿನ ವಿಶ್ವಕಪ್ ಪಂದ್ಯದ ದಿನಾಂಕ ಮತ್ತು ಸ್ಥಳಗಳನ್ನು ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯದ ವೇಳೆ ಪ್ರಕಟಿಸಲಾಗುವುದು ಎಂದು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಏಕದಿನ ವಿಶ್ವಕಪ್ ಅಕ್ಟೋಬರ್–ನವೆಂಬರ್ ತಿಂಗಳಲ್ಲಿ ನಡೆಯಬೇಕಿದೆ.

ಭಾರತ ಮತ್ತು ಆಸ್ಟ್ರೇಲಿಯಾ ತಂಡಗಳು ಜೂನ್ 7 ರಿಂದ 11ರವರೆಗೆ ಓವಲ್‌ನಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಫೈನಲ್ ಪಂದ್ಯ ಆಡಲಿವೆ.

ಚೆಸ್: ಅಥರ್ವಗೆ ಮಣಿದ ನಿರಂಜನ್

ಬೆಂಗಳೂರು: ಮೂರನೇ ಶ್ರೇಯಾಂಕದ ಯಶಸ್ ಡಿ (ರೇಟಿಂಗ್: 2315) ಅವರು ಅಕ್ಷಯಕಲ್ಪ ಆರ್ಗ್ಯಾನಿಕ್ ಕರ್ನಾಟಕ ರಾಜ್ಯ ಓಪನ್ ಫಿಡೆ ರೇಟೆಡ್ ಚೆಸ್ ಚಾಂಪಿಯನ್‌ಷಿಪ್‌ನ ನಾಲ್ಕನೇ ಸುತ್ತಿನಲ್ಲಿ ದ್ರಿಕ್ಷು ಕೆ.ವಸಂತ್ (1515) ಜೊತೆ 'ಡ್ರಾ' ಕೊಳ್ಳಬೇಕಾಯಿತು. ಇನ್ನೊಂದು ಅನಿರೀಕ್ಷಿತ ಫಲಿತಾಂಶದಲ್ಲಿ ಕಪ್ಪುಕಾಯಿಗಳಲ್ಲಿ ಆಡಿದ ಫಿಡೆಮಾಸ್ಟರ್ ನಿರಂಜನ ನವಲಗುಂದ (2200) ಅವರು ಅಥರ್ವ ಕಾಳೆ (1515) ಎದುರು ಸೋಲನುಭವಿಸಬೇಕಾಯಿತು.

ಕೋಣನಕುಂಟೆಯ ಫೋರಂ ಮಾಲ್‌ನಲ್ಲಿ ನಡೆಯುತ್ತಿರುವ ಈ ಚಾಂಪಿಯನ್‌ಷಿಪ್‌ನ ಎರಡನೇ ದಿನವಾದ ಶನಿವಾರ ನಾಲ್ಕನೇ ಸುತ್ತಿನಲ್ಲಿ ಇವೆರಡು ಫಲಿತಾಂಶ ಬಿಟ್ಟರೆ ಉಳಿದ ಆಟಗಾರರು ಮುನ್ನಡೆ ಸಾಧಿಸಿದ್ದಾರೆ. ಅಗ್ರ ಶ್ರೇಯಾಂಕದ ಐಎಂ ವಿಯಾನಿ ಡಿಕುನ್ಹ, ಎರಡನೇ ಶ್ರೇಯಾಂಕದ ಜಿಎಂ ಆಟಗಾರ ತೇಜಕುಮಾರ್ ಎಂ.ಎಸ್., ನಾಲ್ಕನೇ ಶ್ರೇಯಾಂಕದ ಇಶಾ ಶರ್ಮಾ, ಐದನೇ ಶ್ರೇಯಾಂಕದ ಶರಣ್ ರಾವ್, ಅಪೂರ್ವ ಕುಂಬ್ಳೆ, ಎ.ಆಗಸ್ಟಿನ್, ಆರ್. ಪಾರ್ಥಸಾರಥಿ ಸೇರಿದಂತೆ ಪ್ರಮುಖರು ತಲಾ 4 ಪಾಯಿಂಟ್ಸ್ ಸಂಗ್ರಹಿಸಿದ್ದಾರೆ.

ಬ್ಯಾಡ್ಮಿಂಟನ್: ಫೈನಲ್‌ಗೆ ಪ್ರಣಯ್

ಕ್ವಾಲಾಲಂಪುರ (ಪಿಟಿಐ): ಭಾರತದ ಅಗ್ರಮಾನ್ಯ ಆಟಗಾರ ಎಚ್.ಎಸ್. ಪ್ರಣಯ್, ಮಲೇಷ್ಯಾ ಮಾಸ್ಟರ್ಸ್ ಬ್ಯಾಡ್ಮಿಂಟನ್ ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್‌ಗೆ ಮುನ್ನಡೆದರು. ಶನಿವಾರ ಸೆಮಿಫೈನಲ್ ಪಂದ್ಯದ ವೇಳೆ ಅವರ ಎದುರಾಳಿ ಕ್ರಿಸ್ಟಿಯನ್ ಆದಿನಾಥ ಮೊಣಕಾಲು ನೋವಿನಿಂದ ಪಂದ್ಯ ಬಿಟ್ಟುಕೊಟ್ಟರು. ಆದರೆ ಮಹಿಳೆಯರ ವಿಭಾಗದಲ್ಲಿ ಪಿ.ವಿ.ಸಿಂಧು ಸೆಮಿಫೈನಲ್‌ನಲ್ಲಿ ನೇರ ಗೇಮ್‌ಗಳಿಂದ ಸೋಲನುಭವಿಸಿದರು.

ವಿಶ್ವದ 9ನೇ ಕ್ರಮಾಂಕದ ಆಟಗಾರ ಪ್ರಣಯ್ ಮೊದಲ ಗೇಮ್‌ನಲ್ಲಿ 19–17ರಲ್ಲಿ ಮುನ್ನಡೆಯಲ್ಲಿದ್ದಾಗ ಇಂಡೊನೇಷ್ಯಾದ ಆದಿನಾಥ ಅವರು ಚೆಂಡನ್ನು ಜಿಗಿದು ಹಿಂತಿರುಗಿಸುವ ಪ್ರಯತ್ನದಲ್ಲಿ ಎಡ ಮೊಣಕಾಲಿಗೆ ಪೆಟ್ಟುಮಾಡಿಕೊಂಡರು. 21 ವರ್ಷದ ಆದಿನಾಥ ಅವರನ್ನು ಗಾಲಿಕುರ್ಚಿಯಲ್ಲಿ ಅಂಕಣದಿಂದ ಕರೆದೊಯ್ಯಲಾಯಿತು.

ಇದು ಈ ಋತುವಿನಲ್ಲಿ ಪ್ರಣಯ್‌ಗೆ ಮೊದಲ ಫೈನಲ್. ಭಾನುವಾರ ನಡೆಯುವ ಫೈನಲ್‌ನಲ್ಲಿ ಅವರು ಚೀನಾದ ವೆಂಗ್ ಹಾಂಗ್ ಯಾಂಗ್ ಅವರನ್ನು ಎದುರಿಸಲಿದ್ದಾರೆ. ಮತ್ತೊಂದು ಸೆಮಿಯಲ್ಲಿ ಹಾಂಗ್ 21–13, 21–19ರಿಂದ ಚೀನಾ ತೈಪೆಯ ಲಿನ್ ಚುನ್ ಯಿ ಅವರನ್ನು ಸೋಲಿಸಿದರು.

ಎಚ್.ಎಸ್. ಪ್ರಣಯ್

ಸಿಂಧುಗೆ ಸೋಲು: ಇಂಡೊನೇಷ್ಯಾದ ಗ್ರೆಗೊರಿಯಾ ಮರಿಸ್ಕಾ ತುಂಜುಂಗ್ 21–14, 21–17 ರಿಂದ ಸಿಂಧು ಮೇಲೆ ಜಯ ಗಳಿಸಿದರು

ಹಾಕಿ: ಭಾರತ ಮಹಿಳೆಯರಿಗೆ ಜಯ

ಅಡಿಲೇಡ್ (ಪಿಟಿಐ): ಉತ್ಸಾಹ ಸಾಮರ್ಥ್ಯ ತೋರಿದ ಭಾರತ ಮಹಿಳಾ ಹಾಕಿ ತಂಡದವರು ಶನಿವಾರ ನಡೆದ ಆಸ್ಟ್ರೇಲಿಯಾ 'ಎ' ತಂಡದ ವಿರುದ್ಧದ ಪಂದ್ಯವನ್ನು 2–1ರಿಂದ ಗೆದ್ದುಕೊಂಡರು. ಭಾರತ ತಂಡಕ್ಕಾಗಿ ನವನೀತ್ ಕೌರ್ (10ನೇ ನಿಮಿಷ), ದೀಪ್ ಗ್ರೇಸ್ ಎಕ್ಕಾ (25ನೇ ನಿ.) ಗೋಲು ಗಳಿಸಿದರು. ಆಸ್ಟ್ರೇಲಿಯಾ ಪರ ಏಕೈಕ ಗೋಲನ್ನು ಅಬಿಗೈಲ್ ವಿಲ್ಸನ್ (22ನೇ ನಿ.) ದಾಖಲಿಸಿದರು.

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

REAL ESTATE SELLING

Sites

Kolar

PLOT MEASURING 90,812 and half sq. feet along with buildings situated at Bangarpet Industrial Area, Dasarahosahalli Village, Robertson Pet Hobli, Bangarpet Taluk, Kolar District for sale. Contact: 9902401486

Anjanapura

1) SALE 30X51 EAST II BLOCK NARAYANANAGARA 7900 PSFT 2) 80X124 COMMERCIAL NORTH 80' ROAD ANJANAPURA 5TH BLOCK 7500 PSFT 3) 150X160 A KHATA CONVERTED 40' ROAD KODIPALYA 4500 PSFT 4) 50 BIAPPA SITES ON 300' STRR NEAR DODDABALLAPURA VIDYADAAN SCHOOL OPP L&T 3000 PSFT C.S MALLESH 9743865623

BDA SITE for Sale Anjanapura, Kanakapura Road, 30x40, 40x60, 50x80 corner/intermediate Residential & Commercial available with 80% Bank Loan also with flexible payment terms 9916592400.

Kanakapura Road

SALE: 50X80 PLOT. BCCHS Society Layout- Vajarahalli Kanakapura Road, 1.5 km to Vajrahalli Metro Station. Contact: Manjunath: 85499-10790, 080-41511104.

KANAKAPURA ROAD Gubbalala 1km- Doddakallasandra Metro Station 40x60 N/F, Road Face 60 Feet. 9945724472.

Banashankari

BANASHANKARI 6TH Stage 4th Block 50x80 near RV College 2,94,00,000/-, 4th B`Block 50x80 -2,80,00,000/- both 40'Road -9980761200

BDA SITE for Sale Banashankari 5th, 6th stage, Uttarahalli, Rajarajeshwarinagar, 30x40, 40x60, 50x80, Corner/intermediate Residential and Commercial, available with 80% Bank Loan also with flexible payment terms 9916592400.

SALE- BDA Banashankari 6th Stage, 1st Block, 40x60sft East Facing Owner Meeting KK Realtorss. 9741437555, 6366623666.

"AVAILABLE BDA Sites Banasankari 6th Stage 20x30, 30x40, 40x60, 50x80 Genuine buyers Contact: 9845146725/ 9741466369"

BANASHANKARI 6TH Stage, 3rd Block 30x40, W/F, 100Feet Road Commercial Site,50x80, S/F, Contact: 9900097239

Dollars Colony

SALE 50X80 West`Facing No 218 5th Cross diagonally Opposite cafe-coffee day Dollars Colony RMV 2nd Stage Bangalore Call:9980066939

Hosur Road

SINGASANDRA- OFF Hosur Road SALE: Sites 60x40 and 120x40 'A' khata Rs. 7500/ Sft. Contact: 93437-28200

Hebbal

TALAKAVERI LAYOUT Hebbal 40x60 North 40 Feet Road Excellent Location BDA Approved 13,500/-sft Call: 7829203369

Hanumanthnagar

SITE FOR Sale 30x40 West FACING At Hanumanthnagar Basappa layout & 60×40 East facing at Banashakari 2nd Stage Near BDA Complex contact:9343742082/7892586674

J P Nagar

JP.NAGAR 7TH Phase Adjacent to Brigade Millennium Corner Plot 2100 Sft NW Corner. Contact: 99622-77959

SALE 2ND Phase A Katha Site 20x50, 1000 Sqft 4Houses 1BHK Ground, First Floor: 9886019240/ 080-26623999

Kengeri

VINAYAKANAGAR KENGERI Satellite Town 6th Cross Maramma Temple BBMP Khatha Site No:11 Measuring 40x50 sqft @ 1.15Cr Nego:9448444205

Rajajinagar

RAJAJINAGAR 6TH BLOCK Site 30x60 second site from Main Road Sale 15000/- psft. Neg. 9341256998.

Jayanagar

JAYANAGAR VII Block 40X60, IV T Block 30X50, 40x60 JP.NAGAR IV Phase 50X80 B.T.M. 1st Stage 50X80. 94484-83699

SITE FOR SALE BDA 45x90 NORTH 4th T' BLOCK JAYANAGAR SERIOUS BUYER CONTACT RAMESH 9844104958

ANJANAPURA 11TH block 20x35 A khata NORTH FACING Ready to move Good location 40 Feet Road Surya properties 9880659939/ 9916759939

Banaswadi

HEGDE NAGAR NEAR Sai Hospital Prime site 30x50. Clear titles. Going Cheap. Phone: 8660514834/ 9342410224

Gnanabharathi

JNANABHARATHI (VALAGERIHALLI) 1st block 30*40 BDA Site for Sale. Rate 1200 sqft. Ph: 9538507920/ 6363393659

Kempegowda Layout

KEMPEGOWDA LAYOUT 5th Block “E” Sector Arkavathi Alternative BDA Site 40X60 S/F, 4600/- Contact: 9611988112

Magadi Road

SALE- AGRAHARA Dasarahalli Near Magadi Road tollgate 30x40 West facing. Suitable Residential/ Industrial. Contact- 9845066279

Nagarabhavi

30X40 EAST SITE NEAR AMBEDKAR COLLEGE 45X50 CORNER 34 ROOM PG NEAR CHIRST COLLEGE: 9036401369

"NAGARABHAVI BDA 40x60, 30x40 East facing 60ft Road, Vishveshwaraiah 8th Block 40x60 West facing. 9845862388"

Ramanagar

RESIDENTIAL CONVERTED Site Sale Near Ramanagar 0.5Km from Highway 10890Sqft 1550/ P.Sqft Clear Title. Owner- 9900115519

Bangalore South

SHANTI NAGAR 40x60 SITE FOR SALE SOUTH FACING CLEAR TITEL BDA PROPERTY CONTACT: 8431023515

Tumkur Road

SALE, SITE No:555, BDA Approved, W/F 40X60, HMT Layout, Nelagadaranahalli, Nagasandra, Bangalore-73 Rs.15000/- sqft (Negotiable) OWNER: 9448483407

30X40 SITE sale (2 side road) Kirloskar layout, Hesaraghata main road, opposite Sapthagiri college. 9620480363.

Vishweshwariah Layout

30X40 SITE 1st BLOCK BDA EAST FACING 30ft ROAD GOOD LOCATION 10000 SQFT NEGOTIABLE: 7892059756

VISHWESHWARAIAH LAYOUT BDA 5th BLOCK 30x40 SITE FOR SALE GOOD LOCATION CONTACT: 9980860138

BDA SITE for Sale at Viveshwaraiah & Kempegowda Layout 30x40, 40x60, 50x80, Corner/intermediateResidential & Commercial available with 80% Bank Loan also with flexible payment terms 9916592400.

40X60 SITE Vishweshwaraiah BDA 6th Block Near KLE College Owner Meeting 20x30 Site 6th North National Public School: 8310003509

SMV LAYOUT, 7th Block, Site No-63, 20x30, W/F, 58 Lakhs/- Good Location. Contact: 9844966208

skanda

Skanda Architecture & Interior Studio



- Termite Proof
- 100 % Water Proof (BWP)
- Hassle Free Execution
- Hafele Accessories
- Free 3D designing

Get a Chimney Free for 2 BHK & 3 BHK Interiors

* T&C apply

New Fiscal Year Offer

Modular kitchen Starts at Rs.97999/-

Interiors Starts from

2 BHK @ Rs. 1.99 Lacs

3 BHK @ Rs. 2.99 Lacs

Visit our Studio for the Live Demo

No 940, Outer Ring Road, Opp. BBMP Ground, Near Royal Enfield Showroom, Papareddy Palya, Bengaluru, Karnataka 560072

